ಭಾನುವಾರ, ಮೇ 2, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 122 | ಪುಟ 14
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ರಂಜಾನ್ ಬಂತೆಂದರೆ ಮಲೆನಾಡಿನ ಹಳ್ಳಿಗಳಿಗೆ ಎಷ್ಟೊಂದು ಅಭ್ಯಾಗತರು ಬರುತ್ತಿದ್ದರಲ್ಲ. ಈಗ ಅವರೆಲ್ಲ ಎಲ್ಲಿ ಕಾಣೆಯಾದರೋ?!

'ಕೋವಿಡ್: ರಾಷ್ಟ್ರೀಯ ನೀತಿ ರೂಪಿಸಿ' 6
ದೆಹಲಿ: ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಕಾಲಕ್ಕೆ ದೊರೆಯದ ಸ್ಪಂದನೆ 6
ಬಂದ ಒಂದು ದಿನದಲ್ಲೇ ಲಸಿಕೆ ಖಾಲಿ! 5
ಆಕ್ಸಿಜನ್ ಕೊರತೆ: 12 ಸಾವು 6

ಕೋವಿಡ್ ಕಾಲದಲ್ಲಿ ಜನರಿಂದ ದೂರವಾಗಿರುವ ಶಾಸಕರು–ಸಂಸದರು • ಕೆಲವರಷ್ಟೇ ಸಕ್ರಿಯ

ನಿರೀಕ್ಷೆ ಹೆಚ್ಚು: ಸ್ಪಂದನೆ ಕಡಿಮೆ

ಒಳನೋಟ
ನೆರವಿಗೆ ಬಾರದ ಪ್ರತಿನಿಧಿಗಳು
ಪ್ರತಿಕ್ರಿಯಿಸಿ: 9606038256

ಕೋವಿಡ್ ಎರಡನೇ ಅಲೆ ಜನರನ್ನು ಹೈರಾಣಾಗಿಸಿದೆ. ಸೋಂಕಿತರಿಗೆ ಆಸ್ಪತ್ರೆಯ ಹಾಸಿಗೆ, ಐಸಿಯು, ವೆಂಟಿಲೇಟರ್ ಕೂಡ ದೊರೆಯದ ಸ್ಥಿತಿ ಇದೆ. ಚಿಕಿತ್ಸೆಗಾಗಿ ಪರದಾಟ ಒಂದೆಡೆಯಾದರೆ, ಕರ್ಫ್ಯೂ ಜಾರಿಯಿಂದಾಗಿ ತುತ್ತು ಅನ್ನಕ್ಕೂ ಕೈಚಾಚಬೇಕಾದ ಸ್ಥಿತಿ ಮತ್ತೊಂದೆಡೆ. ಇಂತಹ ಸಂಕಷ್ಟದ ಕಾಲದಲ್ಲಿ ಕೆಲವು ಜನಪ್ರತಿನಿಧಿಗಳು ತಮ್ಮ ಆರೋಗ್ಯದ ಕಾಳಜಿಯನ್ನು ಮರೆತು ಜನರಿಗೆ ನೆರವಾಗುತ್ತಿದ್ದಾರೆ. ಆದರೆ, ಚುನಾಯಿತ ಪ್ರತಿನಿಧಿಗಳಲ್ಲಿ ಬಹುಪಾಲು ಮಂದಿ ಜನರ ಕೈಗೆ ಸಿಗುತ್ತಿಲ್ಲ. ಕೆಲವರು ಕ್ಷೇತ್ರದಾದ್ಯಂತ ಓಡಾಡುತ್ತಾ ಜನರ ಸಂಕಷ್ಟಕ್ಕೆ ಸ್ಪಂದಿಸುತ್ತಿದ್ದಾರೆ. ಆದರೆ, ಇಂಥವರ ಸಂಖ್ಯೆ ತೀರಾ ಕಡಿಮೆ. ಮನೆಯೊಳಗೆ ಸೇರಿಕೊಡಿರುವವರು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯರಾದವರ ಸಂಖ್ಯೆಯೇ ಹೆಚ್ಚಾಗಿದೆ ಎಂಬುದು ಜನರ ಆಕ್ಷೇಪವಾಗಿದೆ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ರಾಜಧಾನಿಯಲ್ಲಿ ಈಗ ನಿತ್ಯವೂ ಸುಮಾರು 20,000 ಹೊಸ ಕೋವಿಡ್ ಪ್ರಕರಣಗಳು ದೃಢಪಡುತ್ತಿವೆ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 28 ಶಾಸಕರು ಮತ್ತು ಮೂವರು ಸಂಸದರಿದ್ದಾರೆ. ಇವರಲ್ಲಿ ಬೆರಳೆಣಿಕೆಯ ಮಂದಿ ಮಾತ್ರ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದಾರೆ. ಹೆಚ್ಚಿನವರು ಸರ್ಕಾರದ ವತಿಯಿಂದ ನಡೆಯುತ್ತಿರುವ ಕೆಲಸಗಳ ಮೇಲುಸ್ತುವಾರಿಯಿಂದಲೂ ದೂರ ಉಳಿದಿದ್ದಾರೆ. ಕೆಲವರು ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸ್ ಆ್ಯಪ್ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್‌ಗಳನ್ನು ಹಂಚಿಕೊಳ್ಳುವುದಕ್ಕಷ್ಟೇ ಸೀಮಿತವಾಗಿದ್ದಾರೆ.

ಶಾಸಕರಲ್ಲಿ ಹೆಚ್ಚು ಮಂದಿ ತಮ್ಮ ಕ್ಷೇತ್ರಗಳ ಜನರ ದೂರವಾಣಿ ಕರೆಯನ್ನೂ ಸ್ವೀಕರಿಸುವುದಿಲ್ಲ ಎಂಬ ಆರೋಪಗಳು ಇವೆ. ಎರಡನೇ ಅಲೆಯ ಅಬ್ಬರಕ್ಕೆ ಬೆದರಿರುವ ಬಹುತೇಕರು ಮನೆಯಿಂದ ಹೊರಕ್ಕೆ ಕಾಲಿಡಲೂ ಅಂಜುತ್ತಿದ್ದಾರೆ.

ಕೆಲವರಷ್ಟೇ ಸಕ್ರಿಯ: ಬೆಂಗಳೂರಿನ ಶಾಸಕರ ಪೈಕಿ ಯಲಹಂಕದ ಎಸ್.ಆರ್. ವಿಶ್ವನಾಥ್, ಹೆಬ್ಬಾಳದ ಬೈರತಿ ಸುರೇಶ್, ದಾಸರಹಳ್ಳಿಯ ಆರ್.ಮಂಜುನಾಥ್, ಬಿಟಿಎಂ ಬಡಾವಣೆಯ ರಾಮಲಿಂಗಾರೆಡ್ಡಿ, ಜಯನಗರದ ಸೌಮ್ಯಾ ರೆಡ್ಡಿ, ಎನ್.ಎ. ಹ್ಯಾರಿಸ್ ಸೇರಿದಂತೆ ಬೆರಳೆಣಿಕೆಯಷ್ಟು ಮಂದಿ ಮಾತ್ರ ಸಂಕಷ್ಟದಲ್ಲಿರುವ ಜನರಿಗೆ ನೆರವು ಒದಗಿಸುವ ಕೆಲಸದಲ್ಲಿ ಸಕ್ರಿಯರಾಗಿದ್ದಾರೆ.

ಎಸ್.ಆರ್. ವಿಶ್ವನಾಥ್ ತಮ್ಮ ನೇತೃತ್ವದ ವಿಶ್ವವಾಣಿ ಫೌಂಡೇಷನ್ ಮೂಲಕ ಸೇವೆ ಒದಗಿಸುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಿಗೆ ಖಾಸಗಿ ವೈದ್ಯರನ್ನು ನಿಯೋಜಿಸಲು ತಮ್ಮ ಸಂಸ್ಥೆಯ ಮೂಲಕ ಹಣ ವೆಚ್ಚ ಮಾಡುತ್ತಿದ್ದಾರೆ. ಬೈರತಿ ಸುರೇಶ್ ಕೂಡ ಸ್ವಂತ ಹಣ ವ್ಯಯಿಸಿ ಜನರಿಗೆ ನೆರವು ನೀಡುವ ಕೆಲಸ ಮಾಡುತ್ತಿದ್ದಾರೆ. ರಾಮಲಿಂಗಾ ರೆಡ್ಡಿ ಮತ್ತು ಅವರ ಮಗಳು ಸೌಮ್ಯಾ ರೆಡ್ಡಿ ಖಾಸಗಿ ಕಂಪನಿಗಳ ಸಭಾಂಗಣಗಳನ್ನು ಪಡೆದುಕೊಂಡು ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಿ, ಸೋಂಕಿತರ ಚಿಕಿತ್ಸೆಗೆ ನೆರವಾಗುತ್ತಿದ್ದಾರೆ.

ಸಚಿವರೂ ಆಗಿರುವ ಕೆ.ಆರ್. ಪುರ ಶಾಸಕ ಬೈರತಿ ಬಸವರಾಜ, ಸಂಕಷ್ಟದಲ್ಲಿರುವ ಕೋವಿಡ್ ರೋಗಿಗಳ ಚಿಕಿತ್ಸೆಗೆ ಆರ್ಥಿಕ ನೆರವು ನೀಡಿ ಸ್ಪಂದಿಸಿದ್ದಾರೆ. ಶಾಸಕ ಮಂಜುನಾಥ್ ದಾಸರಹಳ್ಳಿ ಕ್ಷೇತ್ರದಲ್ಲೂ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಿದ್ದಾರೆ. ಹ್ಯಾರಿಸ್ ಶಾಂತಿನಗರ ವಿಧಾನಸಭಾ ಕ್ಷೇತ್ರದ ಕೆಲವೆಡೆ ವಿದ್ಯಾರ್ಥಿ ನಿಲಯಗಳನ್ನು ಬಳಸಿಕೊಂಡು ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆದಿದ್ದಾರೆ.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4

ಶಾಸಕ ವೇದವ್ಯಾಸ ಕಾಮತ್ ಅವರ ಸೇವಾಂಜಲಿ ಟ್ರಸ್ಟ್ ಮೂಲಕ ಮಂಗಳೂರಿನ ರೈಲು ನಿಲ್ದಾಣದಲ್ಲಿ ಉಳಿದಿದ್ದ ಜನರಿಗೆ ಊಟದ ವ್ಯವಸ್ಥೆ ಮಾಡಲಾಯಿತು

'ಕಲ್ಯಾಣ' ಮರೆತ ಪ್ರತಿನಿಧಿಗಳು

ಕಲಬುರ್ಗಿ: 2020ರ ಮಾರ್ಚ್‌ನಲ್ಲಿ ಕಾಣಿಸಿಕೊಂಡ ಕೋವಿಡ್ ಸೋಂಕಿನಿಂದಾಗಿ ದೇಶದಲ್ಲೇ ಮೊದಲ ಸಾವು ಕಲಬುರ್ಗಿಯಲ್ಲಿ ಸಂಭವಿಸಿತ್ತು. ಆ ನಂತರ ಘೋಷಿಸಿದ್ದ ಲಾಕ್‌ಡೌನ್ ಸಂದರ್ಭದಲ್ಲಿ ಶಾಸಕರು, ವಿಧಾನಪರಿಷತ್ ಸದಸ್ಯರು ಜನರಿಗೆ ಆಹಾರದ ಕಿಟ್‌ಗಳನ್ನು ಪೈಪೋಟಿಗೆ ಬಿದ್ದವರಂತೆ ಹಂಚಿದ್ದರು. ಈ ಬಾರಿಯೂ 14 ದಿನಗಳ ಲಾಕ್‌ಡೌನ್ ಘೋಷಿಸಲಾಗಿದೆ. ಆದರೆ ಬಡ ಕೂಲಿಕಾರ್ಮಿಕರ ನೆರವಿಗೆ ಯಾರೂ ಬಂದಿಲ್ಲ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ ಅಧಿಕಾರಿಗಳ ಸಭೆ ನಡೆಸಿದ್ದನ್ನು ಬಿಟ್ಟರೆ ಹೆಚ್ಚಾಗಿ ಕಾಣಿಸಿಕೊಂಡಿಲ್ಲ. ಸ್ವತಃ ವೈದ್ಯರಾಗಿರುವ ಚಿಂಚೋಳಿ ಶಾಸಕ ಡಾ. ಅವಿನಾಶ್ ಜಾಧವ, ಪಟ್ಟಣದಲ್ಲಿ 30 ಬೆಡ್‌ಗಳನ್ನು ಕೋವಿಡ್ ರೋಗಿಗಳಿಗಾಗಿ ವ್ಯವಸ್ಥೆ ಮಾಡಿದ್ದಾರೆ. ಚಿತ್ತಾಪುರ ಶಾಸಕ ಪ್ರಿಯಾಂಕ್ ಖರ್ಗೆ ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ.

ಸೇಡಂ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ, ಅಫಜಲಪುರ ಶಾಸಕ ಎಂ.ವೈ. ಪಾಟೀಲ, ಕಲಬುರ್ಗಿ ಉತ್ತರ ಕ್ಷೇತ್ರದ ಶಾಸಕಿ ಖನೀಜ್ ಫಾತಿಮಾ ಅಷ್ಟಾಗಿ ಸಕ್ರಿಯರಾಗಿಲ್ಲ. ಆಳಂದ ಶಾಸಕ ಸುಭಾಷ್ ಗುತ್ತೇದಾರ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿಲ್ಲ. ಜೇವರ್ಗಿ ಶಾಸಕ ಡಾ. ಅಜಯ್ ಸಿಂಗ್, ಕಲಬುರ್ಗಿ ಗ್ರಾಮೀಣ ಶಾಸಕ ಬಸವರಾಜ ಮತ್ತಿಮೂಡ ಅವರಿಗೆ ಕೋವಿಡ್ ಸೋಂಕು ತಗುಲಿದ್ದು, ಆರೈಕೆಯಲ್ಲಿದ್ದಾರೆ.

4ನೇ ಪುಟ ನೋಡಿ

'ಸಹಾಯ'ಕ್ಕೆ ಜನಪ್ರತಿನಿಧಿಗಳು

ಮಂಗಳೂರು: ಕೋವಿಡ್ ಎರಡನೇ ಅಲೆ ವ್ಯಾಪಕವಾಗುತ್ತಿದ್ದಂತೆ ಕರಾವಳಿ ಜಿಲ್ಲೆಗಳ ಜನಪ್ರತಿನಿಧಿಗಳು ಚುರುಕಾಗಿದ್ದಾರೆ.

ದಕ್ಷಿಣ ಕನ್ನಡದ ಸಂಸದ ನಳಿನ್‌ಕುಮಾರ್ ಕಟೀಲ್ ಅವರು, ಎಂಆರ್‌ಪಿಎಲ್, ಎಂಸಿಎಫ್, ಬಿಎಸ್‌ಎಫ್, ಕೆಐಒಸಿಎಲ್ ಸೇರಿದಂತೆ ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳು, ಕಂಪನಿಗಳ ಜೊತೆಗೆ ಸಭೆ ನಡೆಸಿದ್ದಾರೆ. ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕ, ಆಂಬುಲೆನ್ಸ್‌ಗಳ ವ್ಯವಸ್ಥೆ, ವೆಂಟಿಲೇಟರ್ ಹಾಸಿಗೆಗಳ ವ್ಯವಸ್ಥೆ ಮಾಡಲು ಸೂಚನೆ ನೀಡಿರುವ ಪರಿಣಾಮ, ಎಲ್ಲ ಕಂಪನಿಗಳು ವ್ಯವಸ್ಥೆ ರೂಪಿಸಲು ಒಪ್ಪಿಕೊಂಡಿವೆ.

ಸಂಸದರ ಕಚೇರಿಯನ್ನು ವಾರ್ ರೂಂ ಆಗಿ ಪರಿವರ್ತಿಸಲಾಗಿದೆ. ಜಿಲ್ಲೆಯ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿಯೂ ಸಹಾಯವಾಣಿ ತೆರೆದು, ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ, ಔಷಧ, ಆಯುಷ್ಮಾನ್ ಭಾರತ ಕರ್ನಾಟಕ ಕಾರ್ಡ್ ವ್ಯವಸ್ಥೆಗೆ ಪ್ರತ್ಯೇಕ ಮೊಬೈಲ್ ಸಂಖ್ಯೆ ನೀಡಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಕೋವಿಡ್–19 ದೃಢಪಟ್ಟು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗಲೂ, ವಿಡಿಯೊ ಕಾನ್ಫರೆನ್ಸ್ ಮೂಲಕ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಗುಣಮುಖರಾಗಿ ಹೊರಬಂದ ಮರುದಿನವೇ ಜಿಲ್ಲೆಗೆ ಭೇಟಿ ನೀಡಿ, ಜಿಲ್ಲಾ ಮಟ್ಟದ ಅಧಿಕಾರಿಗಳು, ಆರೋಗ್ಯ ಇಲಾಖೆ ಅಧಿಕಾರಿಗಳ ಜೊತೆಗೆ ಸಭೆ ನಡೆಸಿದ್ದಾರೆ. ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ತಮ್ಮ ಕ್ಷೇತ್ರದ ಜನರನ್ನು ಬೆಂಗಳೂರಿನಿಂದ ವಿಶೇಷ ಬಸ್ ಮೂಲಕ ಕರೆತಂದು, ಅವರಿಗೆ ಶಾಲೆಗಳಲ್ಲಿ ಕ್ವಾರಂಟೈನ್ ವ್ಯವಸ್ಥೆ ಮಾಡಿದ್ದಾರೆ. ಊಟ, ಉಪಾಹಾರ, ಆರೋಗ್ಯ ತಪಾಸಣೆ ವ್ಯವಸ್ಥೆ ಒದಗಿಸಿದ್ದಾರೆ. ಸಚಿವರೂ ಆಗಿರುವ ಸುಳ್ಯ ಶಾಸಕ ಎಸ್. ಅಂಗಾರ, ಸುಳ್ಯದಲ್ಲಿಯೇ ಬಿಡಾರ ಹೂಡಿದ್ದು, ಆಸ್ಪತ್ರೆಗಳ ವ್ಯವಸ್ಥೆಯ ಕುರಿತು ನಿರಂತರ ನಿಗಾ ವಹಿಸಿದ್ದಾರೆ.

4ನೇ ಪುಟ ನೋಡಿ

ವಿಧಾನಸಭಾ ಚುನಾವಣೆ ಮತ ಎಣಿಕೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ತೀವ್ರ ಕುತೂಹಲ ಕೆರಳಿಸಿರುವ ಐದು ವಿಧಾನಸಭೆಗಳ ಚುನಾವಣಾ ಫಲಿತಾಂಶ ಭಾನುವಾರ (ಮೇ 2) ಪ್ರಕಟವಾಗಲಿದೆ. ಬೆಳಿಗ್ಗೆ 8 ಗಂಟೆಗೆ ಮತ ಎಣಿಕೆ ಆರಂಭವಾಗಲಿದ್ದು, ಮಧ್ಯಾಹ್ನದ ಹೊತ್ತಿಗೆ ಚಿತ್ರಣ ಸಿಗುವ ನಿರೀಕ್ಷೆ ಇದೆ. 14 ರಾಜ್ಯಗಳ ಉಪಚುನಾವಣೆಯ ಫಲಿತಾಂಶವೂ ಪ್ರಕಟವಾಗಲಿದೆ.

ಪಶ್ಚಿಮ ಬಂಗಾಳದ 294, ಅಸ್ಸಾಂನ 126, ಕೇರಳದ 140, ತಮಿಳುನಾಡಿನ 234 ಮತ್ತು ಕೇಂದ್ರಾಡಳಿತ ಪ್ರದೇಶ ಪುದುಚೇರಿಯ 30 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಿತ್ತು. ಪಶ್ಚಿಮ ಬಂಗಾಳದಲ್ಲಿ ಎಂಟು ಹಂತಗಳಲ್ಲಿ, ಅಸ್ಸಾಂನಲ್ಲಿ ಮೂರು ಹಂತಗಳಲ್ಲಿ, ಕೇರಳ, ತಮಿಳುನಾಡು ಹಾಗೂ ಪುದುಚೇರಿ ವಿಧಾನಸಭೆಗೆ ಒಂದೇ ಹಂತದಲ್ಲಿ ಮತದಾನ ನಡೆದಿತ್ತು.

ಕೋವಿಡ್ ಕಾರಣದಿಂದ, ಫಲಿತಾಂಶ ಪ್ರಕಟವಾದ ಬಳಿಕ ಸಂಭ್ರಮಾಚರಣೆ ನಡೆಸುವಂತಿಲ್ಲ ಎಂದು ಚುನಾವಣಾ ಆಯೋಗ ಸೂಚನೆ ನೀಡಿದೆ. ಮೆರವಣಿಗೆ, ರ‍್ಯಾಲಿ ನಡೆಸುವಂತಿಲ್ಲ ಎಂದು ರಾಜಕೀಯ ಪಕ್ಷಗಳಿಗೆ ತಿಳಿಸಲಾಗಿದೆ.

ಮತಎಣಿಕೆ ಕೇಂದ್ರದಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ. ಮಾಸ್ಕ್ ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆ, ಸ್ಯಾನಿಟೈಸರ್ ಬಳಕೆ ಕಡ್ಡಾಯವಾಗಿದೆ. ಮತಗಟ್ಟೆ ಪ್ರವೇಶಿಸುವ ಸಿಬ್ಬಂದಿ ಲಸಿಕೆ ಹಾಕಿಸಿಕೊಂಡಿರಬೇಕು ಅಥವಾ ಕೋವಿಡ್ ನೆಗೆಟಿವ್ ವರದಿ ಹೊಂದಿರುವುದು ಕಡ್ಡಾಯ ಎಂದೂ ಆಯೋಗ ತಿಳಿಸಿದೆ.

ಪಟಾಕಿ ಸಿಡಿಸಿ ಸಂಭ್ರಮಿಸುವ, ಗುಂಪಾಗಿ ಸೇರುವಿಕೆ ಮೇಲೆ ಮದ್ರಾಸ್ ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ಉಪ ಚುನಾವಣೆ ಇಂದು ಫಲಿತಾಂಶ

ಬೆಳಗಾವಿ/ ರಾಯಚೂರು/ ಬೀದರ್: ಬೆಳಗಾವಿ ಲೋಕಸಭಾ ಕ್ಷೇತ್ರ, ಮಸ್ಕಿ ಹಾಗೂ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯ ಮತ ಎಣಿಕೆ ಮೇ 2ರಂದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ಬೆಳಿಗ್ಗೆ 8ರಿಂದ ನಡೆಯಲಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ಜಿದ್ದಾಜಿದ್ದಿಯ ಹಣಾಹಣಿಗೆ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಸಾಕ್ಷಿಯಾಗಿತ್ತು. ಬಿಜೆಪಿಯ ಮಂಗಲಾ ಸುರೇಶ ಅಂಗಡಿ ಮತ್ತು ಕಾಂಗ್ರೆಸ್‌ನಿಂದ ಸತೀಶ ಜಾರಕಿಹೊಳಿ ಸ್ಪರ್ಧಿಸಿದ್ದಾರೆ.

5ನೇ ಪುಟ ನೋಡಿ

3ನೇ ಅಲೆಗೂ ತಯಾರಿ ತಜ್ಞರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನ ಸಂಭಾವ್ಯ ಮೂರನೇ ಅಲೆಯನ್ನು ಸಮರ್ಥವಾಗಿ ನಿಭಾಯಿಸುವುದಕ್ಕಾಗಿ ಈಗಿನಿಂದಲೇ ತಯಾರಿ ನಡೆಸಲು ಸರ್ಕಾರ ನಿರ್ಧರಿಸಿದೆ.

ಆಸ್ಪತ್ರೆ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಸಜ್ಜುಗೊಳಿಸುವ ಜತೆಗೆ ಖಾಸಗಿ ಸಹಭಾಗಿತ್ವದಲ್ಲಿ ಹಲವು ಕ್ರಮಗಳನ್ನು ಕೈಗೊಳ್ಳಲು ತೀರ್ಮಾನಿಸಲಾಗಿದೆ.

ಇದಕ್ಕೆ ಪೂರಕವಾಗಿ ಖಾಸಗಿ ಆಸ್ಪತ್ರೆಗಳ ಪ್ರಮುಖರು, ವೈದ್ಯರನ್ನು ಒಳಗೊಂಡ ತಜ್ಞರ ಸಮಿತಿ ರಚಿಸಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಕೋವಿಡ್ ಚಿಕಿತ್ಸೆಯಲ್ಲಿ ತೊಡಗಿರುವ ವೈದ್ಯರಿಗೆ ಈಗ ನೀಡುತ್ತಿರುವ ಪ್ರೋತ್ಸಾಹ ಭತ್ಯೆ ಹೆಚ್ಚಿಸಲು ಹಾಗೂ ಕೋವಿಡ್ ಕರ್ತವ್ಯದಲ್ಲಿ ತೊಡಗಿರುವ ವೈದ್ಯರು/ವೈದ್ಯಕೀಯ ಸಿಬ್ಬಂದಿ ಸೋಂಕಿತರಾದಲ್ಲಿ ಅವರಿಗೆ ಸರ್ಕಾರಿ ವೆಚ್ಚದಲ್ಲಿ ಚಿಕಿತ್ಸೆ ನೀಡಲು ಕ್ರಮ ವಹಿಸಲು ನಿರ್ಧರಿಸಲಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

15,64,132 ▲ ಒಟ್ಟು ಸೋಂಕಿತರು (15,23,142 ನಿನ್ನೆಯ ವಿವರ)
4,05,068 ▲ ಸಕ್ರಿಯ ಪ್ರಕರಣಗಳು
11,43,250 ▲ ಗುಣಮುಖರಾದವರು
15,794 ▲ ಒಟ್ಟು ಸಾವು

ದಿನದ ಏರಿಕೆ
ಹೊಸ ಪ್ರಕರಣ **40,990** ▼
ಗುಣಮುಖ **18,341** ▲
ಸಾವು **271** ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

3.92 ಲಕ್ಷ ಪ್ರಕರಣ

ನವದೆಹಲಿ: ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ (ಮಧ್ಯರಾತ್ರಿ 12ರವರೆಗೆ) ಕೋವಿಡ್ ದೃಢಪಟ್ಟವರ ಸಂಖ್ಯೆ 3,92,459 ಆಗಿದ್ದು, 3,684 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 33.43 ಲಕ್ಷದಷ್ಟಿದೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಕೇಂದ್ರದಿಂದ ಪೂರೈಕೆ ವಿಳಂಬ • ಖಾಸಗಿ ಖರೀದಿಗೆ ಅವಕಾಶ ಮುಕ್ತ

ಕಾಳಸಂತೆಗೆ ಕೋವಿಡ್ ಲಸಿಕೆ?

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆಯ ಪರಿಣಾಮ ಗಂಭೀರಾವಸ್ಥೆ ತಲುಪಿರುವ ಬೆನ್ನಲ್ಲೇ, 45 ವರ್ಷ ದಾಟಿದವರಿಗೆ ಉಚಿತವಾಗಿ ವಿತರಿಸಲು ಕೋವ್ಯಾಕ್ಸಿನ್, ಕೋವಿಶೀಲ್ಡ್ ಲಸಿಕೆ ಕೊರತೆ ಉಂಟಾಗಿದೆ. ಕೇಂದ್ರ ಸರ್ಕಾರ ಸಾಕಷ್ಟು ಪ್ರಮಾಣದಲ್ಲಿ ಪೂರೈಸದೇ ಇರುವುದರಿಂದ ಬಹುತೇಕ ಜಿಲ್ಲೆಗಳಲ್ಲಿ ಲಸಿಕೆ ವಿತರಣೆಯಲ್ಲಿ ವ್ಯತ್ಯಯವಾಗಿದೆ.

ಶನಿವಾರದಿಂದ (ಮೇ 1) ಖಾಸಗಿಯವರು ಲಸಿಕೆ ಉತ್ಪಾದಿಸುವ ಕಂಪನಿಗಳಿಂದ ಖರೀದಿಸಿ ಜನರಿಗೆ ವಿತರಿಸಬಹುದು ಎಂದು ಕೇಂದ್ರ ಸರ್ಕಾರ ಸೂಚಿಸಿದ್ದು, ಮುಕ್ತ ಮಾರುಕಟ್ಟೆಗೆ ತೆರೆದುಕೊಳ್ಳಲಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗದೇ ಇದ್ದಾಗ ಜನರು ಲಸಿಕೆಗಾಗಿ ಖಾಸಗಿ ಆಸ್ಪತ್ರೆಗಳ ಮೊರೆ ಹೋಗಬಹುದು. ಇದರಿಂದಾಗಿ, ಲಸಿಕೆ ಮಾರಾಟ ಕಾಳಸಂತೆಯ ವಹಿವಾಟಿಗೆ ತಿರುಗಿಕೊಂಡು, ಮತ್ತಷ್ಟು ಕೃತಕವಾಗಿ ಅಭಾವ ಸೃಷ್ಟಿಯಾಗುವ ಸಾಧ್ಯತೆ ಹೆಚ್ಚಿದೆ.

ಪ್ರಜಾವಾಣಿ ವಿಶೇಷ

'ಈವರೆಗೆ ಜಿಲ್ಲಾಮಟ್ಟದಲ್ಲಿ ಆರೋಗ್ಯ ಇಲಾಖೆ ಗುರುತಿಸಿದ ಖಾಸಗಿ ಕೋವಿಡ್ ಲಸಿಕಾ ಕೇಂದ್ರಗಳು ಪ್ರತಿ ಡೋಸ್‌ಗೆ ₹ 150ರಂತೆ ಸರ್ಕಾರಕ್ಕೆ ಪಾವತಿಸಿ, ₹ 100 ಸೇವಾ ಶುಲ್ಕ ವಿಧಿಸಿ ವಿತರಿಸುತ್ತಿದ್ದವು. ಇನ್ನು ಮುಂದೆ, ಲಸಿಕೆ ಉತ್ಪಾದಕ ಕಂಪನಿಯಿಂದ ವಿತರಕರ ಮೂಲಕ ಖರೀದಿಸಿ ಮಾರಾಟ ಮಾಡಲು ಅವಕಾಶ ಆಗಲಿದೆ. ಈ ವ್ಯವಸ್ಥೆಯಿಂದ, ಕಂಪನಿಗಳು ಸರ್ಕಾರಕ್ಕೆ ಪೂರೈಸುವ ಬದಲು, ಹೆಚ್ಚು ಹಣ ಪಡೆದು ಖಾಸಗಿ ವಲಯಕ್ಕೆ ಲಸಿಕೆ ನೀಡುವ ಸಾಧ್ಯತೆ ಇದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಕೇಂದ್ರ ಸರ್ಕಾರ ಹಂತ ಹಂತವಾಗಿ ಲಸಿಕೆ ಪೂರೈಸುತ್ತಿದೆ. ಮುಂದಿನ ದಿನಗಳಲ್ಲಿ ಅಗತ್ಯ ಪ್ರಮಾಣದ ಲಸಿಕೆ ಪೂರೈಕೆಯಾಗುವ ನಿರೀಕ್ಷೆ ಇದೆ
ಕೆ.ವಿ ತ್ರಿಲೋಕಚಂದ್ರ
ಆಯುಕ್ತ, ಆರೋಗ್ಯ ಇಲಾಖೆ

'ಉತ್ಪಾದಿಸಿದ ಶೇ 50ರಷ್ಟನ್ನು ಸರ್ಕಾರಕ್ಕೆ, ಶೇ 50ರಷ್ಟನ್ನು ಮುಕ್ತ ಮಾರುಕಟ್ಟೆಗೆ ಕಂಪನಿಗಳು ನೀಡಲಿವೆ. ಹೆಚ್ಚು ಲಾಭದ ಉದ್ದೇಶದಿಂದ ಮುಕ್ತ ಮಾರುಕಟ್ಟೆಗೆ ಹೆಚ್ಚು ಪ್ರಮಾಣದಲ್ಲಿ ಲಸಿಕೆ ನೀಡಿದರೆ, ಸರ್ಕಾರಿ ವಲಯಕ್ಕೆ ಕೊರತೆಯಾಗುವುದು ಖಚಿತ. ಖಾಸಗಿಯಲ್ಲಿ ವಿತರಿಸುವ ಲಸಿಕೆಗೆ ಸರ್ಕಾರವೇ ದರ ನಿಗದಿಪಡಿಸದಿದ್ದರೆ ಕಾಳಸಂತೆಗೆ ದಾರಿ ಆಗಲಿದೆ' ಎಂದರು.

'45 ವಯಸ್ಸು ದಾಟಿದವರಿಗೆ ಕೋವ್ಯಾಕ್ಸಿನ್ ಮತ್ತು ಕೋವಿಶೀಲ್ಡ್ ಲಸಿಕೆಯನ್ನು ಕೇಂದ್ರ ಸರ್ಕಾರ ಉಚಿತವಾಗಿ ನೀಡುತ್ತಿದೆ. ಕೇಂದ್ರದಿಂದ ಬಂದ ಲಸಿಕೆಯನ್ನು ಆರೋಗ್ಯ ಇಲಾಖೆ ಸಾಮಾನ್ಯವಾಗಿ ದಿನ ಬಿಟ್ಟು ದಿನ ಜಿಲ್ಲೆಗಳಿಗೆ ಪೂರೈಸುತ್ತಿದೆ. ಕೇಂದ್ರದಿಂದ ರಾಜ್ಯಕ್ಕೆ ಬಂದ ಪ್ರಮಾಣ ಆಧರಿಸಿ, ಬೆಂಗಳೂರು ನಗರ, ತುಮಕೂರಿನಂಥ ದೊಡ್ಡ ಜಿಲ್ಲೆಗಳಿಗೆ 15 ಸಾವಿರ 20 ಸಾವಿರ ಡೋಸ್ ಹಂಚಿಕೆ ಮಾಡಲಾಗುತ್ತದೆ. ಇತರ ಜಿಲ್ಲೆಗಳಿಗೆ ಕಡಿಮೆ ಪ್ರಮಾಣದಲ್ಲಿ ವಿತರಿಸಲಾಗುತ್ತದೆ. ಆದರೆ, 2– 3 ದಿನಗಳಿಂದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ' ಎಂದು ವೈದ್ಯಾಧಿಕಾರಿಯೊಬ್ಬರು ಹೇಳಿದರು.

5ನೇ ಪುಟ ನೋಡಿ

ಲಸಿಕೆಗಾಗಿ... ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಶನಿವಾರ ಸೇರಿದ್ದ ಹಿರಿಯ ನಾಗರಿಕರು ಪ್ರಜಾವಾಣಿ ಚಿತ್ರ / ಪುಷ್ಕರ್ ವಿ.

ದಿನಸಿ ಅಂಗಡಿಗೆ ಮಧ್ಯಾಹ್ನ 12ರ ವರೆಗೂ ಅವಕಾಶ

ಬೆಂಗಳೂರು: ದಿನಸಿ ಮತ್ತು ಎಪಿಎಂಸಿ ಮಾರುಕಟ್ಟೆಯನ್ನು ಬೆಳಿಗ್ಗೆ 6 ಗಂಟೆಯಿಂದ 12ರವರೆಗೆ ತೆರೆಯಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮೇ 2ರ ಭಾನುವಾರದಿಂದ ಅನ್ವಯವಾಗುವಂತೆ ಈ ಪರಿಷ್ಕೃತ ಆದೇಶ ಜಾರಿಯಲ್ಲಿರಲಿದೆ ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

ಖರೀದಿ ವೇಳೆ ಮಾರುಕಟ್ಟೆಯಲ್ಲಿ ಆಗುತ್ತಿರುವ ಜನಸಂದಣಿ ಹಾಗೂ ನೂಕುನುಗ್ಗಲು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ. ವಾರದ ಸಂತೆ ಸೇರಿದಂತೆ ಎಲ್ಲ ರೀತಿಯ ಸಂತೆಗಳನ್ನೂ ನಿರ್ಬಂಧಿಸಲಾಗಿದೆ. ಅದರ ಬದಲಿಗೆ ಹಾಪ್‌ಕಾಮ್ಸ್, ಹಾಲಿನ ಬೂತ್‌ಗಳು, ತಳ್ಳುಗಾಡಿಗಳ ಮೂಲಕ ತರಕಾರಿ, ಹಣ್ಣು ಮಾರಾಟಮಾಡುವವರು ಹಾಗೂ ದುಬಾರಿ ಬೆಲೆಗೆ ಮಾರದೇ ಮಾರುಕಟ್ಟೆ ದರದಲ್ಲಿ ವ್ಯಾಪಾರ ಮಾಡುವವರಿಗೆ ಬೆಳಿಗ್ಗೆ 6ರಿಂದ ಸಂಜೆ 6ರವರೆಗೂ ಅವಕಾಶ ನೀಡಲಾಗಿದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

ಹೊಸ ತಳಿಯ ಕುರಿತು ವಿಜ್ಞಾನಿಗಳಿಂದ ಮೊದಲೇ ಮಾಹಿತಿ

ಎಚ್ಚರಿಕೆ ಕಡೆಗಣಿಸಿದ ಕೇಂದ್ರ ಸರ್ಕಾರ

ನವದೆಹಲಿ(ರಾಯಿಟರ್ಸ್): ದೇಶದಲ್ಲಿ ಕೊರೊನಾ ವೈರಸ್‌ನ ಹೊಸ ಮತ್ತು ಅತಿ ವೇಗದ ಸಾಂಕ್ರಾಮಿಕ ರೂಪಾಂತರ ತಳಿ ವ್ಯಾಪಕವಾಗಿ ಹಬ್ಬುತ್ತದೆ ಎಂದು ವೈಜ್ಞಾನಿಕ ಸಲಹೆಗಾರರು ಮಾರ್ಚ್ ತಿಂಗಳ ಆರಂಭದಲ್ಲೇ ನೀಡಿದ್ದ ಸಲಹೆಯನ್ನು ಕೇಂದ್ರ ಸರ್ಕಾರ ಕಡೆಗಣಿಸಿತು ಎಂದು ಐವರು ವಿಜ್ಞಾನಿಗಳು ಬಹಿರಂಗ ಪಡಿಸಿದ್ದಾರೆ.



ಈ ವೈಜ್ಞಾನಿಕ ಸಲಹೆಗಾರರ ತಂಡವನ್ನು ಸರ್ಕಾರವೇ ರಚಿಸಿತ್ತು. ಸೋಂಕು ನಿಯಂತ್ರಿಸಲು ಕೇಂದ್ರ ಸರ್ಕಾರ, ಯಾವುದೇ ರೀತಿಯ ಪ್ರಮುಖ ನಿರ್ಬಂಧಗಳನ್ನು ವಿಧಿಸಲಿಲ್ಲ ಎಂದು ತಿಳಿಸಿದ್ದಾರೆ.

ಹೀಗಾಗಿ, ಮಾಸ್ಕ್ ಧರಿಸದೇ ಬೃಹತ್ ಸಂಖ್ಯೆಯಲ್ಲಿ ಜನರು ಧಾರ್ಮಿಕ ಉತ್ಸವಗಳು ಮತ್ತು ವಿವಿಧ ರಾಜಕೀಯ ಪಕ್ಷಗಳು ಆಯೋಜಿಸಿದ್ದ ರ‍್ಯಾಲಿಗಳಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿಸಿದ್ದಾರೆ.

ಹೊಸ ರೂಪಾಂತರ ತಳಿ ಬಗ್ಗೆ ಮಾರ್ಚ್ ತಿಂಗಳ ಆರಂಭದಲ್ಲೇ ಭಾರತದ ಸಾರ್ಸ್ ಕೋವ್–2 ಜೆನೆಟಿಕ್ಸ್ ಕಾನ್ಸೊರ್ಟಿಯಮ್ (ಐಎನ್‌ಎಸ್‌ಎಸಿಒಜಿ) ಎಚ್ಚರಿಕೆ ನೀಡಿತ್ತು. ಪ್ರಧಾನಿ ಅವರಿಗೆ ನೇರವಾಗಿ ವರದಿ ಮಾಡಿಕೊಳ್ಳುವ ಹಿರಿಯ ಅಧಿಕಾರಿಗಳ ಗಮನಕ್ಕೆ ಈ ವಿಷಯವನ್ನು ತರಲಾಗಿತ್ತು ಎಂದು ಹೆಸರು ಹೇಳಲು ಇಚ್ಛಿಸದ ವಿಜ್ಞಾನಿಯೊಬ್ಬರು ತಿಳಿಸಿದ್ದಾರೆ.

ಉತ್ತರ ಭಾರತದ ಸಂಶೋಧನಾ ಕೇಂದ್ರದಲ್ಲಿ ಈ ವಿಜ್ಞಾನಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಧಾನಿ ಅವರಿಗೆ ಅಧಿಕಾರಿಗಳು ಈ ಮಾಹಿತಿಯನ್ನು ನೀಡಿದ್ದರೋ ಅಥವಾ ಇಲ್ಲವೋ ಎನ್ನುವುದನ್ನು 'ರಾಯಿಟರ್ಸ್' ದೃಢಪಡಿಸಿಕೊಂಡಿಲ್ಲ. ಪ್ರಧಾನಮಂತ್ರಿ ಕಚೇರಿಯೂ ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

ಐಎನ್‌ಎಸ್‌ಎಸಿಒಜಿ ಪತ್ತೆ ಮಾಡಿದ ಅಂಶಗಳನ್ನು ಕೇಂದ್ರ ಆರೋಗ್ಯ ಸಚಿವಾಲಯದ ರಾಷ್ಟ್ರೀಯ ರೋಗಗಳ ನಿಯಂತ್ರಣ ಕೇಂದ್ರದ (ಎನ್‌ಸಿಡಿಸಿ) ಜತೆಯೂ ಮಾರ್ಚ್ 10ಕ್ಕೆ ಮುನ್ನವೇ ಹಂಚಿಕೊಳ್ಳಲಾಗಿತ್ತು. ದೇಶದ ಹಲವು ಭಾಗಗಳಲ್ಲಿ ಸೋಂಕು ವೇಗವಾಗಿ ಹಬ್ಬುತ್ತದೆ ಎಂದು ಎಚ್ಚರಿಕೆ ನೀಡಲಾಗಿತ್ತು. ಈ ಮಾಹಿತಿಯನ್ನು ಆರೋಗ್ಯ ಸಚಿವಾಲಯಕ್ಕೂ ಕಳುಹಿಸಲಾಗಿತ್ತು ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಕೊರೊನಾ ವೈರಸ್‌ನ ರೂಪಾಂತರಗಳ ಬಗ್ಗೆ ನಿರ್ದಿಷ್ಟವಾಗಿ ಪತ್ತೆ ಮಾಡುವ ಉದ್ದೇಶದಿಂದಲೇ ಸರ್ಕಾರ ವೈಜ್ಞಾನಿಕ ಸಲಹೆಗಾರರನ್ನು ಒಳಗೊಂಡಿರುವ ವೇದಿಕೆಯಾದ 'ಐಎನ್‌ಎಸ್‌ಎಸಿಒಜಿ' ರಚಿಸಿತ್ತು.

'ಬಿ.1.617' ರೂಪಾಂತರ ತಳಿಯನ್ನು 'ಐಎನ್‌ಎಸ್‌ಎಸಿಒಜಿ' ಫೆಬ್ರುವರಿ ಆರಂಭದಲ್ಲೇ ಪತ್ತೆ ಮಾಡಿತ್ತು. ಈಗ ಇದನ್ನು ವೈರಸ್‌ನ ಭಾರತೀಯ ತಳಿ ಎಂದು ಕರೆಯಲಾಗುತ್ತಿದೆ ಎಂದು ಜೀವ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಮತ್ತು 'ಐಎನ್‌ಎಸ್‌ಎಸಿಒಜಿ' ಸದಸ್ಯ ಅಜಯ್ ಪರಿದಾ ತಿಳಿಸಿದ್ದಾರೆ.

'ಖಾಸಗಿ ಆಸ್ಪತ್ರೆಗಳಲ್ಲಿನ ಸಿ.ಟಿ ಸ್ಕ್ಯಾನ್‌ಗೆ ದರ ನಿಗದಿ'

ಕಲಬುರ್ಗಿ: 'ಕೊರೊನಾ ಸೋಂಕಿನ ನಿಖರ ತಪಾಸಣೆಗಾಗಿ ಸಿಟಿ ಸ್ಕ್ಯಾನ್ ಮಾಡಲು ತಜ್ಞರ ತಂಡ ಸಲಹೆ ನೀಡಿದ್ದು, ಖಾಸಗಿ ಆಸ್ಪತ್ರೆಗಳಲ್ಲಿ ಈ ಸ್ಕ್ಯಾನ್‌ಗೆ ಅಧಿಕ ಶುಲ್ಕ ವಸೂಲಿ ಮಾಡುತ್ತಿರುವ ದೂರುಗಳು ಬಂದಿವೆ. ಇಂತಿಷ್ಟೇ ದರ ಪಡೆಯಬೇಕು ಎಂಬ ಬಗ್ಗೆ ಆದೇಶ ಹೊರಡಿಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಸ್ಕ್ಯಾನಿಂಗ್ ಮಾಡಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳು ಅಧಿಕ ಶುಲ್ಕ ಪಡೆಯುವಂತಿಲ್ಲ' ಎಂದು ಹೇಳಿದರು.

ಆಕ್ಸಿಜನ್ ಕೊರತೆ: ಕಲಬುರ್ಗಿಯಲ್ಲಿ ಮೂವರು ರೋಗಿಗಳ ಸಾವು

ಕಲಬುರ್ಗಿ: ಇಲ್ಲಿನ ಖಾಜಾ ಬಂದಾನವಾಜ್ ಆಸ್ಪತ್ರೆಯಲ್ಲಿ (ಕೆಬಿಎನ್) ಶನಿವಾರ ಸಂಜೆ ಮೂವರು ಕೋವಿಡ್ ರೋಗಿಗಳು ಏಕಕಾಲಕ್ಕೆ ಮೃತಪಟ್ಟಿದ್ದು, ಆಕ್ಸಿಜನ್ ಕೊರತೆಯಿಂದ ಬೇರೆಡೆ ಸ್ಥಳಾಂತರಿಸುವ ಸಂದರ್ಭದಲ್ಲಿ ಈ ಅವಘಡ ನಡೆದಿದೆ ಎಂದು ದೂರಲಾಗಿದೆ.

ಮಾಹಿತಿ ತಿಳಿಯುತ್ತಿದ್ದಂತೆಯೇ ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಅವರು ಆಕ್ಸಿಜನ್ ಸಿಲಿಂಡರ್‌ಗಳನ್ನು ಕಳಿಸಿಕೊಟ್ಟಿದ್ದಾರೆ. ಕೆಬಿಎನ್ ಆಸ್ಪತ್ರೆಯ ಐಸಿಯು ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳಲ್ಲಿ ಕೆಲವರು ಆಕ್ಸಿಜನ್ ಸಹಾಯ ಪಡೆದಿದ್ದರು. ಇನ್ನೇನು ಆಕ್ಸಿಜನ್ ದಾಸ್ತಾನು ಮುಗಿಯುತ್ತದೆ ಎನ್ನುವಾಗ ಆಂಬುಲೆನ್ಸ್‌ನಲ್ಲಿ ಬೇರೆ ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮೂವರು ಸಾವಿಗೀಡಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ, 'ಜಿಲ್ಲಾ ಆರೋಗ್ಯಾಧಿಕಾರಿ ನೇತೃತ್ವದಲ್ಲಿ ತಂಡವನ್ನು ಕಳುಹಿಸಿಕೊಟ್ಟಿದ್ದೇವೆ. ಪ್ರಾಥಮಿಕ ವರದಿಗಳ ಪ್ರಕಾರ ಮೂವರು ಮೃತಪಟ್ಟಿದ್ದಾರೆ. ಆದರೆ, ಆಕ್ಸಿಜನ್ ಸಮಸ್ಯೆ ಇರಲಿಲ್ಲ ಎಂದು ಕೆಬಿಎನ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು ತಿಳಿಸಿದ್ದಾರೆ. ಆಕ್ಸಿಜನ್ ಅಗತ್ಯವಿದ್ದರೆ ಅವರು ಕರೆ ಮಾಡುತ್ತಿದ್ದರು. ಶುಕ್ರವಾರವೇ ಬೀದರ್‌ನಿಂದ ನಾವು ಆಕ್ಸಿಜನ್ ಟ್ಯಾಂಕರ್ ತರಿಸಿಕೊಂಡಿದ್ದೆವು. ಶನಿವಾರವೂ ಆಕ್ಸಿಜನ್ ಸಮಸ್ಯೆ ಇರಲಿಲ್ಲ. ತನಿಖೆಯ ಬಳಿಕವೇ ಸ್ಪಷ್ಟ ಮಾಹಿತಿ ಗೊತ್ತಾಗಲಿದೆ' ಎಂದರು.

ಜಿಎಸ್‌ಟಿ: ದಾಖಲೆಯ ₹ 1.41 ಲಕ್ಷ ಕೋಟಿ ಸಂಗ್ರಹ



ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಮೂಲಕ ಏಪ್ರಿಲ್‌ನಲ್ಲಿ ₹ 1.41 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಇದುವರೆಗೆ ಸಂಗ್ರಹ ಆಗಿರುವ ಗರಿಷ್ಠ ಮೊತ್ತ ಇದಾಗಿದೆ.

ಮಾರ್ಚ್‌ನಲ್ಲಿ ಜಿಎಸ್‌ಟಿ ಮೂಲಕ ₹ 1.23 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು. ಇದಕ್ಕೆ ಹೋಲಿಸಿದರೆ ಏಪ್ರಿಲ್‌ನಲ್ಲಿ ಸಂಗ್ರಹ ಆಗಿರುವ ವರಮಾನದಲ್ಲಿ ಶೇ 14ರಷ್ಟು ಏರಿಕೆ ಕಂಡುಬಂದಿದೆ.

ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯು ದೇಶದ ಹಲವು ಭಾಗಗಳ ಮೇಲೆ ಪರಿಣಾಮ ಬೀರುತ್ತಿದ್ದರೂ, ದೇಶದ ಉದ್ಯಮಗಳು ರಿಟರ್ನ್ ಸಲ್ಲಿಸುವುದಷ್ಟೇ ಅಲ್ಲದೆ, ತಮ್ಮ ಜಿಎಸ್‌ಟಿ ಬಾಕಿಗಳನ್ನು ಸಕಾಲದಲ್ಲಿ ಪಾವತಿ ಮಾಡಿವೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಇನ್ನೊಂದು ಸುದ್ದಿ 7

ಕೋವಿಡ್ ಸಂಕಷ್ಟದ ನಡುವೆ 'ಸಿಟಿಜನ್ಸ್ ಫಾರ್ ಕೆ.ಆರ್‌.ಪುರ' ಬಳಗದಿಂದ ಪರಿಸರ ಕಾಳಜಿ

ಆಮ್ಲಜನಕಕ್ಕೆ ಪ್ರತಿಯಾಗಿ ಸಸಿ ನಾಟಿ

• ಪ್ರವೀಣ್ ಕುಮಾರ್ ಪಿ.ವಿ.

ಬಸವನಪುರ ಕೆರೆ ಬಳಿ ಗಿಡ ನೆಡುತ್ತಿರುವ ಸಿಟಿಜನ್ಸ್ ಫಾರ್ ಕೆ.ಆರ್‌.ಪುರ ಬಳಗದ ಸ್ವಯಂಸೇವಕರು

ಬೆಂಗಳೂರು: ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದಾಗ ಆಮ್ಲಜನಕ ಹೊಂದಿಸಲು ಸೋಂಕಿತರ ಬಂಧುಗಳು ಎದುರಿಸಿದ ಬವಣೆಗಳನ್ನು ನೋಡಿ 'ಸಿಟಿಜನ್ಸ್ ಫಾರ್ ಕೆ.ಆರ್‌.ಪುರ' ತಂಡ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿದೆ. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆದವರು ಬಳಸಿದ ಆಮ್ಲಜನಕಕ್ಕೆ ಪ್ರತಿಯಾಗಿ ಅವರ ಹೆಸರಿನಲ್ಲಿ ಗಿಡನೆಟ್ಟು ಪೋಷಿಸುತ್ತಿದೆ.

'ಜನರು ಆಸ್ಪತ್ರೆಗಳ ಐಸಿಯುನಲ್ಲಿ ಚಿಕಿತ್ಸೆ ಪಡೆಯುವಾಗ ಅವರಿಗೆ ನಿತ್ಯ ಸರಾಸರಿ 20 ಸಾವಿರ ಲೀಟರ್‌ಗಳಷ್ಟು ಆಮ್ಲಜನಕ ನೀಡಲಾಗುತ್ತದೆ. ಒಬ್ಬ ರೋಗಿ ಒಂದು ವಾರ ಐಸಿಯು-ನಲ್ಲಿದ್ದರೆ ಹೆಚ್ಚೂ ಕಡಿಮೆ 1.40 ಲಕ್ಷ ಲೀಟರ್‌ಗಳಷ್ಟು ಆಮ್ಲಜನಕ ಬಳಸುತ್ತಾರೆ. ಚಿಕಿತ್ಸೆ ಬಳಿಕ ಗುಣ-ಮುಖರಾದವರಿಗೆ ಆಮ್ಲಜನಕದ ಮಹತ್ವ ಚೆನ್ನಾಗಿ ಅರ್ಥವಾಗಿರುತ್ತದೆ. ನಗರದಲ್ಲಿ ಗಿಡ ಮರಗಳ ಸಂಖ್ಯೆ ವರ್ಷ ವರ್ಷ ಗಣನೀಯವಾಗಿ ಕಡಿ-ಮೆಯಾಗುತ್ತಿದೆ. ಐಸಿಯುನಲ್ಲಿ ಚಿಕಿತ್ಸೆ ಪಡೆದು ವಾಸಿಯಾದವರ ಹೆಸರಿನಲ್ಲಿ ಗಿಡ ನೆಟ್ಟು ಬೆಳೆಸಿದರೆ ಪರಿಸರಕ್ಕೆ ಒಳಿತಾಗುತ್ತದೆ. ಈ ಉದ್ದೇಶದಿಂದ 'ಸಿಟಿಜನ್ಸ್ ಫಾರ್ ಕೆ.ಆರ್.ಪುರ' ವತಿಯಿಂದ ಈ ಕಾರ್ಯಕ್ರಮ ಹಮ್ಮಿ-ಕೊಂಡಿದ್ದೇವೆ' ಎಂದು ಬಳಗದ ಬಾಲಾಜಿ ರಘೋತ್ತಮ್ ಬಾಲಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಚಿಕಿತ್ಸೆ ಬಳಿಕ ವಾಸಿಯಾದವರ ಹೆಸರಿನಲ್ಲಿ ನಾಲ್ಕು ದಿನಗಳಲ್ಲಿ 150ಕ್ಕೂ ಅಧಿಕ ಸಸಿಗಳನ್ನು ನೆಟ್ಟಿದ್ದೇವೆ. ಬಸವನಪುರ ಕೆರೆಯ ಆಸುಪಾಸು, ಟಿ.ಸಿ.ಪಾಳ್ಯ– ಮೇಡಹಳ್ಳಿ– ಕೆ.ಆರ್.ಪುರ ರಸ್ತೆಯ ಇಕ್ಕೆಲಗಳಲ್ಲಿ ಖಾಲಿ ಇರುವ ಜಾಗಗಳಲ್ಲಿ ಗಿಡಗಳನ್ನು ನೆಡುತ್ತಿದ್ದೇವೆ. ನಮ್ಮ ಪ್ರಯತ್ನಕ್ಕೆ ಬಿಬಿಎಂಪಿಯ ಅರಣ್ಯ ವಿಭಾಗದ ಅಧಿಕಾರಿಗಳೂ ಗಿಡಗಳನ್ನು ಒದಗಿಸುವ ಮೂಲಕ ಸಹಕಾರ ನೀಡಿದ್ದಾರೆ. ಗಿಡಗಳನ್ನು ನೆಡುವುದು ಮಾತ್ರವಲ್ಲ ಅದಕ್ಕೆ ನೀರು ಹಾಕಿ ಪೋಷಿಸುತ್ತೇವೆ. ನಮ್ಮ ತಂಡದ 25ಕ್ಕೂ ಹೆಚ್ಚು ಸ್ವಯಂ ಸೇವಕರು ಈ ಕಾರ್ಯದಲ್ಲಿ ತೊಡಗಿಸಿ-ಕೊಳ್ಳಲಿದ್ದಾರೆ' ಎಂದು ತಿಳಿಸಿದರು.

> ಐಸಿಯುನಲ್ಲಿ ಚಿಕಿತ್ಸೆ ಪಡೆದು ಕೊರೊನಾ ಸೋಂಕಿನಿಂದ ಗುಣಮುಖರಾದವರು ಗಿಡ ನೆಟ್ಟು ಬೆಳೆಸುವ ಮೂಲಕ ಪರಿಸರದ ಋಣ ತೀರಿಸಬೇಕು
>
> **ಬಾಲಾಜಿ ರಘೋತ್ತಮ್ ಬಾಲಿ**
> ಸಿಟಿಜನ್ಸ್ ಫಾರ್ ಕೆ.ಆರ್‌.ಪುರ

'ಎಲ್ಲ ಆಸ್ಪತ್ರೆಗಳ ಮುಂದ ಆಕ್ಸಿಜನ್ ಸಿಲಿಂಡರ್ ಹೊತ್ತು ನಿಂತ ವಾಹನವನ್ನು ನೋಡಿದ ಬಳಿಕವಾದರೂ ಜನ ಎಚ್ಚೆ-ತ್ತುಕೊಳ್ಳಬೇಕು. ಕೊರೊನಾದಿಂದ ಮೃತಪಟ್ಟವರ ಸ್ಮರಣಾರ್ಥ ಅವರ ಬಂಧುಗಳು ಹಾಗೂ ಈ ಸೋಂಕಿನಿಂದ ಗುಣಮುಖರಾದವರು ಗಿಡ ನೆಟ್ಟು ಬೆಳೆಸಬೇಕು. ತನ್ಮೂಲಕ ಪರಿಸರದ ಮೇಲೆ ಮನುಷ್ಯನಿಂದ ಆಗಿರುವ ಹಾನಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು' ಎಂದು ಕೋರಿದರು.

ಒಳ್ಳೆ ಸುದ್ದಿ

'ಸಿಟಿಜನ್ಸ್ ಫಾರ್ ಕೆ.ಆರ್.ಪುರ ಬಳಗದ ಪ್ರಯತ್ನ ಇತರರಿಗೂ ಮಾದರಿ. ಅವರು ಕೇಳಿದ ತಕ್ಷಣ ಗಿಡಗಳನ್ನು ಪೂರೈಸಿದ್ದೇವೆ. ನಗರದ ಪರಿಸರದಲ್ಲಿ ನೆಟ್ಟು ಬೆಳೆಸಲು ಸೂಕ್ತವಾದ 10 ಸಾವಿರ ಸಸಿಗಳು ನಮ್ಮಲ್ಲಿವೆ. ಗಿಡ ನೆಡಲು ಜನ ಮುಂದಾದರೆ ಸಸಿಗಳನ್ನು ಪೂರೈಸಲು ಸಿದ್ಧ' ಎಂದು ಮಹದೇವಪುರ ವಲಯದ ಪ್ರಭಾರ ವಲಯ ಅರಣ್ಯ ಅಧಿಕಾರಿ ಎಸ್.ತಾರಾನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಆಮ್ಲಜನಕ ವ್ಯವಸ್ಥೆಯ 45 ಹಾಸಿಗೆ ಎರಡೇ ದಿನಗಳಲ್ಲಿ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ಲಜನಕ ಸಿಗದೆ ಪರದಾಡುತ್ತಿರುವ ಕೋವಿಡ್ ಪೀಡಿತರಿಗೆ ಅಧಿಕಾರಿಗಳು ಮನಸ್ಸು ಮಾಡಿದರೆ ತೀರಾ ಸಂಕಷ್ಟದ ಸಮಯದಲ್ಲೂ ತ್ವರಿತವಾಗಿ ನೆರವಾಗಬಹುದು ಎಂಬುದನ್ನು ಬಿಬಿಎಂಪಿ ಪೂರ್ವ ವಲಯದ ಅಧಿಕಾರಿಗಳು ತೋರಿಸಿಕೊಟ್ಟಿದ್ದಾರೆ. ಇಲ್ಲಿನ ಅಂಬೇಡ್ಕರ್ ಕಾಲೇಜಿನಲ್ಲಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿರುವ 45 ಹಾಸಿಗೆಗಳೂ ಸೇರಿದಂತೆ 100 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರವನ್ನು ಎರಡೇ ದಿನಗಳಲ್ಲಿ ಸಜ್ಜುಗೊಳಿಸಿದ್ದಾರೆ.

'ಸರ್ವಜ್ಞನಗರ ಕ್ಷೇತ್ರದ ನಾಗವಾರ ವಾರ್ಡ್‌ನಲ್ಲಿರುವ ಅಂಬೇಡ್ಕರ್ ವೈದ್ಯಕೀಯ ಕಾಲೇಜಿನಲ್ಲಿ 100 ಹಾಸಿಗೆಗಳ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭಿಸಲಾಗಿದೆ. ಇದರಲ್ಲಿ 45 ಹಾಸಿಗೆಗಳಿಗೆ ಕೊಳವೆ ಮೂಲಕ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಪೂರ್ವ ವಲಯದ ಜಂಟಿ ಆಯುಕ್ತರಾದ ಪಲ್ಲವಿ 'ಪ್ರಜಾವಾಣಿ'ಗೆ ತಿಳಿಸಿದರು.

'ಇಲ್ಲಿ ಒಂದಿಷ್ಟು ಮೂಲ ಸೌಕರ್ಯ ಮೊದಲೇ ಇತ್ತು. ಆಮ್ಲಜನಕ ಪೂರೈಕೆಗೆ ಹೊಸತಾಗಿ ಕೊಳವೆಗಳನ್ನು ಒದಗಿಸಲಾಗಿದೆ. ಎರಡೇ ದಿನಗಳಲ್ಲಿ ಈ ಕೋವಿಡ್ ಆರೈಕೆ ಕೇಂದ್ರವನ್ನು ಸಜ್ಜುಗೊಳಿ-ಸಿದ್ದೇವೆ. ಎಚ್‌ಡಿಯು ಘಟಕಗಳ ಹಾಸಿಗೆಗಳಿಗೆ 10 ಲೀಟರ್ ಸಾಂದ್ರತೆಯ ಸಾಮರ್ಥ್ಯ ಆಮ್ಲಜನಕ ಪೂರೈಕೆ ಆಗುತ್ತದೆ. ಆದರೆ, ಇಲ್ಲಿನ ಹಾಸಿಗೆಗಳಿಗೆ 8 ಲೀ ಸಾಂದ್ರತೆಯ ಆಕ್ಸಿಜನ್ ಒದಗಿಸಲಾಗುತ್ತದೆ. ಆಮ್ಲಜನಕ ಸಿಗದೇ ಸಮಸ್ಯೆ ಎದುರಿ-ಸುತ್ತಿರುವ ಕೋವಿಡ್ ರೋಗಿಗಳಿಗೆ ಈ ಆರೈಕೆ ಕೇಂದ್ರದಿಂದ ತುಂಬಾ ಅನುಕೂಲವಾಗಲಿದೆ' ಎಂದು ಈ ಆರೈಕೆ ಕೇಂದ್ರದ ಉಸ್ತುವಾರಿ ಡಾ.ಸುನೀತಾ ವಿವರಿಸಿದರು.

'ಇದೇ ವಲಯದ ವ್ಯಾಪ್ತಿಯಲ್ಲಿ-ರುವ ಹೆಬ್ಬಾಳದ ಪಶುವೈದ್ಯಕೀಯ ಆಸ್ಪತ್ರೆ ಆವರಣದಲ್ಲಿ 60 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಆರಂಭಿಸಲಾಗಿದೆ. ಅವುಗಳಲ್ಲಿ 20 ಹಾಸಿಗೆಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಇಲ್ಲಿಗೆ ರೋಗಿಗಳನ್ನು ದಾಖಲಿಸಿಕೊಳ್ಳುವ ಪ್ರಕ್ರಿಯೆಯೂ ಆರಂಭವಾಗಿದೆ' ಎಂದು ಪಲ್ಲವಿ ಮಾಹಿತಿ ನೀಡಿದರು.

ಸಂಸದರಿಗೆ ರೆಮ್‌ಡಿಸಿವಿರ್ ನೀಡಿದ್ದು ಎಷ್ಟು ಸರಿ: ಡಿಕೆಶಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಕೋವಿಡ್ ರೋಗಿಗಳ ನೆರವಿಗೆ ಕೆಪಿಸಿಸಿ ವತಿಯಿಂದ ಆರಂಭಿಸಿದ ಆಂಬುಲೆನ್ಸ್‌ಗಳಿಗೆ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಚಾಲನೆ ನೀಡಿದರು

ಬೆಂಗಳೂರು: 'ಕೋವಿಡ್ ಚಿಕಿತ್ಸೆಗೆ ಅಗತ್ಯವಾದ ರೆಮ್‌ಡಿಸಿವಿರ್ ಚುಚ್ಚು ಮದ್ದು ಪೂರೈಸುವಂತೆ ಗೋಗರೆದರೂ ಸಿಗುತ್ತಿಲ್ಲ. ಆದರೆ, ಬಿಜೆಪಿ ನಾಯಕರು, ಸಂಸದರಿಗೆ ಈ ಔಷಧವನ್ನು ಬಾಕ್ಸ್‌ಗಟ್ಟಲೇ ಕೊಟ್ಟು ಕಳುಹಿಸಲಾ-ಗುತ್ತಿದೆ. ಇದು ಹೇಗೆ ಸಾಧ್ಯ. ಇದು ಸರಿಯೇ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಪಕ್ಷದ ಸಾಮಾಜಿಕ ಜಾಲತಾಣಕ್ಕೆ ವಾರಿಯರ್ಸ್‌ಗಳ ನೇಮಕ ಅಭಿಯಾನ ಮತ್ತು ಸೋಂಕಿತರ ನೆರವಿಗೆ ಆಂಬುಲೆನ್ಸ್ ಸೌಲಭ್ಯಕ್ಕೆ ಪಕ್ಷದ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಜೊತೆ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

'ರೆಮ್‌ಡಿಸಿವಿರ್ ಪೂರೈಸುವಂತೆ ಆಸ್ಪತ್ರೆಗಳು, ನಾವು ಕೇಳಿದಾಗ ಡ್ರಗ್ ಪರವಾನಗಿ ಇರುವವರಿಗೆ ಮಾತ್ರ ನೀಡಲಾಗುವುದು ಎಂದು ಸರ್ಕಾರ ಹೇಳಿತ್ತು. ಹಾಗಿದ್ದರೆ, ಬಿಜೆಪಿ ಸಂಸದರು (ಕಲಬುರ್ಗಿಯ ಉಮೇಶ ಜಾಧವ್) ಪೆಟ್ಟಿಗೆಗಟ್ಟಲೆ ಔಷಧಿ ಹೇಗೆ ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವರು, ಪ್ರಧಾನಿ ಉತ್ತರಿಸಬೇಕು' ಎಂದು ಆಗ್ರಹಿಸಿದರು.

'ಕೋವಿಡ್ ರೋಗಿಗಳು ಆಸ್ಪತ್ರೆಗೆ ತೆರಳಲು ಮತ್ತು ಮೃತದೇಹಗಳ-ನ್ನು ಚಿತಾಗಾರಕ್ಕೆ ಕೊಂಡೊಯ್ಯಲು ಸುಮಾರು 10 ಆಂಬುಲೆನ್ಸ್‌ಗಳನ್ನು ಕೆಪಿಸಿಸಿಯಿಂದ ಆರಂಭಿಸುತ್ತಿದ್ದೇ-ವೆ. ಜಿಲ್ಲಾ ಕೇಂದ್ರಗಳಲ್ಲೂ ಈ ಸೇವೆ ನೀಡುತ್ತೇವೆ' ಎಂದರು.

'ಎಐಸಿಸಿ ಸೂಚನೆಯಂತೆ ಪಕ್ಷದ ಸಾಮಾಜಿಕ ಜಾಲತಾಣಗಳಿಗೆ ವಾರಿಯ-ರ್ಸ್‌ಗಳನ್ನು ನೇಮಿಸುತ್ತಿದ್ದೇವೆ. ಕಾಂಗ್ರೆಸ್ ಹಾಗೂ ಸಮಾಜದ ಬಗ್ಗೆ ಬದ್ಧತೆ ಇರುವ ಯಾರು ಬೇಕಾದರೂ ವಾರಿಯರ್ಸ್ ಆಗಿ ಸೇರಬಹುದು. ಇದಕ್ಕಾಗಿ 1800 1200 00044 ಸಂಖ್ಯೆಗೆ ಮಿಸ್ಡ್ ಕಾಲ್ ಕೊಟ್ಟೆ ಸಾಕು ಅಥವಾ 7574000525 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಬಹುದು' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಕೊರೊನಾ ಸೋಂಕು ತಡೆಯಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಬಿಜೆಪಿ ನಾಯಕರು ಸೋಂಕು ತಡೆಗಟ್ಟುವ ಪ್ರಾಮಾಣಿಕ ಪ್ರಯತ್ನ ಮಾಡಲಿ., ಇಲ್ಲವೇ ಅಧಿಕಾರ ಬಿಟ್ಟು ತೊಲಗಲಿ. ಸರ್ಕಾರದ ಅದಕ್ಷತೆ ಹಾಗೂ ದುರಾಡಳಿತಕ್ಕೆ ಅಮಾಯಕ ಜನರು ಬಲಿಯಾಗುವುದು ಬೇಡ' ಎಂದು ಆಕ್ರೋಶ ಹೊರಹಾಕಿದರು.

ಈಶ ಫೌಂಡೇಷನ್‌ನ ಸದಸ್ಯರು ಹಣ್ಣು ಹಾಗೂ ಬಿಸ್ಕತ್‌ನ ಪೊಟ್ಟಣವನ್ನು ವೈದ್ಯರಿಗೆ ವಿತರಿಸಿದರು

ಕೋವಿಡ್ ಸೇನಾನಿಗಳಿಗೆ ಹಣ್ಣು, ಬಿಸ್ಕತ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಿಸಲು ಹಗಲಿರುಳು ಶ್ರಮಿಸುತ್ತಿರುವ ಸರ್ಕಾರಿ ಆಸ್ಪತ್ರೆಯ ವೈದ್ಯರು ಹಾಗೂ ವೈದ್ಯಕೀಯ ಕಾಲೇಜಿನ ಆರೋಗ್ಯ ಸಿಬ್ಬಂದಿಗೆ ಹಣ್ಣು, ಬಿಸ್ಕತ್ ಹಾಗೂ ಪಾನೀಯಗಳನ್ನು ಉಚಿತವಾಗಿ ವಿತರಿಸಲು ಈಶ ಫೌಂಡೇಷನ್‌ನ ಬೆಂಗಳೂರು ಘಟಕವು ಮುಂದಾಗಿದೆ.

ಶನಿವಾರ ಈ ಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಇದು ಮುಂದಿನ 30 ದಿನಗಳವರೆಗೆ ಮುಂದುವರಿಯಲಿದೆ.

'ಒಟ್ಟು 15 ಆಸ್ಪತ್ರೆಗಳಿಗೆ ಹಣ್ಣು, ಬಿಸ್ಕ-ತ್‌ಗಳಿರುವ ಪೊಟ್ಟಣಗಳನ್ನು ವಿತರಿಸಲು ನಿರ್ಧರಿಸಿದ್ದೇವೆ. ಆಸ್ಪತ್ರೆಯವರು ತಮಗೆ ಎಷ್ಟು ಪೊಟ್ಟಣಗಳು ಬೇಕಿವೆ ಎಂಬುದನ್ನು ನಮಗೆ ತಿಳಿಸಿದರೆ, ನಮ್ಮ ತಂಡದವರು ಆಯಾ ದಿನ ಮಧ್ಯಾಹ್ನದೊಳಗೆ ಅವುಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಸಲಿದ್ದಾರೆ' ಎಂದು ಈಶ ಫೌಂಡೇಷನ್‌ನ ಬೆಂಗಳೂರು ಘಟಕ ತಿಳಿಸಿದೆ.

ಹಸಿವಿನಿಂದ ಬಳಲಿದ್ದ ಮಕ್ಕಳ ರಕ್ಷಣೆ

ರಾಮನಗರ: ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಹಸಿವಿನಿಂದ ಕಂಗೆಟ್ಟಿದ್ದ ಒಂದೇ ಕುಟುಂಬದ ಏಳು ಮಕ್ಕಳನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ರಕ್ಷಣೆ ಮಾಡಿದ್ದಾರೆ. ಅವರಿಗೆ ರಾಮನಗರದ ಸರ್ಕಾರಿ ಬಾಲಕಿಯರ ಬಾಲಮಂದಿರದಲ್ಲಿ ಆಶ್ರಯ ನೀಡಲಾಗಿದೆ.

ಸುದ್ದಿ 2 ನಿಮಿಷ

ಯುವ ವರ್ಗಕ್ಕೆ ತುರ್ತಾಗಿ ಲಸಿಕೆ ನೀಡಿ– ಸಿದ್ದರಾಮಯ್ಯ

ಬೆಂಗಳೂರು: 'ಯುವ ವರ್ಗಕ್ಕೆ ಆದ್ಯತೆಯ ಮೇಲೆ ಕೋವಿಡ್ ಲಸಿಕೆ ನೀಡಬೇಕು. ಈ ಕಾರ್ಯ-ಕ್ರಮವನ್ನು ಆಂದೋಲನವಾಗಿ ಹಮ್ಮಿಕೊಳ್ಳಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿಗೆ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

'ರಾಜ್ಯದಲ್ಲಿ ಶೇ 70ಕ್ಕಿಂತ ಹೆಚ್ಚು ಮಂದಿ ಬಡವರು ಮತ್ತು ದುಡಿಯುವ ವರ್ಗದ ಜನರಿದ್ದಾರೆ. ಆನ್‌ಲೈನ್‌ನಲ್ಲಿ ಹೆಸರು ನೋಂದಾಯಿಸಲು ಅವರಿಗೆ ಸಾಧ್ಯವಿಲ್ಲ. ಹೀಗಾಗಿ, ಸ್ಥಳದಲ್ಲಿಯೇ ನೋಂದಾಯಿಸಿ ಲಸಿಕೆ ನೀಡಬೇಕು. ಗ್ರಾಮ ಮತ್ತು ವಾರ್ಡ್ ಮಟ್ಟದಲ್ಲಿ ಲಸಿಕೆ ನೀಡಬೇಕು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಕೋವ್ಯಾಕ್ಸಿನ್ ಲಸಿಕೆಯ ಪೇಟೆಂಟ್ ಐಸಿಎಂಆರ್ ನಿಯಂತ್ರ-ಣದಲ್ಲಿರುವ ವೈರಾಲಜಿ ಇನ್‌ಸ್ಟಿ-ಟ್ಯೂಟ್‌ನವರ ಕೈಯಲ್ಲಿದೆ. ಈ ಸಂಸ್ಥೆ ಸಿದ್ಧಪಡಿಸಿರುವ ಕೋವ್ಯಾಕ್ಸಿನ್ ಲಸಿಕೆ ಉತ್ಪಾದನೆಯ ಪ್ರೋಟೋಕಾಲ್‌ನ್ನು ಇತರೆ ಕಂಪನಿಗಳಿಗೆ ನೀಡಿ, ಅಗತ್ಯ ಪ್ರಮಾಣದ ಪರೀಕ್ಷೆ ನಡೆಸಿ, ಉತ್ಪಾದನೆಗೆ ಅವಕಾಶ ನೀಡಿ ಎಲ್ಲರಿಗೂ ಉಚಿತವಾಗಿ ಲಸಿಕೆ ನೀಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

'ತಜ್ಞರ ಪ್ರಕಾರ ಲಸಿಕೆ ಪಡೆದವರಲ್ಲಿ ಸೋಂಕು ನಿರೋಧಕ ಶಕ್ತಿ ಬರುತ್ತದೆ. ಆದರೆ, ಕೇಂದ್ರ ಸರ್ಕಾರ ವಿದೇಶಗಳಿಗೆ ಲಸಿಕೆ ರಫ್ತು ಮಾಡಲು ಅವಕಾಶ ನೀಡಿ ಖಾಸಗಿಯವರಿಗೆ ಹಣ ದೋಚಲು ಅನುವು ಮಾಡಿಕೊಟ್ಟಿದೆ. ಕಾರ್ಪೊರೇಟ್ ದಣಿಗಳ ಕೈಗೆ ದೇಶವನ್ನು ಒಪ್ಪಿಸಿ ಜನರನ್ನು ಬೀದಿಬೀದಿಯಲ್ಲಿ ನರಳಿ ಸಾಯುವಂತೆ ಪ್ರಧಾನಿ ಮಾಡಿದ್ದಾರೆ. ಕೂಲಿ ಕಾರ್ಮಿಕ ವರ್ಗ ₹ 1,200 ನೀಡಿ ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವೇ' ಎಂದೂ ಪತ್ರದಲ್ಲಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮದ್ರಾಸ್ ಹೈಕೋರ್ಟ್ ವಿರುದ್ಧ 'ಸುಪ್ರೀಂ' ಮೊರೆ ಹೋದ ಆಯೋಗ

ನವದೆಹಲಿ: ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಲು ಚುನಾವಣಾ ಆಯೋಗವೇ ಹೊಣೆಯಾಗಿದೆ ಎಂದು ಮದ್ರಾಸ್ ಹೈಕೋರ್ಟ್ ಕಟುವಾಗಿ ಟೀಕಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಚುನಾವಣಾ ಆಯೋಗ ಸಲ್ಲಿಸಿರುವ ಈ ಅರ್ಜಿಯನ್ನು ನ್ಯಾಯಮೂರ್ತಿ-ಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಶಾ ಅವರನ್ನೊಳಗೊಂಡ ಪೀಠವು ಸೋಮವಾರ ವಿಚಾರಣೆ ನಡೆಸಲಿದೆ.

ಹೈಕೋರ್ಟ್‌ನ ಅಭಿಪ್ರಾಯಗಳು ಅನಗತ್ಯ ಮತ್ತು ಅವಮಾನಕಾರಿಯಾಗಿವೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

'ಚುನಾವಣಾ ಆಯೋಗವು ಅತ್ಯಂತ ಬೇಜವಾಬ್ದಾರಿ ಸಂಸ್ಥೆಯಾಗಿದೆ ಮತ್ತು ಕೋವಿಡ್ ಸೋಂಕು ಹಬ್ಬಲು ಸಹ ಜವಾಬ್ದಾರಿಯಾಗಿದೆ' ಎಂದು ಏಪ್ರಿಲ್ 26ರಂದು ನಡೆದ ವಿಚಾರಣೆ ಸಂದರ್ಭದಲ್ಲಿ ಮದ್ರಾಸ್ ಹೈಕೋರ್ಟ್ ಹೇಳಿತ್ತು.

'ವ್ಯಾಪಾರ ನೀರಸ: ಖರೀದಿ ಅವಧಿ ವಿಸ್ತರಿಸಿ'

ಬೆಂಗಳೂರು: 'ಕೊರೊನಾ ಕರ್ಫ್ಯೂ ವೇಳೆ ಅವಕಾಶ ಕಲ್ಪಿಸಿರುವ ನಾಲ್ಕು ಗಂಟೆ ಅವಧಿಯಲ್ಲಿ ವ್ಯಾಪಾರ ಸರಿಯಾಗಿ ನಡೆಯುತ್ತಿಲ್ಲ. ಹಾಗಾಗಿ, ವ್ಯಾಪಾರದ ಅವಧಿಯನ್ನು ಸಂಜೆಯವರೆಗೆ ವಿಸ್ತರಿಸಬೇಕು' ಎಂದು ತರಕಾರಿ ಸಗಟು ವರ್ತಕರು ಒತ್ತಾಯಿ-ಸಿದ್ದಾರೆ.

'ಕೋವಿಡ್ ನಿಯಂತ್ರಣಕ್ಕಾಗಿ ಎಪಿಎಂಸಿ ಆದೇಶದ ಮೇರೆಗೆ ಕಲಾಸಿಪಾಳ್ಯ ಸಗಟು ಮಾರುಕಟ್ಟೆಯನ್ನು ಸಿಂಗೇನ ಅಗ್ರಹಾರಕ್ಕೆ ಸ್ಥಳಾಂತರಿಸಲಾಗಿದೆ. ಸಗಟು ವ್ಯಾಪಾರಕ್ಕೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದೇ ಭಾವಿಸಿದ್ದೆವು. ಆದರೆ, ಅನುಮತಿ ನೀಡಿರುವ ನಾಲ್ಕು ಗಂಟೆಗಳಲ್ಲಿ ವ್ಯಾಪಾರ ನೀರಸವಾಗಿದೆ' ಎಂದು ತರಕಾರಿ ಸಗಟು ವರ್ತಕರ ಸಂಘದ ಅಧ್ಯಕ್ಷ ಆರ್. ವಿ.ಗೋಪಿ ತಿಳಿಸಿದರು.

'ಬೆಂಗಳೂರು ಹಾಗೂ ಹೊರ ಜಿಲ್ಲೆಗಳಿಗೆ ಸಗಟು ಮಾರುಕಟ್ಟೆಯಿಂದಲೇ ಅಗತ್ಯ ತರಕಾರಿ ಪೂರೈಕೆಯಾ-ಗುತ್ತದೆ. ಬೆಂಗಳೂರಿನಿಂದ ದೂರ ಇರುವ ಸಿಂಗೇನ ಅಗ್ರಹಾರಕ್ಕೆ ಮಾರುಕಟ್ಟೆ ಸ್ಥಳಾಂತರಗೊಂಡಿರುವುದರಿಂದ ರೈತರು ಹಾಗೂ ಗ್ರಾಹಕರು ಬರುತ್ತಿಲ್ಲ. ಬೆಳಿಗ್ಗೆ 10ರ ನಂತರ ವ್ಯಾಪಾರಕ್ಕೆ ನಿರ್ಬಂಧ ಇರುವುದರಿಂದ ಬಂದ ಟನ್‌ಗಟ್ಟಲೆ ತರಕಾರಿಗಳು ಮಾರಾಟವಾಗದೆ ಉಳಿಯುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land

Kanakapura Road

RS.299/- SQ.FT,AGRICULTURE Farm land for sale in Maralvadi, near harohalli at Kanakapura road,Gated community. starting from 6,534Sqft cont: 9108910278 /7892005063

Nelamangala

AGRICULTURAL LAND sale at Nelamangala, Suitable for Layout, wearhouse, Villas. Contact: 9380431969/ 6360407300. Near NH48.

Commercial Building

Hosur Road

"COMMERCIAL BUILDING SALE: 2Cr to 5Cr, Rental income 4 Lakhs, Electronic City, HSR, Bommanahalli. 9880080388"

Commercial Land

Mysore

COMMERCIAL LAND 2 Acres is Available for Joint Venture. Developer can avail loan on Property. Contact 7676770503

Out-Station

GUBBI TOWN, DC Converted 16 Gunta Land For Sale, Near Bus-Stand & 11.5 Gunta Behind Police Station 9880419865.

Flat

Uttarahalli

3-BHK/ 2-BHK- Flat For Lease/ Sale. Uttarahalli Busstand. Well-developed nearby Hospitals & Schools.Contact Owner:- 9449599961.

House

HSR Layout

60X40 NORTH Site, Old 4 BHK House, HSR Near 27th Main, Posh Location. 18,500/-. 9980577227.

Peenya

SALE: HOUSE- 3-Floors on 30x55- Gruhalakshmi layout, Nellagadranahalli, Nagasandra Post Bangalore-73. East Door-(S/F)- Ground & First-2BHK, 2nd- 1-BR, Carpark. 'B'-Khata. Price 1.75Crs (Negotiable). Contact: 89518-80703/ 98802-70482.

Vishweshwariah Layout

2-BHK SPACIOUS 6-Units Under Construction House For Sale on 2400Sqft BDA'A' Katha Site, Very Less Rate, Pre Launch Offer.(East Gate): 9606037595/596

Sites

Airport Road

BSNL HOUSING SOCIETY PREMIUM RESIDENTIAL/COMMERCIAL SITES NEAR BLORE INTL AIRPORT, ON 6LANE 300ft RING ROAD, 4 INSTALLMENTS. OPEN FOR GENERAL PUBLIC. CALL 9071534000

Banashankari

BANASHANKARI 6TH Stage, Anjanapura, Vishweswaraiah, Pavamanapura, WANTED/ SELLING, BDA/'A' Katha Sites, Immediate Settlement. Genuine Owners Call: SHIVARAJU: 9845390290, 9591369367.

BSK 6TH STAGE- 11th Block No.432(E) East Facing, Measuring 20x30, PRICE: 50 Lakhs, Contact: 98802-70482

Nelamangala

FOR SALE - 2 nos 30' x 40' DC converted adjacent sites at Shivnagar, Nelamangala, forming corner site - one side facing east, another side facing south, brokers excuse, prefer buyer to buy both sites together, 1 km from Nelamangala Circle, beside service road on Hassan NH, ideal for residential/shop purposes, estimated sale price @ 2750 psft. Contact : 9880742935 / 9867610382

REAL ESTATE BUYING

Sites

Arkavathy Layout

BDA SITES WANTED ARKAVATHI (1-22 Blocks), Kempegowda, Any BDA Layout. Genuine Customers Contact: SAPTHAGIRI. 9900268073, 9448068073.

Vishweshwariah Layout

WANTED BDA Sites 20x30,30x40,40x60,50x80 at Vishveshwaraiah Layout & Banashankari 6th Stage. Immediate settlement-7676900174,9945569909

RENTAL PROPERTIES

Accommodation Available

Commercial

UPPER GROUND floor 1500sqft and 3000sqft, TOTAL 4500 SQFT. WITH 6000SQFT VACANT LAND, R.V. MAIN ROAD, NEAR LALBAGH WEST GATE, 45 FEET GLASS FRONTAGE WITH HORIZONTAL SAFETY GRILLS SUITABLE FOR DEPARTMENTAL STORES CONSUMER GOODS SHOW ROOMS OFFICES.RESTAURANTS.RESERVED PARKING PRESENT. CONTACT OWNER 9740854176

Flats

NEXT TO JP Nagar Metro station, GR Pinnacle Apartment 2BHK furnished apartment for rent. Call:7248647494

House

2500 SQFT building just behind Head Post office, Basaveshwara nagar available for rent suitable for Guest house/ Office /PG/Godown Contact: 8088535399

4 BEDROOM north east facing independent house for rent at BSK 3rd stage near kamakya contact 9790039509

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

JOB OPPORTUNITIES

Hospital & Medical Jobs

"**WANTED IMMEDIATELY** B.Sc-Nursing Staff with-min-2yrs experience for-a manufacturing Company located-in Bommanahalli, HSR-Layout,Hosur-Road, Bangalore-68. Send-resume with-expected salary-to: uppbangalore@gmail.com/ Contact: 9945243026.

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Stores/ Purchase

REQUIRED FOR a Leading Pharma Distributor Company, Store Room Staff. Salary + Perks + incentives + Allowances. Call: 9916902503

Teachers/ Professors

SRI SATHYA SAI UNIVERSITY FOR HUMAN EXCELLENCE
Navanihal, Kalaburagi, Karnataka
Website: www.sssuhe.ac.in

Applications are invited from experienced candidates, with inclination towards nurturing *Indian Culture and Spirituality*, for the following positions:

Teaching positions: Professor, Associate Professor and Assistant Professor in the following disciplines:

History	Economics	Philosophy	Sanskrit
Physics	Chemistry	Mathematics	English
Botany	Zoology	Computer Science	Kannada

- Qualifications as per the UGC Regulations.
- Salary as per the UGC 6th Pay Scale; DA, HRA, and other benefits as per the University norms.

Non-Teaching positions:

- Librarian and Assistant Librarian.
- Executives with Postgraduation / MBA for Administration and Human Resources Section.
- Technicians and Assistants for IT Section, Science Laboratories and Computer Labs.

Submit your resumes in PDF format by email to **recruitment@sssuhe.ac.in** on or before **16th May 2021**.

BUSINESS

Business Offers

General

GET 30-LAKHS Assured return from India's No.1 Company TATA. Just 5000/-PM. 7829975577/ 9986375577

PERSONAL

Change of Name

LALMANI BHARTHI W/o 14813773W- Hav/MT- DHANANJAY KUMAR R/a Bhagwanpur, Jehanabad, Bihar changed name from LALMANI BHARTHI to LAL MANI BHARTI notary KV Mani Bangalore.

I, GOVINDA RAJU G S/O M P GANGAPPA/ GANGULAPPA No.177 Dr. B R Ambedkar Nagara, Kammasandra Vasundhara Layout, Sampige Nagara, Hosur Main Road, Anekal Taluk, Bengaluru-560100. Have Changed My Name To G Kiran Govinda Gandhi A Vide Affidavit dated 25-08-2009 Before Notary C.N SREEKANTA SASTRY Bengaluru- 562106

MATRIMONIAL

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

Grooms Wanted

Hindu

VISWAKARMA – BEAUTIFUL 5'.5"/29/BE/ KARNATAKA, GOVERNMENT OFFICER, "AFFLUENT FAMILY" SEEKING 'NRI'S'/DOCTORS/ENGINEERS /OFFICERS/INDUSTRIALISTS - LOCAL/ ABROAD– VISWAKARMA GROOM. 9743403900

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PROPERTY CORNER

RERA Registered Project: PRM/KA/RERA/1251/309/PR/191025/002967
SAI SHAKTHI shreya blessed life
POSSESSION BY JUNE 2021
BBMP APPROVED
off MAGADI ROAD, Behind Andhra Bank, Andrahalli Main Road, that's reachable to everything...
2/3 BHK Apartments Starting 42 Lacs* Onwards

ಸಾಯಿ ಶಕ್ತಿ ಡೆವಲಪರ್ಸ್
SAI SHAKTHI Developers
Simple . Honest . Different
Approved by leading Financial Institutions
SBI Canara Bank HDFC
Classy homes at Herohalli, Andrahalli Main Road, Magadi Road, Behind Peenya 2nd Stage, Bengaluru.
Dr. V. Subba Reddy/Kokila
www.saishakthidevelopers.com
99455 39673
*T&C apply

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9845114560

DH DECCAN HERALD | ಪ್ರಜಾವಾಣಿ ಕ್ಲಾಸಿಫೈಡ್ಸ್

NAME CHANGE

BOOK YOUR NAME CHANGE AD IN DECCAN HERALD ALL KARNATAKA+ PRAJAVANI BENGALURU ALL DAY

CHANGE OF NAME @40/-* Per Words

Condition Apply*

For More Details Contact:
9880856233 | 9731810277
9901641752 | 9845114560 | 9886213331
080- 45557163 | 164

ಹಾಸಿಗೆ ಸಮಸ್ಯೆಯಿಂದಾಗಿ ರೋಗಿಗಳ ಸ್ಥಳಾಂತರ • ತೀವ್ರ ಅಸ್ವಸ್ಥರಿಗೆ ಚಿಕಿತ್ಸೆ ಮುಂದುವರಿಕೆ

ಸೋಂಕಿತರಿಗೆ ಆಸ್ಪತ್ರೆ ಚಿಕಿತ್ಸಾ ಅವಧಿ ಕಡಿತ

• ವರುಣ್ ಹೆಗಡೆ

ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಒಂದೇ ಸಮನೆ ಹೆಚ್ಚಳವಾಗುತ್ತಿರುವ ಪರಿಣಾಮ ಆಸ್ಪತ್ರೆಗಳಲ್ಲಿ ಹಾಸಿಗೆ ಸಮಸ್ಯೆ ತಲೆದೋರಿದೆ. ಇದರಿಂದಾಗಿ ಆಸ್ಪತ್ರೆಗಳು ದಾಖಲಾದ ಸೋಂಕಿತರನ್ನು ನಾಲ್ಕರಿಂದ ಐದು ದಿನಗಳಿಗೇ ಮನೆಗೆ ಕಳುಹಿಸುತ್ತಿವೆ.

ಒಂದು ತಿಂಗಳಿಂದ ನಗರದಲ್ಲಿ ಅಧಿಕ ಪ್ರಕರಣಗಳು ವರದಿಯಾಗುತ್ತಿದ್ದು, ಸೋಂಕಿತರು ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಏಪ್ರಿಲ್ ತಿಂಗಳಲ್ಲಿ 3.30 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕಿತರಲ್ಲಿ ಉಸಿರಾಟದ ಸಮಸ್ಯೆ ಎದುರಿಸುವವರ ಸಂಖ್ಯೆ ಹೆಚ್ಚಳವಾಗಿದ್ದರಿಂದ ಆಮ್ಲಜನಕ ಸಹಿತ ಹಾಸಿಗೆಗಳಿಗೆ ಬೇಡಿಕೆ ಹೆಚ್ಚಿದೆ. ಸೋಂಕು ಲಕ್ಷಣಗಳು ಹೆಚ್ಚಿನ ಪ್ರಮಾಣದಲ್ಲಿ ಗೋಚರಿಸಿರುವ ವ್ಯಕ್ತಿಗಳನ್ನು ಮಾತ್ರ ದಾಖಲಿಸಿಕೊಂಡು ಚಿಕಿತ್ಸೆ ಒದಗಿಸಲಾಗುತ್ತಿದೆ. ಉಳಿದವರಿಗೆ ಹೋಟೆಲ್ ಸೇರಿದಂತೆ ವಿವಿಧೆಡೆ ತಾತ್ಕಾಲಿಕವಾಗಿ ನಿರ್ಮಿಸಿರುವ ಕೋವಿಡ್ ಆರೈಕೆ ಕೇಂದ್ರಗಳಿಗೆ ಶಿಫಾರಸು ಮಾಡಲಾಗುತ್ತಿದೆ.

ಸೋಂಕಿತರಿಗೆ ಸ್ಥಳಾಂತರದ ಕಿರಿಕಿರಿ

ಕೋವಿಡ್ ಪೀಡಿತರಿಗೆ ಜ್ವರ ಸೇರಿದಂತೆ ಕಾಯಿಲೆಯ ಲಕ್ಷಣಗಳು ಕಡಿಮೆಯಾಗುತ್ತಿದ್ದಂತೆ ಕೋವಿಡ್ ಆರೈಕೆ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗುತ್ತಿದೆ. ಇದರಿಂದ ಸೋಂಕಿತರು ಸಮಸ್ಯೆ ಎದುರಿಸುತ್ತಿದ್ದಾರೆ. ಕೆಲವರು ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಮುಂದುವರಿಸಲು ದುಂಬಾಲು ಬೀಳುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳು ಹತ್ತಿರದ ಹೋಟೆಲ್‌ಗಳಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ನಿರ್ಮಿಸಿದ್ದು, ಸೋಂಕಿತರ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದ್ದಂತೆ ಅಲ್ಲಿಗೆ ಸ್ಥಳಾಂತರ ಮಾಡುತ್ತಿವೆ.

'ಹಾಸಿಗೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾಗಿದೆ. ಬಳಿಕ ಹಾಸಿಗೆ ಸಿಕ್ಕರೂ ನಾಲ್ಕರಿಂದ ಐದು ದಿನಗಳಿಗೆ ಬೇರೆಡೆಗೆ ಸ್ಥಳಾಂತರಿಸಲಾಗುತ್ತಿದೆ. ಇದರಿಂದಾಗಿ ಚಿಕಿತ್ಸೆ ಸಮಸ್ಯೆಯಾಗುತ್ತಿದೆ' ಎಂದು ಜಯನಗರದ 55 ವರ್ಷದ ಕೋವಿಡ್ ಪೀಡಿತ ವ್ಯಕ್ತಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಪ್ರಜಾವಾಣಿ ವಿಶೇಷ

ಕೋವಿಡ್ ಕಾಯಿಲೆ ಕಾಣಿಸಿಕೊಂಡ ಪ್ರಾರಂಭಿಕ ದಿನಗಳಲ್ಲಿ 17 ದಿನಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿತ್ತು. ಬಳಿಕ ಈ ಅವಧಿಯನ್ನು 10 ದಿನಗಳಿಗೆ ಇಳಿಕೆ ಮಾಡಿ, 7 ದಿನಗಳು ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಸೂಚಿಸಲಾಗುತ್ತಿತ್ತು. ಕಳೆದ ವರ್ಷಾಂತ್ಯಕ್ಕೆ ಈ ಅವಧಿಯನ್ನು 7 ದಿನಗಳಿಗೆ ನಿಗದಿಪಡಿಸಲಾಗಿತ್ತು. ಈ ಅವಧಿಯಲ್ಲಿ ಚೇತರಿಸಿಕೊಳ್ಳದವರಿಗೆ ಇನ್ನಷ್ಟು ದಿನ ಆಸ್ಪತ್ರೆಯಲ್ಲಿಯೇ ಇರಿಸಿಕೊಳ್ಳಲಾಗುತ್ತಿತ್ತು. ಈಗ ನಗರದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2.50 ಲಕ್ಷ ದಾಟಿದೆ. ಇವರಲ್ಲಿ ಶೇ 10ರಷ್ಟು ಮಂದಿಗೆ ಆಸ್ಪತ್ರೆ ಚಿಕಿತ್ಸೆ ಅಗತ್ಯವಿದ್ದು, ಸರ್ಕಾರಿ ವ್ಯವಸ್ಥೆಯಡಿ ಆಸ್ಪತ್ರೆಗಳಲ್ಲಿ 1,616 ಹಾಸಿಗೆಗಳು ಮಾತ್ರ ಲಭ್ಯವಿದೆ.

ಎಲ್ಲ ಐಸಿಯು ಹಾಸಿಗೆಗಳು ಭರ್ತಿಯಾಗುತ್ತಿವೆ. ಹೀಗಾಗಿ, ಸೋಂಕಿತರ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದ್ದಂತೆ ಕೋವಿಡ್ ಆರೈಕೆ ಕೇಂದ್ರ ಅಥವಾ ಮನೆಗೆ ಸ್ಥಳಾಂತರಗೊಳ್ಳಲು ಶಿಫಾರಸು ಮಾಡಲಾಗುತ್ತಿದೆ. ಕೆಲವರನ್ನು ದಾಖಲಾದ ಮೂರು ದಿನಗಳಿಗೇ ಮನೆಗೆ ಕಳುಹಿಸಿ, ನಿಗಾ ವ್ಯವಸ್ಥೆಗೆ ಒಳಪಡಲು ಸೂಚಿಸಲಾಗುತ್ತಿದೆ.

ಆಸ್ಪತ್ರೆ ಚಿಕಿತ್ಸೆ ಅಗತ್ಯವಿಲ್ಲ: 'ಎಲ್ಲ ಕೋವಿಡ್ ಪೀಡಿತರಿಗೆ ಆಸ್ಪತ್ರೆ ಚಿಕಿತ್ಸೆ ಅಗತ್ಯ ಇರುವುದಿಲ್ಲ. ಒಂದು ವೇಳೆ ಎಲ್ಲರನ್ನೂ ದಾಖಲಿಸಿಕೊಂಡಲ್ಲಿ ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಸಮಸ್ಯೆ ಆಗಲಿದೆ. ಹಾಗಾಗಿ, ಸೋಂಕಿಗೆ ಅಸ್ವಸ್ಥಗೊಂಡವರನ್ನು ದಾಖಲಿಸಿಕೊಂಡು, ಚಿಕಿತ್ಸೆ ನೀಡಲಾಗುತ್ತದೆ. ಸತತ ಮೂರು ದಿನಗಳಿಂದ ಕಾಯಿಲೆಯ ಗುಣ ಲಕ್ಷಣಗಳನ್ನು ಹೊಂದಿಲ್ಲದಿದ್ದರೆ, ರಕ್ತದಲ್ಲಿನ ಆಮ್ಲಜನಕ ಪ್ರಮಾಣ 95ಕ್ಕಿಂತ ಹೆಚ್ಚಿದ್ದಲ್ಲಿ ಕೋವಿಡ್ ಆರೈಕೆ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗುತ್ತಿದೆ. ವ್ಯವಸ್ಥೆಯಿದ್ದಲ್ಲಿ ಮನೆಯಲ್ಲೂ ಚಿಕಿತ್ಸೆ ಪಡೆದುಕೊಳ್ಳಬಹುದು. ಬಳಿಕ 7 ದಿನಗಳು ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಲು ಸೂಚಿಸಲಾಗುತ್ತಿದೆ' ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ಕೋವಿಡ್ ವಿಭಾಗದ ನೋಡಲ್ ಅಧಿಕಾರಿ ಡಾ. ಲಕ್ಷ್ಮೀಪತಿ ತಿಳಿಸಿದರು.

'ರಕ್ತದಲ್ಲಿನ ಆಮ್ಲಜನಕ ಪ್ರಮಾಣ 94ಕ್ಕಿಂತ ಕಡಿಮೆಯಿದ್ದಲ್ಲಿ ಆಸ್ಪತ್ರೆ ಚಿಕಿತ್ಸೆ ಅಗತ್ಯ ಇರುತ್ತದೆ. ಅಂತಹವರ ಆರೋಗ್ಯ ಸ್ಥಿರವಾಗುವವರೆಗೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಬಳಿಕ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಇರಿಸಿ, ಮನೆಗೆ ಕಳುಹಿಸಲಾಗುತ್ತದೆ. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗುತ್ತಿರುವ ಪರಿಣಾಮ ಜೀವಕ್ಕೆ ಅಪಾಯ ಇರುವವರನ್ನು ತುರ್ತಾಗಿ ದಾಖಲಿಸಿಕೊಂಡು, ಚಿಕಿತ್ಸೆ ಒದಗಿಸಬೇಕು. ಹೀಗಾಗಿ, ಅಂತಹವರಿಗೆ ಹಾಸಿಗೆ ಕಾಯ್ದಿರಿಸಬೇಕಾಗುತ್ತದೆ' ಎಂದು ಬೆಂಗಳೂರು ನಗರ ಜಿಲ್ಲೆ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ವಿವರಿಸಿದರು.

ಸಿಗದ ಐಸಿಯು: ಪ್ರಾಣ ಬಿಡುತ್ತಿರುವ ಸೋಂಕಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಉಸಿರಾಟ ಸಮಸ್ಯೆ ಎದುರಿಸುತ್ತಿರುವ ರೋಗಿಗಳ ಚಿಕಿತ್ಸೆಗೆ ನಗರದ ಯಾವುದೇ ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) ಹಾಸಿಗೆಯಾಗಲೀ, ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿದ ಎಚ್‌ಡಿಯು ಘಟಕದ ಹಾಸಿಗೆಗಳಾಗಲೀ ಸಿಗುತ್ತಿಲ್ಲ. ತುರ್ತಾಗಿ ಐಸಿಯು ಹಾಸಿಗೆ ಸಿಗದೇ ರೋಗಿಗಳು ಸಾಯುತ್ತಿರುವ ಪ್ರಕರಣಗಳು ಶನಿವಾರವೂ ಮುಂದುವರಿದಿವೆ.

ರಾಜರಾಜೇಶ್ವರಿನಗರದ ನಿಂಗ ಮಾರಯ್ಯ (55) ಅವರು ಏ 21ರಂದು ಕೋವಿಡ್ ಪರೀಕ್ಷೆ ಮಾಡಿಸಿಕೊಂಡಿದ್ದರು. ಅವರಿಗೆ ಸೋಂಕು ದೃಢಪಟ್ಟಿತ್ತು. ಮನೆಯಲ್ಲೇ ಪ್ರತ್ಯೇಕವಾಸಕ್ಕೊಳಗಾಗಿ ಚಿಕಿತ್ಸೆ ಪಡೆಯುತ್ತಿದ್ದ ಅವರಿಗೆ ಶುಕ್ರವಾರ ಏಕಾಏಕಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತು. ಸಹಾಯವಾಣಿಗೆ (1912) ಕರೆ ಮಾಡಿ ದಿನವಿಡೀ ಪ್ರಯತ್ನಿಸಿದರೂ ತುರ್ತು ನಿಗಾ ಘಟಕದ ಹಾಸಿಗೆ ಲಭಿಸಲಿಲ್ಲ. ಕೊನೆಗೆ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಇದ್ದ ಹಾಸಿಗೆ ಸೌಲಭ್ಯ ಸಿಕ್ಕಿತು. ಅವರನ್ನು ದಾಖಲಿಸುವಾಗ ನಸುಕಾಗಿತ್ತು. ಸ್ವಲ್ಪಹೊತ್ತಿನಲ್ಲೇ ಅವರ ಪ್ರಾಣಪಕ್ಷಿ ಹಾರಿ ಹೋಗಿತ್ತು.

'ಉಸಿರಾಟ ಸಮಸ್ಯೆ ಕಾಣಿಸಿಕೊಂಡ ಐದಾರು ಗಂಟೆಗಳ ಒಳಗೆ ಐಸಿಯು ಹಾಸಿಗೆ ಸಿಗುತ್ತಿದ್ದರೆ ಖಂಡಿತ ಅವರನ್ನು ಉಳಿಸಿಕೊಳ್ಳಬಹುದಿತ್ತು' ಎಂದು ಅವರ ಅಳಿಯ ಸುನಿಲ್ 'ಪ್ರಜಾವಾಣಿ'ಗೆ ತಿಳಿಸಿದರು.

ದೊಮ್ಮಲೂರಿನ ಆಸ್ಪತ್ರೆಯೊಂದರಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದ ವ್ಯಕ್ತಿಯೊಬ್ಬರಿಗೆ ಕೋವಿಡ್ ಇರುವುದು ಶುಕ್ರವಾರ ದೃಢಪಟ್ಟಿತ್ತು. ಆದರೆ, ಶನಿವಾರ ಏಕಾಏಕಿ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಬಿಬಿಎಂಪಿ ಸಹಾಯವಾಣಿಗೆ ಕರೆ ಮಾಡಿದರೆ ಸ್ಪಂದನೆ ಸಿಗಲಿಲ್ಲ. ಹೆಬ್ಬಾಳ ಬಳಿಯ ಆಸ್ಪತ್ರೆಯೊಂದಕ್ಕೆ ಸ್ವಂತ ಖರ್ಚಿನಲ್ಲಿ ದಾಖಲಿಸಲು ಮುಂದಾದರು. ರೋಗಿಯನ್ನು ದಾಖಲಿಸಿಕೊಳ್ಳಬೇಕಾದರೆ ₹ 1 ಲಕ್ಷ ತಕ್ಷಣ ಕಟ್ಟುವಂತೆ ಆಸ್ಪತ್ರೆಯವರು ಬೇಡಿಕೆ ಇಟ್ಟಿದ್ದರು. ಬಿಬಿಎಂಪಿ ಮೂಲಕ ಆಸ್ಪತ್ರೆ ಹುಡುಕಲೆತ್ನಿಸಿದರೂ ಸಫಲರಾಗಲಿಲ್ಲ.

ವಿಧಿ ಇಲ್ಲದೇ ಮತ್ತಿಕೆರೆಯ ಇನ್ನೊಂದು ಆಸ್ಪತ್ರೆಗೆ ರೋಗಿಯನ್ನು ದಾಖಲಿಸಲು ಕರೆತಂದರು. ಆ ಆಸ್ಪತ್ರೆಯವರು ವರಾಂಡದಲ್ಲೇ ತುರ್ತಾಗಿ ಆಮ್ಲಜನಕ ಪೂರೈಸುವ ವ್ಯವಸ್ಥೆ ಮಾಡಿದರು. ಆದರೆ, ಅಲ್ಲಿ ಐಸಿಯು ಲಭ್ಯ ಇಲ್ಲದ ಕಾರಣ ಬೇರೆ ಆಸ್ಪತ್ರೆಗೆ ದಾಖಲಿಸುವಂತೆ ಸಲಹೆ ನೀಡಿದರು. ಆದರೆ, ಸ್ವಲ್ಪ ಹೊತ್ತಿನಲ್ಲೇ ಅವರು ಇಲ್ಲವಾದರು.

ನಗರದ ಟೌನ್ ಹಾಲ್ ಬಳಿ ದ್ವಿಚಕ್ರ ವಾಹನ ಸವಾರರು ಆಕ್ಸಿಜನ್ ಸಿಲಿಂಡರ್ ಕೊಂಡೊಯ್ಯುತ್ತಿರುವುದು —ಪ್ರಜಾವಾಣಿ ಚಿತ್ರ

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

7,76,093 ಒಟ್ಟು ಸೋಂಕಿತರು

4,98,562 ಗುಣಮುಖರಾದವರು | **2,70,993** ಸಕ್ರಿಯ ಪ್ರಕರಣ | **6,537** ಸಾವು

ಶನಿವಾರದ ಏರಿಕೆ

19,353 ದೃಢಪಟ್ಟ ಪ್ರಕರಣ

7,256 ಗುಣಮುಖ | **162** ಸಾವು

ಉಸಿರುಗಟ್ಟಿಸುತ್ತಿರುವ 108 ಸಮಸ್ಯೆ

ತೀವ್ರ ಉಸಿರಾಟ ಸಮಸ್ಯೆ ಇರುವವರು ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಸೋಂಕು ದೃಢಪಟ್ಟು ಬಿ.ಯು.ಸಂಖ್ಯೆ ಪಡೆದು ಆಸ್ಪತ್ರೆಗೆ ದಾಖಲಾಗಲು ಸಮಯ ತಗಲುತ್ತದೆ. ಕೋವಿಡ್ ಪರೀಕ್ಷೆಯಲ್ಲಿ ಸೋಂಕು ಇಲ್ಲ ಎಂಬ ಫಲಿತಾಂಶ ಬಂದ ಕೆಲವರಲ್ಲೂ ಸಿ.ಟಿ.ಸ್ಕ್ಯಾನ್‌ನಲ್ಲಿ ಸೋಂಕು ದೃಢಪಡುತ್ತಿದೆ. ಬಿ.ಯು.ಸಂಖ್ಯೆ ಹೊಂದಿರದ ಇಂತಹ ರೋಗಿಗಳು ಆಸ್ಪತ್ರೆಗೆ ದಾಖಲಾಗಲು 108 ಸಹಾಯವಾಣಿಗೆ ಕರೆ ಮಾಡುವಂತೆ ಸರ್ಕಾರ ಸೂಚಿಸಿದೆ. ಆದರೆ, ಇಂತಹವರು ಆಸ್ಪತ್ರೆಗೆ ದಾಖಲಾಗಲು ನೂರೆಂಟು ಸಮಸ್ಯೆ ಎದುರಿಸುತ್ತಿದ್ದಾರೆ.

'108 ಸಹಾಯವಾಣಿಗೆ ಕರೆ ಮಾಡಿದರೂ ಕರೆಯನ್ನೇ ಸ್ವೀಕರಿಸುತ್ತಿಲ್ಲ. ಅಪ್ಪಿತಪ್ಪಿ ಕರೆ ಸ್ವೀಕರಿಸಿದರೂ ತಕ್ಷಣವೇ ಆಂಬುಲೆನ್ಸ್ ಕಳುಹಿಸುತ್ತಿಲ್ಲ. ಆಂಬುಲೆನ್ಸ್ ಬರುತ್ತದೋ ಇಲ್ಲವೋ ಎಂದು ತಾಸುಗಟ್ಟಲೆ ಕಾಯುತ್ತಾ ಕೂರಬೇಕು. ರಕ್ತದಲ್ಲಿ ಆಮ್ಲಜನಕದ ಪ್ರಮಾಣ ಕುಸಿಯುತ್ತಿರುವಾಗ ಎಷ್ಟು ಹೊತ್ತು ಕಾಯುತ್ತಾ ಕೂರಲು ಸಾಧ್ಯ' ಎಂದು ರೋಗಿಯ ಬಂಧುವೊಬ್ಬರು ಪ್ರಶ್ನಿಸಿದರು.

ತೀವ್ರ ಉಸಿರಾಟದ ಸಮಸ್ಯೆ ಎದುರಿಸುತ್ತಿರುವ ರೋಗಿಯೊಬ್ಬರಿಗೆ ಆಸ್ಪತ್ರೆಗೆ ದಾಖಲಾಗಲು ಸಾಧ್ಯವಾಗದ ಬಗ್ಗೆ 'ಪ್ರಜಾವಾಣಿ'ಯು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಗಮನಕ್ಕೆ ತಂದಿತು. ಅವರು ಮಧ್ಯಪ್ರವೇಶ ಮಾಡಿದ ಬಳಿಕ ರೋಗಿಯನ್ನು ಆಸ್ಪತ್ರೆಗೆ ದಾಖಲಿಸಲು ಬಿಬಿಎಂಪಿಯವರು ವ್ಯವಸ್ಥೆ ಕಲ್ಪಿಸಿದರು.

'ಐಸಿಯು ಹಾಸಿಗೆ ಆದಷ್ಟು ಬೇಗ ಸಜ್ಜುಗೊಳಿಸಲಿ'

'ನಮ್ಮ ವಲಯವೊಂದರಲ್ಲೇ ಐಸಿಯು ಹಾಸಿಗೆ ಒದಗಿಸಿ ಎಂದು 172ಕ್ಕೂ ಅಧಿಕ ಮಂದಿ ಒತ್ತಾಯಿಸಿದ್ದಾರೆ. ಯಾವುದೇ ಆಸ್ಪತ್ರೆಗಳಲ್ಲೂ ಐಸಿಯುಗಳು ಖಾಲಿ ಇಲ್ಲ. ನಾವು ಐಸಿಯು ಹಾಸಿಗೆ ಒದಗಿಸುವುದಾದರೂ ಹೇಗೆ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ' ಜೊತೆ ಅಸಹಾಯಕತೆ ವ್ಯಕ್ತಪಡಿಸಿದರು.

'ಪ್ರತಿವಲಯದಲ್ಲೂ 500 ಐಸಿಯು ಹಾಸಿಗೆಗಳ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ. ಈ ಮೂಲಸೌಕರ್ಯಗಳು ಸಿದ್ಧವಾಗುವವರೆ ಸಾವು–ನೋವು ತಪ್ಪಿಸುವುದು ಕಷ್ಟ ಸಾಧ್ಯ. ಐಸಿಯು ಹಾಸಿಗೆಗಳನ್ನು ಒದಗಿಸಲು ಸರ್ಕಾರ ತಿಂಗಳ ಮೊದಲೇ ತೀರ್ಮಾನಿಸುತ್ತಿದ್ದರೆ ಒಂದಷ್ಟು ಮಂದಿಯ ಜೀವಗಳಾದರೂ ಉಳಿಯುತ್ತಿದ್ದವು. ಈಗಲಾದರೂ ಐಸಿಯು ಹಾಸಿಗೆಗಳನ್ನು ಆದಷ್ಟು ಬೇಗ ಸಜ್ಜುಗೊಳಿಸಬೇಕು' ಎಂದು ಅವರು ಒತ್ತಾಯಿಸಿದರು.

'ಸವಾಲುಗಳ ನಡುವೆ ಅನಿವಾರ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಮೊದಲನೇ ಅಲೆಗೆ ಹೋಲಿಸಿದಲ್ಲಿ ಈಗ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುವುದು ಸವಾಲಾಗಿ ಪರಿಣಮಿಸಿದೆ. ಆಸ್ಪತ್ರೆಗಳಲ್ಲಿನ ಎಲ್ಲ ಹಾಸಿಗೆಗಳು ಭರ್ತಿಯಾಗುತ್ತಿದ್ದು, ರೋಗಿಗಳು ಹಾಗೂ ಅವರ ಕುಟುಂಬದ ಸದಸ್ಯರನ್ನು ನಿರ್ವಹಿಸಬೇಕಾದ ಸವಾಲು ಕೂಡ ಎದುರಾಗಿದೆ. ಬೇಸಿಗೆ ಬೇಗೆ ನಡುವೆ ದಿನವಿಡೀ ಪಿಪಿಇ ಕಿಟ್ ಧರಿಸಿ, ಸೇವೆ ನೀಡಬೇಕಾದ ಅನಿವಾರ್ಯತೆ ನಮಗಿದೆ.'

'1992ರಲ್ಲಿ ನಾನು ಶುಶ್ರೂಷಕ ವೃತ್ತಿ ಪ್ರಾರಂಭಿಸಿದೆ. ಸುದೀರ್ಘ ಅವಧಿಯಲ್ಲಿ ವಿವಿಧ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಸಾರ್ಸ್, ಎಬೋಲಾ, ಎಚ್1ಎನ್1 ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡ ಸಂದರ್ಭದಲ್ಲಿ ಸೋಂಕಿತರಿಗೆ ಆರೈಕೆ ಮಾಡಿದ ಅನುಭವ ಹೊಂದಿದ್ದೇನೆ. ಕೋವಿಡ್ ನಮಗೆ ಕೆಟ್ಟ ಅನುಭವ ನೀಡಿದ್ದು, ಸವಾಲುಗಳ ನಡುವೆ ಪರಿಸ್ಥಿತಿ ಎದುರಿಸಬೇಕಾಗಿದೆ.'

ಶುಶ್ರೂಷಕರ ಅಂತರಂಗ

'ಆಸ್ಪತ್ರೆಗೆ ದಾಖಲಾದ ಕೋವಿಡ್ ಪೀಡಿತರು ಗಲಾಟೆ ಮಾಡಿದಾಗ ಅವರನ್ನು ಸಮಾಧಾನ ಮಾಡಬೇಕಾಗುತ್ತದೆ. ಆದರೆ, ನಮ್ಮಲ್ಲಿನ ಒತ್ತಡ, ಸಮಸ್ಯೆ, ಸವಾಲುಗಳ ಬಗ್ಗೆ ಹೊರಗಿನವರಿಗೆ ಅರ್ಥವಾಗುತ್ತಿಲ್ಲ. ಪಿಪಿಇ ಕಿಟ್ ಧರಿಸಿ ಸೇವೆ ನೀಡಬೇಕಾದ ಕಾರಣ ಕೆಲವು ದಿನ ನೀರನ್ನು ಕುಡಿಯಲು ಕೂಡ ಸಾಧ್ಯವಾಗುವುದಿಲ್ಲ. ಮನೆ, ಕುಟುಂಬದ ಸದಸ್ಯರು, ಸಂಬಂಧಿಗಳು, ಸ್ನೇಹಿತರನ್ನು ಮರೆತು ಕಾರ್ಯ ನಿರ್ವಹಿಸುತ್ತಿದ್ದೇವೆ. ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ನಮ್ಮಿಂದ ಕುಟುಂಬದ ಸದಸ್ಯರು ಕೂಡ ಸೋಂಕಿತರಾಗುವ ಸಾಧ್ಯತೆಗಳು ಇರುತ್ತವೆ.'

'ರಾತ್ರಿ ಪಾಳಿಯಲ್ಲಿ 12 ಗಂಟೆ ಅವಧಿ ಕಾರ್ಯನಿರ್ವಹಿಸುತ್ತಿದ್ದೇವೆ. ಸಿಬ್ಬಂದಿ ಕೊರತೆಯಿಂದ ರಜೆ ರಹಿತ ಸೇವೆ ನೀಡಬೇಕಾಗುತ್ತಿದೆ. ಕರ್ತವ್ಯದ ಅವಧಿಯಲ್ಲಿ ಸದಾ ಜಾಗೃತರಾಗಿ ಇರಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ರೋಗಿಗೆ ಏನಾಗುತ್ತದೆ ಎಂದು ಹೇಳಲು ಬರುವುದಿಲ್ಲ. ಕೆಲವು ಸಂದರ್ಭದಲ್ಲಿ ಅವಸರದಲ್ಲಿ ಪಿಪಿಇ ಕಿಟ್ ಧರಿಸದೆಯೇ ವಾರ್ಡ್‌ಗಳಿಗೆ ಹೋಗುತ್ತೇವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿಯ ಸೇವಾ ಮನೋಭಾವವನ್ನು ಜನತೆ ಗುರುತಿಸುತ್ತಿಲ್ಲ ಅನಿಸುತ್ತದೆ. ರೋಗಿಗಳ ಸ್ಥಿತಿಯನ್ನು ನೋಡಲಾಗದೆಯೇ ಸ್ವಯಂ ಪ್ರೇರಿತರಾಗಿ ಹೆಚ್ಚಿನ ಅವಧಿ ಸೇವೆ ನೀಡುತ್ತಿದ್ದೇವೆ.'

ಕೊರೊನಾ ಯೋಧರ ಪರಿಚಯ

ಹೆಸರು: ಶಾಂತಾ ಎಂ.
ಊರು: ಬಳ್ಳಾರಿ
ಕಾರ್ಯನಿರ್ವಹಿಸುತ್ತಿರುವ ಸ್ಥಳ: ಬೆಂಗಳೂರು
ವೃತ್ತಿ: ಶುಶ್ರೂಷಾಧಿಕಾರಿ
ಸೇವೆ: 28 ವರ್ಷ
ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆ: ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ

'ಖಾಸಗಿ ಆಸ್ಪತ್ರೆಗಳ ಸಹಕಾರ ಅಗತ್ಯ'

ಬೆಂಗಳೂರು: 'ಕೋವಿಡ್ ಎರಡನೇ ಅಲೆ ಉಲ್ಬಣಗೊಳ್ಳುತ್ತಿದೆ. ಜನರಿಗೆ ಸಮಸ್ಯೆಯಾಗದಂತೆ ಖಾಸಗಿ ಆಸ್ಪತ್ರೆಗಳ ಸಹಕಾರ ಬಹಳ ಮುಖ್ಯ. ನಮಗಾಗಿ ನೀವಿದ್ದರೆ, ನಿಮಗೆ ನಾವಿರುತ್ತೇವೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಖಾಸಗಿ ಆಸ್ಪತ್ರೆ ಮುಖ್ಯಸ್ಥರಿಗೆ ತಿಳಿಸಿದರು.

ಕೋವಿಡ್ ನಿಯಂತ್ರಣ ಸಂಬಂಧ ಯಶವಂತಪುರ ವಿಧಾನಸಭಾ ಕ್ಷೇತ್ರದ ಖಾಸಗಿ ಆಸ್ಪತ್ರೆ ಮುಖ್ಯಸ್ಥರ ಸಭೆ ಜೊತೆ ಅವರು ಶನಿವಾರ ಸಭೆ ನಡೆಸಿದರು.

'ಯಶವಂತಪುರ ವ್ಯಾಪ್ತಿಯ ಖಾಸಗಿ ಆಸ್ಪತ್ರೆಗಳಲ್ಲಿ 761 ಹಾಸಿಗೆಗಳಿದ್ದು, ಅವುಗಳಲ್ಲಿ ಪಾಲಿಕೆ ಸುಪರ್ದಿಗೆ 405 ಹಾಸಿಗೆಗಳನ್ನು ಕೊಡಬೇಕಿತ್ತು. ಆದರೆ, ಈವರೆಗೆ 268 ಹಾಸಿಗೆಗಳನ್ನು ಮಾತ್ರ ನೀಡಿರುವುದು ಸರಿಯಲ್ಲ. ಕ್ಷೇತ್ರದಲ್ಲಿ ಸರ್ಕಾರಿ ಆಸ್ಪತ್ರೆಯಿಲ್ಲ, ಖಾಸಗಿ ಆಸ್ಪತ್ರೆಗಳು ಹೆಚ್ಚಾಗಿ ಇವೆ. ಈಗಿನ ಪರಿಸ್ಥಿತಿಯಿಂದ ಪಾರಾಗಲು ಖಾಸಗಿ ಆಸ್ಪತ್ರೆಗಳ ಸಹಕಾರ ಬೇಕು. ಕ್ಷೇತ್ರದಿಂದ ದೂರುಗಳು ಬರುತ್ತಿವೆ. ಎಲ್ಲರೂ ಒಟ್ಟಾಗಿ ಕೋವಿಡ್ ವಿರುದ್ಧ ಹೋರಾಡಬೇಕು' ಎಂದರು.



ಕೋವಿಡ್: ಸ್ಟೆಪ್‌ಡೌನ್ ಆಸ್ಪತ್ರೆಗಳಾಗಿ ಹೋಟೆಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ಗಳನ್ನು ಸ್ಟೆಪ್‌ಡೌನ್ ಆಸ್ಪತ್ರೆಗಳಾಗಿ ರೂಪಿಸಲು ಹಾಗೂ ಕೇಂದ್ರೀಕೃತ ಆಮ್ಲಜನಕ ಪೂರೈಸುವ ವ್ಯವಸ್ಥೆ ಇರುವ ಹಾಸಿಗೆಗಳನ್ನು ಐಸಿಯು ಹಾಸಿಗೆಗಳಾಗಿ ಪರಿವರ್ತಿಸಲು ಸರ್ಕಾರ ತೀರ್ಮಾನಿಸಿದೆ.

ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರ ಜತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ನಡೆಸಿದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಆಕ್ಸಿಜನ್ ಕಾನ್ಸನ್ಟ್ರೇಟರ್‌ಗಳನ್ನು ಬಳಸಿ ಆಮ್ಲಜನಕ ಪೂರೈಸುವ ಹಾಸಿಗೆ ವ್ಯವಸ್ಥೆಯ ಸ್ಟೆಪ್ ಡೌನ್ (ವೆಂಟಿಲೇಟರ್ ರಹಿತ ಐಸಿಯು) ಕೋವಿಡ್ ಆಸ್ಪತ್ರೆಗಳನ್ನಾಗಿ ಹೋಟೆಲ್‌ಗಳನ್ನು ಪರಿವರ್ತಿಸಲು ನಿರ್ಣಯ ಕೈಗೊಳ್ಳಲಾಗಿದೆ.

ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಕೊರತೆ ನೀಗಿಸಲು ವೈದ್ಯಕೀಯ ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಿ ಕೋವಿಡ್ ಚಿಕಿತ್ಸೆಗೆ ಬಳಸಿಕೊಳ್ಳಲು ಮತ್ತು ಅವರಿಗೆ ಸೂಕ್ತ ಭತ್ಯೆ ನೀಡಲಾಗುವುದು. ನರ್ಸಿಂಗ್, ಫಾರ್ಮಸಿ, ಫಿಜಿಯೋಥೆರಪಿ, ಆಯುಷ್, ದಂತ ವೈದ್ಯಕೀಯ ಕೋರ್ಸ್‌ಗಳ ಹಾಗೂ ಹಾಸ್ಪಿಟಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಕೂಡಾ ಕೋವಿಡ್ ಚಿಕಿತ್ಸೆಗೆ ಬಳಸಿಕೊಳ್ಳಲಾಗುವುದು. ವಿದೇಶಗಳಲ್ಲಿ ವೈದ್ಯಕೀಯ ಪದವಿ ಮುಗಿಸಿರುವ ವಿದ್ಯಾರ್ಥಿಗಳನ್ನು ಕೋವಿಡ್ ಚಿಕಿತ್ಸೆಗೆ ಬಳಸಿಕೊಳ್ಳಲು ಅನುಕೂಲವಾಗುವಂತೆ ಕರ್ನಾಟಕ ವೈದ್ಯಕೀಯ ಪರಿಷತ್‌ನಲ್ಲಿ ನೋಂದಣಿ ಮಾಡುವ ಬಗ್ಗೆ ಪರಿಶೀಲಿಸಲು ತೀರ್ಮಾನಿಸಲಾಗಿದೆ.

ರೋಗಲಕ್ಷಣರಹಿತರು ಆಸ್ಪತ್ರೆಗಳಲ್ಲಿ ದಾಖಲಾಗುತ್ತಿದ್ದು, ಅದನ್ನು ಕಡಿಮೆಗೊಳಿಸಲು, ಸೋಂಕಿತರನ್ನು ಪ್ರತ್ಯೇಕಿಸಿ ಅಗತ್ಯ ಇರುವವರನ್ನು ಮಾತ್ರ ಆಸ್ಪತ್ರೆಗೆ ದಾಖಲಿಸಲು ಮತ್ತು ಲಕ್ಷಣರಹಿತರನ್ನು ಮನೆಯಲ್ಲಿಯೇ ಐಸೋಲೇಷನ್ ಮಾಡಿ ಚಿಕಿತ್ಸೆ ನೀಡಲು ಖಾಸಗಿ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ಟೆಲಿ ಮೆಡಿಸಿನ್ ಸೌಲಭ್ಯ ಹೆಚ್ಚಿಸುವ ಬಗ್ಗೆಯೂ ಚರ್ಚೆ ನಡೆಯಿತು.

ವೈದ್ಯಕೀಯ ಕಾಲೇಜುಗಳ ಹಾಸ್ಟೆಲ್‌ಗಳ ಸಾಮಾನ್ಯ ಹಾಸಿಗೆಗಳನ್ನು ಆಮ್ಲಜನಕ ಪೂರೈಸುವ ಸೌಲಭ್ಯ ಇರುವ ಹಾಸಿಗೆಗಳಾಗಿ ಪರಿವರ್ತಿಸಲು ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಆಕ್ಸಿಜನ್ ಜನರೇಷನ್ ಪ್ಲಾಂಟ್ ಅಳವಡಿಸಲು ಸರ್ಕಾರದಿಂದಲೇ ಆರ್ಥಿಕ ನೆರವು ನೀಡುವುದು. ಕಡಿಮೆ ಕಾರ್ಯಭಾರವಿರುವ ವೈದ್ಯಕೀಯ ಸಿಬ್ಬಂದಿ ಗುರುತಿಸಿ, ಅಂಥವರನ್ನು ಪೂರ್ಣವಾಗಿ ಬಳಸಿಕೊಳ್ಳಲು ಕೂಡಾ ನಿರ್ಧರಿಸಲಾಯಿತು.

ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥ್ ನಾರಾಯಣ್, ಆರೋಗ್ಯ ಸಚಿವ ಡಾ. ಕೆ.ಸುಧಾಕರ್, ನಾರಾಯಣ ಹೃದಯಾಲಯದ ಡಾ. ದೇವಿಶೆಟ್ಟಿ, ಎಂ.ಎಸ್. ರಾಮಯ್ಯ ಆಸ್ಪತ್ರೆಯ ಅಧ್ಯಕ್ಷ ಜಯರಾಂ ಸಭೆಯಲ್ಲಿ ಇದ್ದರು.

'ಐಸಿಯು ರೋಗಿಗಳ ಸ್ಥಿತಿಗತಿ ಮಾಹಿತಿ ಏಕಿಲ್ಲ'

ಬೆಂಗಳೂರು: ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗುತ್ತಿರುವ ರೋಗಿಗಳ ಮಾಹಿತಿಯನ್ನು ಸರಿಯಾಗಿ ನೀಡುತ್ತಿಲ್ಲ. ಅದರಲ್ಲಿಯೂ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳನ್ನು ನೋಡಲಾಗದೆ, ಅವರ ಸ್ಥಿತಿಗತಿ ತಿಳಿಯದೇ ಆತಂಕದಲ್ಲಿಯೇ ಇರಬೇಕಾಗಿದೆ ಎಂದು ರೋಗಿಗಳ ಸಂಬಂಧಿಕರು ಪ್ರಜಾವಾಣಿ ವರದಿಗಾರ ಗುರು ಪಿ.ಎಸ್. ಅವರಲ್ಲಿ ಅಳಲು ತೋಡಿಕೊಂಡಿದ್ದಾರೆ

ಸರ್ಕಾರಿ ಕೋಟಾ ರೋಗಿಗಳ ನಿರ್ಲಕ್ಷ್ಯ

'ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ದಾಖಲಾಗುವ ರೋಗಿಗಳ ಬಗ್ಗೆ ನಿರ್ಲಕ್ಷ್ಯ ಮಾಡಲಾಗುತ್ತಿದೆ. ನನ್ನ ಪತಿ ಏ.12ರಂದು ಶಾಂತಿನಗರದ ಸೇಂಟ್ ಫಿಲೋಮಿನಾ ಆಸ್ಪತ್ರೆಗೆ ದಾಖಲಾಗಿದ್ದರು. ಆಮ್ಲಜನಕ ಮಟ್ಟ ಸ್ವಲ್ಪ ಕಡಿಮೆ ಇತ್ತು. ಬಿಬಿಎಂಪಿ ಕಡೆಯಿಂದ (ಸರ್ಕಾರಿ ಕೋಟಾ) ಅಡ್ಮಿಟ್ ಆಗಿದ್ದೆವು. ಮೊದಲಿಗೆ, ರೆಮ್‌ಡಿಸಿವಿರ್ ಇಂಜೆಕ್ಷನ್ ಖಾಲಿ ಆಗಿದೆ. ತೆಗೆದುಕೊಂಡು ಬನ್ನಿ ಇಲ್ಲದಿದ್ದರೆ ₹1,800 ಕೊಡಿ ಎಂದರು. ಇಷ್ಟು ದುಡ್ಡೇಕೆ ನಾವು ಸರ್ಕಾರಿ ಕೋಟಾದಡಿ ದಾಖಲಾಗಿದ್ದೇವೆ ಎಂದು ಪ್ರಶ್ನಿಸಿದ್ದಕ್ಕೆ ವೈದ್ಯರು, ಶುಶ್ರೂಷಕರು ಅಸಮಾಧಾನಗೊಂಡರು. ನಾವೇ ಹೊರಗಿನಿಂದ ಇಂಜೆಕ್ಷನ್ ತಂದುಕೊಟ್ಟೆವು. ಪ್ರಶ್ನೆ ಮಾಡುತ್ತಿದ್ದಂತೆ ಆಸ್ಪತ್ರೆ ಸಿಬ್ಬಂದಿ ನಮ್ಮ ಬಗ್ಗೆ ಸಿಡಿಮಿಡಿಗೊಳ್ಳುತ್ತಿದ್ದರು' ಎಂದು ಅವರ ಪತ್ನಿ 'ಪ್ರಜಾವಾಣಿ'ಗೆ ತಿಳಿಸಿದರು.

'ಸರ್ಕಾರಿ ಕೋಟಾದಡಿ ದಾಖಲಾಗುವವರಿಗೆ ಮೀಸಲಾಗಿದ್ದ ಐಸಿಯು ಹಾಸಿಗೆ ಖಾಲಿ ಆಗಿದೆ. ನಿಮ್ಮ ಪತಿಯನ್ನು ಖಾಸಗಿ ಕೋಟಾದಡಿ ದಾಖಲಿಸಿದರೆ ಹಾಸಿಗೆ ಸಿಗಲಿದೆ. ಇಲ್ಲದಿದ್ದರೆ ನೀವು ಬೇರೆ ಆಸ್ಪತ್ರೆ ನೋಡಿಕೊಳ್ಳಬೇಕು ಎಂದರು. ಐಸಿಯು ಹಾಸಿಗೆ ನೀಡುವುದಕ್ಕೇ ನಾಲ್ಕು ದಿನ ಕಾಯಿಸಿದರು. ಪತಿಯ ಆರೋಗ್ಯ ಸ್ಥಿತಿ ಗಂಭೀರವಾಗುತ್ತಿದ್ದುದರಿಂದ ನಾವು ಖಾಸಗಿ ಕೋಟಾದಡಿ ದಾಖಲಿಸಲು ಒಪ್ಪಿಕೊಂಡೆವು. ಐಸಿಯುದಲ್ಲಿ ಒಂದು ವಾರ ಚಿಕಿತ್ಸೆ ನೀಡಿದರು. ರೆಮ್‌ಡಿಸಿವಿರ್ ಇಂಜೆಕ್ಷನ್‌ಗೆ ₹4,500 ಬಿಲ್ ಮಾಡಿದ್ದರು. ಎಲ್ಲ ಔಷಧ ಮತ್ತು ಆಸ್ಪತ್ರೆ ಖರ್ಚು ಸೇರಿ ₹3 ಲಕ್ಷ ಬಿಲ್ ಮಾಡಿದರು. ಪತಿ ಚೇತರಿಸಿಕೊಳ್ಳಲೇ ಇಲ್ಲ. ಏ.22ಕ್ಕೆ ತೀರಿಕೊಂಡರು' ಎಂದು ಅವರು ಕಣ್ಣೀರಾದರು.

'ಎಲ್ಲದರ ಬಿಲ್ ನನ್ನ ಬಳಿ ಇದೆ. ಮಧುಮೇಹ ಇರುವ ಬಗ್ಗೆ ನೀವು ಹೇಳಿರಲಿಲ್ಲ. ಅವರ ಸಾವಿಗೆ ಇದೂ ಕಾರಣ ಎಂದು ವೈದ್ಯರು ಹೇಳಿದರು. ಅವರಿಗೆ ಮಧುಮೇಹ ಮತ್ತು ರಕ್ತದೊತ್ತಡ ಸಮಸ್ಯೆ ಇದೆ ಎಂದು ಮೊದಲೇ ಹೇಳಿದ್ದೆವು. ಆದರೆ, ಈ ಯಾವ ಮಾತ್ರೆಗಳನ್ನೂ ಅವರಿಗೆ ನೀಡಲಿಲ್ಲ. ಖಾಸಗಿ ಕೋಟಾಗೆ ಸೇರಿಸಿದ ಮೇಲೆ ಐಸಿಯು ಹಾಸಿಗೆ ನೀಡುವ ಬದಲು, ಸರ್ಕಾರಿ ಕೋಟಾದಡಿ ಆಸ್ಪತ್ರೆಗೆ ದಾಖಲಾದ ದಿನವೇ ಐಸಿಯುಗೆ ದಾಖಲು ಮಾಡಿಕೊಂಡಿದ್ದರೆ ನನ್ನ ತಂದೆ ಬದುಕುಳಿಯುತ್ತಿದ್ದರು' ಎಂದು ಮೃತರ ಮಗಳು ಹೇಳಿದರು.

'ವೈದ್ಯರು–ಶುಶ್ರೂಷಕರು ದೇವರಂತಿದ್ದರು'

'ಜ್ವರ, ಉಸಿರಾಟದ ಸಮಸ್ಯೆ ಇತ್ತು. ಬಸವೇಶ್ವನಗರದಲ್ಲಿರುವ ಪುಣ್ಯ ಆಸ್ಪತ್ರೆಗೆ ದಾಖಲಾಗಿದ್ದೆ. ಪತ್ನಿ ಮತ್ತು ಕುಟುಂಬದ ಮತ್ತಿಬ್ಬರಿಗೂ ಸೋಂಕು ತಗುಲಿತ್ತು. ಅವರು ಮೂರು ಜನ ಹೋಂ ಐಸೊಲೇಶನ್‌ನಲ್ಲಿದ್ದರೆ, ನಾನು ಮಾತ್ರ ಆಸ್ಪತ್ರೆಗೆ ದಾಖಲಾಗಿದ್ದೆ. ಮೊದಲ ಎರಡು ದಿನ ರೆಮ್‌ಡಿಸಿವಿರ್ ಇಂಜೆಕ್ಷನ್ ಇಲ್ಲ ಎಂದಾಗ ಆತಂಕಗೊಂಡಿದ್ದೆ. ಆದರೆ, ವೈದ್ಯರು ತುಂಬಾ ಧೈರ್ಯ ತುಂಬಿದರು. ಉತ್ತಮ ಚಿಕಿತ್ಸೆ ನೀಡಿದರು. ಈಗ ಸಂಪೂರ್ಣ ಗುಣಮುಖನಾಗಿ ಬಂದಿದ್ದೇನೆ' ಎಂದು ಆರ್. ಶಶಿಧರ ಎಂಬುವರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾತ್ರಿಯಾದರೂ ನರ್ಸ್‌ಗಳು ಮತ್ತು ವಾರ್ಡ್ ಬಾಯ್ ಗಳು ನಮ್ಮ ಮೇಲೆ ನಿಗಾ ಇಟ್ಟಿರುತ್ತಿದ್ದರು. ಬೇಕು–ಬೇಡಗಳನ್ನು ವಿಚಾರಿಸಿಕೊಳ್ಳುತ್ತಿದ್ದರು. ನನ್ನ ಆರೋಗ್ಯ ಸ್ಥಿತಿಯ ಬಗ್ಗೆ ದಿನಕ್ಕೆ ಮೂರು ಬಾರಿ ಕುಟುಂಬದವರಿಗೆ ಮಾಹಿತಿ ನೀಡುತ್ತಿದ್ದರು' ಎಂದರು.

'ವೈದ್ಯಕೀಯ ವಿಮೆ ಇದ್ದುದರಿಂದ ಚಿಕಿತ್ಸಾ ಶುಲ್ಕ ಭರಿಸುವುದು ಕಷ್ಟವಾಗಲಿಲ್ಲ' ಎಂದೂ ಅವರು ಹೇಳಿದರು.

ಆತ್ಮಹತ್ಯೆಯಲ್ಲ, ಕೊಲೆ: ಆರೋಪ

'ನನ್ನ ಮಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ. ಅವನ ಹೆಸರು ಕುಮಾರ್. 27 ವರ್ಷ. ಉಸಿರಾಟದ ಸಮಸ್ಯೆ ಇದ್ದಿದ್ದಕ್ಕೆ ಆಸ್ಪತ್ರೆಗೆ ದಾಖಲಿಸಿದ್ದೆವು. ಅವನಿಗೆ ಯಾವ ರೀತಿ ಚಿಕಿತ್ಸೆ ಕೊಡುತ್ತಿದ್ದರು, ಯಾವ ಔಷಧಿ ಕೊಡುತ್ತಿದ್ದರು ಎಂಬ ಮಾಹಿತಿಯನ್ನು ವೈದ್ಯರು ನೀಡುತ್ತಿರಲಿಲ್ಲ. ಸಾಯುವುದಕ್ಕೆ ಸ್ವಲ್ಪ ಹೊತ್ತು ಮುಂಚೆ ಕರೆ ಮಾಡಿ, ನನಗೆ ಇಲ್ಲಿ ಸರಿಯಾಗಿ ಚಿಕಿತ್ಸೆ ನೀಡುತ್ತಿಲ್ಲ. ಇವರು ನನ್ನನ್ನು ಸಾಯಿಸಿ ಬಿಡುತ್ತಾರೆ ಎಂದು ಗೋಗರೆದಿದ್ದ. ಅದಾಗಿ ಕೆಲವೇ ತಾಸಿನ ನಂತರ ನಿಮ್ಮ ಮಗ ಮೇಲಿನಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಎಂದು ಆಸ್ಪತ್ರೆ ಸಿಬ್ಬಂದಿ ಬಂದು ಹೇಳಿದರು. ಇದು ಆತ್ಮಹತ್ಯೆಯಲ್ಲ, ಕೊಲೆ' ಎಂದು ಮೃತನ ತಾಯಿ ಆರೋಪಿಸಿದರು.

'ಐಸಿಯುದಲ್ಲಿರುವ ರೋಗಿಗಳ ಬಗ್ಗೆ ಸರಿಯಾಗಿ ಮಾಹಿತಿಯೇ ನೀಡುವುದಿಲ್ಲ. ಕೋವಿಡ್ ಇರುವುದರಿಂದ ಯಾರೂ ಹತ್ತಿರ ಬರುವಂತಿಲ್ಲ ಎಂದು ಹೇಳುತ್ತಾರೆ. ರೋಗಿಯ ಸ್ಥಿತಿಗತಿ ಕುರಿತು ದಿನಕ್ಕೆ ಕನಿಷ್ಠ ಎರಡು ಬಾರಿ ವೈದ್ಯರು ರೋಗಿಯ ಸಂಬಂಧಿಕರಿಗೆ ಮಾಹಿತಿ ನೀಡಬೇಕು. ಅಗತ್ಯ ಇರುವಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು' ಎಂದು ಮೃತನ ಸಂಬಂಧಿಕರು ಒತ್ತಾಯಿಸಿದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಿಗೆ ಕರೆ ಮಾಡಲಾಯಿತು. ಆದರೆ, ಅವರು ಸಂಪರ್ಕಕ್ಕೆ ಸಿಗಲಿಲ್ಲ.

ರೋಗಿಯ ಲಕ್ಷಣ ಆಧರಿಸಿ ಬಿಯು ಸಂಖ್ಯೆ ನೀಡಲಿ

'ನಾನು ಮತ್ತು ನನ್ನ ಪತಿ ಚಳಿ ಮತ್ತು ಜ್ವರದ ಸಮಸ್ಯೆಯಿಂದ ಬಳಲುತ್ತಿದ್ದೆವು. ಮೂರು ಬಾರಿ ಪರೀಕ್ಷೆ ಮಾಡಿದಾಗಲೂ ವರದಿ ನೆಗೆಟಿವ್ ಬಂದಿತ್ತು. ಆರ್‌ಟಿ ಪಿಸಿಆರ್‌ನಲ್ಲಿ ಪಾಸಿಟಿವ್ ಬಾರದೆ ಹೋದರೆ ಬಿಯು ಸಂಖ್ಯೆ ಸಿಗುವುದಿಲ್ಲ. ಬಿಯು ಸಂಖ್ಯೆ ಸಿಗದಿದ್ದರೆ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುವುದಿಲ್ಲ. ಇತರೆ ರೋಗಿಗಳು ಎಂದರೂ ಹಲವು ಆಸ್ಪತ್ರೆಗಳು ದಾಖಲು ಮಾಡಿಕೊಳ್ಳಲಿಲ್ಲ. ಕೊನೆಗೆ, ಸಂಬಂಧಿಕರ ನೆರವಿನಿಂದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಾದೆವು. ದಾಖಲಾದ ನಂತರವೂ ಶಿಷ್ಟಾಚಾರ ಎಂದುಕೊಂಡು ಇಂಜೆಕ್ಷನ್, ಆಕ್ಸಿಜನ್ ಕೊಡಲು ಎರಡು ದಿನ ತಡ ಮಡಿದರು. ಪತಿಯ ಆಮ್ಲಜನಕ ಮಟ್ಟ ಕಡಿಮೆಯಾದ ನಂತರ ಮೇಲೆ ಇಂಜೆಕ್ಷನ್, ಆಕ್ಸಿಜನ್ ನೀಡಿದರು. ಪತಿಯ ಆಮ್ಲಜನಕ ಮಟ್ಟ ಕುಸಿಯುತ್ತಾ ಹೋಗಿ ಅವರು ಅಸುನೀಗಿದರು. ನೆಗೆಟಿವ್ –ಪಾಸಿಟಿವ್ ವರದಿ ಆಧಾರದ ಮೇಲೆ ಆಸ್ಪತ್ರೆಗೆ ದಾಖಲಿಸಿಕೊಳ್ಳುವ ಬದಲು, ರೋಗಿಯ ಆರೋಗ್ಯ ಸ್ಥಿತಿ ಆಧರಿಸಿ ಆಸ್ಪತ್ರೆಗೆ ದಾಖಲಿಸಿಕೊಳ್ಳಬೇಕು' ಎಂದು ಶಿಕ್ಷಣ ಇಲಾಖೆಯ ಮಹಿಳಾ ಅಧಿಕಾರಿ ಸುಮಾ ಚಂದ್ರಶೇಖರ್ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದಾರೆ.

ರೈಲು ನಿಲ್ದಾಣ ಭರ್ತಿ: ಆಹಾರ ಹಾಗೂ ನೀರಿಗಾಗಿ ಊರಿಗೆ ಹೊರಟವರ ಪರದಾಟ

ಅನಗತ್ಯ ಓಡಾಟ: 1,640 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕರ್ಫ್ಯೂ ಜಾರಿಯಲ್ಲಿದ್ದರೂ ಅಗತ್ಯ ಸೇವೆಗಳ ನೆಪದಲ್ಲಿ ಜನರ ಓಡಾಟ ಮುಂದುವರಿದಿದ್ದು, ಒಂದೇ ದಿನದಲ್ಲಿ ಇಂಥವರ 1,640 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

‘ಶುಕ್ರವಾರ ಬೆಳಿಗ್ಗೆಯಿಂದ ಶನಿವಾರ ಬೆಳಿಗ್ಗೆವರೆಗೆ ನಗರದೆಲ್ಲೆಡೆ ಬಿಗಿ ಭದ್ರತೆ ಇತ್ತು. ಈ ಸಂದರ್ಭದಲ್ಲಿ 1,479 ದ್ವಿಚಕ್ರ ವಾಹನ, 91 ಆಟೊ ಹಾಗೂ 70 ಕಾರುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಜಪ್ತಿ ಮಾಡಲಾದ ವಾಹನಗಳನ್ನು ನಿಗದಿತ ಸ್ಥಳಗಳಲ್ಲಿ ನಿಲ್ಲಿಸಲಾಗಿದೆ. ಮಾಲೀಕರು ನ್ಯಾಯಾಲಯದ ಮೂಲಕ ವಾಹನಗಳನ್ನು ಬಿಡಿಸಿಕೊಳ್ಳಬೇಕಾಗುತ್ತದೆ’ ಎಂದೂ ತಿಳಿಸಿದರು.

ರೈಲು ನಿಲ್ದಾಣ ಭರ್ತಿ: ನಗರದ ಮೆಜೆಸ್ಟಿಕ್ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹಾಗೂ ಯಶವಂತಪುರ ರೈಲು ನಿಲ್ದಾಣಗಳಲ್ಲಿ ಶನಿವಾರ ಜನಸಂದಣಿ ಇತ್ತು. ನಿಲ್ದಾಣದ ಹೊರ ಭಾಗ ಹಾಗೂ ಒಳಭಾಗ ಪ್ರಯಾಣಿಕರಿಂದ ಭರ್ತಿ ಆಗಿತ್ತು.

ಹೊರ ಜಿಲ್ಲೆ ಹಾಗೂ ಹೊರ ರಾಜ್ಯಕ್ಕೆ ಹೊರಟಿದ್ದ ಜನ, ಬೆಳಿಗ್ಗೆಯೇ ನಿಲ್ದಾಣಕ್ಕೆ ಬಂದಿದ್ದರು. ಊಟ, ಆಹಾರ ಹಾಗೂ ನೀರಿಗಾಗಿ ಪ್ರಯಾಣಿಕರು ಪರದಾಡಿದರು.

‘ರಾತ್ರಿ ರೈಲಿನಲ್ಲಿ ಪ್ರಯಾಣಿಸಲು ಟಿಕೆಟ್ ಕಾಯ್ದಿರಿಸಲಾಗಿದೆ. ಬೆಳಿಗ್ಗೆ 10ರ ನಂತರ ಪೊಲೀಸರು ರಸ್ತೆಯಲ್ಲಿ ಓಡಾಡಲು ಬಿಡುವುದಿಲ್ಲ. ಆಟೊ ಹಾಗೂ ಕ್ಯಾಬ್‌ಗಳು ಸಿಗುವುದಿಲ್ಲ. ಹೀಗಾಗಿ, ಬೆಳಿಗ್ಗೆ 10 ಗಂಟೆ ಒಳಗೆಯೇ ನಿಲ್ದಾಣಕ್ಕೆ ಬಂದಿದ್ದೇವೆ’ ಎಂದು ಉತ್ತರ ಪ್ರದೇಶದ ಕಾರ್ಮಿಕ ಬಿಜು ಹೇಳಿದರು.

‘ಸ್ನೇಹಿತರೆಲ್ಲರೂ ಸೇರಿ ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿದ್ದೆವು. ಕರ್ಫ್ಯೂನಿಂದಾಗಿ ಕೆಲಸ ಹೋಗಿದ್ದು, ಹೀಗಾಗಿ ವಾಪಸು ಹೊರಟಿದ್ದೇವೆ. ಕರ್ಫ್ಯೂ ತೆರುವಾದ ನಂತರ ಪುನಃ ಬೆಂಗಳೂರಿಗೆ ಬರುತ್ತೇವೆ’ ಎಂದೂ ತಿಳಿಸಿದರು.

ಉದ್ಯಾನದ ಎದುರೇ ಮಾರುಕಟ್ಟೆ: ಬಸವನಗುಡಿ, ರಾಜಾಜಿನಗರ, ವಿಜಯನಗರ ಹಾಗೂ ಹಲವೆಡೆ ಮಾರುಕಟ್ಟೆಗಳನ್ನು ಪೊಲೀಸರು ಮುಂಜಾಗ್ರತಾ ಕ್ರಮವಾಗಿ ಬಂದ್ ಮಾಡಿಸಿದ್ದಾರೆ. ಹೀಗಾಗಿ, ಅದೇ ಪ್ರದೇಶಗಳ ಉದ್ಯಾನ ಎದುರೇ ವ್ಯಾಪಾರಿಗಳು ತರಕಾರಿ ಸೇರಿ ಅಗತ್ಯ ವಸ್ತುಗಳನ್ನು ಮಾರುತ್ತಿದ್ದಾರೆ.

ಜನರು ತಂಡೋಪತಂಡವಾಗಿ ಉದ್ಯಾನ ಬಳಿ ಬಂದು ಅಗತ್ಯ ವಸ್ತುಗಳನ್ನು ಖರೀದಿಸುತ್ತಿದ್ದು, ಪರಸ್ಪರ ಅಂತರವನ್ನೂ ಕಲ್ಪಿಸುತ್ತಿಲ್ಲ. ಇದು ಸೋಂಕು ಹರಡಲು ದಾರಿ ಮಾಡಿಕೊಡುತ್ತಿದೆ.

ಕ್ಯಾಬ್, ಆಟೊ ಓಡಾಟ: ಗೂಡ್ಸ್ ಹಾಗೂ ತುರ್ತು ಸೇವೆಗಳ ವಾಹನಗಳನ್ನು ಹೊರತುಪಡಿಸಿ ಎಲ್ಲ ಬಗೆಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಆದರೆ, ಆಟೊ ಹಾಗೂ ಕ್ಯಾಬ್‌ಗಳು ನಗರದಲ್ಲಿ ನಿರಂತರವಾಗಿ ಸಂಚರಿಸುತ್ತಿವೆ.

ನಗರದ ಪ್ರತಿಯೊಂದು ರಸ್ತೆಯನ್ನೂ ಪೊಲೀಸರು ಬ್ಯಾರಿಕೇಡ್ ಹಾಕಿ ಕಾವಲು ಕಾಯುತ್ತಿದ್ದಾರೆ. ಆಟೊ ಹಾಗೂ ಕ್ಯಾಬ್‌ಗಳನ್ನು ತಡೆದು ಪರಿಶೀಲನೆ ನಡೆಸುತ್ತಿದ್ದಾರೆ. ಇಂಥ ಸಂದರ್ಭದಲ್ಲೇ ವಾಗ್ವಾದಗಳೂ ನಡೆಯುತ್ತಿದ್ದು, ನಿಯಮ ಉಲ್ಲಂಘಿಸುವವರ ಆಟೊ ಹಾಗೂ ಕ್ಯಾಬ್‌ಗಳನ್ನು ಪೊಲೀಸರು ಜಪ್ತಿ ಮಾಡುತ್ತಿದ್ದಾರೆ.

‘ವಿಮಾನ ಹಾಗೂ ರೈಲು ಪ್ರಯಾಣಿಕರಿಗೆ ಆಟೊ–ಕ್ಯಾಬ್ ಬಳಸಲು ಅನುಮತಿ ಇದೆ. ಅಷ್ಟಾದರೂ ಪೊಲೀಸರು ನಮ್ಮನ್ನು ತಡೆದು ದಂಡ ಹಾಕುತ್ತಿದ್ದಾರೆ’ ಎಂದು ಚಾಲಕರು ದೂರುತ್ತಿದ್ದಾರೆ.

ಪೊಲೀಸರು, ‘ಅನುಮತಿಯನ್ನೂ ದುರುಪಯೋಗಪಡಿಸಿಕೊಂಡು ಆಟೊ ಹಾಗೂ ಕ್ಯಾಬ್‌ಗಳನ್ನು ಓಡಿಸಲಾಗುತ್ತಿದೆ. ಸೂಕ್ತ ದಾಖಲೆ ಇಲ್ಲದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದರು.

ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿ ಪೊಲೀಸರು ಶನಿವಾರ ವಾಹನಗಳ ಪರಿಶೀಲನೆ ನಡೆಸಿದರು – ಪ್ರಜಾವಾಣಿ ಚಿತ್ರ

ಕೆ.ಆರ್. ಮಾರುಕಟ್ಟೆಯಲ್ಲಿ ಡಿಸಿಪಿ ಸಂಚಾರ

ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಬೆಳಿಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದಾರೆ. ಈ ಸ್ಥಳದಲ್ಲಿ ನಿಯಮ ಉಲ್ಲಂಘನೆ ಹೆಚ್ಚಿದ್ದು, ಇದೇ ಕಾರಣಕ್ಕೆ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ಶನಿವಾರ ಮಾರುಕಟ್ಟೆ ಸುತ್ತಿದರು.

ಎಸಿಪಿ ಹಾಗೂ ಇನ್‌ಸ್ಪೆಕ್ಟರ್ ಜೊತೆ ಮಾರುಕಟ್ಟೆಯಲ್ಲಿ ಸಂಚರಿಸಿದ ಡಿಸಿಪಿ, ಕರ್ಫ್ಯೂ ನಿಯಮಗಳನ್ನು ಪಾಲಿಸುವಂತೆ ವ್ಯಾಪಾರಿಗಳು ಹಾಗೂ ಜನರಿಗೆ ಸೂಚಿಸಿದರು. ಮಾಸ್ಕ್ ಧರಿಸದ ಹಾಗೂ ಅಂತರ ಕಾಯ್ದುಕೊಳ್ಳದವರವನ್ನು ತರಾಟೆಗೆ ತೆಗೆದುಕೊಂಡರು. ಡಿಸಿಪಿ ಭೇಟಿಯಿಂದಾಗಿ ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಪರಸ್ಪರ ಅಂತರ ಕಾಯ್ದುಕೊಂಡಿದ್ದು ಕಂಡುಬಂತು.

ಸುದ್ದಿ 2 ನಿಮಿಷ

ಕೋವಿಡ್: ₹ 30 ಲಕ್ಷ ಪರಿಹಾರಕ್ಕೆ ಆಗ್ರಹ

ಬೆಂಗಳೂರು: ‘ಕೋವಿಡ್ ಎರಡನೇ ಅಲೆಯ ಅವಧಿಯಲ್ಲಿ ಮೃತಪಟ್ಟ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಕುಟುಂಬಗಳಿಗೆ ತಲಾ ₹ 30 ಲಕ್ಷ ಪರಿಹಾರ ನೀಡಬೇಕು’ ಎಂದು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘ ಆಗ್ರಹಿಸಿದೆ.

ಈ ಸಂಬಂಧ ಸಂಘದ ಗೌರವಾಧ್ಯಕ್ಷ ಆಯನೂರು ಮಂಜುನಾಥ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಪತ್ರ ಬರೆದಿದ್ದಾರೆ.

‘ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡುತ್ತಿದ್ದಾರೆ. ಕೋವಿಡ್‌ನಿಂದ ಮೃತಪಟ್ಟ ನೌಕರರ ಕುಟುಂಬಕ್ಕೆ ತಲಾ ₹ 30 ಲಕ್ಷ ಪರಿಹಾರ ನೀಡಬೇಕು. ಅದೇ ರೀತಿ, ನೌಕರರು ಅಥವಾ ಅವರ ಕುಟುಂಬದ ಸದಸ್ಯರು ಕೋವಿಡ್ ಪೀಡಿತರಾದಲ್ಲಿ ಉತ್ತಮ ಚಿಕಿತ್ಸೆಗೆ ವ್ಯವಸ್ಥೆ ಹಾಗೂ ಚಿಕಿತ್ಸಾ ವೆಚ್ಚದ ಮರುಪಾವತಿಗೆ ಕ್ರಮಕೈಗೊಳ್ಳಬೇಕು’ ಎಂದಿದ್ದಾರೆ.

ಪಿಇಎಸ್ ವಿ.ವಿಯಿಂದ ಉಚಿತ ಆಹಾರ ವಿತರಣೆ

ಬೆಂಗಳೂರು: ಕೋವಿಡ್ ಕರ್ಫ್ಯೂನಿಂದ ಸಂಕಷ್ಟದಲ್ಲಿರುವವರು ಮತ್ತು ಕೋವಿಡ್ ರೋಗಿಗಳ ಸಂಬಂಧಿಕರಿಗೆ ನಗರದ ಪಿಇಎಸ್ ವಿಶ್ವವಿದ್ಯಾಲಯವು ಉಚಿತವಾಗಿ ಆಹಾರ ವಿತರಿಸುತ್ತಿದೆ.

ಕೋವಿಡ್ ಕರ್ಫ್ಯೂ ಜಾರಿಯಾಗಿರುವ ದಿನದಿಂದಲೇ ವಿಶ್ವವಿದ್ಯಾಲಯವು ಈ ಕಾರ್ಯ ಮಾಡುತ್ತಿದೆ. ಜಯದೇವ, ವಿಕ್ಟೋರಿಯಾ, ವಾಣಿವಿಲಾಸ, ಸಂಜಯ್ ಗಾಂದಿ, ನಿಮ್ಹಾನ್ಸ್ ಹಾಗೂ ರಾಜರಾಜೇಶ್ವರಿ ಆಸ್ಪತ್ರೆಗಳು ಸೇರಿದಂತೆ ನಗರದ ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳ ಸಂಬಂಧಿಕರಿಗೆ ಆಯಾ ಆಸ್ಪತ್ರೆಗಳ ಆವರಣದಲ್ಲಿಯೇ ಬಿಸಿ ಊಟ ವಿತರಿಸುತ್ತಿದೆ.

‘ಶನಿವಾರದವರೆಗೆ 3500 ಜನರಿಗೆ ಬಿಸಿಯೂಟ ವಿತರಿಸಲಾಗಿದೆ. ಕರ್ಫ್ಯೂ ಜಾರಿಯಲ್ಲಿರುವವರೆಗೆ ಈ ಕಾರ್ಯ ಮುಂದುವರಿಯಲಿದೆ’ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಎಂ.ಆರ್. ದೊರೆಸ್ವಾಮಿ ಹೇಳಿದ್ದಾರೆ.

‘ವೆಂಟಿಲೇಟರ್ ಪೂರೈಕೆ ವಿಳಂಬವಿಲ್ಲ’

ಬೆಂಗಳೂರು: ರಾಜ್ಯದಲ್ಲಿ ವೆಂಟಿಲೇಟರ್‌ಗಳ ಕೊರತೆ ಉಂಟಾಗಿದೆ. ಕೇಂದ್ರ ಸರ್ಕಾರದಿಂದ ವೆಂಟಿಲೇಟರ್‌ಗಳು ಪೂರೈಕೆಯಾಗಿದ್ದರೂ ಸಕಾಲಕ್ಕೆ ಇವುಗಳನ್ನು ಪೂರೈಸಲಾಗುತ್ತಿಲ್ಲ ಎಂಬ ಆರೋಪಗಳೂ ಕೇಳಿ ಬಂದಿವೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ರಾಜ್ಯ ವೈದ್ಯಕೀಯ ಪೂರೈಕೆಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಕೆ.ಎಸ್. ಲತಾಕುಮಾರಿ, ‘ಕೇಂದ್ರ ಸರ್ಕಾರದಿಂದ ವೆಂಟಿಲೇಟರ್ ಪೂರೈಸಲಾಗಿದ್ದರೂ ಅವುಗಳನ್ನು ಸರಿಯಾಗಿ ವಿತರಿಸಿಲ್ಲ ಎಂಬ ಆರೋಪ ಸುಳ್ಳು. ಕೇಂದ್ರದಿಂದ ಉಪಕರಣಗಳು ಬರುತ್ತಿದ್ದಂತೆ ಅಗತ್ಯ ಇರುವೆಡೆ ಕಳುಹಿಸಲಾಗುತ್ತಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮೊದಲು ನಮ್ಮ ಬಳಿ 96 ವೆಂಟಿಲೇಟರ್‌ಗಳು ಇದ್ದವು. 26ರಿಂದ 30 ದಿನಗಳ ಅವಧಿಯಲ್ಲಿ ದಿನಕ್ಕೆ 20–30ರಂತೆ 788 ವೆಂಟಿಲೇಟರ್‌ಗಳು ಕೇಂದ್ರ ಸರ್ಕಾರದಿಂದ ಪೂರೈಕೆಯಾಗಿವೆ. ಅವು ಬಂದಂತೆ ರಾಜ್ಯದ ವಿವಿಧೆಡೆ ಕಳುಹಿಸಲಾಗಿದೆ. ಈವರೆಗೆ 145 ವೆಂಟಿಲೇಟರ್‌ಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ಕಳುಹಿಸಲಾಗಿದ್ದು, ಹಂತ–ಹಂತವಾಗಿ ವಿತರಣೆ ಮಾಡುತ್ತಿದ್ದೇವೆ’ ಎಂದರು.

ಚಿತಾಗಾರ ಸಿದ್ಧ ಮಾಡುವುದಕ್ಕೂ ಮುನ್ನ ಆಕ್ಸಿಜನ್ ನೀಡಲು ಒತ್ತಾಯ • ಹೆಚ್ಚಿದ ಸರದಿ

ಹೊರವಲಯದಲ್ಲೇ ಸಾಮೂಹಿಕ ಶವಸಂಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಸಾವಿಗೀಡಾಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಿದ್ದು, ಚಿತಾಗಾರಗಳ ಮುಂದೆ ಶವಗಳ ಸಾಲು ಉದ್ದವಾಗುತ್ತಲೇ ಇದೆ. ಮೃತರ ಸಂಬಂಧಿಕರು ದಿನವಿಡೀ ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ನಗರದ ಹೊರವಲಯದ ತಾವರೆಕೆರೆ ಮತ್ತು ಇಲ್ಲಿಂದ 2 ಕಿ.ಮೀ. ದೂರದಲ್ಲಿರುವ ಗಿಡ್ಡೇನಹಳ್ಳಿ, ಚಾಮರಾಜಪೇಟೆ ಸ್ಮಶಾನದಲ್ಲಿ ಸಾಮೂಹಿಕ ಶವಸಂಸ್ಕಾರಕ್ಕೆ ಸರ್ಕಾರ ವ್ಯವಸ್ಥೆ ಮಾಡಿದ್ದು, ಇಲ್ಲಿಯೂ ಕೂಡ ಆಂಬುಲೆನ್ಸ್‌ಗಳು ಸಾಲುಗಟ್ಟಿ ನಿಂತಿವೆ.

ಏಕಕಾಲಕ್ಕೆ 26 ಶವಗಳನ್ನು ದಹನ ಮಾಡಲಾಗುತ್ತಿದೆ. ಎರಡು ಪಾಳಿಗಳಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದರು. ಶನಿವಾರ ರಾತ್ರಿ 9 ಗಂಟೆಯಾದರೂ ಶವಸಂಸ್ಕಾರ ಕಾರ್ಯ ಮುಕ್ತಾಯವಾಗಿರಲಿಲ್ಲ. ಯಲಹಂಕ ಹೊರವಲಯದಲ್ಲಿಯೂ ಭಾನುವಾರದಿಂದ ಸಾಮೂಹಿಕ ಶವಸಂಸ್ಕಾರಕ್ಕೆ ವ್ಯವಸ್ಥೆ ಮಾಡಲಾಗಿದೆ.

ಸಂಬಂಧಿಕರೇ ಇರಲಿಲ್ಲ: ಎಷ್ಟೋ ಶವಗಳ ಸಂಸ್ಕಾರದ ವೇಳೆ ಸಂಬಂಧಿಕರೇ ಇರಲಿಲ್ಲ. ಈ ಕಾರ್ಯಕ್ಕೆ ನಿಯೋಜನೆಗೊಂಡಿದ್ದ ಚಿತಾಗಾರದ ಸಿಬ್ಬಂದಿಗೆ ಇಂತಹ ಶವಗಳಿಗೆ ಅಗ್ನಿಸ್ಪರ್ಶ ಮಾಡಬೇಕಾಯಿತು.

ತಾವರೆಕೆರೆಯಲ್ಲಿ ಕೋವಿಡ್ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ಮಾಡುತ್ತಿರುವುದು –ಪ್ರಜಾವಾಣಿ ಚಿತ್ರ

ದಟ್ಟ ಹೊಗೆ: ಆಕ್ರೋಶ

‘ನಿತ್ಯ 40ಕ್ಕೂ ಹೆಚ್ಚು ಶವಗಳನ್ನು ಸುಡಲಾಗುತ್ತಿದೆ. ದಟ್ಟ ಹೊಗೆ ಉಂಟಾಗುತ್ತಿದ್ದು, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಅಪಾಯವಿದೆ’ ಎಂದು ತಾವರೆಕೆರೆಯ ಸುತ್ತ–ಮುತ್ತಲಿನ ನಿವಾಸಿಗಳು ಆತಂಕ ವ್ಯಕ್ತಪಡಿಸಿದರು.

ಹರಿಶ್ಚಂದ್ರ ಘಾಟ್, ಮೇಡಿ ಅಗ್ರಹಾರ, ಚಾಮರಾಜಪೇಟೆಯಲ್ಲಿನ ಚಿತಾಗಾರದ ಸುತ್ತ–ಮುತ್ತಲಿನ ನಿವಾಸಿಗಳೂ ಇದೇ ಆತಂಕ ವ್ಯಕ್ತಪಡಿಸಿದ್ದಾರೆ.

‘ಶನಿವಾರ ರಾತ್ರಿಯವರೆಗೂ ಶವಗಳ ಸಂಸ್ಕಾರ ಮಾಡಿದ್ದೇವೆ. 16ಕ್ಕೂ ಹೆಚ್ಚು ಆಂಬುಲೆನ್ಸ್‌ಗಳು ಸರದಿಯಲ್ಲಿ ಕಾಯುತ್ತಿದ್ದವು. ಸತತವಾಗಿ ಹೀಗೆ ಶವಗಳ ದಹನ ಮಾಡುತ್ತಿರುವುದರಿಂದ ಹೊಗೆ ಜಾಸ್ತಿಯಾಗಿದೆ’ ಎಂದು ಚಿತಾಗಾರದ ಸಿಬ್ಬಂದಿಯೊಬ್ಬರು ಹೇಳಿದರು. ‘ಅಕ್ಕ–ಪಕ್ಕದ ನಿವಾಸಿಗಳಿಗೆ ತೊಂದರೆಯಾಗಿರಬಹುದು. ಆದರೆ, ಪರಿಸ್ಥಿತಿ ಹಾಗಿದೆ. ಹೊಂದಿಕೊಂಡು ಹೋಗಬೇಕಾಗಿದೆ’ ಎಂದರು.

ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡರೆ ತಮಗೂ ಸೋಂಕು ಹರಡಬಹುದು ಎಂದು ಹಲವರು ಹಿಂದೇಟು ಹಾಕಿದರೆ, ಎಷ್ಟೋ ಜನರಿಗೆ ಪಿಪಿಇ ಕಿಟ್ ಖರೀದಿಸಲು ಮತ್ತು ಧರಿಸಲು ಸಾಧ್ಯವಾಗದೆ ಈ ಕಾರ್ಯದಿಂದ ದೂರ ಉಳಿದರು.

ನಿರ್ಲಕ್ಷ್ಯ ಬೇಡ: ‘ನನ್ನ ತಾಯಿಯವರ ಆಮ್ಲಜನಕ ಮಟ್ಟ 80ಕ್ಕೆ ಕುಸಿದಿತ್ತು. ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲು ಮಾಡಿ ನಾಲ್ಕು ತಾಸು ಕಳೆಯುವುದರೊಳಗೆ ಅವರ ಆಮ್ಲಜನಕ ಮಟ್ಟ 20ಕ್ಕೆ ಕುಸಿದಿದೆ ಎಂದು ಕರೆ ಮಾಡಿದರು. ಅದಾಗಿ ಒಂದೆರಡು ತಾಸುಗಳಲ್ಲಿಯೇ ಅಮ್ಮ ಅಸುನೀಗಿದರು. ತಂದೆಯೂ ಕೋವಿಡ್‌ನಿಂದ ಮೃತಪಟ್ಟಿದ್ದಾರೆ’ ಎಂದು ತಾವರೆಕೆರೆ ಬಳಿ ಅಂತ್ಯಸಂಸ್ಕಾರಕ್ಕೆ ಬಂದಿದ್ದ ವ್ಯಕ್ತಿಯೊಬ್ಬರು ಹೇಳಿದರು.

‘ವೈದ್ಯಕೀಯ ಆಮ್ಲಜನಕ ಸೌಲಭ್ಯ ಹೊಂದಿದ್ದ ಹಾಸಿಗೆಗಾಗಿ ಅಲೆದಾಡಬೇಕಾಯಿತು. ನಂತರ, ನಗರದೊಳಗಿನ ಚಿತಾಗಾರದ ಎದುರೂ ಸಾಲು ನಿಲ್ಲಬೇಕಾಯಿತು. ಸರ್ಕಾರ ಸಾಮೂಹಿಕ ಶವಸಂಸ್ಕಾರಕ್ಕೆ ವ್ಯವಸ್ಥೆ ಮಾಡುವುದಕ್ಕೂ ಮುನ್ನ ಆಕ್ಸಿಜನ್, ವೆಂಟಿಲೇಟರ್ ಸಹಿತ ಹಾಸಿಗೆ ಒದಗಿಸಲು ಆದ್ಯತೆ ನೀಡಬೇಕು’ ಎಂದು ಒತ್ತಾಯಿಸಿದರು.

‘ಪರಿಸ್ಥಿತಿ ಬಹಳ ಗಂಭೀರವಾಗಿದೆ. ನಮಗೇನೂ ಆಗುವುದಿಲ್ಲ ಎಂಬ ಭಂಡ ಧೈರ್ಯ ಬಿಡಬೇಕು. ಮನೆಯಲ್ಲಿಯೇ ಇರಬೇಕು. ಸರ್ಕಾರಕ್ಕೆ ಸಹಕಾರ ನೀಡಬೇಕು’ ಎಂದು ಮತ್ತೊಬ್ಬರು ಸಲಹೆ ನೀಡಿದರು.

ಪಿಪಿಇ ಕಿಟ್‌ಗೆ ಗುಂಡಿ: ದಿನಕ್ಕೆ 40ರಿಂದ 50 ಶವಗಳ ಅಂತ್ಯಸಂಸ್ಕಾರವನ್ನು ಚಿತಾಗಾರದ ಸಿಬ್ಬಂದಿ ಮಾಡುತ್ತಿದ್ದಾರೆ. ಇವರು ಬಳಸಿ ಬಿಸಾಡುವ ಪಿಪಿಇ ಕಿಟ್‌ಗಳನ್ನು ಹೂಳಲು ಈ ಪ್ರದೇಶಗಳಲ್ಲಿ ಪ್ರತ್ಯೇಕ ಗುಂಡಿಗಳನ್ನು ತೋಡಲಾಗಿದೆ. ಶವಗಳನ್ನು ಸುಡಲು ಬೇಕಾದ ಸೌದೆಗಳನ್ನು ರಾಶಿ ಹಾಕಲಾಗಿದೆ.

ತಿಂಗಳಿಗೆ ₹15 ಸಾವಿರ ನೆರವು ನೀಡಲು ಒತ್ತಾಯ

ಬೆಂಗಳೂರು: ‘ಕೋವಿಡ್ ನಿಯಂತ್ರಿಸಲು ಲಾಕ್‌ಡೌನ್ ಜಾರಿಗೊಳಿಸಿರುವ ರಾಜ್ಯ ಸರ್ಕಾರ ಬೆಳಿಗ್ಗೆ 6ರಿಂದ 10ರವರೆಗೆ ವ್ಯಾಪಾರ ನಡೆಸಲು ಅನುಮತಿ ನೀಡಿದೆ. ಇದನ್ನು ಮಧ್ಯಾಹ್ನ 2ರವರೆಗೂ ವಿಸ್ತರಿಸಬೇಕು. ಬೀದಿ ಬದಿ ವ್ಯಾಪಾರಿಗಳಿಗೆ ಮೇ ಮತ್ತು ಜೂನ್ ತಿಂಗಳಲ್ಲಿ ತಲಾ ₹15 ಸಾವಿರ ಆರ್ಥಿಕ ನೆರವು ನೀಡಬೇಕು’ ಎಂದು ಕರ್ನಾಟಕ ಪ್ರಗತಿಪರ ಬೀದಿ ವ್ಯಾಪಾರಿಗಳ ಸಂಘದ ಕಾರ್ಯದರ್ಶಿ ಪಿ.ಪಿ.ಅಪ್ಪಣ್ಣ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪ್ರಮುಖ ಬೇಡಿಕೆಗಳು..

- ಪ್ರಧಾನಮಂತ್ರಿ ಸ್ವಾನಿಧಿ ಯೋಜನೆ ಅಡಿಯಲ್ಲಿ ನೀಡಿರುವ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು.
- ಮನೆ ಮಾಲೀಕರು ತಿಂಗಳ ಬಾಡಿಗೆಗೆ ಒತ್ತಾಯ ಮಾಡಬಾರದೆಂದು ಆದೇಶಿಸಬೇಕು.
- ಖಾಸಗಿ ಫೈನಾನ್ಸ್ ಕಂಪನಿಗಳು ಸಾಲ ಮರುಪಾವತಿಗಾಗಿ ತೀವ್ರ ಒತ್ತಡ ಹಾಕುತ್ತಿವೆ. ಕೆಲವರು ಸಹಕಾರಿ ಸಂಘಗಳಿಂದ ಸಾಲ ಪಡೆದಿದ್ದಾರೆ. ವ್ಯಾಪಾರ ಇಲ್ಲದ ಕಾರಣ ಸಾಲ ತೀರಿಸುವುದು ಕಷ್ಟವಾಗಿದೆ. ಹೀಗಾಗಿ ಬಡ್ಡಿ ಮನ್ನಾ ಮಾಡಬೇಕು.
- ಪಡಿತರ ಚೀಟಿದಾರರಿಗೆ ಕೇರಳ ಮಾದರಿಯಲ್ಲಿ ಅಕ್ಕಿ, ಬೇಳೆ, ಕಾಳು, ಅಡುಗೆ ಎಣ್ಣೆ ಹಾಗೂ ಇತರೆ ಪದಾರ್ಥಗಳನ್ನು ನೀಡಬೇಕು.
- ಇ.ಎಸ್.ಐ. ಮಾದರಿಯಲ್ಲಿ ಆರೋಗ್ಯ ವಿಮೆ ಒದಗಿಸಬೇಕು.
- ಕೊಳೆಗೇರಿಗಳಲ್ಲಿ ವಾಸಿಸುತ್ತಿರುವವರಿಗೆ ‘ಕಮ್ಯುನಿಟಿ ಕಿಚನ್’ ಮೂಲಕ ತಾಜಾ ಆಹಾರ ಒದಗಿಸಬೇಕು.

ನಾರಾಯಣ ಹೃದಯಾಲಯದ ಲ್ಯಾಬ್‌ನಲ್ಲಿ ಬೆಂಕಿ

ಬೆಂಗಳೂರು: ಹೊಸೂರು ರಸ್ತೆಯಲ್ಲಿರುವ ನಾರಾಯಣ ಹೃದಯಾಲಯದಲ್ಲಿ ಶನಿವಾರ ಬೆಂಕಿ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

ಆಸ್ಪತ್ರೆಯ 8ನೇ ಮಹಡಿಯಲ್ಲಿರುವ ಸಂಶೋಧನಾ ಲ್ಯಾಬ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಮಾಹಿತಿ ಬರುತ್ತಿದ್ದಂತೆ ಎಲೆಕ್ಟ್ರಾನಿಕ್ ಸಿಟಿ ಅಗ್ನಿಶಾಮಕ ದಳದ ಠಾಣಾಧಿಕಾರಿ ಮಂಜುನಾಥ್ ನೇತೃತ್ವದ ತಂಡ, ಎರಡು ವಾಹನಗಳಲ್ಲಿ ಸ್ಥಳಕ್ಕೆ ಹೋಗಿ ಕಾರ್ಯಾಚರಣೆ ನಡೆಸಿತು. ‘ಹವಾನಿಯಂತ್ರಕದಲ್ಲಿ (ಎ.ಸಿ.) ವಿದ್ಯುತ್ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡಿತ್ತು. ಹೊಗೆಯೂ ಬರುತ್ತಿತ್ತು. ಲ್ಯಾಬ್‌ನಲ್ಲಿದ್ದವರು ಹೊರಗೆ ಬಂದಿದ್ದರು. ನಮ್ಮ ಸಿಬ್ಬಂದಿ, ಲ್ಯಾಬ್ ಒಳಗೆ ಹೋಗಿ ಬೆಂಕಿ ನಂದಿಸಿದ್ದಾರೆ’ ಎಂದು ಅಗ್ನಿಶಾಮಕ ದಳದ ಮೂಲಗಳು ತಿಳಿಸಿವೆ.

ವಿಜ್ಞಾನಿ ಡಾ. ಕೆ.ಎನ್. ರಾಜು ನಿಧನ



ಬೆಂಗಳೂರು: ರಾಷ್ಟ್ರೀಯ ವೈಮಾನಿಕ ಪ್ರಯೋಗಾಲಯದ (ಎನ್‌ಎಎಲ್) ಮುಖ್ಯಸ್ಥರಾಗಿ ಕೆಲಸ ಮಾಡಿದ್ದ ವಿಜ್ಞಾನಿ ಡಾ. ಕೇಶವ ನಾರಾಯಣ ರಾಜು (ಕೆ.ಎನ್.ರಾಜು) (84) ನಗರದಲ್ಲಿ ಶುಕ್ರವಾರ (ಏ.30) ನಿಧನರಾದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಪಿಎಚ್.ಡಿ ಮುಗಿಸಿದ್ದ ಅವರು, 1993ರಿಂದ 1996 ರವರೆಗೆ ಎನ್‌ಎಎಲ್ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. ಕೆ.ಎನ್. ರಾಜು ಅವರ ಸಾಧನೆಗೆ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ ಲಭಿಸಿತ್ತು.

ತಿದ್ದುಪಡಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಎಂ.ಬಿ. ರಾಜೇಶಗೌಡ ಅವರನ್ನು ವರ್ಗಾವಣೆ ಮಾಡಲಾಗಿದೆ. ಮೇ1ರ ಸಂಚಿಕೆಯಲ್ಲಿ ರಾಜೇಶಗೌಡ ಅವರ ಹೆಸರನ್ನು ರಾಜೇಗೌಡ ಎಂದು ಉಲ್ಲೇಖಿಸಲಾಗಿತ್ತು. ಈ ತಪ್ಪಿಗೆ ವಿಷಾದಿಸುತ್ತೇವೆ.

ಸಿಬಿಎಸ್‌ಇ: ಜೂ. 20ರೊಳಗೆ 10ನೇ ತರಗತಿ ಫಲಿತಾಂಶ

ನವದೆಹಲಿ (ಪಿಟಿಐ): ಕೋವಿಡ್–19 ಕಾರಣಕ್ಕಾಗಿ ರದ್ದುಪಡಿಸಲಾಗಿದ್ದ ಕೇಂದ್ರ ಪ್ರೌಢಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10ನೇ ತರಗತಿಯ ಪರೀಕ್ಷಾ ಫಲಿತಾಂಶವನ್ನು ಜೂನ್ 20ರೊಳಗೆ ಪ್ರಕಟಿಸಲಾಗುವುದು ಎಂದು ಪರೀಕ್ಷಾ ವಿಭಾಗದ ನಿಯಂತ್ರಕ ಸನ್ಯಂ ಭಾರದ್ವಾಜ್ ತಿಳಿಸಿದ್ದಾರೆ.

ರದ್ದಾಗಿರುವ ಪರೀಕ್ಷೆಗಳಿಗೆ ಅಂಕಗಳನ್ನು ನಿಗದಿಪಡಿಸುವ ಯೋಜನೆಯನ್ನೂ ಸಿಬಿಎಸ್‌ಇ ಶನಿವಾರ ತಿಳಿಸಿದೆ.

ಈ ಯೋಜನೆಯ ಪ್ರಕಾರ, ಪ್ರತಿ ವರ್ಷಕ್ಕೆ 20 ಅಂಕಗಳು ಆಂತರಿಕ ಮೌಲ್ಯಮಾಪನಕ್ಕೆ ಒಳಪಟ್ಟರೆ, ವರ್ಷವಿಡೀ ವಿವಿಧ ಪರೀಕ್ಷೆಗಳು ಅಥವಾ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಾಧನೆಯ ಆಧಾರದ ಮೇಲೆ 80 ಅಂಕಗಳನ್ನು ಲೆಕ್ಕಹಾಕಲಾಗುತ್ತದೆ.

‘ಶಾಲೆಗಳು ನೀಡುವ ಅಂಕಗಳು 10ನೇ ತರಗತಿ ಪರೀಕ್ಷೆಗಳಲ್ಲಿ ಶಾಲೆಯ ಹಿಂದಿನ ಸಾಧನೆಗೆ ಅನುಗುಣವಾಗಿರಬೇಕು ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಫಲಿತಾಂಶಗಳನ್ನು ಅಂತಿಮಗೊಳಿಸಲು ಶಾಲೆಗಳು ಪ್ರಾಂಶುಪಾಲರ ನೇತೃತ್ವದಲ್ಲಿ ಮೇ 5ರೊಳಗೆ ಎಂಟು ಸದಸ್ಯರ ಸಮಿತಿಯನ್ನು ರಚಿಸಬೇಕು. ಶಾಲಾವಾರು ಅಂಕಗಳ ವಿತರಣೆ ಮತ್ತು ದಾಖಲೆಗಳನ್ನು ಅಂತಿಮಗೊಳಿಸುವ ಪ್ರಕ್ರಿಯೆಯನ್ನು ಮೇ 10ರೊಳಗೆ ಪೂರ್ಣಗೊಳಿಸಬೇಕು’ ಎಂದು ಭಾರದ್ವಾಜ್ ಹೇಳಿದ್ದಾರೆ.

‘ವರ್ಷವಿಡೀ ಕೆಲ ಪರೀಕ್ಷೆಗಳಲ್ಲಿ ಹಾಜರಾಗದವರಿಗೆ ಶಾಲೆಗಳು ಮೇ 15ರೊಳಗೆ ಆನ್‌ಲೈನ್ ಅಥವಾ ದೂರವಾಣಿ ಮೂಲಕ ಮೌಲ್ಯಮಾಪನ ನಡೆಸಲಿವೆ ಮತ್ತು ಮೇ 25ರೊಳಗೆ ಫಲಿತಾಂಶವನ್ನು ಅಂತಿಮಗೊಳಿಸಲಿವೆ. ಜೂನ್ 11ರೊಳಗೆ ಎಲ್ಲಾ ಫಲಿತಾಂಶಗಳನ್ನು ಸಿಬಿಎಸ್‌ಇಗೆ ಸಲ್ಲಿಸಬೇಕು. ಜೂನ್ 20ರೊಳಗೆ ಫಲಿತಾಂಶವನ್ನು ಪ್ರಕಟಿಸಲಾಗುವುದು’ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಐಪಿಎಲ್, ಕ್ರೀಡಾ ಚಟುವಟಿಕೆ ರದ್ದು: ಆಗ್ರಹ

ಬೆಂಗಳೂರು: ಕೊರೊನಾ ತೀವ್ರಗೊಂಡಿರುವುದರಿಂದ ‘ಇಂಡಿಯನ್ ಪ್ರೀಮಿಯರ್ ಲೀಗ್’ (ಐಪಿಎಲ್) ಪಂದ್ಯಗಳನ್ನು ರದ್ದು ಮಾಡುವಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ವಿಧಾನ ಪರಿಷತ್ ಸದಸ್ಯ ಪ್ರಕಾಶ್ ಕೆ.ರಾಠೋಡ ಮನವಿ ಮಾಡಿದ್ದಾರೆ.

‘ರಾಜ್ಯ ಎಲ್ಲ ಕ್ರೀಡಾ ಚಟುವಟಿಕೆಗಳನ್ನು ಕೂಡಲೇ ಸ್ಥಗಿತಗೊಳಿಸಬೇಕು’ ಎಂದೂ ಅವರು ಮನವಿ ಮಾಡಿದ್ದಾರೆ.

‘ಚಿನ್ನಸ್ವಾಮಿ ಕ್ರೀಡಾಂಗಣವನ್ನು ಕೋವಿಡ್ ಚಿಕಿತ್ಸಾ ಕೇಂದ್ರವನ್ನಾಗಿ ಬಳಸಿಕೊಳ್ಳಬಹುದಿತ್ತು. ನಗರದಲ್ಲಿ ಕೋವಿಡ್ ತೀವ್ರಗತಿಯಲ್ಲಿದ್ದರೂ ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯಗಳಿಗೆ ಅವಕಾಶ ನೀಡಿರುವ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ನಡೆಯೂ ಆಶ್ಚರ್ಯಕರ. ರಾಜ್ಯ ಸರ್ಕಾರ ಈ ಕೂಡಲೇ ಐಪಿಎಲ್ ಪಂದ್ಯಾವಳಿಗಳನ್ನು ರದ್ದುಪಡಿಸುವಂತೆ ಬಿಸಿಸಿಐ ಹಾಗೂ ಕೆಎಸ್‌ಸಿಎಗೆ ಮನವಿ ಮಾಡಬೇಕು’ ಎಂದಿದ್ದಾರೆ.

ರೋಗಿಗಳ ಸಂಬಂಧಿಕರ ಮೇಲೆ ‘ಭಾವನಾತ್ಮಕ ಒತ್ತಡ’

ಖಾಸಗಿ ಕೋಟಾದಡಿ ದಾಖಲಿಸಿಕೊಳ್ಳಲು ಆಸ್ಪತ್ರೆಗಳ ಒಲವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಮ್ಮ ಸಂಬಂಧಿಯ ಪರಿಸ್ಥಿತಿ ಗಂಭೀರವಾಗುತ್ತಿದೆ. ಸರ್ಕಾರಿ ಕೋಟಾದಡಿ ಹಾಸಿಗೆ ಖಾಲಿ ಇಲ್ಲ. ಬೇಗ ಖಾಸಗಿ ಕೋಟಾಗೆ ಪರಿವರ್ತಿಸಿಕೊಳ್ಳಿ..’

‘ಸರ್ಕಾರಿ ಕೋಟಾದಡಿ ಹಾಸಿಗೆ, ಆಕ್ಸಿಜನ್, ರೆಮ್‌ಡಿಸಿವಿರ್ ಇಂಜೆಕ್ಷನ್ ಸಿಗುವುದು ತಡವಾಗಬಹುದು. ನಿಮ್ಮ ಸಂಬಂಧಿಯ ಪ್ರಾಣಕ್ಕೆ ತೊಂದರೆಯಾಗಬಹುದು. ಖಾಸಗಿ ಕೋಟಾದಡಿ ಆದರೆ ಬೇಗ ಸೌಲಭ್ಯಗಳು ಸಿಗುತ್ತವೆ. ಆದರೆ, ಸ್ವಲ್ಪ ಜಾಸ್ತಿ ದುಡ್ಡು ಕಟ್ಟಬೇಕಾಗುತ್ತದೆ. ಯೋಚನೆ ಮಾಡಿ...’

ನಗರದ ಕೆಲವು ಖಾಸಗಿ ಆಸ್ಪತ್ರೆಗಳು ಈ ರೀತಿಯ ‘ಭಾವನಾತ್ಮಕ ಒತ್ತಡ’ವನ್ನು ಹೇರುತ್ತಿವೆ ಎಂದು ಆರೋಪಿಸುತ್ತಾರೆ ಸೋಂಕಿತರ ಸಂಬಂಧಿಕರು.

ನಗರದಲ್ಲಿ 2.60 ಲಕ್ಷ ಸಕ್ರಿಯ ಪ್ರಕರಣಗಳು ವರದಿಯಾಗಿವೆ. ಈ ಪೈಕಿ ಶೇ 10ರಷ್ಟು ರೋಗಿಗಳ ಸ್ಥಿತಿ ಗಂಭೀರವಾದರೂ 25 ಸಾವಿರ ಹಾಸಿಗೆಗಳು ಬೇಕಾಗುತ್ತವೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿರುವ ಒಟ್ಟು 19 ಸಾವಿರ. ಈ ಅಂಕಿ–ಅಂಶವನ್ನೇ ರೋಗಿಗಳ ಸಂಬಂಧಿಕರ ಮುಂದಿಡುವ ಆಸ್ಪತ್ರೆಗಳು, ಸರ್ಕಾರಿ ಕೋಟಾದಿಂದ ಖಾಸಗಿ ಕೋಟಾದಡಿಗೆ ಪರಿವರ್ತಿಸಿಕೊಳ್ಳಲು ಹೇಳುತ್ತಿವೆ.

‘ಖಾಸಗಿಯಡಿ ಸೇರ್ಪಡೆಯಾದ ನಂತರ ಆಕ್ಸಿಜನ್, ಐಸಿಯು ಹಾಸಿಗೆಗಳ ಶುಲ್ಕವನ್ನೂ ಹೆಚ್ಚು ಮಾಡಲಾಗುತ್ತದೆ. ರೆಮ್‌ಡಿಸಿವಿರ್ ಇಂಜೆಕ್ಷನ್‌ಗೇ ₹3000 ತೆಗೆದುಕೊಳ್ಳುತ್ತಾರೆ. ಜೀವಕ್ಕಿಂತ ದುಡ್ಡು ಮುಖ್ಯ ಅಲ್ಲ ಎಂಬ ಕಾರಣದಿಂದ ಸಾಲ ಮಾಡಿಯಾದರೂ ಹಣ ಕಟ್ಟುತ್ತಿದ್ದೇವೆ’ ಎಂದು ರೋಗಿಯ ಸಂಬಂಧಿಕರೊಬ್ಬರು ಹೇಳಿದರು.

‘ಸರ್ಕಾರಿ ಕೋಟಾದಡಿಯ ರೋಗಿಗಳು ಆಸ್ಪತ್ರೆಯಿಂದ ಗುಣಮುಖರಾಗಿ ಹೋದ ನಂತರವೂ ಅವರ ಹೆಸರಿನಲ್ಲಿ ಆ ಹಾಸಿಗೆಯನ್ನು ಹಾಗೆಯೇ ಇಟ್ಟಿರಲಾಗಿರುತ್ತದೆ. ಸರ್ಕಾರದ ಪೋರ್ಟಲ್‌ನಲ್ಲಿ ಅದು ಸರ್ಕಾರಿ ಕೋಟಾದ ಹಾಸಿಗೆ ಎಂದೇ ತೋರಿಸಿರುತ್ತದೆ. ರೋಗಿಯ ಕಡೆಯವರಿಗೆ ಮಾತ್ರ ಇದು ಖಾಸಗಿ ಕೋಟಾ ಹಾಸಿಗೆ ಎಂದು ಹೇಳಿ ಹೆಚ್ಚು ದುಡ್ಡು ತೆಗೆದುಕೊಳ್ಳುತ್ತಾರೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಹೇಳಿದರು.

‘ರೋಗಿಗೆ ಚಿಕಿತ್ಸೆ ನೀಡುವಾಗ ಹೆಚ್ಚು ಹಣಕ್ಕೆ ಬೇಡಿಕೆ ಇಟ್ಟರೂ ಯಾರೂ ದೂರು ನೀಡಿರುವುದಿಲ್ಲ. ರೋಗಿ ಮೃತಪಟ್ಟ ನಂತರ ವೈದ್ಯರು ಅಥವಾ ಆಸ್ಪತ್ರೆ ವಿರುದ್ಧ ದೂರುತ್ತಾರೆ. ಅಲ್ಲದೆ, ಈ ಬಗ್ಗೆ ಲಿಖಿತವಾಗಿ ದೂರು ನೀಡುವವರ ಸಂಖ್ಯೆಯೂ ವಿರಳವಾಗಿದೆ’ ಎಂದು ನೋಡಲ್ ಅಧಿಕಾರಿಯೊಬ್ಬರು ತಿಳಿಸಿದರು.

ಭಾರತದಲ್ಲಿ ಲಸಿಕಾ ತಯಾರಿಕಾ ಒತ್ತಡ ಬಿಚ್ಚಿಟ್ಟ ಸೀರಂ ಸಂಸ್ಥೆಯ ಸಿಇಒ

‘ನನ್ನೊಬ್ಬನಿಂದಲೇ ಎಲ್ಲವೂ ಸಾಧ್ಯವಿಲ್ಲ’

ಲಂಡನ್(ಪಿಟಿಐ): ‘ಕೋವಿಡ್ ಎರಡನೇ ಅಲೆಯ ವಿರುದ್ಧ ಹೋರಾಡುತ್ತಿರುವ ಭಾರತದಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಲಸಿಕೆಯ ಬೇಡಿಕೆ ಹೆಚ್ಚುತ್ತಿದ್ದು, ಬೇಡಿಕೆಯನ್ನು ಪೂರೈಸುವ ಜವಾಬ್ದಾರಿ ನನ್ನ ಹೆಗಲಿಗೇರಿದೆ. ಎಲ್ಲವನ್ನೂ ಒಬ್ಬನೇ ಮಾಡಲು ಸಾಧ್ಯವಿಲ್ಲ’ ಎಂದು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಆದಾರ್ ಪೂನಾವಾಲಾ ಶನಿವಾರ ಹೇಳಿದ್ದಾರೆ.

ಕೇಂದ್ರ ಸರ್ಕಾರವು ಇತ್ತೀಚೆಗಷ್ಟೇ ಅವರಿಗೆ ‘ವೈ’ ಶ್ರೇಣಿಯ ಭದ್ರತೆಯನ್ನು ಒದಗಿಸಿದ್ದು, ‘ದಿ ಟೈಮ್ಸ್’ಗೆ ನೀಡಿದ ಸಂದರ್ಶನದಲ್ಲಿ ಇದನ್ನು ತಿಳಿಸಿದ್ದಾರೆ.

ಲಸಿಕೆ ಪೂರೈಸುವ ಕುರಿತು ಭಾರತದಲ್ಲಿ ಕೆಲ ಪ್ರಭಾವಿಗಳು ಪದೇ ಪದೇ ಬೆದರಿಕೆಯ ಕರೆಗಳನ್ನು ಮಾಡುತ್ತಿರುವ ಕುರಿತೂ ಹೇಳಿಕೊಂಡಿದ್ದಾರೆ.

ಆದಾರ್ ಪೂನಾವಾಲಾ

‘ನನ್ನ ಮೇಲೆ ಅತೀವ ಒತ್ತಡವಿದೆ. ಈ ಕಾರಣಕ್ಕಾಗಿ ನಾನು ನನ್ನ ಮಕ್ಕಳೊಂದಿಗೆ ಲಂಡನ್‌ಗೆ ಪ್ರಯಾಣಿಸುವ ನಿರ್ಧಾರ ಕೈಗೊಂಡಿದ್ದೇನೆ’ ಎಂದೂ ಅವರು ಹೇಳಿದ್ದಾರೆ.

‘ನಾನು ಇಲ್ಲಿಯೇ (ಲಂಡನ್) ಇರಲು ಬಯಸುತ್ತೇನೆ. ಅಲ್ಲಿನ (ಭಾರತ) ಪರಿಸ್ಥಿತಿಗೆ ನಾನು ಮರಳಿ ಹೋಗಲಾರೆ. ಎಲ್ಲಾ ಜವಾಬ್ದಾರಿಗಳು ನನ್ನೊಬ್ಬನ ಹೆಗಲ ಮೇಲೆ ಬಿದ್ದಿವೆ. ನಾನೊಬ್ಬನೇ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ನಾನು ಅಲ್ಲಿದ್ದುಕೊಂಡು ನನ್ನ ಕೆಲಸ ಮಾಡುತ್ತಾ ಎಕ್ಸ್, ವೈ, ಝಡ್ ಇಂಥವರು ಹೇಳಿದ್ದನ್ನು ಸರಬರಾಜು ಮಾಡಲು ಸಾಧ್ಯವಿಲ್ಲ. ಅವರು ಏನು ಮಾಡುತ್ತಾರೆ ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ಲಸಿಕೆ ಪಡೆಯಬೇಕು ಎಂದು ಎಲ್ಲರೂ ಭಾವಿಸುತ್ತಾರೆ. ಇತರ ದೇಶಗಳಿಗೂ ಲಸಿಕೆ ಉತ್ಪಾದನೆಯನ್ನು ವಿಸ್ತರಿಸುವ ಗುರಿಯೂ ನನ್ನ ಲಂಡನ್ ವಾಸದ ಹಿಂದೆ ಇದೆ’ ಎಂದು ತಿಳಿಸಿದ್ದಾರೆ.

‘ಮುಂದಿನ ದಿನಗಳಲ್ಲಿ ಈ ಬಗ್ಗೆ ಅಧಿಕೃತ ಘೋಷಣೆ ಹೊರಬೀಳಲಿದೆ. ಎಲ್ಲರಿಗೂ ಸಾಧ್ಯವಾದಷ್ಟೂ ನೆರವು ನೀಡಲು ಬಯಸುತ್ತೇವೆ’ ಎಂದೂ ಅವರು ತಿಳಿಸಿದ್ದಾರೆ.

ಕೋವಿಶೀಲ್ಡ್ ಲಸಿಕೆಯ ದರದ ಕುರಿತು ಹೇಳಿರುವ ಅವರು, ‘ಪ್ರಪಂಚದಲ್ಲೇ ಇಂದಿಗೂ ಕೋವಿಶೀಲ್ಡ್ ಲಸಿಕೆಯ ದರ ಅಗ್ಗವಾಗಿದೆ. ಲಾಭದ ಪ್ರಮಾಣದ ಕುರಿತು ಚಿಂತಿಸದೇ ನಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಉತ್ತಮವಾದದ್ದನ್ನು ನೀಡಲು ಬಯಸುತ್ತೇವೆ. ನಾವು ತಯಾರಿಸುವ ಲಸಿಕೆಗಳ ಕಾರಣದಿಂದಾಗಿ ನಾನು ಯಾವಾಗಲೂ ಭಾರತ ಮತ್ತು ಜಗತ್ತಿನೊಂದಿಗೆ ಜವಾಬ್ದಾರಿಯನ್ನು ಹೊಂದಿದ್ದೇನೆ’ ಎಂದು ಸ್ಪಷ್ಟಪಡಿಸಿದ್ದಾರೆ.

₹ 10 ಲಕ್ಷ ಕಿತ್ತ ಫೇಸ್‌ಬುಕ್ ಸ್ನೇಹಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಪರಿಚಯವಾಗಿದ್ದ ವ್ಯಕ್ತಿಯೊಬ್ಬ ಉಡುಗೊರೆ ಆಮಿಷವೊಡ್ಡಿ ನಗರದ ಶಿಕ್ಷಕಿಯೊಬ್ಬರಿಂದ ₹ 10 ಲಕ್ಷ ಪಡೆದು ವಂಚಿಸಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಉಪವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಂಚನೆ ಸಂಬಂಧ ದೂರವಾಣಿ ನಗರದ 43 ವರ್ಷದ ಶಿಕ್ಷಕಿ ದೂರು ನೀಡಿದ್ದಾರೆ. ಆರೋಪಿ ಎನ್ನಲಾದ ವಿದೇಶಿ ಪ್ರಜೆ ಕೆಲ್ಲಿ ಜಾನ್ಸನ್ ಎಂಬಾತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಏಪ್ರಿಲ್ 3ರಂದು ಆರೋಪಿ ಕೆಲ್ಲಿ ಜಾನ್ಸನ್ ಫೇಸ್‌ಬುಕ್‌ನಲ್ಲಿ ಶಿಕ್ಷಕಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದ. ಅದನ್ನು ಶಿಕ್ಷಕಿ ಸ್ವೀಕರಿಸುತ್ತಿದ್ದಂತೆ ಚಾಟಿಂಗ್ ಮಾಡಲಾರಂಭಿಸಿದ್ದ. ‘ನೀವು ನನ್ನ ಒಳ್ಳೆಯ ಸ್ನೇಹಿತೆ. ನನ್ನ ನೆನಪಿಗಾಗಿ ಏನಾದರೂ ಉಡುಗೊರೆ ಕಳುಹಿಸುತ್ತೇನೆ. ಸದ್ಯದಲ್ಲೇ ನಿಮ್ಮ ವಿಳಾಸಕ್ಕೆ ಉಡುಗೊರೆ ಬರಲಿದೆ’ ಎಂದು ಆರೋಪಿ ಹೇಳಿದ್ದ. ಅದಕ್ಕೆ ಶಿಕ್ಷಕಿ ಒಪ್ಪಿದ್ದರು.’

‘ದೆಹಲಿ ಇಂದಿರಾಗಾಂಧಿ ವಿಮಾನ ನಿಲ್ದಾಣದ ಕೊರಿಯರ್ ಅಧಿಕಾರಿ ಎಂದು ಹೇಳಿಕೊಂಡು ವ್ಯಕ್ತಿಯೊಬ್ಬ, ಏಪ್ರಿಲ್ 15ರಂದು ಶಿಕ್ಷಕಿಗೆ ಕರೆ ಮಾಡಿದ್ದ. ‘ವಿದೇಶದಿಂದ ನಿಮಗೊಂದು ಕೊರಿಯರ್ ಬಂದಿದೆ. ಅದರಲ್ಲಿ ಹಣ ಹಾಗೂ ಬೆಲೆಬಾಳುವ ಚಿನ್ನಾಭರಣಗಳಿವೆ. ಅದನ್ನು ನಿಮ್ಮ ವಿಳಾಸಕ್ಕೆ ತಲುಪಿಸಬೇಕಾದರೆ ಕೆಲ ಶುಲ್ಕಗಳನ್ನು ಪಾವತಿಸಬೇಕು’ ಎಂದಿದ್ದ. ಅದನ್ನು ನಂಬಿದ್ದ ಶಿಕ್ಷಕಿ, ಆರೋಪಿ ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 10 ಲಕ್ಷ ಪಾವತಿಸಿದ್ದರು’ ಎಂದೂ ಮೂಲಗಳು ಹೇಳಿವೆ.

‘ದಿನ ಕಳೆದರೂ ಯಾವುದೇ ಉಡುಗೊರೆ ಬಂದಿರಲಿಲ್ಲ. ಈ ಬಗ್ಗೆ ವಿಚಾರಿಸಲು ಯತ್ನಿಸಿದಾಗ ಕೊರಿಯರ್ ಅಧಿಕಾರಿ ಮೊಬೈಲ್ ನಂಬರ್ ಸ್ವಿಚ್ ಆಫ್ ಆಗಿತ್ತು. ಆರೋಪಿ ಕೆಲ್ಲಿ ಜಾನ್ಸನ್ ಸಹ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಜಾಲದ ವಿರುದ್ಧ ಶಿಕ್ಷಕಿ ಇದೀಗ ಠಾಣೆಗೆ ದೂರು ನೀಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

‘ಗೋಲ್ಡನ್ ಸೇವಿಂಗ್ಸ್’ ಹೆಸರಿನಲ್ಲಿ ವಂಚನೆ

‘ಗೋಲ್ಡನ್ ಸೇವಿಂಗ್ಸ್’ ಹೆಸರಿನಲ್ಲಿ ₹ 9.55 ಲಕ್ಷ ಹೂಡಿಕೆ ಮಾಡಿಸಿಕೊಂಡು ವಂಚಿಸಲಾಗಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಭಾರತಿನಗರದ 33 ವರ್ಷದ ನಿವಾಸಿ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರರ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ‘ನಮ್ಮದು ಹಣ ಉಳಿತಾಯ ಕಂಪನಿ ಇದೆ. ಹಣ ದ್ವಿಗುಣಗೊಳಿಸುವ ಯೋಜನೆಗಳಿದ್ದು, ನೀವು ಹಣ ಹೂಡಿಕೆ ಮಾಡಬಹುದು. ಹಣವನ್ನು ಯಾವಾಗ ಬೇಕಾದರೂ ಬಡ್ಡಿ ಸಮೇತ ವಾಪಸು ಪಡೆಯಬಹುದು’ ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ಆರೋಪಿ ನೀಡಿದ್ದ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ₹ 9.55 ಲಕ್ಷ ಜಮೆ ಮಾಡಿದ್ದ’ ಎಂದೂ ತಿಳಿಸಿದರು.

‘ಕೆಲ ದಿನ ಬಿಟ್ಟು ಪುನಃ ಕರೆ ಮಾಡಿದ್ದ ಆರೋಪಿ ಮತ್ತಷ್ಟು ಹಣ ಹೂಡಿಕೆ ಮಾಡುವಂತೆ ಒತ್ತಾಯಿಸಿದ್ದ. ಅನುಮಾನಗೊಂಡಿದ್ದ ದೂರುದಾರ, ಈಗಾಗಲೇ ಪಾವತಿಸಿರುವ ಹಣವನ್ನು ವಾಪಸು ನೀಡುವಂತೆ ಒತ್ತಾಯಿಸಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ. ಆರೋಪಿ ಹಲವರನ್ನು ವಂಚಿಸಿರುವ ಮಾಹಿತಿ ಇದೆ’ ಎಂದೂ ಪೊಲೀಸರು ಮಾಹಿತಿ ನೀಡಿದರು.

ಅಪರಾಧ ಸುದ್ದಿ

₹ 10 ಜಿಯೊ ರಿಚಾರ್ಜ್‌ಗಾಗಿ ₹ 2.80 ಲಕ್ಷ ಕಳೆದುಕೊಂಡ

ಬೆಂಗಳೂರು: ₹ 10 ಜಿಯೊ ರಿಚಾರ್ಜ್ ಮಾಡಿಸಲು ಹೋಗಿದ್ದ ನಗರದ ನಿವಾಸಿಯೊಬ್ಬರು ₹ 2.80 ಲಕ್ಷ ಕಳೆದುಕೊಂಡಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಂಚನೆ ಬಗ್ಗೆ ಬಸವನಗುಡಿಯ 52 ವರ್ಷದ ವ್ಯಕ್ತಿ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಜಿಯೊ ಕಂಪನಿ ಪ್ರತಿನಿಧಿ ಸೋಗಿನಲ್ಲಿ ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, ‘ನಿಮ್ಮ ಜಿಯೊ ಮೊಬೈಲ್ ಸಂಖ್ಯೆ ಸದ್ಯದಲ್ಲೇ ನಿಷ್ಕ್ರಿಯವಾಗಲಿದೆ. ಈಗಲೇ ದಾಖಲಾತಿಗಳನ್ನು ನೀಡಿ ಅಪ್‌ಡೇಟ್ ಮಾಡಿಕೊಳ್ಳಬೇಕು’ ಎಂದಿದ್ದ. ಲಿಂಕ್ ಸಹ ಕಳುಹಿಸಿದ್ದ.’

‘ಲಿಂಕ್ ತೆರೆದಿದ್ದ ದೂರುದಾರ, ಅದರಲ್ಲಿರುವ ಮಾಹಿತಿ ಭರ್ತಿ ಮಾಡಿದ್ದರು. ಡೆಬಿಟ್ ಕಾರ್ಡ್ ಮಾಹಿತಿಯನ್ನೂ ನಮೂದಿಸಿದ್ದರು. ಕೆಲ ನಿಮಿಷಗಳ ನಂತರ ದೂರುದಾರರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 2.80 ಲಕ್ಷ ಡ್ರಾ ಆಗಿದೆ. ಇದು ಗಮನಕ್ಕೆ ಬರುತ್ತಿದ್ದಂತೆ ದೂರುದಾರರು ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಸಭೆ, ಸೂಚನೆಗಳಿಗೆ ಸೀಮಿತವಾದ 'ನಾಯಕರು'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಮುಂಬೈ ಕರ್ನಾಟಕ ಭಾಗದ ಬಹುತೇಕ ಶಾಸಕರು, ಸಂಸದರು ಸಭೆ, ಚರ್ಚೆ, ಸೂಚನೆಗಳಿಗೆ ಸೀಮಿತರಾಗಿದ್ದಾರೆ. ಕೆಲವರಷ್ಟೇ ಒಂದು ಹೆಜ್ಜೆ ಮುಂದೆ ಹೋಗಿ ಸಂಕಷ್ಟದಲ್ಲಿರುವ ಜನರತ್ತ ಸಹಾಯಹಸ್ತ ಚಾಚಿದ್ದಾರೆ.

ಕೊರೊನಾ ಸೋಂಕು ಹರಡುವಿಕೆ ತಡೆಯಲು ಜಾಗೃತಿ ಮೂಡಿಸಬೇಕಾದ ಜನಪ್ರತಿನಿಧಿಗಳೇ ಕೋವಿಡ್ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಾರೆ. ಹತ್ತಾರು ಮಂದಿ ಹಿಂಬಾಲಕರನ್ನು ಕಟ್ಟಿಕೊಂಡು ಕ್ಷೇತ್ರದಲ್ಲಿ ಸಂಚರಿಸುತ್ತಿದ್ದಾರೆ. ಚುನಾವಣೆ ಪ್ರಚಾರ, ರ್‍ಯಾಲಿಯಲ್ಲಿ ಭಾಗಿಯಾದ ಪರಿಣಾಮ ಕೋವಿಡ್–19 ಬಾಧಿತರಾಗಿ ಆಸ್ಪತ್ರೆ, ಮನೆ ಸೇರಿದ್ದಾರೆ.

ಬೆಳಗಾವಿಗೆ ಜಿಲ್ಲಾ ಉಸ್ತುವಾರಿ ಸಚಿವರಿಲ್ಲ. ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸಚಿವರಾದ ಉಮೇಶ ಕತ್ತಿ, ಶಶಿಕಲಾ ಜೊಲ್ಲೆ ಸಭೆ ನಡೆಸಿದ್ದಾರೆ. ಯಾವ ಸಚಿವರ ಸೂಚನೆ ಪಾಲಿಸುವುದು ಎಂದು ಅಧಿಕಾರಿಗಳು ಗೊಂದಲದಲ್ಲಿದ್ದಾರೆ.

ಶಾಸಕ ಸತೀಶ ಜಾರಕಿಹೊಳಿ ತಮ್ಮ ಪ್ರತಿಷ್ಠಾನದಿಂದ ಮಾಸ್ಕ್, ಸ್ಯಾನಿಟೈಸರ್, ಆಮ್ಲಜನಕ ಸಿಲಿಂಡರ್ ವಿತರಣೆಗೆ ಮುಂದಾಗಿದ್ದಾರೆ. ಸತೀಶ ಜಾರಕಿಹೊಳಿ ಪ್ರತಿಷ್ಠಾನ ಹಾಗೂ ಚಿಕ್ಕೋಡಿ ಶಾಸಕ ಗಣೇಶ ಹುಕ್ಕೇರಿ ಅವರ ಅನ್ನಪೂರ್ಣೇಶ್ವರಿ ಪ್ರತಿಷ್ಠಾನದ ಸಹಯೋಗದಲ್ಲಿ ಚಿಕ್ಕೋಡಿ ಸಮೀಪದ ಅಂಕಲಿಯ ಡಾ.ಎನ್.ಎ. ಮಗದುಮ್ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ 120 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗಾಗಿ ಮೀಸಲಿಡಲಾಗಿದೆ. ಖಾನಾಪುರ ಶಾಸಕಿ ಡಾ.ಅಂಜಲಿ ನಿಂಬಾಳ್ಕರ್ ಕ್ಷೇತ್ರದಲ್ಲಿ ಕಾಣಿಸಿಕೊಂಡಿಲ್ಲ.

ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ, ಶಾಸಕರಾದ ರಮೇಶ ಜಾರಕಿಹೊಳಿ, ಲಕ್ಷ್ಮಿ ಹೆಬ್ಬಾಳಕರ, ಪಿ. ರಾಜೀವ್ ಕೋವಿಡ್ ಬಾಧಿತರಾಗಿದ್ದಾರೆ. ಜಿಲ್ಲೆಯ ಉಳಿದ ಶಾಸಕರು ತಮ್ಮ ಕ್ಷೇತ್ರದಲ್ಲಿದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಅವರು ಮುದ್ದೇಬಿಹಾಳದ ಆಸ್ಪತ್ರೆಗಳಲ್ಲಿ ಕೋವಿಡ್–19 ಬಾಧಿತರಿಗೆ ಪೌಷ್ಟಿಕಾಂಶದ ಕಿಟ್ ನೀಡುತ್ತಿದ್ದಾರೆ. ಅವರು ಕೋವಿಡ್ ಬಾಧಿತರಾಗಿದ್ದರೂ, ಅವರ ಕುಟುಂಬ ಸದಸ್ಯರು ಆ ಕಾರ್ಯ ಮುಂದುವರಿಸಿದ್ದಾರೆ. ವಿಜಯಪುರ ಸಂಸದ ರಮೇಶ ಜಿಗಜಿಣಗಿ, ಉಳಿದ ಶಾಸಕರು ಸಂಕಷ್ಟಕ್ಕೆ ಒಳಗಾದವರಿಗೆ ಯಾವುದೇ ನೆರವು ನೀಡಿಲ್ಲ.

ಬಳ್ಳಾರಿ ಜಿಲ್ಲೆಯ ಶಾಸಕರು, ಸಂಸದರು ಜನರ ನೆರವಿಗೆ ಧಾವಿಸಿಲ್ಲ. ಸಂಸದ ವೈ.ದೇವೇಂದ್ರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಆನಂದ್ ಸಿಂಗ್ ಅವರು ಸಭೆಗೆ ಸೀಮಿತರಾಗಿದ್ದಾರೆ. ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ, ಸಚಿವ ಮುರುಗೇಶ ನಿರಾಣಿ ಸಭೆ ಮಾಡಿದ್ದಾರೆ. ವೀರಣ್ಣ ಚರಂತಿಮಠ ಕಾರ್ಯಾಧ್ಯಕ್ಷರಾಗಿರುವ ಬಿ.ವಿ.ವಿ. ಸಂಘದ ಹಾನಗಲ್ ಕುಮಾರೇಶ್ವರ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆಗೆ 500 ಹಾಸಿಗೆ ಮೀಸಲಿಡಲಾಗಿದೆ.

ಸ್ಪಂದಿಸಿದ ಸಚಿವ:

ಗದಗ ಜಿಲ್ಲಾ ಉಸ್ತುವಾರಿ ಸಚಿವ ಸಿ.ಸಿ. ಪಾಟೀಲ ಅವರು ರೆಮ್‌ಡೆಸಿವಿರ್ ಹಾಗೂ ಆಕ್ಸಿಜನ್ ಕೊರತೆ ನೀಗಿಸಲು ಕ್ರಮವಹಿಸಿದ್ದಾರೆ. ಕೋವಿಡ್ ಕೇರ್ ಸೆಂಟರ್‌ಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಶಾಸಕ ಎಚ್.ಕೆ.ಪಾಟೀಲ ಕ್ಷೇತ್ರದಾದ್ಯಂತ ಅಡ್ಡಾಡುತ್ತಿದ್ದಾರೆ. ಮನೆಯಲ್ಲೇ ಚಿಕಿತ್ಸೆ ಪಡೆಯುವವರ ಜತೆಗೆ ಜೂಮ್ ಮೀಟಿಂಗ್ ನಡೆಸಿ, ಆತ್ಮಸ್ಥೈರ್ಯ ತುಂಬಿದ್ದಾರೆ. ಶಾಸಕ ರಾಮಣ್ಣ ಲಮಾಣಿ ಅವರು ಮಾಸ್ಕ್ ಹಂಚಿದ್ದಾರೆ.

ಉತ್ತರಕನ್ನಡದಲ್ಲಿ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ದೇಶಪಾಂಡೆ ಇಬ್ಬರೂ ಕೋವಿಡ್ ಬಾಧಿತರಾಗಿದ್ದಾರೆ. ಸಂಸದ ಅನಂತಕುಮಾರ ಹೆಗಡೆ ಎರಡು ತಿಂಗಳ ಹಿಂದೆ ಮೊಣಕಾಲಿನ ಶಸ್ತ್ರ ಚಿಕಿತ್ಸೆಗೆ ಒಳಗಾಗಿದ್ದು, ಆ ನಂತರ ಅವರು ಬಹಿರಂಗವಾಗಿ ಕಾಣಿಸಿಕೊಂಡಿಲ್ಲ.

ಧಾರವಾಡ ಜಿಲ್ಲೆಯ ಉಸ್ತುವಾರಿ ಸಚಿವ ಜಗದೀಶ ಶೆಟ್ಟರ್ ಅವರು ಸಭೆ ನಡೆಸಿದ್ದಾರೆ. ಹಾಸಿಗೆಗಳ ಹೆಚ್ಚಳಕ್ಕೆ ಕ್ರಮವಹಿಸಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ವಿವಿಧ ಕಂಪನಿಗಳ ಸಿಎಸ್‌ಆರ್ ನಿಧಿಯಿಂದ ವೈದ್ಯಕೀಯ ಯಂತ್ರಗಳ ಖರೀದಿಗೆ ನೆರವಾಗಿದ್ದಾರೆ. ಶಾಸಕ ಶಂಕರಪಾಟೀಲ ಮುನೇನಕೊಪ್ಪ ಹೊರತುಪಡಿಸಿ, ಉಳಿದ ಶಾಸಕರು ಯಾವುದೇ ಸಭೆಗೂ ಹಾಜರಾಗಿಲ್ಲ.

ಶಾಸಕ ಅಮೃತ ದೇಸಾಯಿ ಈ ಬಾರಿ ನಾಪತ್ತೆಯಾಗಿದ್ದಾರೆ. ಶಾಸಕ ಅರವಿಂದ ಬೆಲ್ಲದ ಅವರೂ ಯಾವುದೇ ಸಭೆಗಳಲ್ಲಿ ಕಾಣಿಸಿಕೊಂಡಿಲ್ಲ. ಶಾಸಕಿ ಕುಸುಮಾವತಿ ಶಿವಳ್ಳಿ ಅವರು ಕುಂದಗೋಳ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದು ಬಿಟ್ಟರೆ ಎಲ್ಲಿಯೂ ಕಾಣಿಸಿಕೊಂಡಿಲ್ಲ. ಶಾಸಕ ಸಿ.ಎಂ. ನಿಂಬಣ್ಣವರ ಅವರು ಕಳೆದ ಬಾರಿ ಕೋವಿಡ್–19 ನಿಂದ ಭಾದಿತರಾಗಿದ್ದರು. ಈ ಬಾರಿ ಅವರು ಎಲ್ಲಿಯೂ ಕಾಣಿಸಿಕೊಂಡಿಲ್ಲ.

ಶೇ 70ರಷ್ಟು ಚಿಕಿತ್ಸಾ ವೆಚ್ಚ ಕಡಿತ

ವಿಜಯಪುರ: ಶಾಸಕ ಎಂ.ಬಿ.ಪಾಟೀಲ ಅವರು ಅಧ್ಯಕ್ಷರಾಗಿರುವ ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳಿಗೆ ಸರ್ಕಾರ ನಿಗದಿ ಪಡಿಸಿರುವ ದರಕ್ಕಿಂತ ಶೇ 70ರಷ್ಟು ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಬೆಡ್‌ಗಳ ಸಂಖ್ಯೆಯನ್ನು 200ರಿಂದ 500ಕ್ಕೆ ಹೆಚ್ಚಿಸಿದ್ದಾರೆ. ಪ್ರತಿ ಹಳ್ಳಿಗಳಲ್ಲಿ ಕೋವಿಡ್ ಲಸಿಕಾ ಅಭಿಯಾನ ಕೈಗೊಂಡಿದ್ದಾರೆ.

100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್

ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಅಧ್ಯಕ್ಷರಾಗಿರುವ ಸಿದ್ಧೇಶ್ವರ ಸಂಸ್ಥೆ, ಸಿದ್ಧಸಿರಿ ಸೌಹಾರ್ದ ಸಹಕಾರಿ ಸಹಯೋಗದಲ್ಲಿ ಜೈನ್ ಕಾಲೇಜಿನಲ್ಲಿ 100 ಬೆಡ್‌ಗಳ ಕೋವಿಡ್ ಕೇರ್ ಸೆಂಟರ್ ಪ್ರಾರಂಭಿಸಿದ್ದಾರೆ. ಅವರದೇ ಒಡೆತನದ ಈಶ್ವರಗೌಡ ಪಾಟೀಲ ಯತ್ನಾಳ ಡಯಾಲಿಸಿಸ್ ಸೆಂಟರ್‌ನಲ್ಲಿ ಕೋವಿಡ್ ರೋಗಿಗಳಿಗೆ 27 ಬೆಡ್ ಆಕ್ಸಿಜನ್ ಹಾಗೂ ವೆಂಟಿಲೇಟರ್ ಹಾಗೂ ಉಚಿತವಾಗಿ ಊಟ, ಉಪಾಹಾರದ ವ್ಯವಸ್ಥೆ ಮಾಡಿದ್ದಾರೆ.

ಚಿಕಿತ್ಸಾ ವೆಚ್ಚ ಭರಿಸುವೆ: ಬಿ.ಸಿ. ಪಾಟೀಲ

ಹಿರೇಕೆರೂರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬದವರು ಜಿಲ್ಲೆಯ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ಪಡೆದಿದ್ದರೆ, ಅವರ ಚಿಕಿತ್ಸಾ ವೆಚ್ಚವನ್ನು ವೈಯಕ್ತಿಕವಾಗಿ ಭರಿಸುವುದಾಗಿ ಸಚಿವ ಬಿ.ಸಿ. ಪಾಟೀಲ ಘೋಷಿಸಿದ್ದಾರೆ. ಗೃಹ ಸಚಿವ ಬಸವರಾಜ ಬೊಮ್ಮಾಯಿ ಎರಡು ತಿಂಗಳಿನಿಂದ ತಾವು ಪ್ರತಿನಿಧಿಸುವ ಶಿಗ್ಗಾವ–ಸವಣೂರ ಕ್ಷೇತ್ರಕ್ಕೆ ಭೇಟಿ ನೀಡಿಲ್ಲ.

ಧ್ವನಿಯಾದ ಉಡುಪಿ ಜನಪ್ರತಿನಿಧಿಗಳು

ಪ್ರಜಾವಾಣಿ ವಾರ್ತೆ

ಉಡುಪಿ: ಕಳೆದ ವರ್ಷ ಲಾಕ್‌ಡೌನ್ ಅವಧಿಯಲ್ಲಿ ಜಿಲ್ಲೆಯ ಶಾಸಕರು ನಿರ್ಗತಿಕರಿಗೆ ಆಹಾರದ ಕಿಟ್ ವಿತರಣೆ, ಊಟ, ಉಪಾಹಾರದ ವ್ಯವಸ್ಥೆ ಮಾಡಿದ್ದರೆ, ಈ ಬಾರಿ ಇದಕ್ಕೆ ಬದಲಾಗಿ ರಕ್ತದಾನ ಶಿಬಿರ, ಕೋವಿಡ್ ಸಹಾಯವಾಣಿ, ಆಂಬುಲೆನ್ಸ್ ವ್ಯವಸ್ಥೆ ಮಾಡಿದ್ದಾರೆ.

ಕಾರ್ಕಳ ಶಾಸಕ ವಿ.ಸುನಿಲ್ ಕುಮಾರ್, 'ನಿಮ್ಮ ಜತೆ ನಾವಿದ್ದೇವೆ' ಎಂಬ ಘೋಷಣೆಯಡಿ ಕೋವಿಡ್ 2.0 ಸಹಾಯವಾಣಿ ಆರಂಭಿಸಿದ್ದಾರೆ. ಬಡರೋಗಿಗಳನ್ನು ಆಸ್ಪತ್ರೆಗೆ ಕರೆತರಲು ಆಂಬುಲೆನ್ಸ್ ವ್ಯವಸ್ಥೆ, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಯೋಜನೆಯಡಿ ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್‌ಗೆ ಉಚಿತ ಚಿಕಿತ್ಸೆ ನೀಡಲು ನೆರವು, ಅಂತ್ಯಸಂಸ್ಕಾರಕ್ಕೆ ಪ್ರತ್ಯೇಕ ತಂಡ ರಚನೆ, ಹೋಂ ಐಸೊಲೇಷನ್‌ಲ್ಲಿರುವ ಸೋಂಕಿತರ ಮನೆಗೆ ಮೆಡಿಕಲ್ ಕಿಟ್‌ಗಳನ್ನು ನೀಡಲು ತಂಡಗಳನ್ನು ರಚಿಸಿದ್ದಾರೆ. ಈಚೆಗೆ ಶಾಸಕ ಸುನಿಲ್ ಕುಮಾರ್ ಅವರಿಗೂ ಕೋವಿಡ್ ದೃಢಪಟ್ಟಿತ್ತು.

ಕಾಪು ಶಾಸಕ ಲಾಲಾಜಿ ಮೆಂಡನ್ ರಕ್ತದಾನ ಶಿಬಿರಗಳನ್ನು ಆಯೋಜಿಸುತ್ತಿದ್ದು, ಕೋವಿಡ್ ಲಸಿಕಾ ಕಾರ್ಯವನ್ನು ಪರಿಶೀಲಿಸುತ್ತಿದ್ದಾರೆ. ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಕೋವಿಡ್ ಸೋಂಕಿನಿಂದ ಗುಣಮುಖರಾಗಿ ಹೋಂ ಕ್ವಾರಂಟೈನ್‌ನಲ್ಲಿದ್ದಾರೆ. ಉಡುಪಿ ಶಾಸಕ ರಘುಪತಿ ಭಟ್ ಕೋವಿಡ್ ಸಹಾಯವಾಣಿ ಕೇಂದ್ರ ಹಾಗೂ ಉಚಿತ ಆಂಬುಲೆನ್ಸ್ ಹಾಗೂ ಕೋವಿಡ್ ಲಸಿಕೆ ಪಡೆಯುವವರನ್ನು ಆಸ್ಪತ್ರೆಗೆ ಕರೆತರಲು ವಾಹನ ವ್ಯವಸ್ಥೆ ಮಾಡಿದ್ದಾರೆ

ಕ್ಷೇತ್ರದಲ್ಲಿ ನಾಪತ್ತೆ; ಜಾಲತಾಣದಲ್ಲಿ ಪ್ರತ್ಯಕ್ಷ!

ಪ್ರಜಾವಾಣಿ ವಾರ್ತೆ

ಬೆಂಗಳೂರು ಗ್ರಾಮಾಂತರ: ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಮತ್ತು ರಾಮನಗರ ಜಿಲ್ಲೆಯ ಬೆರಳೆಣಿಕೆಯ ಜನಪ್ರತಿನಿಧಿಗಳು ಕೋವಿಡ್ ನಿರ್ವಹಣೆಯಲ್ಲಿ ಸಕ್ರಿಯರಾಗಿದ್ದು, ಉಳಿದವರು ನಿಷ್ಕ್ರಿಯರಾಗಿದ್ದಾರೆ. ಕೆಲವು ಜನಪ್ರತಿನಿಧಿಗಳು ಸಭೆ, ಸಮಾರಂಭ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಪ್ರತ್ಯಕ್ಷರಾಗುತ್ತಿದ್ದು, ಆಸ್ಪತ್ರೆಯಲ್ಲಿನ ಸೋಂಕಿತರನ್ನು ಸಂತೈಸುವ ಕೆಲಸ ಮಾಡುತ್ತಿಲ್ಲ.

ತುಮಕೂರು ಜಿಲ್ಲೆಯ ಶಿರಾ ಶಾಸಕ ಸಿ.ಎಂ. ರಾಜೇಶ್‌ಗೌಡ ಅವರ ಪ್ರಯತ್ನದ ಫಲವಾಗಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯವನ್ನು 50ರಿಂದ 100ಕ್ಕೆ ಹೆಚ್ಚಿಸಲಾಗಿದೆ. ಸ್ವಂತ ಹಣದಿಂದ 40 ಹಾಸಿಗೆ ಖರೀದಿಸಿ ಕೊಟ್ಟಿದ್ದಾರೆ. ಕುಣಿಗಲ್ ಶಾಸಕ ಡಾ.ಎಚ್.ಡಿ. ರಂಗನಾಥ್ ಪ್ರತಿದಿನವೂ ಸಾರ್ವಜನಿಕ ಆಸ್ಪತ್ರೆಯ ಕೋವಿಡ್ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಸೋಂಕಿತರ ಆರೋಗ್ಯ ವಿಚಾರಿಸುತ್ತಿದ್ದಾರೆ.

ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಸ್ವಂತ ಹಣದಿಂದ 4 ಆಂಬುಲೆನ್ಸ್ ಕೊಡಿಸಿದ್ದಾರೆ. ತುರುವೇಕೆರೆ ಶಾಸಕ ಮಸಾಲ ಜಯರಾಮ್ ತಾಲ್ಲೂಕು ಆಸ್ಪತ್ರೆಗೆ ಸ್ವಂತ ಹಣದಲ್ಲಿ ಆಮ್ಲಜನಕದ 10 ಸಿಲಿಂಡರ್‌ಗಳನ್ನು ಕೊಡಿಸಿದ್ದಾರೆ. ಜಿಲ್ಲೆಯ ಉಳಿದ ಶಾಸಕರು ಮನೆ ಬಿಟ್ಟು ಹೊರಗೆ ಬರುತ್ತಿಲ್ಲ.

ಚನ್ನಪಟ್ಟಣ ಶಾಸಕ ಎಚ್.ಡಿ. ಕುಮಾರಸ್ವಾಮಿ ಹಾಗೂ ಮಾಗಡಿ ಶಾಸಕ ಎ. ಮಂಜುನಾಥ್ ಸೋಂಕಿಗೆ ಒಳಗಾಗಿದ್ದು ಚೇತರಿಸಿಕೊಳ್ಳುತ್ತಿದ್ದಾರೆ. ರಾಮನಗರ ಶಾಸಕಿ ಅನಿತಾ ಕುಮಾರಸ್ವಾಮಿ ಹೋಮ್ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ. ಕನಕಪುರ ಶಾಸಕ ಡಿ.ಕೆ. ಶಿವಕುಮಾರ್ ರಾಜ್ಯ ರಾಜಕಾರಣದಲ್ಲಿ ಕ್ರಿಯಾಶೀಲರಾಗಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ. ಸುಧಾಕರ್ ಅವರನ್ನು ಹೊರತುಪಡಿಸಿದರೆ ಉಳಿದ ಶಾಸಕರು ಜನಸಂಪರ್ಕದಿಂದ ದೂರವೇ ಉಳಿದಿದ್ದಾರೆ. ಆದರೆ ಅವರು ಸಾಮಾಜಿಕ ಜಾಲತಾಣಗಳಲ್ಲಿ ಪ್ರತ್ಯಕ್ಷರಾಗಿ ಜನರಿಗೆ ಸಲಹೆ ನೀಡುತ್ತಿದ್ದಾರೆ.

ಸುಧಾಕರ್ ಎರಡನೇ ಅಲೆಯ ಆರಂಭದಲ್ಲಿಯೇ ಅಧಿಕಾರಿಗಳ ಸಭೆ ನಡೆಸಿದ್ದರು. ತಮ್ಮ ಸಾಯಿಕೃಷ್ಣ ಟ್ರಸ್ಟ್ ಮೂಲಕ ಚಿಕ್ಕಬಳ್ಳಾಪುರ ನಗರಸಭೆ ವ್ಯಾಪ್ತಿಯಲ್ಲಿ 15 ಆಟೊಗಳನ್ನು ಬಿಡುವ ಮೂಲಕ 45 ವರ್ಷ ಮೇಲ್ಪಟ್ಟವರನ್ನು ಲಸಿಕೆ ಕೇಂದ್ರಕ್ಕೆ ಕರೆತರುವ ವ್ಯವಸ್ಥೆ ಮಾಡಿಸಿದ್ದರು. ಎರಡನೇ ಅಲೆ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ ಅವರು ರಾಜ್ಯಮಟ್ಟದ ಕಾರ್ಯಭಾರಕ್ಕೆ ಸಿಲುಕಿದರು.

ಶಿಡ್ಲಘಟ್ಟ ಶಾಸಕ ವಿ. ಮುನಿಯಪ್ಪ ಎರಡನೇ ಅಲೆಯ ಆರಂಭದಲ್ಲಿ ಅಪರೂಪಕ್ಕೆ ಒಮ್ಮೆ ಕಾಣಿಸಿಕೊಳ್ಳುತ್ತಿದ್ದರು. ಈಗ ಮನೆ ಸೇರಿದ್ದಾರೆ. ಗೌರಿಬಿದನೂರಿನ ಶಾಸಕ ಎನ್.ಎಚ್. ಶಿವಶಂಕರೆಡ್ಡಿ ಅವರದ್ದೂ ಇದೇ ಹಾದಿ. ಬಾಗೇಪಲ್ಲಿ ಶಾಸಕ ಸುಬ್ಬಾರೆಡ್ಡಿ ಕೋವಿಡ್ ಪೀಡಿತರಾಗಿದ್ದಾರೆ. ಚಿಂತಾಮಣಿ ಶಾಸಕ ಎಂ. ಕೃಷ್ಣಾರೆಡ್ಡಿ ಒಂದು ಸಭೆಯನ್ನಷ್ಟೇ ನಡೆಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ, ದೇವನಹಳ್ಳಿ ಶಾಸಕ ನಿಸರ್ಗ ನಾರಾಯಣಸ್ವಾಮಿ, ದೊಡ್ಡಬಳ್ಳಾಪುರ ಶಾಸಕ ಟಿ. ವೆಂಕಟರಮಣಯ್ಯ, ನೆಲಮಂಗಲ ಶಾಸಕ ಡಾ.ಶ್ರೀನಿವಾಸ್ ಅಧಿಕಾರಿಗಳೊಂದಿಗೆ ಸಭೆಗಳನ್ನು ನಡೆಸುತ್ತಿದ್ದಾರೆ.

ಕೋಲಾರ ಜಿಲ್ಲೆ ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ ತಮ್ಮ ಒಡೆತನದ ಕಲ್ಯಾಣ ಮಂಟಪಗಳನ್ನು ಸೋಂಕಿತರ ಚಿಕಿತ್ಸೆಗೆ ನೀಡುವುದಾಗಿ ಘೋಷಿಸಿದ್ದಾರೆ. ಬಂಗಾರಪೇಟೆಯ ಶ್ಯಾಮ್ ಆಸ್ಪತ್ರೆಯನ್ನು ಬಾಡಿಗೆಗೆ ಪಡೆದು ಅಲ್ಲಿ ಸೋಂಕಿತರಿಗೆ ಚಿಕಿತ್ಸೆಗೆ ವ್ಯವಸ್ಥೆ ಮಾಡಲು ಮುಂದಾಗಿದ್ದಾರೆ. ಕೆಜಿಎಫ್ ಶಾಸಕಿ ಎಂ. ರೂಪಕಲಾ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ನೆರವಾಗುತ್ತಿದ್ದಾರೆ. ಮುಳಬಾಗಿಲು ಶಾಸಕ ಎಚ್. ನಾಗೇಶ್, ಕೋಲಾರ ಶಾಸಕ ಕೆ. ಶ್ರೀನಿವಾಸಗೌಡ ಮತ್ತು ಮಾಲೂರು ಶಾಸಕ ಕೆ.ವೈ. ನಂಜೇಗೌಡ ಅವರು ಕೋವಿಡ್ ಸಂಬಂಧಿತ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

ಮನೆಯಲ್ಲೇ ಸಂಸದರ ವಾಸ್ತವ್ಯ

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಬಿ.ಎನ್. ಬಚ್ಚೇಗೌಡ ಒಮ್ಮೆಯೂ ತಾಲ್ಲೂಕು ಕೇಂದ್ರಗಳಿಗೆ ಭೇಟಿ ನೀಡಿಲ್ಲ. ಇದು ಮತದಾರರ ಸಿಟ್ಟಿಗೆ ಕಾರಣವಾಗಿದೆ.

ಕೋಲಾರ ಕ್ಷೇತ್ರದ ಸಂಸದ ಎಸ್. ಮುನಿಸ್ವಾಮಿ ಅವರು ಎರಡು ದಶಕದಿಂದ ಬಂದ್ ಆಗಿರುವ ಕೆಜಿಎಫ್‌ನ ಚಿನ್ನದ ಗಣಿ (ಬಿಜಿಎಂಎಲ್) ಆಸ್ಪತ್ರೆಯನ್ನು ಕೋವಿಡ್ ಆಸ್ಪತ್ರೆಯಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಹೆಚ್ಚು ಮುತುವರ್ಜಿವಹಿಸಿದ್ದಾರೆ.

ತುಮಕೂರು ಸಂಸದ ಜಿ.ಎಸ್. ಬಸವರಾಜ್ ಪತ್ರಿಕಾ ಹೇಳಿಕೆಗಷ್ಟೇ ಸೀಮಿತಗೊಂಡಿದ್ದಾರೆ. ಚಿತ್ರದುರ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಜಿಲ್ಲೆಯ ಶಿರಾ ಮತ್ತು ಪಾವಗಡ ವಿಧಾನಸಭಾ ಕ್ಷೇತ್ರಗಳು ಸೇರುತ್ತವೆ. ಸಂಸದ ಎ. ನಾರಾಯಣಸ್ವಾಮಿ ಎರಡನೇ ಅಲೆಯ ಬಳಿಕ ಈ ಎರಡೂ ಕ್ಷೇತ್ರಕ್ಕೆ ಕಾಲಿಟ್ಟಿಲ್ಲ.

ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರು ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ನೊಂದವರಿಗೆ ನೆರವಾಗುವಂತೆ ಮುಖ್ಯಮಂತ್ರಿಗೆ ಪತ್ರವನ್ನೂ ಬರೆದಿದ್ದಾರೆ.

ಕೋವಿಡ್ ಆಸ್ಪತ್ರೆಯಾಗಿ ಪರಿವರ್ತನೆ ಆಗಲಿರುವ ಕೆಜಿಎಫ್‌ನ ಬಿಜಿಎಂಎಲ್ ಆಸ್ಪತ್ರೆ

ಮಾದರಿಯಾದ ಗೋಪಾಲಯ್ಯ

ಅಬಕಾರಿ ಸಚಿವ ಕೆ. ಗೋಪಾಲಯ್ಯ ತಾವು ಪ್ರತಿನಿಧಿಸುವ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ಜನರಿಗೆ ನೆರವಾಗಲು ತಮ್ಮ ಕಚೇರಿಯಲ್ಲೇ ವಾರ್ ರೂಮ್ ತೆರೆದಿದ್ದಾರೆ. ಅಲ್ಲಿ ವೈದ್ಯರನ್ನು ನಿಯೋಜಿಸಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ನೆರವು ಒದಗಿಸುತ್ತಿದ್ದಾರೆ.

ಬೆಳಿಗ್ಗೆ 6ರಿಂದ ರಾತ್ರಿ 12ರವರೆಗೂ ವಾರ್ ರೂಮ್‌ನಲ್ಲಿ ವೈದ್ಯರ ಸೇವೆ ಲಭ್ಯ. ಮನೆಯಲ್ಲೇ ಪ್ರತ್ಯೇಕವಾಸದಲ್ಲಿರುವ ಕೋವಿಡ್ ರೋಗಿಗಳಿಗೆ ಈ ವೈದ್ಯರು ಮಾರ್ಗದರ್ಶನ ನೀಡುತ್ತಾರೆ. ಶಾಸಕರ ಕಚೇರಿಯಿಂದಲೇ ಸೋಂಕಿತರ ಮನೆಗಳಿಗೆ ಔಷಧಿ ಕಿಟ್ ತಲುಪಿಸಲಾಗುತ್ತಿದೆ. ಅಗತ್ಯ ವಸ್ತುಗಳ ಪೂರೈಕೆಗೂ ವ್ಯವಸ್ಥೆ ಮಾಡಿದ್ದಾರೆ.

ಮನೆಯಲ್ಲಿ ಪ್ರತ್ಯೇಕವಾಸಕ್ಕೆ ಅಗತ್ಯ ಸೌಲಭ್ಯ ಹೊಂದಿರದವರಿಗಾಗಿ ನಂದಿನಿ ಬಡಾವಣೆಯ ಕೆಂಪೇಗೌಡ ಸಮುದಾಯ ಭವನದಲ್ಲಿ 80 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರವನ್ನು ಸಜ್ಜುಗೊಳಿಸುತ್ತಿದ್ದಾರೆ. ತುರ್ತಾಗಿ ಅಗತ್ಯವಿರುವ ಸೋಂಕಿತರಿಗೆ ಆಮ್ಲಜನಕ ಒದಗಿಸುವುದಕ್ಕೂ ತಯಾರಿ ನಡೆಸಿದ್ದಾರೆ.

ಕೆಲವರಿಂದಷ್ಟೇ ಕೆಲಸ: ಉಳಿದವರು ಮೌನ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಜಿಲ್ಲೆಯ ಹುಣಸೂರು ಶಾಸಕ ಎಚ್.ಪಿ.ಮಂಜುನಾಥ್ ಅವರು ಕೋವಿಡ್ ವಿಚಾರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕ್ಷೇತ್ರದ ಜನರ ಕಷ್ಟ-ಸುಖಗಳಿಗೆ ಸ್ಪಂದಿಸುತ್ತಿದ್ದಾರೆ.

ಹುಣಸೂರಿನ ವತ್ಸಲಾ ಎಂಬುವರು ಕೋವಿಡ್‌ನಿಂದಾಗಿ ಮೃತರಾದಾಗ ಅಂತ್ಯಸಂಸ್ಕಾರ ನಡೆಸಲು ಯಾರೂ ಬರಲಿಲ್ಲ. ಆಗ ಸಹಾಯಕ್ಕೆ ಮುಂದೆ ಬಂದ ಮುಸ್ಲಿಂ ಯುವಕರ ತಂಡ ಕಟ್ಟಿಕೊಂಡು ಮಹಿಳೆಯ ಅಂತ್ಯಸಂಸ್ಕಾರಕ್ಕೆ ನೆರವಾದರು. ಅಲ್ಲದೇ, ಹಾಡಿಗಳಿಗೆ ತೆರಳಿ ಲಸಿಕೆ ಪಡೆಯುವಂತೆ ಆದಿವಾಸಿಗಳ ಮನವೊಲಿಸುತ್ತಿದ್ದಾರೆ.

ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ತಮ್ಮ ಕ್ಷೇತ್ರದಲ್ಲಿ ಕೋವಿಡ್‌ಗೆಂದು ಪ್ರತ್ಯೇಕ ಆಸ್ಪತ್ರೆ ಸ್ಥಾಪಿಸುವಲ್ಲಿ ನೆರವಾಗಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ ಅವರು ವಾರದ ಹಿಂದೆ ಕೋವಿಡ್ ಸಂಬಂಧ ಫೋನ್ ಇನ್ ಕಾರ್ಯಕ್ರಮ ಮಾಡಿ ಜನರ ಸಮಸ್ಯೆ ಆಲಿಸಿದ್ದಾರೆ. ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಅವರಿಗೆ 15 ದಿನಗಳ ಹಿಂದೆ ಕೊರೊನಾ ಸೋಂಕು ಕಾಣಿಸಿಕೊಂಡಿತ್ತು.

ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್, ತಮ್ಮದೇ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಹಾಡಿಗೆ ಭೇಟಿ ನೀಡಿ, ಕೋವಿಡ್ ಲಸಿಕೆ ತೆಗೆದುಕೊಳ್ಳುವಂತೆ ಆದಿವಾಸಿಗಳಲ್ಲಿ ಜಾಗೃತಿ ಮೂಡಿಸಿದ್ದಾರೆ. ವಿಧಾನ ಪರಿಷತ್ ಸದಸ್ಯ ಆರ್.ಧರ್ಮಸೇನ ಎಲ್ಲೂ ಕಾಣಿಸಿಕೊಳ್ಳುತ್ತಿಲ್ಲ.

ಇನ್ನು ಎಂ.ಅಶ್ವಿನ್ ಕುಮಾರ್ (ತಿ. ನರಸೀಪುರ), ಸಿ.ಅನಿಲ್ ಕುಮಾರ್ (ಎಚ್.ಡಿ.ಕೋಟೆ), ಕೆ.ಮಹದೇವ್ (ಪಿರಿಯಾಪಟ್ಟಣ), ಡಾ.ಯತೀಂದ್ರ (ವರುಣಾ), ನಂಜನಗೂಡು ಶಾಸಕ ಬಿ.ಹರ್ಷವರ್ಧನ್, ಚಾಮುಂಡೇಶ್ವರಿ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್. ನಗರ ಶಾಸಕ ಸಾ.ರಾ.ಮಹೇಶ್ ತಮ್ಮ ಕ್ಷೇತ್ರಗಳಲ್ಲಿ ಸಭೆ ನಡೆಸಿ, ಅಧಿಕಾರಿಗಳಿಗೆ ಸೂಚನೆ ನೀಡುತ್ತಾ, ಜನರಿಗೆ ಸೌಲಭ್ಯ ಒದಗಿಸುವ ಭರವಸೆ ನೀಡಲಷ್ಟೇ ಸೀಮಿತವಾಗಿದ್ದಾರೆ. ಸಾ.ರಾ. ಮಹೇಶ್ ಅವರು ಇತ್ತೀಚೆಗೆ, ತಮ್ಮ ಕ್ಷೇತ್ರದ ಮಹಿಳೆಯೊಬ್ಬರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸುವ ಪ್ರಯತ್ನ ಮಾಡಿದ್ದರು.

ಹಾಸನ ಜಿಲ್ಲೆಯ ಬಹುತೇಕ ಎಲ್ಲಾ ಶಾಸಕರು ಜನರ ಸಮಸ್ಯೆ ಆಲಿಸುತ್ತಿದ್ದಾರೆ. ಹಾಸನ ಕ್ಷೇತ್ರದ ಶಾಸಕ ಪ್ರೀತಂ ಜೆ ಗೌಡ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಜನ ಸಂಪರ್ಕದಿಂದ ದೂರವುಳಿದಿದ್ದಾರೆ.

ಶಾಸಕ–ಸಂಸದರನ್ನು ಹುಡುಕಿ ಕೊಡಿ: ಚಾಮರಾಜನಗರ ಜಿಲ್ಲೆಯಲ್ಲಿ ಕೆಲವು ವಾಟ್ಸ್ ಆ್ಯಪ್ ಗ್ರೂಪ್‌ಗಳಲ್ಲಿ 'ಸಂಸದರು, ಶಾಸಕರು ಕಾಣೆಯಾಗಿದ್ದಾರೆ. ಹುಡುಕಿ ಕೊಡಿ' ಎಂಬಂತಹ ಪೋಸ್ಟ್‌ಗಳು ಹರಿದಾಡುತ್ತಿವೆ. ಶಾಸಕರ ಪೈಕಿ ಪುಟ್ಟರಂಗ ಶೆಟ್ಟಿ ಅವರು ಈಗಷ್ಟೇ ಕೋವಿಡ್ ನಿಂದ ಚೇತರಿಸಿಕೊಂಡಿದ್ದಾರೆ. ಮನೆಗೆ ಬಂದು ಹಲವು ದಿನಗಳಾದರೂ ಇನ್ನೂ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ.

52 ದಿನಗಳಿಂದ ಕಾಲಿಡದ ಸಂಸದೆ ಸುಮಲತಾ

ಸುಮಲತಾ

ಮಂಡ್ಯ: ಜಿಲ್ಲೆಯಲ್ಲಿ ಪರಿಸ್ಥಿತಿ ಉಲ್ಬಣಗೊಂಡಿದ್ದರೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಸಿ.ನಾರಾಯಣಗೌಡ ಹಾಗೂ 6 ಶಾಸಕರು, ಜಿಲ್ಲೆಯಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದೇ ಹೇಳುತ್ತಿದ್ದಾರೆ. ಜಿಲ್ಲೆಗೆ ಹೆಚ್ಚುವರಿಯಾಗಿ 50 ವೆಂಟಿಲೇಟರ್ ತರಿಸುವಲ್ಲಿ ಯಶಸ್ವಿಯಾಗಿದ್ದಾಗಿ ಹೇಳಿಕೊಳ್ಳುತ್ತಾರೆ ಸಚಿವ ನಾರಾಯಣಗೌಡ.

ಸಂಸದೆ ಎ.ಸುಮಲತಾ ಜಿಲ್ಲೆಯ ಕಡೆ ತಲೆ ಹಾಕಿ ಬರೋಬ್ಬರಿ 52 ದಿನಗಳಾಗಿವೆ. ಮಾರ್ಚ್ 8ರಂದು ಮಹಿಳಾ ದಿನಾಚರಣೆ ನಂತರ ಸಂಸದೆ ಮಂಡ್ಯ ಜಿಲ್ಲೆಯ ಕಡೆ ಕಾಲಿಟ್ಟಿಲ್ಲ. ಮೈಸೂರು–ಕೊಡಗು ಸಂಸದ ಪ್ರತಾಪಸಿಂಹ, ಕೋವಿಡ್ ಸಭೆ ನಡೆಸಲು ಜಿಲ್ಲೆಗೆ ಬರುವ ಸಚಿವರ ಜೊತೆ ಓಡಾಡುತ್ತಿದ್ದಾರೆ. ಫೇಸ್‌ಬುಕ್, ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಚಾಮರಾಜನಗರ ಕ್ಷೇತ್ರದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಜಿಲ್ಲೆಗೆ ಬಂದೇ ಇಲ್ಲ.

ಕೊಡಗು ಶಾಸಕರ ಕಾರ್ಯಕ್ಕೆ ಮೆಚ್ಚುಗೆ

ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಅವರು ಜನರಿಗೆ ನೆರವಾಗುತ್ತಿದ್ದಾರೆ. ಇಬ್ಬರೂ, ಹಸಿದವರಿಗೆ ವೈಯಕ್ತಿಕವಾಗಿ ನೆರವು ನೀಡುತ್ತಿದ್ದು, ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ. ರಂಜನ್ ಅವರು ಪಿಪಿಇ ಕಿಟ್ ಧರಿಸಿ, ಕೋವಿಡ್ ಆಸ್ಪತ್ರೆಯ ಸ್ಥಿತಿ ಅವಲೋಕಿಸಿದ್ದಾರೆ.

ಅಪಾಯ ಮರೆತು ಚುನಾವಣೆ ನಡೆಸಿದ ಶ್ರೀರಾಮುಲು

ದಾವಣಗೆರೆ/ಚಿತ್ರದುರ್ಗ: ಕೋವಿಡ್ ಸಂಕಷ್ಟದಲ್ಲಿರುವ ಜನರಿಗೆ ಧೈರ್ಯ ಹೇಳುವ ಕೆಲಸವನ್ನು ಒಂದಿಬ್ಬರು ಶಾಸಕರು ಮಾತ್ರ ಉತ್ಸಾಹದಿಂದ ಮಾಡುತ್ತಿದ್ದಾರೆ. ಚಿತ್ರದುರ್ಗದ ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ಅವರು ಬಳ್ಳಾರಿ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಸಕ್ರಿಯರಾಗಿದ್ದರು. ಮತದಾನ ಮುಗಿದ ಎರಡು ದಿನಗಳ ಬಳಿಕ ಜಿಲ್ಲಾ ಕೇಂದ್ರಕ್ಕೆ ಬಂದು ಅಧಿಕಾರಿಗಳ ಸಭೆ ನಡೆಸಿ ಮರಳಿದ್ದಾರೆ.

ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಹಾಗೂ ಹೊಸದುರ್ಗ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಕ್ಷೇತ್ರದಲ್ಲಿ ಕಾಣಿಸಿಕೊಂಡಿದ್ದು ಅಪರೂಪ. ಹಿರಿಯೂರು ಶಾಸಕಿ ಕೆ.ಪೂರ್ಣಿಮಾ ಕೋವಿಡ್ ಸಿದ್ಧತೆಯ ಪರಿಶೀಲನೆ ನಡೆಸಿದ್ದಾರೆ. ಚಿತ್ರದುರ್ಗ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಅವರಿಗೆ ಕೋವಿಡ್‌ಗೆ ಒಳಗಾಗಿದ್ದು ಕ್ವಾರಂಟೈನ್‌ನಲ್ಲಿದ್ದಾರೆ.

ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ ನಿತ್ಯವೂ ಕ್ಷೇತ್ರ ಸುತ್ತಿ ಜನರ ಸಮಸ್ಯೆಗಳಿಗೆ ಕಿವಿಯಾಗಿದ್ದಾರೆ. ಚಳ್ಳಕೆರೆಯ ಶಾಸಕರ ಭವನದಲ್ಲಿ ಅನ್ನ ದಾಸೋಹ ಆರಂಭಿಸಿದ್ದಾರೆ. ಸಂಸದ ಎ.ನಾರಾಯಣಸ್ವಾಮಿ ಎರಡು ವಾರಗಳಿಂದ ಲೋಕಸಭಾ ಕ್ಷೇತ್ರದಲ್ಲೇ ಉಳಿದಿದ್ದಾರೆ. ಅಧಿಕಾರಿಗಳ ಸಭೆ ನಡೆಸಿ ಕೋವಿಡ್ ಚಿಕಿತ್ಸೆ, ಆಕ್ಸಿಜನ್ ಹಾಗೂ ರೆಮ್‌ಡಿಸಿವಿರ್ ಚುಚ್ಚುಮದ್ದಿನ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಕೈಗೆ ಸಿಗದ ಸಚಿವರು: ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಬಸವರಾಜ ಅವರು ಬೆಂಗಳೂರಿನಲ್ಲೇ ತಂಗಿದ್ದು, ಕೆಲ ದಿನಗಳ ಹಿಂದೆ ಜಿಲ್ಲೆಗೆ ಬಂದು ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದರು. ಈಚೆಗೆ ಜಿಲ್ಲಾಧಿಕಾರಿ ಜೊತೆಗೆ ವಿಡಿಯೊ ಕಾನ್ಫರೆನ್ಸ್ ಮಾಡಿ ಮಾಹಿತಿ ಪಡೆದುಕೊಂಡಿದ್ದಾರಷ್ಟೆ.

ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು, ಕಳೆದ ವಾರ ಜಿಲ್ಲಾಧಿಕಾರಿ ಜತೆ ಸಮಾಲೋಚನೆ ನಡೆಸಿದ್ದಾರೆ. ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ, ಹರಿಹರದ ಶಾಸಕ ಎಸ್.ರಾಮಪ್ಪ ಅವರಿಗೆ ಕೋವಿಡ್ ದೃಢಪಟ್ಟಿದೆ. ದಾವಣಗೆರೆ ಶಾಸಕ ಶಾಮನೂರು ಶಿವಶಂಕರಪ್ಪ, ಎಸ್.ಎ. ರವೀಂದ್ರನಾಥ ಹಾಗೂ ಮಾಯಕೊಂಡ ಶಾಸಕ ಲಿಂಗಣ್ಣ ಅವರು ಜನ ಸಂಪರ್ಕದಿಂದ ದೂರ ಉಳಿದಿದ್ದಾರೆ. ಜಗಳೂರಿನ ಶಾಸಕ ಎಸ್.ವಿ. ರಾಮಚಂದ್ರ ಅವರು ಸ್ಥಳೀಯವಾಗಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ.

ಉತ್ಸಾಹದಿಂದ ಓಡಾಡಿದ ರೇಣುಕಾಚಾರ್ಯ

ಕಳೆದ ವರ್ಷ ಕೋವಿಡ್ ಕಾಣಿಸಿಕೊಂಡಾಗಲೂ ಜನರ ಸಂಕಷ್ಟಗಳಿಗೆ ಸ್ಪಂದಿಸಿದ್ದ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ, ಈ ಬಾರಿಯೂ ಅದೇ ಉತ್ಸಾಹದಲ್ಲಿ ಕೆಲಸ ಮಾಡುತ್ತಿದ್ದಾರೆ. ಈಚೆಗೆ ಅವರಿಗೆ ಎರಡನೇ ಬಾರಿ ಕೋವಿಡ್ ಕಾಣಿಸಿಕೊಂಡಿತ್ತು. ಇದೀಗ ಗುಣಮುಖರಾಗಿದ್ದು, ಅಧಿಕಾರಿಗಳೊಂದಿಗೆ ಸಭೆ ನಡೆಸುತ್ತಿದ್ದಾರೆ. ಪಿಪಿಇ ಕಿಟ್ ಹಾಕಿಕೊಂಡು ತಾಲ್ಲೂಕು ಕೋವಿಡ್ ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳಿಗೆ ಧೈರ್ಯವನ್ನೂ ಹೇಳಿದ್ದಾರೆ.

ಲಾಕ್‌ಡೌನ್ ಅವಧಿಯಲ್ಲಿ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಬರಲು ಮಧ್ಯಾಹ್ನದವರೆಗೂ ಅವಕಾಶ ಮಾಡಿಕೊಡಬೇಕು ಎಂಬ ನ್ಯಾಮತಿ ರೈತರ ಬೇಡಿಕೆಗೆ ಸ್ಪಂದಿಸಿದ ರೇಣುಕಾಚಾರ್ಯ, ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಈ ಬಗ್ಗೆ ಮನವಿಯನ್ನೂ ಮಾಡಿದ್ದಾರೆ.

ಪಿ.ಪಿ.ಇ ಕಿಟ್ ಹಾಕಿಕೊಂಡು ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರು ರೋಗಿಗಳ ಆರೋಗ್ಯ ವಿಚಾರಿಸಿ ಧೈರ್ಯ ಹೇಳಿದರು.

ವ್ಯವಸ್ಥಿತ ನಿರ್ವಹಣೆಗೆ ಬಲ ನೀಡಿದ ಸಚಿವ, ಸಂಸದ

ಶಿವಮೊಗ್ಗ: ಜಿಲ್ಲೆಯಲ್ಲಿ ಪ್ರತಿ ದಿನ ಸರಾಸರಿ ಮುನ್ನೂರು ಕೋವಿಡ್ ರೋಗಿಗಳು ಪತ್ತೆಯಾದರೂ ಮೆಗ್ಗಾನ್ ಆಸ್ಪತ್ರೆಯಲ್ಲಿ ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್.ಈಶ್ವರಪ್ಪ, ಸಂಸದ ಬಿ.ವೈ. ರಾಘವೇಂದ್ರ ಅವರು ಕೊರೊನಾ ಸೋಂಕು ವೇಗವಾಗಿ ಹರಡುವುದಕ್ಕೂ ಮೊದಲು ನಿರಂತರ ಸಭೆಗಳ ಮೂಲಕ ಸೂಕ್ತ ವ್ಯವಸ್ಥೆಗೆ ಶ್ರಮಿಸಿದ್ದರ ಫಲ ಇದು.

ವಾರದಲ್ಲಿ ಕನಿಷ್ಠ ಒಂದು ದಿನ ಇಬ್ಬರೂ ಪ್ರತ್ಯೇಕ ಸಭೆಗಳನ್ನು ನಡೆಸಿದ್ದಾರೆ. ಕೊರೊನಾ ಸೋಂಕು ಉಲ್ಬಣಗೊಳ್ಳುವ ಮೊದಲು ಆಸ್ಪತ್ರೆಗೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸಲು ಒತ್ತು ನೀಡಿದ್ದರು. ಪರಿಣಾಮವಾಗಿ ಆಸ್ಪತ್ರೆ ಆವರಣದಲ್ಲಿ 16 ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕ ಸಂಗ್ರಹ ಟ್ಯಾಂಕ್ ಸದಾ ತುಂಬಿರುತ್ತದೆ. ಬಳ್ಳಾರಿ ಜಿಲ್ಲೆಯ ಜಿಂದಾಲ್‌ನಿಂದ ಎರಡು ದಿನಕ್ಕೊಮ್ಮೆ ಆಮ್ಲಜನಕ ಪೂರೈಕೆಯಾಗುತ್ತಿದೆ. 800 ಆಮ್ಲಜನಕ ಸೌಕರ್ಯ ಇರುವ ಹಾಸಿಗೆಗಳು ಇವೆ. ಹೆಚ್ಚುವರಿಯಾಗಿ 250 ಹೆಚ್ಚುವರಿ ಆಮ್ಲಜನಕ ಪೂರೈಕೆ ಹಾಸಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ ಕನಿಷ್ಠ 50 ಆಮ್ಲಜನಕ ಪೂರೈಕೆಯ ಹಾಸಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಪ್ರತಿ ತಾಲ್ಲೂಕು ಕೇಂದ್ರಗಳಲ್ಲೂ ಇಬ್ಬರೂ ಸಭೆ ನಡೆಸಿದ್ದಾರೆ.

ಸಾಗರದ ಶಾಸಕ ಹಾಲಪ್ಪ ಎರಡನೇ ಅಲೆಗೂ ಮೊದಲು ಅಧಿಕಾರಿಗಳ ಸಭೆ ನಡೆಸಿ, ಕೋವಿಡ್ ರೋಗಿಗಳ ಚಿಕಿತ್ಸೆಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದ್ದರು.

ಜಿಲ್ಲೆಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಹೆಚ್ಚು ಶ್ರಮಿಸಿದವರು ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ. ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಲ್ಲಿ ಮಾತ್ರವಲ್ಲದೆ, ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ, ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸರಣಿ ಸಭೆಗಳನ್ನು ನಡೆಸಿ, ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. ಚಿಕಿತ್ಸೆಗೆ ಅಗತ್ಯ ಕ್ರಮ ಕೈಗೊಂಡಿದ್ದಾರೆ.

ಶಿಕಾರಿಪುರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಬದಲು ಸಂಸದ ಬಿ.ವೈ.ರಾಘವೇಂದ್ರ ಕೋವಿಡ್ ನಿಯಂತ್ರಣದಲ್ಲಿ ಹೆಚ್ಚಿನ ಕಾಳಜಿ ವಹಿಸಿದ್ದಾರೆ. ಬಹುತೇಕ ಆಸ್ಪತ್ರೆಗಳಲ್ಲಿ ಹೆಚ್ಚುವರಿ ಹಾಸಿಗೆ, ಆಮ್ಲಜನಕ ಪೂರೈಕೆ, ಅಗತ್ಯ ವೈದ್ಯರು, ಸಿಬ್ಬಂದಿ ಕೊರತೆಯಾಗದಂತೆ ನೋಡಿಕೊಂಡಿದ್ದಾರೆ.

ಸೊರಬದಲ್ಲಿ ಶಾಸಕ ಕುಮಾರ್ ಬಂಗಾರಪ್ಪ, ಶಿವಮೊಗ್ಗ ಗ್ರಾಮಾಂತರ ಶಾಸಕ ಕೆ.ಬಿ.ಅಶೋಕ ನಾಯ್ಕ ಅವರು ಕ್ಷೇತ್ರದ ಜನರ ಕಾಳಜಿ ವಹಿಸಿಲ್ಲ ಎಂಬ ದೂರುಗಳು ಕೇಳಿಬಂದಿವೆ. ಏಪ್ರಿಲ್ 30ರಂದು ಸೊರಬದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ನಡೆಸಿದ ಕೋವಿಡ್ ಪರಿಶೀಲನಾ ಸಭೆಯಲ್ಲಿ ಕುಮಾರ್ ಬಂಗಾರಪ್ಪ ಪಾಲ್ಗೊಂಡಿದ್ದರು.

'ಸಹಾಯ'ಕ್ಕೆ ಜನಪ್ರತಿನಿಧಿಗಳು

ಒಂದನೇ ಪುಟದಿಂದ

ಅಪಘಾತದಲ್ಲಿ ಗಾಯಗೊಂಡಿದ್ದ ಮಂಗಳೂರು ಕ್ಷೇತ್ರದ ಶಾಸಕ ಯು.ಟಿ. ಖಾದರ್, ಕೆಲದಿನಗಳ ವಿಶ್ರಾಂತಿಯ ನಂತರ ತಮ್ಮ ಕ್ಷೇತ್ರಕ್ಕೆ ಮರಳಿದ್ದಾರೆ. ಜನರ ಜೊತೆಗೆ ಸಂಪರ್ಕದಲ್ಲಿದ್ದಾರೆ.

ಮಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ವೇದವ್ಯಾಸ ಕಾಮತ್, ತಮ್ಮ ಸೇವಾಂಜಲಿ ಟ್ರಸ್ಟ್ ಮೂಲಕ ರಸ್ತೆ ಬದಿ ನಿವಾಸಿಗಳು, ರೈಲು ನಿಲ್ದಾಣದಲ್ಲಿರುವ ಕಾರ್ಮಿಕರಿಗೆ ಆಹಾರ ಒದಗಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಮಂಗಳೂರಿನ ನಂದಿಗುಡ್ಡೆ, ಬೋಳೂರು ಸ್ಮಶಾನದಲ್ಲಿ ಕೋವಿಡ್–19ನಿಂದ ಮೃತಪಟ್ಟವರ ಶವಸಂಸ್ಕಾರಕ್ಕೆ ಉಚಿತ ವ್ಯವಸ್ಥೆ ಮಾಡಲಾಗಿದೆ. ಮಂಗಳೂರು ಉತ್ತರ ಶಾಸಕ ಡಾ. ವೈ. ಭರತ್ ಶೆಟ್ಟಿ ಕ್ಷೇತ್ರದ ಜನರ ಸಮಸ್ಯೆಗೆ ಸ್ಪಂದಿಸಲು ಮೊಬೈಲ್ ಆ್ಯಪ್ ರೂಪಿಸಿದ್ದಾರೆ.

ಮೂಲ್ಕಿ – ಮೂಡುಬಿದಿರೆ ಕ್ಷೇತ್ರದ ಉಮಾನಾಥ ಕೋಟ್ಯಾನ್, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್, ಪುತ್ತೂರು ಕ್ಷೇತ್ರದ ಸಂಜೀವ ಮಠಂದೂರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಧಿಕಾರಿಗಳ ಸಭೆ, ಆಸ್ಪತ್ರೆಗಳ ಭೇಟಿಯಲ್ಲಿ ನಿರತರಾಗಿದ್ದಾರೆ. ಈ ಸಂದರ್ಭದಲ್ಲಿ ಎಲ್ಲ ಶಾಸಕರು ತಂತ್ರಜ್ಞಾನ ಸದ್ಬಳಕೆಯ ಜತೆಗೆ ಸ್ವತಃ ಕ್ಷೇತ್ರಕ್ಕಿಳಿದು ಜನರ ಸಮಸ್ಯೆಗೆ ಸ್ಪಂದಿಸಲು ಪ್ರಯತ್ನಿಸುತ್ತಿದ್ದಾರೆ.

ನಿರೀಕ್ಷೆ ಹೆಚ್ಚು: ಸ್ಪಂದನೆ ಕಡಿಮೆ

ಒಂದನೇ ಪುಟದಿಂದ

ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್, ಮೈಸೂರು ಜಿಲ್ಲಾ ಉಸ್ತುವಾರಿಯಾಗಿದ್ದು ಅಲ್ಲಿನ ಕೋವಿಡ್ ನಿಯಂತ್ರಣಕ್ಕೆ ಹರಸಾಹಸ ಪಡುತ್ತಿದ್ದಾರೆ. ವಾರಕ್ಕೆ ಎರಡು ದಿನ ಕ್ಷೇತ್ರದಲ್ಲಿ ಓಡಾಡಿ ಆಸ್ಪತ್ರೆ, ಕೇರ್ ಸೆಂಟರ್‌ಗಳ ವ್ಯವಸ್ಥೆ ಮಾಡುತ್ತಿದ್ದಾರೆ.

ನಗರದ ವ್ಯಾಪ್ತಿಯ ಮೂವರು ಸಂಸದರ ಪೈಕಿ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಕೇಂದ್ರ ಸಚಿವ ಡಿ.ವಿ. ಸದಾನಂದ ಗೌಡ, ರೆಮ್‌ಡಿಸಿವಿರ್ ಕೊರತೆ ಸಂಬಂಧ ಮೈಲಾನ್ ಕಂಪನಿಗೆ ಭೇಟಿ ನೀಡಲು ಒಮ್ಮೆ ನಗರಕ್ಕೆ ಬಂದು ಹೋಗಿದ್ದಾರೆ.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಆಮ್ಲಜನಕ ಕೊರತೆ ನೀಗಿಸುವ ಸಂಬಂಧ ಕೇಂದ್ರದ ಜತೆ ಪತ್ರ ವ್ಯವಹಾರ ಮಾಡಿದ್ದಾರೆ. ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ. ಮೋಹನ್, 'ಸೇನೆಯನ್ನು ಬಳಸಿಕೊಂಡು ದೆಹಲಿ ಮಾದರಿಯಲ್ಲಿ ಬೆಂಗಳೂರಿನಲ್ಲೂ ಆಸ್ಪತ್ರೆಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಿ' ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಮನವಿ ಮಾಡಿದ್ದಾರೆ.

'ಕಲ್ಯಾಣ' ಮರೆತ ಪ್ರತಿನಿಧಿಗಳು

ಒಂದನೇ ಪುಟದಿಂದ

ಬೀದರ್ ಸಂಸದ ಭಗವಂತ ಖೂಬಾ ಪಿಪಿಇ ಕಿಟ್ ಧರಿಸಿ ಆಸ್ಪತ್ರೆಗಳಿಗೆ ಭೇಟಿ ನೀಡಿ ವ್ಯವಸ್ಥೆ ಪರಿಶೀಲಿಸಿದ್ದು, ಸೋಂಕಿತರ ಆರೋಗ್ಯ ವಿಚಾರಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಪ್ರಭು ಚವಾಣ್ ಕೋವಿಡ್ ನಿಯಂತ್ರಣ ಸಂಬಂಧ ಜನಪ್ರತಿನಿಧಿಗಳ ಸಭೆ ನಡೆಸಿದ್ದಾರೆ. ಹುಮನಾಬಾದ್ ಶಾಸಕ ರಾಜಶೇಖರ ಪಾಟೀಲ, ಬೀದರ್‌ನ ಶಾಸಕರಾದ ರಹೀಂ ಖಾನ್, ಶಾಸಕ ಬಂಡೆಪ್ಪ ಕಾಶೆಂಪೂರ ಸಭೆಗಳಿಗಷ್ಟೇ ಸೀಮಿತರಾಗಿದ್ದಾರೆ.

ವಿಧಾನಪರಿಷತ್ ಸದಸ್ಯರಾದ ವಿಜಯಸಿಂಗ್, ಅರವಿಂದಕುಮಾರ ಅರಳಿ ಕೋವಿಡ್ ಸೋಂಕಿಗೆ ಚಿಕಿತ್ಸೆ, ವಿಶ್ರಾಂತಿ ಪಡೆಯುತ್ತಿದ್ದಾರೆ. ಭಾಲ್ಕಿ ಶಾಸಕ ಈಶ್ವರ ಖಂಡ್ರೆ ಐಸೊಲೇಶನ್‌ನಲ್ಲಿ ಇದ್ದಾರೆ. ಯಾದಗಿರಿ ಶಾಸಕ ವೆಂಕಟರೆಡ್ಡಿ ಮುದ್ನಾಳ ಕ್ಷೇತ್ರದಲ್ಲೇ ಇದ್ದು, ಅಧಿಕಾರಿಗಳ ಸಭೆ ನಡೆಸಿದ್ದಾರೆ. ಶಹಾಪುರದ ಶಾಸಕ ಶರಣಬಸಪ್ಪ ದರ್ಶನಾಪುರ ಅವರಿಗೆ ಎರಡು ತಿಂಗಳ ಹಿಂದೆ ಕೋವಿಡ್ ದೃಢಪಟ್ಟಿತ್ತು. ಗುಣಮುಖರಾದ ನಂತರ ವಿಶ್ರಾಂತಿಯಲ್ಲಿದ್ದು, ತಿಂಗಳ ಅವಧಿಯಲ್ಲಿ ಅಧಿಕಾರಿಗಳ ಸಭೆಯನ್ನೂ ನಡೆಸಿಲ್ಲ.

ಗುರುಮಠಕಲ್ ಶಾಸಕ ನಾಗನಗೌಡ ಕಂದಕೂರ ಸಕ್ರಿಯರಾಗಿಲ್ಲ. ಅವರ ಪುತ್ರ ಜನರಿಗೆ ನೆರವಾಗುತ್ತಿದ್ದಾರೆ. ಸುರಪುರ ಶಾಸಕ ನರಸಿಂಹ ನಾಯಕ (ರಾಜೂಗೌಡ) ಅವರಿಗೆ ಕೋವಿಡ್ ತಗುಲಿದ್ದು, ಹೋಂ ಕ್ವಾರಂಟೈನ್‌ನಲ್ಲಿದ್ದಾರೆ.

ಕೊಪ್ಪಳ ಸಂಸದ ಸಂಗಣ್ಣ ಕರಡಿ, ಶಾಸಕರಾದ ಹಾಲಪ್ಪ ಆಚಾರ, ಪರಣ್ಣ ಮುನವಳ್ಳಿ, ಕೆ.ರಾಘವೇಂದ್ರ ಹಿಟ್ನಾಳ, ಬಸವರಾಜ ದಡೇಸಗೂರ್ ಸುಮ್ಮನಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ಪಾಟೀಲ ಗುರುವಾರ ನಡೆಸಿದ ಸಭೆಯಲ್ಲಿ ಮಾತ್ರ ಇವರೆಲ್ಲ ಪ್ರತ್ಯಕ್ಷರಾದರು. ಕುಷ್ಟಗಿ ಶಾಸಕ ಅಮರೇಗೌಡ ಪಾಟೀಲ ಬಯ್ಯಾಪುರ ಅಧಿಕಾರಿಗಳೊಂದಿಗೆ ಸಭೆ ನಡೆಸಿದ್ದಾರೆ.

ಪದಬಂಧ 4584

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮಾತಿನ ಅಟ್ಟಹಾಸ (5)
3. ವಿಧಿಯನ್ನು ಬರೆಯುವವನು (3)
5. ಬೇಡತಿ ಇಲ್ಲಿದ್ದಾಳೆ (4)
8. ವ್ಯಾಕರಣದಲ್ಲಿ ಒಂದಕ್ಕಿಂತ ಹೆಚ್ಚು ಸಂಖ್ಯೆ ಸೂಚಿಸುವಪದ (5)
11. ಬೇರೆಯವರ ಅಧೀನದಲ್ಲಿರುವಿಕೆ (4)
13. ಸ್ವಚ್ಛಂದತೆಯನ್ನು ಹೀಗೆನ್ನಿ (3)
14. ಬಹಳ ಆಸೆ ಪಡುವವನು (5)

ಮೇಲಿಂದ ಕೆಳಕ್ಕೆ

1. ನಾಲ್ಕು ಆಶ್ರಮದಲ್ಲಿ ಮೂರನೆಯದು (4)
2. ಬರದಲ್ಲಿರುವ ಅಸಂಸ್ಕೃತ! (3)
4. ನಿಷ್ಣಾತನಿಲ್ಲಿ ತಿರುಗಿದ್ದಾನಲ್ಲಾ? (4)
6. ನಯವಾಗಿ ಹೊಳೆಯುತ್ತಿರುವ ಕಣ್ಣು (3)
7. ಬವಣೆ ಪಟ್ಟು ಬೆಳೆಸಿದ ಧಾನ್ಯ (3)
8. ಈತ ದುಡ್ಡಿಲ್ಲದವನು (3)
9. ನಡುವೆ ಪತ್ರವಿರುವುದಕ್ಕೇ ಈ ತೊಂದರೆ! (4)
10. ಅನಿರೀಕ್ಷಿತ ಘಟನೆ (4)
12. ವರನು ತೋರಿಸಿದ ವ್ಯಾಯಾಮದ ಪಟ್ಟು (3)

1			2		■	3		4
	■	■		■	■	■	■	
	■	■		■	5	6		
	■	■	■	7	■		■	
■	■	8					■	■
9	■		■		■	■	■	10
11				■	12	■	■	
	■	■	■	■		■	■	
13			■	14				

4583ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವೈಜಯಂತ 3.ಹಕ್ಕುದಾರ 5.ಲಕ್ಷಣ 6.ವ್ಯಸನ 8.ಗುಲಾಮ 9.ಪಿಪಾ 10.ಕರು 11.ಹುಯಿಲು 12.ನಮೂನೆ 14.ಜ್ಞಾಪಿಸು 16.ರಿಯಾಯತಿ 17.ತಲೆಗಾಪು

ಮೇಲಿಂದ ಕೆಳಕ್ಕೆ: 1.ವೈಧವ್ಯ 2.ತಿಲ 3.ಹಣ 4.ರಸೂಮ 7.ನಗೆಪಾಟಲು 8.ಗುಣಕಥನ 11.ಹುತ್ತರಿ 13.ನೆನಪು 14.ಜ್ಞಾತಿ 15.ಸುತ

ಸುಡೊಕು 4970

						6		2
		5	2					
2		4		1			9	
	5		7			8		
				8		5		9
8		6		9				
6		2		5		9		7
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4969 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ಸಂಕ್ಷಿಪ್ತ ಸುದ್ದಿ

ಪೊಲೀಸರಿಗೆ ಖಾಕಿ ಮಾಸ್ಕ್

ಮಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಪೊಲೀಸ್ ಸಿಬ್ಬಂದಿಯ ಕುಟುಂಬಸ್ಥರು, ಕರ್ತವ್ಯಕ್ಕೆ ತೆರಳುವ ಪೊಲೀಸರನ್ನು ಸಾಂಕ್ರಾಮಿಕ ಕಾಯಿಲೆಯಿಂದ ರಕ್ಷಿಸಲು ಮಾಸ್ಕ್ ಸಿದ್ಧಪಡಿಸಿದ್ದಾರೆ. ಸಮವಸ್ತ್ರಕ್ಕೆ ಹೊಂದಿಕೆಯಾಗುವ ಖಾಕಿ ಬಟ್ಟೆಯಿಂದ ತಯಾರಿಸಿದ ಈ ಮಾಸ್ಕ್ ಅನ್ನು ಉಚಿತವಾಗಿ ಪೊಲೀಸರಿಗೆ ನೀಡುತ್ತಿದ್ದಾರೆ.

ಪೊಲೀಸ್ ಲೇನ್ ಪಾಂಡೇಶ್ವರದ ಜ್ಞಾನೋದಯ ಮಹಿಳಾ ಮಂಡಳಿಯ ಅಧ್ಯಕ್ಷೆ ಭಾಗೀರಥಿ ಹಾಗೂ ಏಳು ಸದಸ್ಯೆಯರು, ಒಂದು ವಾರದಲ್ಲಿ 2,500 ಮಾಸ್ಕ್ ತಯಾರಿಸಿದ್ದಾರೆ. ಗೃಹಿಣಿಯರಾಗಿರುವ ಇವರು ಬಿಡುವಿನ ವೇಳೆಯಲ್ಲಿ ಹೊಲಿಗೆ, ಕಸೂತಿ ಮಾಡುತ್ತಿದ್ದರು. ಈಗ ಕೋವಿಡ್ ಹೆಚ್ಚುತ್ತಿರುವ ಕಾರಣಕ್ಕೆ ಕೊರೊನಾ ವಾರಿಯರ್ಸ್‌ಗಳ ಸುರಕ್ಷತೆ ಬಗ್ಗೆ ಕಾಳಜಿ ತೋರಿದ್ದಾರೆ.

ಇದನ್ನು ಗಮನಿಸಿದ ನಗರ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಅವರು, ಖಾಕಿ ಬಟ್ಟೆ, ಅಗತ್ಯ ಸಾಮಗ್ರಿಗಳನ್ನು ಪೂರೈಸುವುದಾಗಿ ಭರವಸೆ ನೀಡಿದ್ದು, 10 ಸಾವಿರ ಮಾಸ್ಕ್ ಸಿದ್ಧಪಡಿಸಿಕೊಡುವಂತೆ ತಿಳಿಸಿದ್ದಾರೆ.

ಅಕ್ಕಿ ಕಡಿತ: ಪತ್ರ ಚಳವಳಿ ನಾಳೆ

ಮೈಸೂರು: 'ರಾಜ್ಯ ಸರ್ಕಾರ, ಬಿಪಿಎಲ್ ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳು ನೀಡುತ್ತಿದ್ದ ಪಡಿತರದಲ್ಲಿ ಅಕ್ಕಿ ಕಡಿತಗೊಳಿಸಿರುವುದನ್ನು ಖಂಡಿಸಿ, ಮೇ 3ರಂದು ರಾಜ್ಯದೆಲ್ಲೆಡೆ ಕಾಂಗ್ರೆಸ್‌ನಿಂದ ಪತ್ರ ಚಳವಳಿ ನಡೆಸಲಾಗುವುದು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಶನಿವಾರ ತಿಳಿಸಿದರು.

'ಅಕ್ಕಿಯ ಬದಲಿಗೆ ರಾಗಿ, ಜೋಳ ಕೊಡುವುದಾಗಿ ಸಬೂಬು ಹೇಳುವುದು ಬೇಡ. ಅದನ್ನು ಹೆಚ್ಚುವರಿಯಾಗಿ ಕೊಡಲಿ. ಅದರಿಂದ ಹೆಚ್ಚಿನ ಭಾರವೇನೂ ಆಗಲ್ಲ' ಎಂದರು.

ಮಹಿಳೆಗೆ ಮಂಗನ ಕಾಯಿಲೆ

ಸಿದ್ದಾಪುರ : ತಾಲ್ಲೂಕಿನ ಹೆಜ್ಜನಿಯ ಮಹಿಳೆಯೊಬ್ಬರಿಗೆ ಮಂಗನಕಾಯಿಲೆ- (ಕೆಎಫ್‌ಡಿ) ದೃಢಪಟ್ಟಿದೆ. ಸದ್ಯ ಅವರು ಮನೆಯಲ್ಲಿಯೇ ಆರೈಕೆ ಪಡೆಯುತ್ತಿದ್ದು, ಆರೋಗ್ಯ ಸ್ಥಿರವಾಗಿದೆ. ಇದು ತಾಲ್ಲೂಕಿನ 5ನೇ ಕೆಎಫ್‌ಡಿ ಪ್ರಕರಣವಾಗಿದೆ ಎಂದು ತಹಶೀಲ್ದಾರ್ ಪ್ರಸಾದ್ ಎಸ್.ಎ. ತಿಳಿಸಿದ್ದಾರೆ.

ಅಮೃತ ದೇಸಾಯಿಗೆ ಕೋವಿಡ್ ದೃಢ

ಧಾರವಾಡ: ಶಾಸಕ ಅಮೃತ ದೇಸಾಯಿ ಅವರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಅವರು ಹೋಂ ಐಸೊಲೇಷನ್‌ನಲ್ಲಿದ್ದಾರೆ. ಈ ಕುರಿತು ಅವರು ಟ್ವೀಟ್ ಮಾಡಿದ್ದಾರೆ.

ಕೋವಿಡ್: ರಾಜು ಧೂಳಿ ನಿಧನ

ಹಳಿಯಾಳ: ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ರಾಜು ಬಾಬುರಾವ ಧೂಳಿ (57) ಕೋವಿಡ್‌ನಿಂದ ಶನಿವಾರ ಮಧ್ಯಾಹ್ನ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ, ಸಹೋದರರು ಮತ್ತು ಸಹೋದರಿಯರು ಇದ್ದಾರೆ. 2013ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಹಳಿಯಾಳದಿಂದ ಸ್ಪರ್ಧಿಸಿದ್ದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೊರತೆ: ಬೇಡಿಕೆ ತಕ್ಕಂತೆ ಪೂರೈಕೆ ಇಲ್ಲ

ಬಂದ ಒಂದು ದಿನದಲ್ಲೇ ಲಸಿಕೆ ಖಾಲಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಲಸಿಕೆ ಕೊರತೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಆಯಾ ದಿನ ಬಂದ ಲಸಿಕೆಯು ಅದೇ ದಿನವೇ ಖಾಲಿಯಾಗುತ್ತಿವೆ. ಬೇಡಿಕೆ ಹೆಚ್ಚಿದಷ್ಟು ಲಸಿಕೆ ಪೂರೈಕೆಯಾಗುತ್ತಿಲ್ಲ ಎನ್ನುವುದು ನಾಗರಿಕರ ದೂರು.

ದಾವಣಗೆರೆ ಜಿಲ್ಲೆಗೆ ಗುರುವಾರ ಸಂಜೆ 8,000 ಕೋವಿಡ್ ಲಸಿಕೆ ಬಂದಿತ್ತು. ಶುಕ್ರವಾರವೇ 7,000 ಲಸಿಕೆ ಖಾಲಿಯಾಗಿತ್ತು. ಬಾಕಿ ಉಳಿದಿದ್ದ ಲಸಿಕೆ ಶನಿವಾರ ಬೆಳಿಗ್ಗೆಯೇ ಖಾಲಿಯಾಗಿವೆ. ದಿನಕ್ಕೆ 13 ಸಾವಿರ ಲಸಿಕೆ ಬೇಡಿಕೆ ಇದೆ. ಆದರೆ, ಮೂರು-ನಾಲ್ಕು ದಿನಗಳಿಗೆ ಒಮ್ಮೆ 5 ಸಾವಿರದಿಂದ 8 ಸಾವಿರದಷ್ಟು ಲಸಿಕೆ ಪೂರೈಕೆಯಾಗುತ್ತಿದೆ.

ಶಿವಮೊಗ್ಗ ಜಿಲ್ಲೆಯ ಹಲವು ಆರೋಗ್ಯ ಕೇಂದ್ರಗಳಲ್ಲೂ ಲಸಿಕೆ ಖಾಲಿಯಾಗಿದೆ ಎಂಬ ನಾಮಫಲಕ ಹಾಕಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 100 ಲಸಿಕೆ ಹಂಚಿಕೆಯಾಗುತ್ತಿದ್ದು, ಈಗ 200ಕ್ಕೂ ಹೆಚ್ಚು ಜನ ಲಸಿಕೆ ಪಡೆಯಲು ಬರುತ್ತಿರುವುದರಿಂದ ಲಸಿಕೆ ಪೂರೈಕೆಯಾದ ದಿನವೇ ಖಾಲಿಯಾಗುತ್ತಿವೆ.

ಚಿತ್ರದುರ್ಗ ಜಿಲ್ಲೆಗೆ ಗುರುವಾರ ರಾತ್ರಿ 8,000 ಡೋಸ್ ಪೂರೈಕೆಯಾಗಿತ್ತು. ಬಾಕಿ ಉಳಿದಿದ್ದ 1,580 ಡೋಸ್‌ಗಳು ಶನಿವಾರ ಬೆಳಿಗ್ಗೆಯೇ ಖಾಲಿಯಾಗಿವೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ತಪ್ಪದ ಜನರ ಪರದಾಟ

ವಿಜಯಪುರ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ, ಗದಗ ಜಿಲ್ಲೆಗಳಲ್ಲಿ ಲಸಿಕೆಯ ಕೊರತೆ ತೀವ್ರವಾಗಿದೆ.

ನಿತ್ಯ ಹಾಕಿಕೊಂಡಿರುವ ಗುರಿಯ ಅರ್ಧದಷ್ಟು ಲಸಿಕೆ ಜಿಲ್ಲೆಗಳಲ್ಲಿಲ್ಲ. ಆಯಾ ದಿನ ಬಂದ ಲಸಿಕೆಯು ಅದೇ ದಿನವೇ ಖಾಲಿಯಾಗುತ್ತಿವೆ. ಕೆಲವು ಕೇಂದ್ರಗಳಲ್ಲಿ ಜನರನ್ನು ಲಸಿಕೆ ಬಂದ ನಂತರ ಬರುವಂತೆ ವಾಪಸ್ ಕಳುಹಿಸಲಾಗುತ್ತಿದೆ.

ಹಾವೇರಿ ಜಿಲ್ಲೆಯಲ್ಲಿ ನಿತ್ಯ 12,250 ಮಂದಿಗೆ ಲಸಿಕೆ ಹಾಕುವ ಗುರಿ ಹಾಕಿಕೊಳ್ಳಲಾಗಿದೆ. ಆದರೆ, 4,440 ಲಸಿಕೆ ಮಾತ್ರ ಇವೆ. ಬೆಳಗಾವಿ ಜಿಲ್ಲೆಯಲ್ಲಿ 30 ಸಾವಿರ ಗುರಿ ಇದ್ದರೆ, ಕೇವಲ 7 ಸಾವಿರ ಲಸಿಕೆ ಲಭ್ಯವಿವೆ. ಇದೇ ಪರಿಸ್ಥಿತಿ ಬಹುತೇಕ ಜಿಲ್ಲೆಗಳಲ್ಲಿದೆ.

ಲಸಿಕೆ ಇಲ್ಲವೆಂದು ವಾಪಸ್ ಕಳುಹಿಸುತ್ತಿರುವುದರಿಂದ ಕೆಲವು ಕಡೆಗಳಲ್ಲಿ ಜನರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ನಡುವೆ ವಾಗ್ವಾದ ಸಾಮಾನ್ಯವಾಗಿದೆ. ಒಂದೇ ಲಸಿಕೆ ತೆಗೆದುಕೊಂಡವರು, ಎರಡನೇ ಲಸಿಕೆಗಾಗಿ ಪರದಾಡುವಂತಾಗಿವೆ.

ದಕ್ಷಿಣ ಕನ್ನಡ: ಹೆಚ್ಚಿದ ಜನರ ಆಸಕ್ತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಸಿಕೆಗೆ ಕೊರತೆ ಇಲ್ಲ. ಆದರೆ, 18 ವರ್ಷ ಮೇಲಿನವರಿಗೆ ಲಸಿಕೆ ಈಗಲೇ ಆರಂಭವಾಗಿಲ್ಲ. ನಿಗದಿತ ಪ್ರಮಾಣದಲ್ಲಿ ಲಸಿಕೆಗಳು ಜಿಲ್ಲೆಗಳಿಗೆ ಬರುತ್ತಿವೆ. ಆದರೆ, ಜನರ ಆಸಕ್ತಿ ಹೆಚ್ಚಾಗಿರುವುದರಿಂದ ದಟ್ಟಣೆ ಉಂಟಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3,47,000 ಲಸಿಕೆಗಳು ಬಂದಿದ್ದು, 3,39,297 ಲಸಿಕೆಗಳು ಖರ್ಚಾಗಿವೆ. 7,400 ಲಸಿಕೆಗಳು ಲಭ್ಯವಾಗಿವೆ. ಉಡುಪಿ ಜಿಲ್ಲೆಗೆ ಇದುವರೆಗೂ 2,44,300 ಕೋವಿಡ್ ಲಸಿಕೆಗಳು ಬಂದಿದ್ದು, 2,41,000 ಲಸಿಕೆ ಖರ್ಚಾಗಿದೆ. ಸದ್ಯ 3,300 ಲಸಿಕೆಗಳು ಮಾತ್ರ ಲಭ್ಯವಿದೆ.

ಚಿಕ್ಕಮಗಳೂರು ಜಿಲ್ಲೆಗೆ 12 ದಿನಗಳ ಹಿಂದೆ 18 ಸಾವಿರ ಲಸಿಕೆಗಳು ಪೂರೈಕೆಯಾಗಿದ್ದು, ಸದ್ಯ ಎರಡು ಸಾವಿರ ಲಸಿಕೆಗಳು ಉಳಿದಿವೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಉಮೇಶ್ ತಿಳಿಸಿದ್ದಾರೆ.

ಕಲಬುರ್ಗಿ ಜಿಲ್ಲೆಗೆ ನಿತ್ಯ 20 ಸಾವಿರ ಡೋಸ್ ಲಸಿಕೆ ಅಗತ್ಯವಿದೆ. 'ಶುಕ್ರವಾರ 10 ಸಾವಿರ ಡೋಸ್ ಲಸಿಕೆ ಬಂದಿತ್ತು. ಅದು ಶನಿವಾರದ ವೇಳೆಗೆ ಖಾಲಿಯಾಗಿದೆ' ಎಂದು ಜಿಲ್ಲಾ ಆರ್‌ಸಿಎಚ್‌ಒ ಅಧಿಕಾರಿ ಡಾ.ಪ್ರಭುಲಿಂಗ ಮಾನಕರ ತಿಳಿಸಿದರು.

ಯಾದಗಿರಿ ಜಿಲ್ಲೆಗೆ ಶುಕ್ರವಾರ 5,000 ಕೋವಿಶೀಲ್ಡ್ ಲಸಿಕೆ ಬಂದಿದ್ದು, ಕೊರತೆ ಇಲ್ಲ. ರಾಯಚೂರು ಜಿಲ್ಲೆಯಲ್ಲಿ ಕೋವಿಶೀಲ್ಡ್ ಕೊರತೆ ಇಲ್ಲ. ಕೋವ್ಯಾಕ್ಸಿನ್ ಪೂರೈಕೆ ವಾರದಿಂದ ಸ್ಥಗಿತವಾಗಿದೆ. ಮೊದಲ ಸಲ ಕೋವ್ಯಾಕ್ಸಿನ್ ಪಡೆದವರು, ಎರಡನೇ ಲಸಿಕೆಗೆ ಕಾಯುತ್ತಿದ್ದಾರೆ. ಕೆಲ ಖಾಸಗಿ ಆಸ್ಪತ್ರೆಗಳಲ್ಲಿ ₹ 2 ಸಾವಿರ ದರದಲ್ಲಿ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುತ್ತಿದೆ. ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಕೊರತೆಯಾಗಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಶುಕ್ರವಾರವೇ ಲಸಿಕೆ ಖಾಲಿಯಾಗಿದೆ. ಕೋವ್ಯಾಕ್ಸಿನ್ ಎರಡು ದಿನಗಳ ಹಿಂದೆಯೇ ಖಾಲಿಯಾಗಿದ್ದು, ಶುಕ್ರವಾರ ಸಂಜೆವರೆಗೆ ಕೋವಿಶೀಲ್ಡ್ ಹಾಕಿದ್ದಾರೆ. ಕಳೆದ ವಾರ ಬಂದಿದ್ದ ಎಂಟು ಸಾವಿರ ಡೋಸ್ ಲಸಿಕೆ ಖಾಲಿಯಾಗಿದ್ದು, ವೈದ್ಯರು ಇನ್ನೂ ಎಂಟು ಸಾವಿರ ಡೋಸ್ ಲಸಿಕೆಯ ನಿರೀಕ್ಷೆಯಲ್ಲಿದ್ದಾರೆ.

ಹಾಸನ ಜಿಲ್ಲೆಯಲ್ಲಿ ಸದ್ಯಕ್ಕೆ 200 ಡೋಸ್ ಕೋವ್ಯಾಕ್ಸಿನ್ ಹಾಗೂ 6,000 ಡೋಸ್ ಕೋವಿಶೀಲ್ಡ್ ಲಸಿಕೆ ಲಭ್ಯವಿದೆ.

ಕೊಡಗು ಜಿಲ್ಲೆಯಲ್ಲಿ 700 ಡೋಸ್ ಕೋವ್ಯಾಕ್ಸಿನ್ ಹಾಗೂ 3,400 ಡೋಸ್ ಕೋವಿಶೀಲ್ಡ್ ಸೇರಿದಂತೆ ಒಟ್ಟು 4,100 ಡೋಸ್ ದಾಸ್ತಾನಿದೆ ಎಂದು ಡಿಎಚ್‌ಒ ಮೋಹನ್ ತಿಳಿಸಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ 7,000 ಡೋಸ್ ಲಸಿಕೆ ಲಭ್ಯವಿದೆ.

ಮೈಸೂರು ಜಿಲ್ಲೆಯಲ್ಲಿ ಸದ್ಯಕ್ಕೆ ಲಸಿಕೆ ಕೊರತೆ ಇಲ್ಲ. ಇನ್ನೂ ಮೂರು ದಿನಗಳಿಗಾಗುವಷ್ಟು ಕೋವಿಡ್ ಲಸಿಕೆ ಸಂಗ್ರಹವಿದೆ. ಕೋವಿಶೀಲ್ಡ್ 30 ಸಾವಿರ ಡೋಸ್, ಕೋವ್ಯಾಕ್ಸಿನ್ 7,500 ಡೋಸ್ ಇದೆ ಎಂಬುದಾಗಿ ಜಿಲ್ಲಾ ಕೋವಿಡ್ ಲಸಿಕೆ ಅಧಿಕಾರಿ ಡಾ.ಎಲ್. ರವಿ ತಿಳಿಸಿದ್ದಾರೆ.

ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಲಸಿಕೆ ಕೊರತೆ ಕಾಣಿಸಿಕೊಂಡಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಸದ್ಯ 15,390 ಡೋಸ್ ಲಸಿಕೆ ಲಭ್ಯವಿದೆ. ರಾಮನಗರ ಜಿಲ್ಲೆಯಲ್ಲಿ ಶನಿವಾರದ ಅಂತ್ಯಕ್ಕೆ 3950 ಡೋಸೆಜ್ ಲಸಿಕೆ ಮಾತ್ರವೇ ಉಳಿದಿದೆ. ಇದು ಭಾನುವಾರಕ್ಕೆ ಮಾತ್ರ ಸಾಕಾಗಲಿದೆ.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಕರ್ನಾಟಕ- ಉಪಚುನಾವಣೆ
ಫಲಿತಾಂಶ: ಯಾರ ಗೆಲುವು-ಯಾರತ್ತ ಒಲವು
ಪಾಲ್ಗೊಳ್ಳುವವರು

ಜಿ.ಎನ್. ನಾಗರಾಜ್, ಸಿಪಿಎಂ ನಾಯಕ

ಎ. ನಾರಾಯಣ, ಪ್ರಾಧ್ಯಾಪಕ, ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯ

ಅಶ್ವತ್ಥನಾರಾಯಣಗೌಡ, ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ

ಇಂದು ಮಧ್ಯಾಹ್ನ 3.30ರಿಂದ 4.30
fb.com/prajavani.net

ಮನೆ ಆರೈಕೆಗೆ ಹಲವು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕಿತರು 'ರೆಮ್‌ಡಿಸಿವಿರ್' ಇಂಜೆಕ್ಷನ್ ಅಥವಾ ಇನ್ನಾವುದೇ ಚಿಕಿತ್ಸೆಯನ್ನು ಆಸ್ಪತ್ರೆಗಳಲ್ಲಿನ ವೃತ್ತಿಪರ ವೈದ್ಯರಿಂದಲೇ ಪಡೆದುಕೊಳ್ಳಬೇಕು. 'ರೆಮ್‌ಡಿಸಿವಿರ್' ಔಷಧವನ್ನು ಮನೆಯಲ್ಲಿ ಸಂಗ್ರಹಿಸಿಟ್ಟುಕೊಳ್ಳಬಾರದು' ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಲಕ್ಷಣ ರಹಿತ ಹಾಗೂ ಸೌಮ್ಯ ಲಕ್ಷಣಗಳು ಹೊಂದಿದ್ದು, ಮನೆ ಆರೈಕೆ ಅಥವಾ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಇರುವವರಿಗೆ ಪರಿಷ್ಕೃತ ಮಾರ್ಗಸೂಚಿಯನ್ನು ಇಲಾಖೆ ಬಿಡುಗಡೆ ಮಾಡಿದೆ.



'ಸೋಂಕಿತರು ವೈದ್ಯರು ಸೂಚಿಸುವ ಔಷಧಗಳನ್ನು ಮಾತ್ರ ಸೇವಿಸಬೇಕು. ಆರೋಗ್ಯದಲ್ಲಿ ಏರುಪೇರಾದಲ್ಲಿ ವೈದ್ಯರ ಗಮನಕ್ಕೆ ತಂದು, ಹೆಚ್ಚಿನ ಚಿಕಿತ್ಸೆ ಪಡೆದುಕೊಳ್ಳಬೇಕು' ಎಂದು ತಿಳಿಸಲಾಗಿದೆ.

'ಲಕ್ಷಣಗಳನ್ನು ಆಧರಿಸಿ ಮಾತ್ರೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಐವರ್ಮೆಕ್ಟಿನ್ 12 ಎಂ.ಜಿ., ಎಚ್‌ಸಿಕ್ಯೂ, ಫವಿಪಿರಾವಿರ್, ಇನ್ಹಲೇಷನ್ ಬುಡೆಸೊನೈಡ್, ಝಿಂಕ್ 50ಎಂ.ಜಿ., ವಿಟಮಿನ್ ಸಿ 500ಎಂ.ಜಿ., ಪ್ಯಾರೆಸಿಟಮಾಲ್ 650ಎಂ.ಜಿ., ಸಿಟ್ರಿಜಿನ್ 10ಎಂ.ಜಿ., ಪ್ಯಾಂಟೊಪ್ರಜೋಲ್ 40ಎಂ.ಜಿ. ಹಾಗೂ ಆ್ಯಂಟಿ ಟ್ಯೂಸಿವ್ ಕಾಫ್ ಸಿರಪ್ ಅನ್ನು ಸೋಂಕಿನ ಲಕ್ಷಣ ಹಾಗೂ ವ್ಯಕ್ತಿಯ ಸ್ಥಿತಿಗತಿ ಅನುಸಾರ ನೀಡಬೇಕಾಗುತ್ತದೆ' ಎಂದು ವಿವರಿಸಲಾಗಿದೆ.

ಆರೈಕೆಗೆ ಒಳಗಾದವರಿಗೆ ಸೂಚನೆಗಳು

- ಮನೆ ಆರೈಕೆ ಹಾಗೂ ಕೋವಿಡ್ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಳ್ಳುವವರು ವೈದ್ಯರು ಅಥವಾ ವೈದ್ಯಾಧಿಕಾರಿಗಳು ಬರೆದುಕೊಡುವ ಔಷಧಗಳನ್ನು ಮಾತ್ರ ಸೇವಿಸಬೇಕು.
- ಗರಿಷ್ಠ ಡೋಸ್‌ನ ಮಾತ್ರೆಗಳನ್ನು ಪಡೆದರೂ ಜ್ವರ ಕಡಿಮೆಯಾಗದಿದ್ದಲ್ಲಿ ವೈದ್ಯರ ಜತೆಗೆ ಸಮಾಲೋಚನೆ ನಡೆಸಿ, 650 ಮಿ.ಗ್ರಾಂ ಪ್ಯಾರಸಿಟಮಾಲ್ ಅನ್ನು ದಿನಕ್ಕೆ ನಾಲ್ಕು ಬಾರಿ ಹಾಗೂ ಸ್ಟೆರಾಯ್ಡ್ ಅಲ್ಲದ ಔಷಧವನ್ನು ಪಡೆಯಬೇಕು.
- 7 ದಿನಗಳು ಕಳೆದರೂ ರೋಗ ಲಕ್ಷಣಗಳು ಕಡಿಮೆಯಾಗದಿದ್ದಲ್ಲಿ ವೈದ್ಯರನ್ನು ಸಂಪರ್ಕಿಸಬೇಕು.
- ಬಿಸಿ ನೀರಿನಿಂದ ಬಾಯಿಯನ್ನು ಮುಕ್ಕಳಿಸುವ ಜತೆಗೆ ದಿನಕ್ಕೆ ಎರಡು ಬಾರಿ ಆವಿಯನ್ನು ತೆಗೆದುಕೊಳ್ಳಬೇಕು.
- ಅಧಿಕ ರಕ್ತದೊತ್ತಡ, ಮಧುಮೇಹ ಸೇರಿದಂತೆ ವಿವಿಧ ಕೋವಿಡೇತರ ಸಮಸ್ಯೆಗಳಿಗೆ ತೆಗೆದುಕೊಳ್ಳುತ್ತಿರುವ ಮಾತ್ರೆಗಳನ್ನು ಮುಂದುವರಿಸಬೇಕು.

ಹಾಸಿಗೆ, ಔಷಧ ಲಭ್ಯತೆ: ಫಲಕ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಭ್ಯವಿರುವ ಹಾಸಿಗೆಗಳು ಮತ್ತು ಔಷಧದ ಮಾಹಿತಿಯನ್ನು ಖಾಸಗಿ ಆಸ್ಪತ್ರೆಗಳು ಪ್ರದರ್ಶನ ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು. ಜೊತೆಗೆ, ಸಹಾಯ ಕೇಂದ್ರ ಸೌಲಭ್ಯವನ್ನೂ ಒದಗಿಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಎಲ್ಲ ಜಿಲ್ಲೆಗಳಲ್ಲಿರುವ ಆರೋಗ್ಯ ಸೇವಾ ಕೇಂದ್ರಗಳು ತಕ್ಷಣ ಈ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ತಿಳಿಸಿದ್ದಾರೆ.

ಕೋವಿಡ್ ರೋಗಿಗಳಿಗೆ ಶೇ 50ರಷ್ಟು ಹಾಸಿಗೆಗಳನ್ನು ಖಾಸಗಿ ಆಸ್ಪತ್ರೆಗಳು ಮೀಸಲಿಡಬೇಕು. ಆದರೆ, ಕೆಲವು ಖಾಸಗಿ ಆಸ್ಪತ್ರೆಗಳು ಇನ್ನೂ ಹಾಸಿಗೆ ಮೀಸಲಿರಿಸಿಲ್ಲ. ಹೀಗಾಗಿ, ಬಿಬಿಎಂಪಿಯ ಕೇಂದ್ರೀಕೃತ ಹಂಚಿಕೆ ವ್ಯವಸ್ಥೆ ಮೂಲಕ ಹಾಸಿಗೆ ಹಂಚಿಕೆ ಮಾಡಿದ್ದರೂ ಹಲವು ರೋಗಿಗಳಿಗೆ ಹಾಸಿಗೆ ಸಿಗುತ್ತಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರ ಈ ಆದೇಶ ಹೊರಡಿಸಿದೆ.

'ಕೆಪಿಎಂಇ ಕಾಯ್ದೆಯಡಿ ನೋಂದಾಯಿತ ಎಲ್ಲ ಖಾಸಗಿ ಆಸ್ಪತ್ರೆಗಳು ಆಸ್ಪತ್ರೆಯ ಹೆಸರು, ಒಟ್ಟು ಹಾಸಿಗೆಗಳ ಸಂಖ್ಯೆ, ಕೋವಿಡ್ ರೋಗಿಗಳಿಗೆ ಮೀಸಲಿಟ್ಟ ಒಟ್ಟು (ಶೇ 50) ಹಾಸಿಗೆಗಳ ಮಾಹಿತಿಯನ್ನು ಪ್ರದರ್ಶಿಸಬೇಕು. ಜೊತೆಗೆ, ತಮ್ಮಲ್ಲಿ ಲಭ್ಯವಿರುವ ಎಲ್ಲ ಅವಶ್ಯಕ ಔಷಧಗಳ ಮಾಹಿತಿ ಮತ್ತು ಸಹಾಯ ಕೇಂದ್ರದ ವಿವರವನ್ನೂ ನೀಡಬೇಕು. ಆದೇಶ ಉಲ್ಲಂಘಿಸಿದರೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯ ಕಾರ್ಯದರ್ಶಿ ಎಚ್ಚರಿಕೆ ನೀಡಿದ್ದಾರೆ.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಪ್ರಾದೇಶಿಕ ಪಕ್ಷಗಳು V/S ರಾಷ್ಟ್ರೀಯ ಪಕ್ಷಗಳು
ಸಂವಾದದಲ್ಲಿ ಪಾಲ್ಗೊಳ್ಳುವವರು

ವೈ.ಎಸ್.ವಿ. ದತ್ತಾ, ರಾಜ್ಯ ಜೆಡಿಎಸ್ ಮುಖಂಡ

ಸೈಯದ್ ನಾಸಿರ್ ಹುಸೇನ್, ರಾಜ್ಯಸಭಾ ಸದಸ್ಯ, ಕಾಂಗ್ರೆಸ್



ಕ್ಯಾ.ಗಣೇಶ ಕಾರ್ಣಿಕ್, ಬಿಜೆಪಿ ರಾಜ್ಯ ವಕ್ತಾರ

ಸೋಮವಾರ, 03- 05-2021 ಸಮಯ: ಮಧ್ಯಾಹ್ನ 12ರಿಂದ 1
fb.com/prajavani.net

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಪಂಚರಾಜ್ಯಗಳ ಚುನಾವಣಾ ಫಲಿತಾಂಶ
ವಿಶ್ಲೇಷಣೆ ಮತ್ತು ಸಂವಾದ
ಪಾಲ್ಗೊಳ್ಳುವವರು
ಇಂದು ಬೆಳಿಗ್ಗೆ 11 ರಿಂದ 12



ಡಿ.ಉಮಾಪತಿ, ಹಿರಿಯ ಪತ್ರಕರ್ತರು, ದೆಹಲಿ

ಪಿ.ರಾಮಕೃಷ್ಣ ಉಪಾಧ್ಯಾಯ, ಹಿರಿಯ ಪತ್ರಕರ್ತರು, ಬೆಂಗಳೂರು

ಇಂದು ಸಂಜೆ 5ರಿಂದ 6



ಪ್ರೊ.ಸಂದೀಪ್ ಶಾಸ್ತ್ರಿ, ಉಪಕುಲಪತಿ, ಲೇಕ್ ಸಿಟಿ ಯೂನಿವರ್ಸಿಟಿ, ಭೋಪಾಲ್ ರಾಜಕೀಯ ವಿಶ್ಲೇಷಕರು

ಡಾ.ಪುರುಷೋತ್ತಮ ಬಿಳಿಮಲೆ, ನಿವೃತ್ತ ಪ್ರಾಧ್ಯಾಪಕರು, ಜೆಎನ್‌ಯು, ದೆಹಲಿ

fb.com/prajavani.net

ಕಾಳಸಂತೆಗೆ ಕೋವಿಡ್ ಲಸಿಕೆ?

ಒಂದನೇ ಪುಟದಿಂದ...

'ಹೀಗಾಗಿ, ಲಸಿಕೆ ಹಾಕಿಸಿಕೊಳ್ಳಲು ಬಂದವರು ವಾಪಸ್ ಹೋಗಬೇಕಾಯಿತು' ಎಂದು ತಿಳಿಸಿದ್ದಾರೆ.

ತುಮಕೂರು ಸೇರಿದಂತೆ ಕೆಲವು ಜಿಲ್ಲೆಗಳಿಗೆ ಕೋವಿಶೀಲ್ಡ್ ಲಸಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಪೂರೈಸಲಾಗಿದೆ. ಈ ಮೊದಲು ಕೋವ್ಯಾಕ್ಸಿನ್ ಹೆಚ್ಚು ವಿತರಣೆಯಾಗಿರುವ ಜಿಲ್ಲೆಗಳಿಗೆ ಅದನ್ನೇ ನೀಡಲಾಗಿದೆ. ಕೆಲವು ದಿನಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ಪೂರೈಕೆ ಮಾಡದಿರುವುದರಿಂದ ಈಗಲೇ ಮೊದಲ ಡೋಸ್ ತೆಗೆದುಕೊಂಡವರಿಗೆ ಎರಡನೇ ಡೋಸ್ ನೀಡಲು ಸಾಧ್ಯವಾಗಿಲ್ಲ' ಎಂದರು.

'ಕೇಂದ್ರ ಸರ್ಕಾರದ ಸೂಚನೆಯಂತೆ, 18 ವರ್ಷ ದಾಟಿದವರಿಗೆ ಲಸಿಕೆ ನೀಡುವ ಉದ್ದೇಶದಿಂದ ಕೋವಿಶೀಲ್ಡ್ 2 ಕೋಟಿ ಡೋಸ್ ಪೂರೈಸುವಂತೆ ಉತ್ಪಾದಕ ಕಂಪನಿಗೆ ನಾವು ಕಳೆದ ವಾರವೇ ಹಣ ಪಾವತಿಸಿದ್ದೇವೆ. 3 ಲಕ್ಷ ಡೋಸ್ ಬಂದಿದೆ. ನಮ್ಮ ಸಂಗ್ರಹದಲ್ಲಿದ್ದ ಒಂದು ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆಯನ್ನೂ ಸೇರಿಸಿ, ಒಟ್ಟು 4 ಲಕ್ಷ ಡೋಸ್ ಲಸಿಕೆಯನ್ನು 18 ವರ್ಷ ದಾಟಿದವರಿಗೆ ನೀಡಲು ತೀರ್ಮಾನಿಸಿದ್ದೇವೆ' ಎಂದು ಆರೋಗ್ಯ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ತಿಳಿಸಿದರು.

ಉಪ ಚುನಾವಣೆ ಇಂದು ಫಲಿತಾಂಶ

ಒಂದನೇ ಪುಟದಿಂದ...

ಕೋವಿಡ್-19 ಹಿನ್ನೆಲೆಯಲ್ಲಿ ಕೊಠಡಿಯೊಂದರಲ್ಲಿ ಕೇವಲ 2 ಟೇಬಲ್‌ಗಳಲ್ಲಿ ಮಾತ್ರ ಎಣಿಕೆ ಪ್ರಕ್ರಿಯೆ ನಡೆಯಲಿದೆ. 17 ಕೊಠಡಿಗಳನ್ನು ಬಳಸಲಾಗುತ್ತಿದೆ. ಹೀಗಾಗಿ, ರಾತ್ರಿ 8ರ ಸುಮಾರಿಗೆ ಅಧಿಕೃತ ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ ಎಂದು ಬೆಳಗಾವಿ ಜಿಲ್ಲಾ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಮಸ್ಕಿ ಕ್ಷೇತ್ರದಲ್ಲಿ ಬಿಜೆಪಿಯಿಂದ ಪ್ರತಾಪಗೌಡ ಪಾಟೀಲ ಹಾಗೂ ಕಾಂಗ್ರೆಸ್‌ನಿಂದ ಬಸನಗೌಡ ತುರ್ವಿಹಾಳ ಸೇರಿ ಎಂಟು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಬಸವಕಲ್ಯಾಣ ಕ್ಷೇತ್ರದಲ್ಲಿ ಬಿಜೆಪಿಯಿಂದ ಶರಣು ಸಲಗರ, ಕಾಂಗ್ರೆಸ್‌ನಿಂದ ಮಾಲಾ ಬಿ.ನಾರಾಯಣರಾವ್, ಜೆಡಿಎಸ್‌ನಿಂದ ಸೈಯದ್ ಯಸ್ರಬ್ ಅಲಿ ಖಾದ್ರಿ, ಪಕ್ಷೇತರರಾಗಿ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಸೇರಿದಂತೆ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಚಾಲಕ ಸುಸ್ತಾದ ಕಾರಣ ಆಂಬುಲೆನ್ಸ್ ಚಾಲನೆ

ಶವ ಸಾಗಿಸಿದ ಪಾಲಿಕೆ ಅಧಿಕಾರಿ

• ಕೆ.ಓಂಕಾರ ಮೂರ್ತಿ

ಮೈಸೂರು: ಚಾಲಕನ ಆರೋಗ್ಯ ಹದಗೆಟ್ಟ ಕಾರಣ, ಪಾಲಿಕೆ ಜನನ ಹಾಗೂ ಮರಣ ವಿಭಾಗದ ಸಾಂಖ್ಯಿಕ ಅಧಿಕಾರಿ ಅನಿಲ್ ಕ್ರಿಸ್ಟಿ ಅವರು ತಾವೇ ಆಂಬುಲೆನ್ಸ್ ಚಾಲನೆ ಮಾಡಿಕೊಂಡು, ಶವ ಸಾಗಿಸಿದ್ದಾರೆ.

ಈ ಘಟನೆ ಬುಧವಾರ ನಡೆದಿದ್ದು, ಅಧಿಕಾರಿಯ ಸಮಯೋಚಿತ ಕೆಲಸಕ್ಕೆ ಶ್ಲಾಘನೆ ವ್ಯಕ್ತವಾಗಿದೆ. ಆ ದಿನ ಕೆಲಸ ಮಾಡುತ್ತಿದ್ದ ಆಂಬುಲೆನ್ಸ್ ಚಾಲಕ ರವಿ, ಮಧ್ಯಾಹ್ನದ ವೇಳೆಗೆ ಬಿಸಿಲಿನಿಂದ ಬಳಲಿ ಸುಸ್ತಾಗಿದ್ದಾರೆ. ತಕ್ಷಣಕ್ಕೆ ಯಾರೂ ಚಾಲಕರು ಲಭಿಸಿಲ್ಲ. ಹೀಗಾಗಿ, ಈ ಅಧಿಕಾರಿಯು ಪಿಪಿಇ ಕಿಟ್ ಧರಿಸಿ, ತಾವೇ ಆಂಬುಲೆನ್ಸ್‌ಗೆ ಶವವನ್ನು ಹಾಕಿಕೊಂಡು ಚಿತಾಗಾರಕ್ಕೆ ತೆರಳಿದ್ದಾರೆ. ಅಂದು ಸಂಜೆವರೆಗೆ ನಾಲ್ಕು ಟ್ರಿಪ್‌ಗಳಲ್ಲಿ ಶವ ಸಾಗಿಸಿದ್ದಾರೆ.

'ಅನಾರೋಗ್ಯದಿಂದ ಬಳಲುತ್ತಿದ್ದ ಚಾಲಕ ರವಿ ಅವರನ್ನು ಮನೆಗೆ ಕಳುಹಿಸಿದೆ. ಅಂದು ಕೆ.ಆರ್.ಆಸ್ಪತ್ರೆಯಲ್ಲಿ ಹೆಚ್ಚು ಮೃತ ದೇಹಗಳು ಇದ್ದವು.

ಅಂದು, ಮೃತರ ಕುಟುಂಬದವರು ದೂರದಿಂದ ಬಂದು ಕಾಯುತ್ತಿದ್ದರು. ನಾನು ಶವ ಸಾಗಿಸದಿದ್ದರೆ ಅವರೆಲ್ಲ ಮತ್ತೊಂದು ದಿನ ಕಾಯಬೇಕಾಗುತ್ತಿತ್ತು

ಅನಿಲ್ ಕ್ರಿಸ್ಟಿ, ಪಾಲಿಕೆ ಸಾಂಖ್ಯಿಕ ಅಧಿಕಾರಿ

ಹೊರಗೆ, ಮೃತರ ಕುಟುಂಬದವರು ಕೂಡ ಕಾಯುತ್ತಿದ್ದರು. ಹೀಗಾಗಿ, ಈ ಕೆಲಸಕ್ಕೆ ಮುಂದಾದೆ' ಎಂದು ಅನಿಲ್ ಕ್ರಿಸ್ಟಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಕೋವಿಡ್ ಮೊದಲ ಅಲೆ ಸಂದರ್ಭದಿಂದಲೂ ಅವರು, ಪಾಲಿಕೆಯ ಕೋವಿಡ್ ಶವ ಸಂಸ್ಕಾರದ ನೋಡೆಲ್ ಅಧಿಕಾರಿಯಾಗಿ ಕರ್ತವ್ಯ ನಿಭಾಯಿಸುತ್ತಿದ್ದಾರೆ. ಅವರ ಸಾರಥ್ಯದಲ್ಲಿ ಇದುವರೆಗೆ 1,221 ಸೋಂಕಿತರ ಶವಗಳನ್ನು ಇಲ್ಲಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಸುಡಲಾಗಿದೆ.

'ಶವಾಗಾರದ ಕಾವಲುಗಾರರು, ಶವ ಸುಡುವವರು ಹಾಗೂ ಆಂಬುಲೆನ್ಸ್‌ನ ಎಲ್ಲಾ ಚಾಲಕರು ವರ್ಷದಿಂದ ಸಾಕಷ್ಟು ಶ್ರಮ ಹಾಕಿ ಕೆಲಸ ಮಾಡುತ್ತಿದ್ದಾರೆ' ಎಂದು ಕ್ರಿಸ್ಟಿ ಹೇಳಿದರು.

ಕೋವಿಡ್ ಸೋಂಕಿತರ ಶವ ಸಾಗಿಸುವ ಆಂಬುಲೆನ್ಸ್ ಚಾಲಕ ಆಯೂಬ್ ಅಹ್ಮದ್ ಹಾಗೂ ಚಿತಾಗಾರದ ಇತರ ನೌಕರರು, ಅಧಿಕಾರಿಯ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ನಾಲ್ಕು ಟ್ರಿಪ್‌ಗಳಲ್ಲಿ ಆಂಬುಲೆನ್ಸ್ ಚಾಲನೆ
- ಕೆ.ಆರ್.ಆಸ್ಪತ್ರೆಯಿಂದ ಚಿತಾಗಾರಕ್ಕೆ
- ಕ್ರಿಸ್ಟಿ ನೇತೃತ್ವದಲ್ಲಿ 1,221 ಸೋಂಕಿತರ ಶವ ಸಂಸ್ಕಾರ

ಸಿಡಿಲು ಬಡಿದು ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಶನಿವಾರ ಮಳೆಯಾಗಿದ್ದು, ಸಿಡಿಲು ಬಡಿದು ನಾಲ್ವರು ಸಾವಿಗೀಡಾಗಿದ್ದಾರೆ.

ಸಿಡಿಲು ಬಡಿದು ಕಲಬುರ್ಗಿ ಜಿಲ್ಲೆಯಲ್ಲಿ ಒಬ್ಬ ವ್ಯಕ್ತಿ ಮತ್ತು ಬೀದರ್ ಜಿಲ್ಲೆಯಲ್ಲಿ ಮಹಿಳೆ ಮೃತಪಟ್ಟಿದ್ದಾರೆ.

ಅಫಜಲಪುರ ತಾಲ್ಲೂಕಿನ ಬಡದಾಳ ಗ್ರಾಮದ ವ್ಯವಸಾಯ ಸಹಕಾರ ಸಂಘದ ನಿರ್ದೇಶಕ ಭೋಜರಾಜ ಅತನೂರ (54) ಹೊಲದಲ್ಲಿ ಕೃಷಿ ಚಟುವಟಿಕೆ ಮಾಡುವ ವೇಳೆ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ಔರಾದ್ ತಾಲ್ಲೂಕಿನ ಮೆಡಪಳ್ಳಿ ಗ್ರಾಮದಲ್ಲಿ ಹೊಲದಿಂದ ಮನೆಗೆ ಬರುವಾಗ ಸಿಡಿಲು ಬಡಿದು ಅನಿತಾ ಬಸಯ್ಯ ಸ್ವಾಮಿ (35) ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದ ಹೊಲವೊಂದರಲ್ಲಿ ಶನಿವಾರ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ. ಕುರಿ ಮೇಯಿಸುತ್ತಿದ್ದ ಕೊಡ್ಲಿವಾಡದ ಹನಮಂತ ಕಾರಬಾರಿ (19), ಮಾಡಮಗೇರಿ ಗ್ರಾಮದ ಹೊನ್ನಪ್ಪ ಮಬನೂರ (14) ಮೃತರು. ಎರಡು ಕುರಿಗಳೂ ಮೃತಪಟ್ಟಿವೆ.

ಹಾವೇರಿಯ ಹತ್ತರಗೇರಿ ಓಣಿಯಲ್ಲಿರುವ ಸಾವಳಗಿ ಮಠದ ಸಮೀಪ ಮೂರು ತೆಂಗಿನ ಮರಗಳಿಗೆ ಸಿಡಿಲು ಬಡಿದಿದೆ. ಹುಬ್ಬಳ್ಳಿಯಲ್ಲಿ ಮನೆ ಗೋಡೆ ಕುಸಿದಿದೆ.

ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಹಲವೆಡೆ ಗುಡುಗು ಸಹಿತ ಮಳೆಯಾಗಿದೆ.

ಕೋವಿಡ್: ಸರ್ಕಾರ ಎಡವಿದ್ದೆಲ್ಲಿ?

ಬೆಂಗಳೂರು: ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಏನು ಮಾಡಬೇಕಿದೆ? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಿರುವ ಸುಧಾರಣೆಗಳೇನು? ಎಂಬುದರ ಕುರಿತು ಜನಾಭಿಪ್ರಾಯಕ್ಕೆ 'ಪ್ರಜಾವಾಣಿ' ವೇದಿಕೆ ಕಲ್ಪಿಸಿದೆ. ಇದಕ್ಕೆ ಸ್ಪಂದಿಸಿರುವ ಓದುಗರು ಸಲಹೆ ನೀಡಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಚಳವಳಿ ನೇತಾರರು, ರಾಜಕಾರಣಿಗಳು ಹೊಣೆ

ಕೋವಿಡ್ ಎರಡನೇ ಅಲೆ ಬರುವ ಮುನ್ನ ವೈದ್ಯರು, ವಿಜ್ಞಾನಿಗಳು, ಚಿಂತಕರು ಸಾಕಷ್ಟು ಮುನ್ನೆಚ್ಚರಿಕೆಗಳನ್ನು ಕೊಟ್ಟರು. ಆದರೆ, ಸರ್ಕಾರ ಮಾಡಿದ್ದೇನು? ಗಡ್ಡಕ್ಕೆ ಬೆಂಕಿ ಹತ್ತಿದ ಮೇಲೆ ಬಾವಿ ತೋಡಿದಂತೆ ಆಗಿದೆ. ಸರ್ಕಾರ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಿತ್ತು. ಒಂದಷ್ಟು ಕಠಿಣ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ಧಾರ್ಮಿಕ ಸಮಾವೇಶ, ಚಳವಳಿ, ಜಾತ್ರೆ, ಅದ್ದೂರಿ ಮದುವೆಗಳಿಗೆ ಕಡಿವಾಣ ಹಾಕಬೇಕಿತ್ತು. ಹಳ್ಳಿ-ಹಳ್ಳಿಗಳಿಂದ ಜನರನ್ನು ಸೇರಿಸಿ ಶಕ್ತಿ ತೋರಿಸುವ ಭರಾಟೆಯಲ್ಲಿ ಇಡೀ ಕರುನಾಡನ್ನು ಅಶಾಂತಿ, ಅರಾಜಕತೆಯಲ್ಲಿ ನರಳುವಂತೆ ರಾಜಕಾರಣಿಗಳು ಮಾಡಿದರು. ಚಳವಳಿಯ ನೇತಾರರು, ರಾಜಕಾರಣಿಗಳು, ಧಾರ್ಮಿಕ ಸಮಾವೇಶ ನಡೆಸಿದವರು ಇದರ ನೇರ ಹೊಣೆಗಾರರು.

–**ನಿರ್ಮಲಾ ಶಿವನಗುತ್ತಿ,** ಪ್ರಾಚಾರ್ಯರು ಕೊಟ್ಟೂರು

ಮೈಮರೆತ ಸರ್ಕಾರ

ಲಾಕ್‌ಡೌನ್ ಮುಗಿಸಿ ಅನ್‌ಲಾಕ್ ಮಾಡಿದ ನಂತರ ಸರ್ಕಾರಗಳು ಕೋವಿಡ್ ಬಗ್ಗೆ ಮೈಮರೆತು ಮದುವೆ, ಜಾತ್ರೆ, ಸಮಾರಂಭ, ಚುನಾವಣೆಗಳಿಗೆ ಕಡಿವಾಣ ಹಾಕದೆ ನಿರ್ಲಕ್ಷಿಸಿತು. ವಿರೋಧಪಕ್ಷಗಳು ಕೂಡ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಲಿಲ್ಲ. ಒಂದು ತಂಡ ಈ ವೈರಾಣು ಬಗ್ಗೆ ನಿರಂತರ ಸಂಶೋಧನೆಯಲ್ಲಿ ಇರಬೇಕಿತ್ತು. ತುರ್ತಾಗಿ ಎಲ್ಲಾ ಆಸ್ಪತ್ರೆಗಳನ್ನು ಸರ್ಕಾರದ ನಿಯಂತ್ರಣಕ್ಕೆ ತೆಗೆದುಕೊಂಡು ಚಿಕಿತ್ಸೆ ನೀಡುವ ಪ್ರಯತ್ನ ಮಾಡಬೇಕು.

–**ಅನಿಸ್ ಪಾಷಾ,** ವಕೀಲ, ದಾವಣಗೆರೆ

ಚುನಾವಣೆಯಲ್ಲಿ ಮುಳುಗಿದ ಸರ್ಕಾರ



ಉಪಚುನಾವಣೆಗೂ ಮುನ್ನ ಲಾಕ್‌ಡೌನ್ ಮಾಡಿದ್ದರೆ ಇಷ್ಟೊಂದು ಸಮಸ್ಯೆ ಆಗುತ್ತಿರಲಿಲ್ಲ. ಚುನಾವಣಾ ಪ್ರಚಾರದಲ್ಲಿ ಮುಳುಗಿ ಜನರ ಬಗ್ಗೆ ಸರ್ಕಾರ ಉದಾಸೀನ ಮಾಡಿತು ಎನಿಸುತ್ತಿದೆ. ಈಗ ರಾಜಕೀಯ ಮುಖಂಡರು ಆರೋಪ-ಪ್ರತ್ಯಾರೋಪ ಬಿಟ್ಟು ಜನರಿಗೆ ಆರ್ಥಿಕವಾಗಿ ಸಹಾಯ ಮಾಡಿದರೆ ಜನರ ವಿಶ್ವಾಸ ಪಡೆಯಬಹುದು. ಅದೇ ರೀತಿ ಸಾರ್ವಜನಿಕರು ಕೋವಿಡ್ ನಿಯಮಗಳನ್ನು ಪಾಲಿಸಬೇಕು.

– **ರಾಜೇಶ್ವರಿ ರಾವ್,** ವಿಜಯನಗರ, ಬೆಂಗಳೂರು

ಖಾಸಗಿ ಆಸ್ಪತ್ರೆಗಳಲ್ಲಿ ರಿಯಾಯಿತಿ ಕೊಡಿಸಿ

ಕೋವಿಡ್ ಹೆಚ್ಚಳಕ್ಕೆ ಸರ್ಕಾರವೇ ನೇರ ಹೊಣೆ ಅಲ್ಲ. ನೈತಿಕವಾಗಿ ನಾವು ಸಹ ಹೊಣೆಗಾರರು. ಸೆಪ್ಟೆಂಬರ್ ನಂತರ ಕೋವಿಡ್ ನಿಯಮಗಳನ್ನು ಗಾಳಿಗೆ ತೂರಿದೆವು. ಸರ್ಕಾರ ಕೂಡ ಯಾವುದೇ ಕ್ರಮ ತೆಗೆದುಕೊಳ್ಳದೆ ನಿರ್ಲಕ್ಷ್ಯ ವಹಿಸಿತು. ಖಾಸಗಿ ಆಸ್ಪತ್ರೆಗಳ ಮಾಫಿಯಾ ತಡೆಗಟ್ಟಿ ಜನ ಸಾಮಾನ್ಯರ ಜೀವ ಉಳಿಸುವ ಕಡೆ ಗಮನ ಹರಿಸಬೇಕು. ಆಂಧ್ರ ಪ್ರದೇಶದ ರೀತಿ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಅಲ್ಲದಿದ್ದರೂ ಶೇ 50ರಷ್ಟು ರಿಯಾಯಿತಿ ನೀಡಿ ಮಾನವಿಯತೆಗೆ ಬೆಲೆ ಕೊಡಬೇಕು. ಹಣ ಇಟ್ಟುಕೊಂಡು ಹಣ ಮಾಡುವವರ ವಿರುದ್ದ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು.

–**ಸುಧೀರ್ ಜೈನ್,** ಉಡುಪಿ

ಜೀವ- ಜೀವನ ಎರಡೂ ಮುಖ್ಯ

ಜನರು ಸರ್ಕಾರವನ್ನು ದೂಷಿಸುವ ಮೊದಲು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಪ್ರಯತ್ನಪಡಬೇಕು. ನಿಮ್ಮನ್ನು ನೀವೇ ರಕ್ಷಿಸಿಕೊಳಲಾಗದಿದಲ್ಲಿ, ಕೋಟಿ-ಕೋಟಿ ಜನರನ್ನು ತಡೆಯಲು ಸಾಧ್ಯವಿಲ್ಲ. ಲಾಕ್ ಮಾಡಿದರೆ ಉಳ್ಳವರಿಗೆ ತೊಂದರೆ ಇಲ್ಲ. ಆದರೆ, ಬಡವರು ಜೀವನ ಸಾಗಿಸಲು ಆಗುವುದಿಲ್ಲ. ಸದ್ಯಕ್ಕೆ ಲಸಿಕೆ ಉಚಿತವಾಗಿ ಲಭ್ಯವಿದೆ, ಅದು ದುಬಾರಿ ಆಗುವ ಮುನ್ನ ತೆಗೆದುಕೊಳ್ಳಿ.

–**ಪುಷ್ಪಲತಾ ತಮ್ಮೇಗೌಡ,** ಹೂಟಗಳ್ಳಿ, ಮೈಸೂರು

ಲಸಿಕೆಗೆ ಹೆಚ್ಚು ಶುಲ್ಕ ಪಡೆದರೆ ಕ್ರಮ: ಮುಖ್ಯಮಂತ್ರಿ ಯಡಿಯೂರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಆಸ್ಪತ್ರೆಗಳು ಲಸಿಕೆಗೆ ನಿಗದಿ ಮಾಡಿರುವ ದರದ ಜೊತೆಗೆ ಹೆಚ್ಚುವರಿಯಾಗಿ ₹100 ಸೇವಾ ಶುಲ್ಕ ಪಡೆಯಲು ಅನುಮತಿ ಇದೆ. ಅದಕ್ಕಿಂತಲೂ ಹೆಚ್ಚಿನ ಹಣವನ್ನು ಯಾರೂ ಕೇಳಬಾರದು. ಹಾಗೊಮ್ಮೆ ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವ ವಿಚಾರ ಗಮನಕ್ಕೆ ಬಂದರೆ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಎಚ್ಚರಿಸಿದರು.

18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಶನಿವಾರ ಬೌರಿಂಗ್ ಆಸ್ಪತ್ರೆಯಲ್ಲಿ ಸಾಂಕೇತಿಕವಾಗಿ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.

'ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರುವವರ ವಿರುದ್ಧ 24 ಗಂಟೆಗಳೊಳಗೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಅಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಿದ್ದೇವೆ. ಕೆಲಸದಿಂದಲೂ ವಜಾಗೊಳಿಸಲಾಗುವುದು' ಎಂದು ಹೇಳಿದರು.

'ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟವರು ಒಟ್ಟು 3.26 ಕೋಟಿ ಮಂದಿ ಇದ್ದಾರೆ. ಇವರಿಗೆಲ್ಲ ಉಚಿತವಾಗಿ ಲಸಿಕೆ ನೀಡಲು ರಾಜ್ಯ ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಇದಕ್ಕಾಗಿ ಕೇಂದ್ರದಿಂದ 3 ಲಕ್ಷ ಲಸಿಕೆ ಲಭ್ಯವಾಗಿದೆ. ನಮ್ಮ ಬಳಿ ಹೆಚ್ಚುವರಿಯಾಗಿ 1 ಲಕ್ಷ ಲಸಿಕೆ ಇದ್ದು ಇದನ್ನೂ ಈ ಉದ್ದೇಶಕ್ಕೆ ಬಳಸುತ್ತೇವೆ. 2 ಕೋಟಿ ಲಸಿಕೆ ಖರೀದಿಸಲು ಈಗಾಗಲೇ ಹಣವನ್ನೂ ಪಾವತಿಸಿದ್ದೇವೆ. ರಾಜ್ಯದಲ್ಲಿ ಇದುವರೆಗೆ 96.35 ಲಕ್ಷ ಮಂದಿಗೆ ಲಸಿಕೆ ಕೊಡಲಾಗಿದೆ. ಮುಂದಿನ ದಿನಗಳಲ್ಲಿ ಲಭ್ಯತೆಯ ಆಧಾರದಲ್ಲಿ ಹಂತ ಹಂತವಾಗಿ ಲಸಿಕೆ ವಿತರಣೆ ಮುಂದುವರಿಸಲಾಗುವುದು' ಎಂದರು.

18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಾಂಕೇತಿಕವಾಗಿ ಚಾಲನೆ ನೀಡಿದರು. ಈ ವೇಳೆ ಬೌರಿಂಗ್ ಆಸ್ಪತ್ರೆಯ ವೈದ್ಯೆ ವೀಣಾ ಪರಮ್ಮನವರ್, ಐಟಿ ಕಂಪನಿಯ ಉದ್ಯೋಗಿ ಪೂಜಾಗೆ ಲಸಿಕೆ ಹಾಕಿದರು– ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಮೊಡೆರ್ನಾ ತುರ್ತು ಬಳಕೆಗೆ ಅನುಮೋದನೆ

ಜಿನಿವಾ(ಎಪಿ): ಕೋವಿಡ್–19ಗೆ ಮೊಡೆರ್ನಾ ಲಸಿಕೆಯ ತುರ್ತು ಬಳಕೆಗೆ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಅನುಮೋದನೆ ನೀಡಿದೆ.

ವಿಶ್ವ ಆರೋಗ್ಯ ಸಂಸ್ಥೆ ತುರ್ತು ಬಳಕೆಗೆ ಅನುಮೋದನೆ ನೀಡಿರುವ ಅಸ್ಟ್ರಾಜೆನೆಕಾ, ಫೈಜರ್‌-ಬಯೋಟೆಕ್ ಮತ್ತು ಜಾನ್ಸನ್ ಅಂಡ್ ಜಾನ್ಸನ್ ಲಸಿಕೆಗಳ ಪಟ್ಟಿಗೆ ಅಮೆರಿಕದ ಕಂಪನಿ ತಯಾರಿಸುವ ಎಂಆರ್‌ಎನ್‌ಎ ಕೋವಿಡ್ ಲಸಿಕೆಯು ಸೇರ್ಪಡೆಯಾಗಿದೆ.

ಚೀನಾದ ಸಿನೋಫಾರ್ಮ್ ಮತ್ತು ಸಿನೋವಾಕ್ ಲಸಿಕೆಗಳಿಗೆ ಮುಂದಿನ ದಿನಗಳಲ್ಲಿ ಇದೇ ರೀತಿಯ ಅನುಮೋದನೆ ನಿರೀಕ್ಷಿಸಬಹುದಾಗಿದೆ ಎಂದು ಡಬ್ಲ್ಯುಎಚ್‌ಒ ತಿಳಿಸಿದೆ.

ಉತ್ತರ ಪ್ರದೇಶ ಮತ ಎಣಿಕೆ ತಡೆಗೆ 'ಸುಪ್ರೀಂ' ನಕಾರ

ನವದೆಹಲಿ(ಪಿಟಿಐ): ಭಾನುವಾರ (ಮೇ 2) ನಡೆಯಲಿರುವ ಉತ್ತರ ಪ್ರದೇಶದ ಪಂಚಾಯಿತಿ ಚುನಾವಣೆಯ ಮತ ಎಣಿಕೆ ಕಾರ್ಯಕ್ಕೆ ತಡೆ ನೀಡಲು ಸುಪ್ರೀಂಕೋರ್ಟ್ ಶನಿವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎ.ಎಂ. ಖಾನ್ವಿಲ್ಕರ್ ಮತ್ತು ಹೃಷಿಕೇಶ ರಾಯ್ ಅವರನ್ನೊಳಗೊಂಡ ನ್ಯಾಯಪೀಠ, ಈ ಕುರಿತ ಅರ್ಜಿಯ ತುರ್ತು ವಿಚಾರಣೆಯನ್ನು 'ನ್ಯಾಯಾಲಯದ ರಜಾ' ದಿನದಂದು ನಡೆಸಿತು.

ಸ್ಮಿತ್ ಅಮೆರಿಕದ ರಾಯಭಾರಿ

ವಾಷಿಂಗ್ಟನ್ (ಪಿಟಿಐ): ಅಮೆರಿಕವು ತನ್ನ ಉನ್ನತ ರಾಜತಾಂತ್ರಿಕ, ಡೇನಿಯಲ್ ಸ್ಮಿತ್ ಅವರನ್ನು ಮಧ್ಯಂತರ ರಾಯಭಾರಿಯಾಗಿ ಭಾರತಕ್ಕೆ ಕಳುಹಿಸುವುದಾಗಿ ತಿಳಿಸಿದೆ. 'ಸ್ಮಿತ್ ಅವರ ನೇಮಕವು ಭಾರತ ಸರ್ಕಾರದ ಜತೆಗೆ ಅಮೆರಿಕದ ಸಹಭಾಗಿತ್ವ ಮತ್ತು ಬಲವಾದ ಬದ್ಧತೆಯನ್ನು ಪ್ರತಿಪಾದಿಸುತ್ತದೆ' ಎಂದು ಅಮೆರಿಕದ ವಿದೇಶಾಂಗ ಸಚಿವಾಲಯ ಹೇಳಿದೆ.

ಜೋ ಬೈಡನ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದಂದಿನಿಂದ (ಜ.20) ಈ ಹುದ್ದೆ ಖಾಲಿ ಇದೆ. ಈ ನೇಮಕಕ್ಕೆ ಅಮೆರಿಕ ಸೆನೆಟ್‌ನ ಒಪ್ಪಿಗೆ ಪಡೆಯುವುದು ಅಗತ್ಯವಾಗಿದ್ದು, ಈ ಪ್ರಕ್ರಿಯೆಗೆ ಹಲವು ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ. ಭಾರತವು ಮಾನವೀಯ ಬಿಕ್ಕಟ್ಟು ಎದುರಿಸುತ್ತಿರುವ ಸಂದರ್ಭದಲ್ಲಿ ನವದೆಹಲಿಯಲ್ಲಿರುವ ತನ್ನ ರಾಜತಾಂತ್ರಿಕ ಉನ್ನತ ಹುದ್ದೆಯನ್ನು ಖಾಲಿ ಇರಿಸುವುದು ಸರಿಯಲ್ಲ ಎಂಬುದು ಅಮೆರಿಕದ ಭಾವನೆಯಾಗಿದೆ.

ಅಮೆರಿಕವು ಭಾರತಕ್ಕೆ ಬೆಂಬಲವಾಗಿ ನಿಂತಿದೆ. ರಾಯಭಾರಿ ಸ್ಮಿತ್ ಅವರು ಭಾರತದೊಂದಿಗೆ ಜತೆಗೂಡಿ ಕೆಲಸ ಮಾಡಲು ಬದ್ಧರಾಗಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿದೆ.

ದೆಹಲಿಯ ಬಾತ್ರಾ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಕಾಲಕ್ಕೆ ದೊರೆಯದ ಸ್ಪಂದನೆ

ಆಕ್ಸಿಜನ್ ಕೊರತೆ: 12 ಸಾವು

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಆಮ್ಲಜನಕದ ತೀವ್ರ ಕೊರತೆ ಮುಂದುವರಿದಿದ್ದು, ಮತ್ತೊಮ್ಮೆ ಪ್ರಾಣಹಾನಿಗೆ ಕಾರಣವಾಗಿದೆ. ಹಿರಿಯ ವೈದ್ಯರೊಬ್ಬರು ಸೇರಿದಂತೆ 12 ಕೋವಿಡ್ ರೋಗಿಗಳು ಆಮ್ಲಜನಕದ ಕೊರತೆಯಿಂದ ಇಲ್ಲಿನ ಬಾತ್ರಾ ಆಸ್ಪತ್ರೆಯಲ್ಲಿ ಶನಿವಾರ ಸಾವಿಗೀಡಾಗಿದ್ದಾರೆ.

ಕೋವಿಡ್ ಆರೈಕೆಯಲ್ಲಿದ್ದ ಬಾತ್ರಾ ಆಸ್ಪತ್ರೆಯ ಗ್ಯಾಸ್ಟ್ರೊ ಎಂಟರಾಲಜಿ ವಿಭಾಗದ ಮುಖ್ಯಸ್ಥ ಡಾ.ಆರ್.ಕೆ. ಹಿಮ್ಥಾನಿ ಅವರೂ ಮೃತಪಟ್ಟವರಲ್ಲಿ ಸೇರಿದ್ದಾರೆ. ಹಿಮ್ಥಾನಿ ಅವರನ್ನು 15 ದಿನಗಳ ಹಿಂದೆಯಷ್ಟೇ ಆಸ್ಪತ್ರೆಗೆ ದಾಖಲಿಸಿಕೊಳ್ಳಲಾಗಿತ್ತು' ಎಂದು ಬಾತ್ರಾ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಸ್.ಸಿ.ಎಲ್. ಗುಪ್ತಾ ತಿಳಿಸಿದ್ದಾರೆ.

ಐಸಿಯುನಲ್ಲಿ ಸಾವನ್ನಪ್ಪಿದ 12 ಮಂದಿಯಲ್ಲಿ ಆರು ಮಂದಿಗೆ ಹೆಚ್ಚಿನ ಪ್ರಮಾಣದ ಆಮ್ಲಜನಕದ ಅವಶ್ಯಕತೆ ಇತ್ತು ಎಂದೂ ಅವರು ಮಾಹಿತಿ ನೀಡಿದ್ದಾರೆ.

'ಶನಿವಾರ ಬೆಳಿಗ್ಗೆಯೇ ಆಸ್ಪತ್ರೆಯಲ್ಲಿ 2,500 ಲೀಟರ್ ಮಾತ್ರ ಆಮ್ಲಜನಕವಿದೆ. ನಮಗೆ ಹೆಚ್ಚಿನ ಪ್ರಮಾಣದ ಆಮ್ಲಜನಕದ ತುರ್ತು ಅಗತ್ಯವಿದೆ ಎಂದು ನಾವು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದಿದ್ದೆವು. ಆದರೆ, ನಮಗೆ ತಕ್ಷಣಕ್ಕೆ ಯಾವುದೇ ಸ್ಪಂದನೆ ಸಿಗಲಿಲ್ಲ. ಮಧ್ಯಾಹ್ನ 12.30ರ ವೇಳೆಗೆ ನಮ್ಮ ಬಳಿ ಇರುವ ಆಮ್ಲಜನಕ ಸಂಗ್ರಹ ಖಾಲಿಯಾಯಿತು. ಮಧ್ಯಾಹ್ನ 1.35ಕ್ಕೆ ಆಮ್ಲಜನಕ ಟ್ಯಾಂಕರ್ ಬಂದಿತು. ಆದರೆ, ಆ ವೇಳೆಗಾಗಲೇ ಆಸ್ಪತ್ರೆಯಲ್ಲಿದ್ದ 12 ರೋಗಿಗಳು ಸಾವಿಗೀಡಾಗಿದ್ದರು. ಸಕಾಲಕ್ಕೆ ಆಮ್ಲಜನಕ ದೊರೆತಿದ್ದರೆ ಅವರನ್ನು ಉಳಿಸಬಹುದಿತ್ತು' ಎಂದು ಡಾ. ಗುಪ್ತಾ ಹೇಳಿದ್ದಾರೆ.

'ರಾಷ್ಟ್ರ ರಾಜಧಾನಿ ದೆಹಲಿಯಲ್ಲೇ ಪರಿಸ್ಥಿತಿ ಹೀಗಿದೆ ಎಂದರೆ, ಇನ್ನು ದೇಶದ ಇತರ ಕಡೆಗಳಲ್ಲಿ ಪರಿಸ್ಥಿತಿ ಹೇಗಿರಬಹುದು ನೀವೇ ಊಹಿಸಬಹುದು' ಎಂದೂ ಅವರು ಹೇಳಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, 'ಈ ಸುದ್ದಿ ತುಂಬಾ ನೋವಿನಿಂದ ಕೂಡಿದೆ. ಸಮಯಕ್ಕೆ ಸರಿಯಾಗಿ ಆಮ್ಲಜನಕ ನೀಡಿದ್ದರೆ ಅವರ ಜೀವವನ್ನು ಉಳಿಸಬಹುದಿತ್ತು. ದೆಹಲಿಗೆ ಅಗತ್ಯವಿರುವ ಪ್ರಮಾಣದ ಆಮ್ಲಜನಕ ನೀಡಬೇಕು. ದೆಹಲಿಗೆ 976 ಟನ್‌ಗಳಷ್ಟು ಆಮ್ಲಜನಕದ ಅಗತ್ಯವಿದೆ. ಆದರೆ, ನಿನ್ನೆ ಶುಕ್ರವಾರ ಕೇವಲ 312 ಟನ್ ಮಾತ್ರ ಆಮ್ಲಜನಕ ನೀಡಲಾಗಿದೆ. ಜನರು ಸಾಯುತ್ತಿದ್ದಾರೆ. ದೆಹಲಿ ಹೇಗೆ ಉಸಿರಾಡಬೇಕು?' ಎಂದಿದ್ದಾರೆ.

'ಆಕ್ಸಿಜನ್ ಪೂರೈಸಿ ಇಲ್ಲವೇ ನ್ಯಾಯಾಂಗ ನಿಂದನೆ ಎದುರಿಸಿ'

'ರಾಜಧಾನಿ ದೆಹಲಿಗೆ 490 ಮೆಟ್ರಿಕ್ ಟನ್ ಆಮ್ಲಜನಕವನ್ನು ಪೂರೈಸಿ, ಇಲ್ಲವೇ ನ್ಯಾಯಾಂಗ ನಿಂದನೆಯನ್ನು ಎದುರಿಸಿ' ಎಂದು ದೆಹಲಿ ಹೈಕೋರ್ಟ್ ಶನಿವಾರ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿತು

'ಪರಿಸ್ಥಿತಿ ಈಗಾಗಲೇ ಕೈಮೀರಿದೆ. ನೀವು ಈಗ ಎಲ್ಲವನ್ನೂ ವ್ಯವಸ್ಥೆ ಮಾಡಬೇಕು. ನೀವು ಆಮ್ಲಜನಕವನ್ನು ಹಂಚಿಕೆ ಮಾಡಿದ್ದೀರಿ. ಅದಕ್ಕೆ ತಕ್ಕಂತೆ ಪೂರೈಸಬೇಕು' ಎಂದು ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರನ್ನೊಳಗೊಂಡ ನ್ಯಾಯಪೀಠವು ಸೂಚಿಸಿತು.

ಆಮ್ಲಜನಕದ ತೀವ್ರ ಕೊರತೆಯಿಂದಾಗಿ ದೆಹಲಿಯ ಬಾತ್ರಾ ಆಸ್ಪತ್ರೆಯಲ್ಲಿ ಶನಿವಾರ ವೈದ್ಯರೊಬ್ಬರು ಸೇರಿದಂತೆ 12 ಮಂದಿ ಕೋವಿಡ್ ರೋಗಿಗಳು ಪ್ರಾಣ ಕಳೆದುಕೊಂಡ ಬಗ್ಗೆ ದುಃಖ ವ್ಯಕ್ತಪಡಿಸಿದ ನ್ಯಾಯಾಲಯವು, 'ಇನ್ನು ಸಾಕು' ಎಂದು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.

'ದೆಹಲಿಯಲ್ಲಿ ಜನರು ಸಾಯುತ್ತಿರುವುದನ್ನು ನೋಡಿ ನಾವು ಕಣ್ಣುಮುಚ್ಚಿಕೊಂಡಿರುತ್ತೇವೆ' ಎಂದು ನೀವು (ಕೇಂದ್ರ) ಭಾವಿಸಿದ್ದೀರಾ ಎಂದು ಪ್ರಶ್ನಿಸಿದ ನ್ಯಾಯಾಲಯವು, ಆಮ್ಲಜನಕ ಪೂರೈಸಿ ಇಲ್ಲವೇ ನ್ಯಾಯಾಂಗ ನಿಂದನೆಯನ್ನು ಎದುರಿಸಿ' ಎಂದು ಎಚ್ಚರಿಕೆ ನೀಡಿತು.ಮೇ 3ರಂದು ನ್ಯಾಯಾಲಯದಲ್ಲಿ ಹಿರಿಯ ಸರ್ಕಾರಿ ಅಧಿಕಾರಿಗಳ ಉಪಸ್ಥಿತಿಯನ್ನು ಕೋರಿದ ನ್ಯಾಯಪೀಠವು, ಇದನ್ನು ಪಾಲಿಸದಿದ್ದಲ್ಲಿ ನ್ಯಾಯಾಂಗ ನಿಂದನೆಯ ವಿಚಾರಣೆಯನ್ನು ಪ್ರಾರಂಭಿಸುವುದಾಗಿ ತಿಳಿಸಿತು. ಸೋಮವಾರದವರೆಗೆ ಅಥವಾ ಅರ್ಧ ಗಂಟೆಯ ಕಾಲ ಈ ಆದೇಶವನ್ನು ಮುಂದೂಡಬೇಕು ಎನ್ನುವ ಕೇಂದ್ರ ಸರ್ಕಾರದ ಮನವಿಯನ್ನೂ ನ್ಯಾಯಾಲಯ ತಿರಸ್ಕರಿಸಿತು.

ರಾಜ್ಯಕ್ಕೆ ₹ 316.40 ಕೋಟಿ ಬಿಡುಗಡೆ

ಕೋವಿಡ್: ಕೇಂದ್ರದಿಂದ ಎಸ್‌ಡಿಆರ್‌ಎಫ್ ಮಂಜೂರು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು 2021–22ನೇ ಸಾಲಿನ ರಾಜ್ಯ ವಿಪತ್ತು ಪ್ರತಿಕ್ರಿಯೆ ನಿಧಿಯ (ಎಸ್‌ಡಿಆರ್‌ಎಫ್) ಮೊದಲ ಕಂತಿನ ಭಾಗವಾಗಿ ₹ 8,873.60 ಕೋಟಿ ಮಂಜೂರು ಮಾಡಿದೆ.

ಕೋವಿಡ್-19 ನಿವಾರಣೆ ಮತ್ತು ನಿರ್ವಹಣೆ ನಿಟ್ಟಿನಲ್ಲಿ ಆಸ್ಪತ್ರೆಗಳ ಸ್ಥಾಪನೆ, ಆಮ್ಲಜನಕ ಉತ್ಪಾದನೆ, ವೆಂಟಿಲೇಟರ್, ಏರ್ ಪ್ಯೂರಿಫೈಯರ್, ಆಂಬುಲೆನ್ಸ್, ಸ್ಕ್ಯಾನರ್‌ಗಳು, ಪಿಪಿಇ ಕಿಟ್, ಪರೀಕ್ಷಾ ಕಿಟ್ ಖರೀದಿ, ಆಕ್ಸಿಜನ್ ಉತ್ಪಾದನೆ ಮತ್ತು ಶೇಖರಣಾ ಘಟಕಗಳ ಸ್ಥಾಪನೆ, ಕೋವಿಡ್–19 ಆರೈಕೆ ಕೇಂದ್ರ ಹಾಗೂ ಪರೀಕ್ಷಾ ಪ್ರಯೋಗಾಲಯ ಸ್ಥಾಪನೆಗಾಗಿ ಈ ಹಣದಲ್ಲಿ ಶೇ 50ರಷ್ಟನ್ನು ಬಳಸಲು ಅನುಮತಿ ನೀಡಲಾಗಿದೆ.

ಕರ್ನಾಟಕಕ್ಕೆ ₹ 316.40 ಕೋಟಿ ಒದಗಿಸಲಾಗಿದ್ದು, ಕೋವಿಡ್‌ನಿಂದ ತತ್ತರಿಸಿರುವ ಮಹಾರಾಷ್ಟ್ರಕ್ಕೆ ಅತಿ ಹೆಚ್ಚಿನ ಪ್ರಮಾಣದಲ್ಲಿ ₹ 1,288.80 ಕೋಟಿ ನೀಡಲಾಗಿದೆ.

ಸಾಮಾನ್ಯವಾಗಿ ಜೂನ್‌ನಲ್ಲಿ ಬಿಡುಗಡೆಯಾಗುತ್ತಿದ್ದ ಎಸ್‌ಡಿಆರ್‌ಎಫ್‌ನ ಮೊದಲ ಕಂತನ್ನು ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ ನಿಗದಿತ ಅವಧಿಗಿಂತ ಮೊದಲೇ ಬಿಡುಗಡೆ ಮಾಡುತ್ತಿರುವುದಾಗಿ ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಆಯಾ ರಾಜ್ಯಗಳು ಸಾಮಾನ್ಯವಾಗಿ ಈ ಮೊತ್ತವನ್ನು ಬಳಸುವ ಕಾರ್ಯವಿಧಾನದಲ್ಲೂ ರಿಯಾಯಿತಿ ನೀಡಲಾಗಿದೆ. ಕಳೆದ ವರ್ಷ ಒದಗಿಸಲಾದ ಮೊತ್ತವನ್ನು ಬಳಸಿರುವ ಪ್ರಮಾಣಪತ್ರ ಸಲ್ಲಿಸುವವರೆಗೆ ಕಾಯದೆ ಈ ನಿಧಿಯನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ.

ಗುಜರಾತ್: ಕೋವಿಡ್ ಆಸ್ಪತ್ರೆಯ ಐಸಿಯುನಲ್ಲಿ ಬೆಂಕಿ, 18 ಸಾವು

ಅಹಮದಾಬಾದ್ (ರಾಯಿಟರ್ಸ್): ಗುಜರಾತಿನ ಭರೂಚ್ ನಗರದ ಪಟೇಲ್ ವೆಲ್‌ಫೇರ್ ಆಸ್ಪತ್ರೆಯ ಕೋವಿಡ್–19 ತೀವ್ರ ನಿಗಾ ಘಟಕದಲ್ಲಿ (ಐಸಿಯು) ಶುಕ್ರವಾರ ತಡರಾತ್ರಿ ನಡೆದ ಅಗ್ನಿ ದುರಂತದಲ್ಲಿ ಇಬ್ಬರು ಆರೋಗ್ಯ ಕಾರ್ಯಕರ್ತರು ಸೇರಿದಂತೆ ಕನಿಷ್ಠ 18 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಐಸಿಯುನಲ್ಲಿ ಶುಕ್ರವಾರ ಮಧ್ಯರಾತ್ರಿಯ ಹೊತ್ತಿಗೆ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ ಎಂದು ಪ್ರಾಥಮಿಕ ಮಾಹಿತಿಯಿಂದ ತಿಳಿದುಬಂದಿದೆ' ಎಂದು ಭರೂಚ್‌ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ವಿ. ಚುಡಾಸಮಾ ಅವರು ಮಾಹಿತಿ ನೀಡಿದ್ದಾರೆ.

'ಬೆಂಕಿಯು ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಿಸಿಕೊಂಡಿದ್ದರಿಂದ ಸಾಕಷ್ಟು ಅವ್ಯವಸ್ಥೆ ಉಂಟಾಯಿತು. ಆಸ್ಪತ್ರೆಯ ಸಿಬ್ಬಂದಿ ನನ್ನ ಕುಟುಂಬದ ಸದಸ್ಯರನ್ನು ವಾರ್ಡಿನಿಂದ ಹೊರಗೆ ಕರೆದೊಯ್ದರು. ಬಳಿಕ ಅವರನ್ನು ನಾವು ಬೇರೆ ಆಸ್ಪತ್ರೆಗೆ ದಾಖಲಿಸಿದೆವು. ಘಟನೆಯಲ್ಲಿ ಕೋವಿಡ್ ಪೀಡಿತರಾಗಿದ್ದ ನನ್ನ ಇಬ್ಬರು ಸಂಬಂಧಿಕರು ಪಾರಾಗಿದ್ದಾರೆ' ಎಂದು ಪಾರ್ಥ್ ಗಾಂಧಿ ಎನ್ನುವವರು ತಿಳಿಸಿದರು. 'ಭರೂಚ್‌ನ ಆಸ್ಪತ್ರೆಯಲ್ಲಿ ಸಂಭವಿಸಿದ ಅಗ್ನಿ ಅನಾಹುತದಲ್ಲಿ ಪ್ರಾಣಹಾನಿಯಾಗಿರುವುದು ನೋವಿನ ಸಂಗತಿ' ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ರೋಗಿಗಳ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಅರೆವೈದ್ಯಕೀಯ ಸಿಬ್ಬಂದಿ –ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಪಕ್ಷ ಏನು ಬಯಸುತ್ತೋ, ಅದನ್ನು ಮಾಡುವೆ: ರಾಹುಲ್ ಗಾಂಧಿ

ನವದೆಹಲಿ: ಕಾಂಗ್ರೆಸ್ ಪಕ್ಷದೊಳಗಿನ ಆಂತರಿಕ ಚುನಾವಣೆಗೆ ಒಲವು ವ್ಯಕ್ತಪಡಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, 'ಪಕ್ಷವನ್ನು ಯಾರು ಮುನ್ನಡೆಸಬೇಕೆಂದು ಕಾರ್ಯಕರ್ತರು ನಿರ್ಧರಿಸುವರು. ಪಕ್ಷ ನನಗೆ ಏನು ಮಾಡಲು ಹೇಳುತ್ತದೋ ನಾನು ಅದನ್ನೇ ಮಾಡುವೆ' ಎಂದು ಹೇಳಿದ್ದಾರೆ.

ಸುದ್ದಿಸಂಸ್ಥೆಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ಅವರು 'ಪಕ್ಷದೊಳಗಿನ ಸಾಂಸ್ಥಿಕ ಚುನಾವಣೆಗಳು ಸರಿಯಾದ ಸಮಯಕ್ಕೆ ನಡೆಯಲಿವೆ. ಆದರೆ, ಈಗ ಆಗಬೇಕಿರುವುದು ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸುವುದು ಹಾಗೂ ಜನರ ಜೀವವನ್ನು ಉಳಿಸುವ ಕೆಲಸ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿನ ಜವಾಬ್ದಾರಿಯನ್ನು ವಹಿಸಿಕೊಂಡ ರಾಹುಲ್ ಗಾಂಧಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಹೊರಬಂದಿದ್ದರು.

ಪಕ್ಷವನ್ನು ಮುನ್ನಡೆಸಲು ಸಿದ್ಧರಿದ್ದೀರಾ ಎನ್ನುವ ಪ್ರಶ್ನೆಗೆ 'ಪಕ್ಷವನ್ನು ಯಾರು ಮುನ್ನಡೆಸಬೇಕು ಎಂದು ಪಕ್ಷದ ಕಾರ್ಯಕರ್ತರು ನಿರ್ಧರಿಸಬೇಕು. ಪಕ್ಷವು ಏನು ಮಾಡಬೇಕೆಂದು ನಾನು ಬಯಸುತ್ತೇನೋ ಅದನ್ನು ಮಾಡುತ್ತೇನೆ' ಎಂದು ಉತ್ತರಿಸಿದರು.

ಹೈದರಾಬಾದ್ ತಲುಪಿದ ರಷ್ಯಾದ ಸ್ಪುಟ್ನಿಕ್ ವಿ ಲಸಿಕೆ

ಹೈದರಾಬಾದ್: 'ಕೋವಿಡ್–19 ವಿರುದ್ಧ ಹೋರಾಡುವ ರಷ್ಯಾ ನಿರ್ಮಿತ ಸ್ಪುಟ್ನಿಕ್ ವಿ ಲಸಿಕೆಯ 1.5 ಲಕ್ಷ ಡೋಸ್‌ಗಳು ಭಾರತಕ್ಕೆ ಬಂದಿವೆ' ಎಂದು ಈ ಲಸಿಕೆಯ ಉಸ್ತುವಾರಿ ವಹಿಸಿರುವ ಭಾರತದ ರೆಡ್ಡೀಸ್ ಲ್ಯಾಬೊರೇಟರೀಸ್ (ಡಿಆರ್‌ಎಲ್) ಶನಿವಾರ ಹೇಳಿದೆ.

ಭಾರತದಲ್ಲಿ ಈ ಲಸಿಕೆಯ ಬಳಕೆಗಾಗಿ ಡಿಆರ್‌ಎಲ್ ರಷ್ಯಾದಿಂದ 250 ಮಿಲಿಯನ್ ಡೋಸ್‌ಗಳನ್ನು ಆಮದು ಮಾಡಿಕೊಳ್ಳಲಿದೆ. ಇದರ ಮೊದಲ ಭಾಗವಾಗಿ ಶನಿವಾರ 1.5 ಲಕ್ಷ ಡೋಸ್‌ಗಳು ಭಾರತಕ್ಕೆ ತಲುಪಿವೆ. ಮುಂದಿನ ಕೆಲವು ವಾರಗಳಲ್ಲಿ ಉಳಿದ ಡೋಸ್‌ಗಳು ಬರಲಿವೆ ಎಂದು ರೆಡ್ಡೀಸ್ ಲ್ಯಾಬೊರೇಟರಿಸ್ ತಿಳಿಸಿದೆ.

'ಈಗ ಬಂದಿರುವ ಲಸಿಕೆಗಳನ್ನು ದೊಡ್ಡಮಟ್ಟದ ಲಸಿಕಾ ಕಾರ್ಯಕ್ರಮದ ಭಾಗವಾಗಿ ನಮ್ಮ ಪೂರೈಕೆಯ ವಿವಿಧ ಜಾಲಗಳಲ್ಲಿ ಬಳಸಲಾಗುತ್ತದೆ' ಎಂದು ಡಿಆರ್‌ಎಲ್ ಸಿಇಒ (ಎಪಿಐ ಮತ್ತು ಸೇವೆ) ದೀಪಕ್ ಸಪ್ರಾ ತಿಳಿಸಿದ್ದಾರೆ.

'ರಷ್ಯಾ ತಯಾರಿಸಿರುವ ಸ್ಪುಟ್ನಿಕ್ ವಿ ಲಸಿಕೆಯ ಎರಡು ಡೋಸ್‌ಗಳು ಕೋವಿಡ್ ವಿರುದ್ಧ ಶೇ 91.6ರಷ್ಟು ಪರಿಣಾಮಕಾರಿ ಕಾರ್ಯ ನಿರ್ವಹಿಸುತ್ತದೆ' ಎಂದು 'ದಿ ಲ್ಯಾನ್ಸೆಟ್' ಪತ್ರಿಕಾ ವರದಿಯು ತಿಳಿಸಿದೆ.

ಭಾರತದಲ್ಲಿ ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆಗಳ ಕೊರತೆಯ ಕಾರಣಕ್ಕಾಗಿ, ಸ್ಪುಟ್ನಿಕ್ ವಿ ಲಸಿಕೆಯನ್ನು ದೇಶದಲ್ಲಿ ತುರ್ತು ಬಳಕೆಗಾಗಿ ಭಾರತದ ಡ್ರಗ್ಸ್ ಕಂಟ್ರೋಲರ್ ಜನರಲ್ ಕಳೆದ ತಿಂಗಳು ಅನುಮೋದನೆ ನೀಡಿದೆ.

ಉಚಿತ ಲಸಿಕೆ ನೀಡಲು ಸೋನಿಯಾ ಗಾಂಧಿ ಸಲಹೆ

'ಕೋವಿಡ್: ರಾಷ್ಟ್ರೀಯ ನೀತಿ ರೂಪಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಸೋಂಕು ತಡೆಗೆ ರಾಜಕೀಯ ಒಮ್ಮತ ಮೂಡಿಸಿ ರಾಷ್ಟ್ರೀಯ ನೀತಿ ರೂಪಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಚ್ಚೆತ್ತುಕೊಂಡು ತಮ್ಮ ಕರ್ತವ್ಯಗಳನ್ನು ಪೂರೈಸುವ ಸಮಯ ಇದಾಗಿದೆಎಂದು ಶನಿವಾರ ವಿಡಿಯೊ ಸಂದೇಶದಲ್ಲಿ ಹೇಳಿದ್ದಾರೆ.

ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪ್ರತಿಯೊಂದು ಬಡ ಕುಟುಂಬದವರ ಬ್ಯಾಂಕ್ ಖಾತೆಗೆ ₹ 6,000 ವರ್ಗಾಯಿಸಬೇಕು. ಈ ಮೂಲಕ ವಲಸೆ ತಡೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕೋವಿಡ್ ಪರೀಕ್ಷೆಯ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕು. ಅಗತ್ಯ ವೈದ್ಯಕೀಯ ಉಪಕರಣಗಳು ಮತ್ತು ಜೀವ ರಕ್ಷಕ ಔಷಧವನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ತಡೆಯಬೇಕು ಎಂದು ಹೇಳಿದ್ದಾರೆ.

ಕೋವಿಡ್ ಲಸಿಕೆಯನ್ನು ದೇಶದ ಎಲ್ಲ ನಾಗರಿಕರಿಗೆ ಉಚಿತವಾಗಿ ನೀಡಬೇಕು ಮತ್ತು ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ಕಡ್ಡಾಯವಾಗಿ ಲೈಸನ್ಸ್ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಲಸಿಕೆ ದರಕ್ಕೆ ಸಂಬಂಧಿಸಿದಂತೆ ತಾರತಮ್ಯ ಇರಬಾರದು. ಎಲ್ಲ ಕೈಗಾರಿಕೆ ಆಮ್ಲಜನಕವನ್ನು ವೈದ್ಯಕೀಯ ಉದ್ದೇಶಕ್ಕಾಗಿ ಆಸ್ಪತ್ರೆಗೆ ಒದಗಿಸಬೇಕು ಎಂದು ತಿಳಿಸಿದ್ದಾರೆ.

ಪ್ರಸ್ತುತ ಬಿಕ್ಕಟ್ಟು ನಮಗೆ ಪರೀಕ್ಷೆ ಸಮಯ. ಈ ಬಿಕ್ಕಟ್ಟು ಎದುರಿಸಲು ನಾವೆಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಬೇಕು. ಹಲವು ರಾಜ್ಯಗಳಲ್ಲಿ ಹಾಸಿಕೆ, ಆಮ್ಲಜಕ ಮತ್ತು ಜೀವ ರಕ್ಷಕ ಔಷಧಗಳ ಕೊರತೆಯಾಗಿದೆ. ಪರಿಸ್ಥಿತಿಯ ಗಂಭೀರತೆಯನ್ನು ನಾಗರಿಕರು ಅರಿತುಕೊಳ್ಳಬೇಕು. ಈ ಬಿಕ್ಕಟ್ಟಿನಿಂದ ದೇಶವು ಶೀಘ್ರ ಹೊರಬರುವ ವಿಶ್ವಾಸವಿದೆ ಎಂದರು.

ಪೂರ್ವಸಿದ್ಧತೆ ಬದಲು ವರ್ಚಸ್ಸು ಹೆಚ್ಚಿಸಲು ಆದ್ಯತೆ: ರಾಹುಲ್ ಗಾಂಧಿ ವಾಗ್ದಾಳಿ

'ಪರಿಸ್ಥಿತಿಗೆ ಪ್ರಧಾನಿ ನೇರ ಕಾರಣ'

ನವದೆಹಲಿ (ಪಿಟಿಐ): ಕೋವಿಡ್ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳದೆ, ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ನಿಭಾಯಿಸದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. 'ವಿಜ್ಞಾನಿಗಳ ಸೂಚನೆ ಸೇರಿದಂತೆ ಆರಂಭಿಕ ಎಚ್ಚರಿಕೆಗಳನ್ನು ಸರ್ಕಾರ ಕಡೆಗಣಿಸಿದ್ದೇ ಇಂದಿನ ಹದಗೆಟ್ಟ ಸ್ಥಿತಿಗೆ ಕಾರಣ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಪ್ರತಿದಿನ ಬೆಳಿಗ್ಗೆ ಎದ್ದಕೂಡಲೇ ಸಾವುನೋವಿನ ಸುದ್ದಿಗಳೇ ರಾಚುತ್ತವೆ. ಇದು ಅಲೆಯಲ್ಲ, ಸುನಾಮಿ. ಎಲ್ಲೆಲ್ಲೂ ಸರತಿ ಸಾಲುಗಳೇ ಕಾಣುತ್ತವೆ. ಆಮ್ಲಜನಕ ಸಿಲಿಂಡರ್ ಪಡೆಯಲು, ಸಿಲಿಂಡರ್ ಭರ್ತಿ ಮಾಡಿಸಲು, ಜೀವರಕ್ಷಣ ಔಷಧ ಖರೀದಿಸಲು, ಆಸ್ಪತ್ರೆಯಲ್ಲಿ ಹಾಸಿಗೆಯನ್ನು ಪಡೆಯಲು, ಸ್ಮಶಾನಗಳಲ್ಲಿ ಹೆಣಗಳನ್ನು ಸುಡಲು ಜನರ ಸಾಲು ಕಾಣುತ್ತಿದೆ. ಭಾರತವು ಕೊರೊನಾ ವೈರಸ್‌ನ ಕೇಂದ್ರಬಿಂದುವಾಗಿದೆ. ಭಾರತದ ಈ ಪರಿಸ್ಥಿತಿ ಕಂಡು ಇಡೀ ಜಗತ್ತು ಗಾಬರಿಗೊಂಡಿದೆ ಎಂದರು.

ಮುಖ್ಯಾಂಶಗಳು

- ಇದು ಅಲೆಯಲ್ಲ, ಸುನಾಮಿ: ಟೀಕೆ
- ದೇಶದ ಸ್ಥಿತಿ ಕಂಡು ಜಗತ್ತು ಗಾಬರಿಗೊಂಡಿದೆ
- 'ಎಚ್ಚರಿಕೆ ಪರಿಗಣಿಸಿದ್ದರೆ ನಾವು ಸಜ್ಜಾಗಬಹುದಿತ್ತು'

'ಎಚ್ಚರಿಕೆಯನ್ನು ಪರಿಗಣಿಸಿದ್ದರೆ ನಾವು ಇನ್ನಷ್ಟು ಸಜ್ಜಾಗಬಹುದಿತ್ತು. ಈಗ ಸರ್ಕಾರ ಏನೂ ಮಾಡಲಾಗದ ಅಸಹಾಯಕ ಸ್ಥಿತಿಯಲ್ಲಿದೆ. ಪ್ರಧಾನಿಯವರ ವರ್ಚಸ್ಸು ಕಾಪಾಡುವುದು ಮತ್ತು ಇತರರ ಮೇಲೆ ಆರೋಪ ಹೊರಿಸಲು ಅವರು ಸಮಯ ಮೀಸಲಿಟ್ಟಿದ್ದರು ಎಂದು ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಈ ಸ್ಥಿತಿಗೆ ಪ್ರಧಾನಿ ನರೇಂದ್ರ ಮೋದಿ ಅವರೇ ನೇರ ಕಾರಣ. ಅವರು ಹೆಚ್ಚು ಕೇಂದ್ರೀಕೃತ ಮತ್ತು ವೈಯಕ್ತಿಕಗೊಳಿಸಿದ ಸರ್ಕಾರಿ ವ್ಯವಸ್ಥೆಯನ್ನು ಮುನ್ನಡೆಸುತ್ತಿದ್ದಾರೆ. ತಮ್ಮ ವರ್ಚಸ್ಸು ಹೆಚ್ಚಿಸುವ ಕೆಲಸಗಳನ್ನಷ್ಟೇ ಅವರು ಮಾಡುತ್ತಾರೆ. ಮುಂದಾಗಬಹುದಾದ ಅವಘಡ ಎದುರಿಸಲು ಸಿದ್ಧರಾಗುವಂತೆ ಸರ್ಕಾರಕ್ಕೆ 2020ರಲ್ಲೇ ಸಲಹೆ ನೀಡಿದ್ದರೂ, ನನ್ನ ಮಾತನ್ನು ಕೇಳಿಸಿಕೊಳ್ಳಲಿಲ್ಲ. ನಾನಷ್ಟೇ ಅಲ್ಲ. ಯಾರೇ ಎಚ್ಚರಿಸಿದರೂ ನಿರ್ಲಕ್ಷ್ಯ ಮುಂದುವರಿಯಿತು ಎಂದು ರಾಹುಲ್ ಬೇಸರ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ವಿರುದ್ಧ ಸರ್ಕಾರ ಜಯ ಸಾಧಿಸಿದೆ ಎಂದು ಬಣ್ಣಿಸಿದ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸಿತು. ಸ್ವತಃ ಪ್ರಧಾನಿಯವರೂ ಕೋವಿಡ್ ಯುದ್ಧದಲ್ಲಿ ಗೆದ್ದಿದ್ದೇವೆ ಎಂದರು. ಆದರೆ ಅದು ಎರಡನೇ ಅಲೆಯ ಆರಂಭವಾಗಿತ್ತು. ಅದಕ್ಕೆ ಸಿದ್ಧತೆ ಮಾಡಿಕೊಳ್ಳುವ ಬದಲು ಸಂಭ್ರಮದಲ್ಲಿ ತೊಡಗಿದ್ದು ತೊಡಕಾಯಿತು.

'ಕೋವಿಡ್ ಅನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ನಾವು ಆಗ್ರಹಿಸಿದ್ದೇವೆ. ಹಾಗೆ ಘೋಷಿಸಿದರಷ್ಟೇ ಸಾಲದು. ಸಮಸ್ಯೆ ಎಂದರೆ, ಸರ್ಕಾರ ಘೋಷಣೆ ಮಾಡಿ ನಾಪತ್ತೆಯಾಗಿಬಿಡುತ್ತದೆ. ಪರಿಸ್ಥಿತಿ ಈಗ ಕೈಮೀರಿರುವುದರಿಂದ ಕೇಂದ್ರವು ರಾಜ್ಯಗಳಿಗೆ ಸಮಸ್ಯೆಯನ್ನು ವರ್ಗಾಯಿಸಿದೆ. ರಾಜ್ಯಗಳು ಹಾಗೂ ಜನರನ್ನು ಸರ್ಕಾರ ನಿಜಕ್ಕೂ ಆತ್ಮನಿರ್ಭರ ಮಾಡಿದೆ. ಪ್ರಧಾನಿ ಸೇರಿದಂತೆ ಯಾರೂ ನಿಮ್ಮ ಸಹಾಯಕ್ಕೆ ಬರುವುದಿಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಮೆರಿಕದ ಸಾಂಕ್ರಾಮಿಕ ರೋಗಗಳ ತಜ್ಞ ಸಲಹೆ

ವರ್ಷದ ಹಿಂದೆ ಚೀನಾದಲ್ಲಿ ಕೊರೊನಾ ಉಲ್ಬಣಗೊಂಡಾಗ ದೇಶವನ್ನು ಸಂಪೂರ್ಣ ಲಾಕ್‌ಡೌನ್ ಮಾಡಿದ್ದರು ಎಂದು ಅವರು ಹೇಳಿದರು.

ಕೊರೊನಾ ತಡೆಗೆ ಭಾರತದಲ್ಲಿ ಕೆಲವು ವಾರ ಲಾಕ್‌ಡೌನ್ ಸೂಕ್ತ

ನವದೆಹಲಿ(ಪಿಟಿಐ): ಕೊರೊನಾ ವೈರಸ್ ಹರಡುವುದನ್ನು ತಡೆಯಲು ತಕ್ಷಣದ ಹೆಜ್ಜೆಯಾಗಿ ಭಾರತದಲ್ಲಿ ಕೆಲವು ವಾರಗಳವರೆಗೆ ಲಾಕ್‌ಡೌನ್ ಜಾರಿ ಮಾಡುವುದು ಸೂಕ್ತ ಎಂದು ಅಮೆರಿಕದ ಸಾಂಕ್ರಾಮಿಕ ರೋಗಗಳ ತಜ್ಞ ಆಂಥೋನಿ ಫೌಸಿ ಸಲಹೆ ನೀಡಿದ್ದಾರೆ.



ಕೋವಿಡ್‌ನ ಎರಡನೇ ಅಲೆಯ ಪರಿಣಾಮ ಕಡಿಮೆಯಾಗುವ ಯಾವುದೇ ಲಕ್ಷಣಗಳು ಸದ್ಯಕ್ಕೆ ಕಾಣುತ್ತಿಲ್ಲ. ಸೂಕ್ತ ಪ್ರಮಾಣದಲ್ಲಿ ಆಮ್ಲಜನಕ, ಔಷಧಿ, ಪಿಪಿಇ ಕಿಟ್‌ಗಳನ್ನು ಪೂರೈಸುವ ಕೆಲಸ ತಕ್ಷಣವೇ ಆಗಬೇಕು ಎಂದು ಫೌಸಿ ಅವರು ದಿ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ನೀವು ಈಗ ನಿಜವಾಗಿಯೂ ಮಾಡಬೇಕಾದ ಕೆಲಸವೆಂದರೆ, ನಿಮಗೆ ಸಾಧ್ಯವಾದಷ್ಟು ಮಟ್ಟಿಗೆ, ದೇಶವನ್ನು ತಾತ್ಕಾಲಿಕವಾಗಿ ಲಾಕ್‌ಡೌನ್ ಮಾಡಿಬಿಡಿ. ಸದ್ಯ ಇದೇ ಮುಖ್ಯವೆಂದು ನಾನು ಭಾವಿಸುತ್ತೇನೆ' ಎಂದು ಹೇಳಿದ್ದಾರೆ.

6 ತಿಂಗಳ ಲಾಕ್‌ಡೌನ್ ಅಗತ್ಯವಿಲ್ಲ, ಆದರೆ, ಸದ್ಯ ವೈರಸ್ ಹರಡುವಿಕೆಯನ್ನು ಕೊನೆಗಾಣಿಸಲು ತಾತ್ಕಾಲಿಕ ಲಾಕ್‌ಡೌನ್ ಮಾಡಬಹುದು ಎಂದಿದ್ದಾರೆ.

ನಿಧನ ವಾರ್ತೆ

ಬಿಕ್ರಮ್‌ಜೀತ್ ಕನ್ವರ್‌ಪಾಲ್

ಮುಂಬೈ: ಹಿಂದಿ ಚಿತ್ರರಂಗದ ನಟ ಮೇಜರ್ ಬಿಕ್ರಮ್‌ಜೀತ್ ಕನ್ವರ್‌ಪಾಲ್ (52) ಅವರು ಕೊವಿಡ್‌ನಿಂದಾಗಿ ನಿಧನರಾದರು. ಸೋಂಕಿನಿಂದಾಗಿ ಉಸಿರಾಟದ ತೊಂದರೆ ಎದುರಿಸುತ್ತಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಪೇಜ್ 3', 'ರಾಕೆಟ್‌ಸಿಂಗ್', 'ಆರಕ್ಷಕನ್', 'ಮರ್ಡರ್–2', '2 ಸ್ಟೇಟ್ಸ್', 'ಘಾಜಿ ಅಟ್ಯಾಕ್ ಸೇರಿ ಸಾಕಷ್ಟು ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಇತ್ತೀಚೆಗೆ ಡಿಸ್ನಿ ಹಾಟ್‌ಸ್ಟಾರ್‌ನ ವೆಬ್‌ಸಿರೀಸ್‌ನಲ್ಲಿ ನಟಿಸಿದ್ದರು. ಕಿರುತೆರೆ ಸರಣಿಗಳ ಪೋಷಕ ಪಾತ್ರಗಳಲ್ಲಿ ಅವರು ಕಾಣಿಸಿಕೊಂಡಿದ್ದರು.

ಸೇನೆಯಲ್ಲಿ ಸೇವೆ ಸಲ್ಲಿಸಿದ್ದ ಬಿಕ್ರಮ್‌ಜೀತ್ 2003ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟರು. ಅವರ ನಿಧನಕ್ಕೆ ಬಾಲಿವುಡ್ ಕಂಬನಿ ಮಿಡಿದಿದೆ.

ಸಿತಾರ್ ವಾದಕ ಪಂ.ದೇವವ್ರತ ಚೌಧರಿ



ನವದೆಹಲಿ (ಪಿಟಿಐ): ಸಿತಾರ್ ವಾದಕ ಪಂಡಿತ್ ದೇವವ್ರತ ಚೌಧರಿ (85) ಅವರು ಕೋವಿಡ್ ಸಂಬಂಧಿತ ಸಮಸ್ಯೆಯಿಂದಾಗಿ ದೆಹಲಿಯ ಗುರು ತೇಗ್ ಬಹದ್ದೂರ್ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾಗಿದ್ದ ಅವರು ದೇವು ಚೌಧರಿ ಎಂದೇ ಖ್ಯಾತರಾಗಿದ್ದರು.

ಮಾಜಿ ಸಂಸದ ಶಹಾಬುದ್ದಿನ್

ನವದೆಹಲಿ: ಆರ್‌ಜೆಡಿ ಮಾಜಿ ಸಂಸದ ಮೊಹಮ್ಮದ್ ಶಹಾಬುದ್ದಿನ್ ಕೋವಿಡ್‌ನಿಂದ ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಅವರು ಇಲ್ಲಿನ ತಿಹಾರ್ ಕಾರಾಗೃಹದಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದರು. ಕೋವಿಡ್‌ಗೆ ತುತ್ತಾಗಿದ್ದ ಅವರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ದೆಹಲಿ ಸರ್ಕಾರಕ್ಕೆ ಹೈಕೋರ್ಟ್ ಶುಕ್ರವಾರ ಸೂಚನೆ ನೀಡಿತ್ತು.

ಗುಂಡಣ್ಣ

ದಿನ ಭವಿಷ್ಯ

ಭಾನುವಾರ 2 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣೀ ಷಷ್ಠೀ ಗಂ. 35-19 (ರಾ. 8-13) ಭಾನುವಾರ ನಿತ್ಯ ನಕ್ಷತ ಪೂರ್ವಾಷಾಢ ಗಂ. 20-10 (ಹ. 2-10) ಸಿದ್ಧ ನಾಮ ಯೋಗ ಗಂ 1-36 ಉಪರಿ ಸಾಧ್ಯ ನಾಮ ಯೋಗ ಗಂ. 54-2 ಗರಜ ಕರಣ ಗಂ. 7-36 ವಿಷ ಗಂ. 39-27 ಅಮೃತ ಗಂ. 15-21 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-03 ಸೂರ್ಯಾಸ್ತ: 6-31 ಅದೃಷ್ಟ ಸಂಖ್ಯೆ 3 7

ಮೇಷ: ಸಹೋದ್ಯೋಗಿಗಳಿಂದ ಸಹಕಾರ ಪಡೆದು ಉತ್ತಮ ಕಾರ್ಯ ನಿರ್ವಹಿಸಲಿದ್ದೀರಿ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳನ್ನು ಆಲಿಸುವಿರಿ. ನೀರಿನಲ್ಲಿ ಕೆಲಸ ಮಾಡುವವರಿಗೆ ಗಂಡಾಂತರ ಸಾಧ್ಯತೆ.

ವೃಷಭ: ವಾತಾವರಣದಲ್ಲಿನ ವ್ಯತ್ಯಯದಿಂದಾಗಿ ಉಬ್ಬಸ, ಕೆಮ್ಮು ಮುಂತಾದ ಶ್ವಾಸ ಸಂಬಂಧಿ ಪೀಡನೆಗೆ ತುತ್ತಾಗಲಿದ್ದೀರಿ. ಸಾಮಾಜಿಕ ಕಾರ್ಯಕರ್ತರಿಗೆ ಬಿಡುವಿಲ್ಲದ ಕಾರ್ಯಕ್ರಮ. ಕೂಲಿ ಕಾರ್ಮಿಕರುಗಳಿಗೆ ಬಿಡುವಿನ ಅನುಭವ.

ಮಿಥುನ: ಆರೋಗ್ಯದಲ್ಲಿ ಸುಧಾರಣೆ ಉಂಟಾಗುವುದರಿಂದಾಗಿ ಮನೆಯಲ್ಲಿ ನೆಮ್ಮದಿ. ವಾಹನ ಖರೀದಿ ಮಾಡುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಿಂದಾಗಿ ಗೌರವ ಪ್ರಾಪ್ತಿ. ಕಾರ್ಮಿಕ ವರ್ಗದವರಿಗೆ ಅನುಕೂಲ.

ಕರ್ಕಾಟಕ: ಆಹಾರ ಪದಾರ್ಥಗಳ ವ್ಯವಹಾರದಲ್ಲಿ ಅತ್ಯಧಿಕ ಲಾಭ ನಿರೀಕ್ಷೆ. ಹಣ್ಣುತರಕಾರಿ, ಹೂವು ವ್ಯಾಪಾರಸ್ಥರಿಗೆ ವ್ಯವಹಾರ ಕುಸಿತ. ಮಿಂಚು ಅಥವಾ ವಿದ್ಯುಚ್ಛಕ್ತಿಯ ವಿಷಯದಲ್ಲಿ ಜಾಗರೂಕರಾಗಿರುವುದು ಉತ್ತಮ.

ಸಿಂಹ: ತೊಗರಿ, ಉದ್ದು ಮುಂತಾದ ದ್ವಿದಳ ಧಾನ್ಯಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭದ ನಿರೀಕ್ಷೆ. ರೈತಾಪಿ ವರ್ಗದವರಿಗೆ ಆತಂಕದ ಕ್ಷಣಗಳು. ಗಡ್ಡೆ ಗೆಣಸು ಬೆಳೆಗಾರರಿಗೆ ನಷ್ಟ. ಕಲಾವಿದರಿಗೆ ಉತ್ತಮ ಅವಕಾಶ.

ಕನ್ಯಾ: ಪಿತ್ರಾರ್ಜಿತ ಆಸ್ತಿ ವಿಚಾರವಾಗಿ ಮನೆಯಲ್ಲಿ ಮನಸ್ತಾಪ. ಸಂಯಮದಿಂದ ವ್ಯವಹರಿಸುವುದರಿಂದಾಗಿ ತೊಂದರೆಗಳು ನಿವಾರಣೆ. ಹೊಸದೊಂದು ಯೋಜನೆಯನ್ನು ಸ್ಥಾಪಿಸುವ ಕುರಿತು ಚಿಂತನೆ.

ತುಲಾ: ಸರ್ಕಾರಿ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸ. ಮೇಲಾಧಿಕಾರಿಗಳಿಂದ ಒತ್ತಡ ಎದುರಿಸಬೇಕಾದ ಪರಿಸ್ಥಿತಿ. ಕೃಷಿಯಲ್ಲಿ ತೊಡಗಿಕೊಂಡವರಿಗೆ ಆತಂಕದ ಕ್ಷಣಗಳು. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ.

ವೃಶ್ಚಿಕ: ಕುಶಲಕರ್ಮಿಗಳು, ವೈದ್ಯರುಗಳಿಗೆ ಆದಾಯದಲ್ಲಿ ಗಣನೀಯ ಹೆಚ್ಚಳ. ಔಷಧ ವ್ಯಾಪಾರದಲ್ಲಿ ಪ್ರಗತಿ. ವಿವಾಹ ಸಂಬಂಧಗಳ ವಿಚಾರದಲ್ಲಿ ಅನಿರೀಕ್ಷಿತ ಬೆಳವಣಿಗೆ. ಮಿತ್ರರ ನಡವಳಿಕೆಯಿಂದ ಕುತ್ತುಂಟಾಗುವ ಸಾಧ್ಯತೆ.

ಧನು: ನಿರಂತರ ಕೆಲಸಗಳಿಂದಾಗಿ ದೇಹಾಲಾಸ್ಯ. ಆರೋಗ್ಯದ ನಿಮಿತ್ತ ಧನ ವ್ಯಯ. ಮಕ್ಕಳ ಆಗಮನದಿಂದಾಗಿ ಮನೆಯಲ್ಲಿ ಉಲ್ಲಾಸ. ಸಾಮಾಜಿಕ ಕಾರ್ಯಕರ್ತರಿಗೆ ಯಶಸ್ಸು.

ಮಕರ: ವ್ಯವಹಾರದಲ್ಲಿ ಅನಿರೀಕ್ಷಿತ ತೊಂದರೆ. ಸಂಗಾತಿಯ ಕಡೆಯಿಂದ ಬಂದ ಸಲಹೆಗಳನ್ನು ಪುರಸ್ಕರಿಸುವುದರಿಂದ ಕಾರ್ಯಾನುಕೂಲ. ಮಕ್ಕಳ ವಿವಾಹ ನಿಮಿತ್ತ ವ್ಯವಹರಿಸಲಿದ್ದೀರಿ.

ಕುಂಭ: ತಂತ್ರಜ್ಞರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಉತ್ತಮ ಆದಾಯ. ಯಂತ್ರೋಪಕರಣಗಳ ವ್ಯವಹಾರದಿಂದ ಅಧಿಕ ಲಾಭ. ಭೂಮಿ ಅಥವಾ ನಿವೇಶನ ಖರೀದಿ ವಿಚಾರವಾಗಿ ಮಾತುಕತೆ.

ಮೀನ: ವಾಹನ ಚಾಲನೆ ಅಥವಾ ಪ್ರಯಾಣದಲ್ಲಿ ಅತ್ಯಂತ ಜಾಗರೂಕರಾಗಿರುವುದು ಒಳ್ಳೆಯದು. ವ್ಯವಹಾರದಲ್ಲಿ ಅನುಕೂಲಕರ ವಾತಾವರಣ. ಭೂ ಸಂಬಂಧಿ ವ್ಯವಹಾರದಲ್ಲಿ ಯಶಸ್ಸು. ಕುಶಲಕರ್ಮಿಗಳಿಗೆ ಉತ್ತಮ ಅವಕಾಶ.

ನಿಮ್ಮ ಜನ್ಮದಿನ 2-ಮೇ ಈ ದಿನವು ಅತ್ಯಂತ ಶುಭಕರವಾಗಿದ್ದು, ಆರಂಭದಲ್ಲಿ ಅನಾನುಕೂಲತೆ ಕಂಡುಬಂದರೂ ನಂತರದ ದಿನಗಳಲ್ಲಿ ವ್ಯವಹಾರಗಳು ಅನುಕೂಲಕರವಾಗಿ ಜರುಗಲಿವೆ. ವಿವಾಹಾಕಾಂಕ್ಷಿಗಳಿಗೆ ಅನುಕೂಲಕರ ವಾತಾವರಣ. ಆದಾಯ ತರಬಹುದಾದ ಹೊಸದೊಂದ ಯೋಜನೆಯ ಅನ್ವೇಷಣೆಯಲ್ಲಿ ಯಶಸ್ವಿ.

25 ವರ್ಷಗಳ ಹಿಂದೆ — ಗುರುವಾರ, 2-5-1996

● ಭಾರತದ ಜತೆ ಬಹಿರಂಗ ಘರ್ಷಣೆ ಇಲ್ಲ: ಬೇನಜಿರ್

ಇಸ್ಲಾಮಾಬಾದ್, ಮೇ. 1 (ಪಿಟಿಐ)– ಭಾರತದೊಂದಿಗೆ ಬಹಿರಂಗ ಘರ್ಷಣೆ ಸಾಧ್ಯತೆಯನ್ನು ಪಾಕಿಸ್ತಾನದ ಪ್ರಧಾನಮಂತ್ರಿ ಬೇನಜಿರ್ ಭುಟ್ಟೋ ತಳ್ಳಿಹಾಕಿದ್ದಾರೆ.

ಆದರೆ, ಕಾಶ್ಮೀರ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದರೆ ಸಮಸ್ಯೆ ಪರಿಹಾರಕ್ಕೆ 'ಪ್ರತಿರೋಧ ಮತ್ತು ಕ್ಷಿಪಣಿ' ಕಾರ್ಯಚರಣೆ ಅನಿವಾರ್ಯವಾಗಬಹುದು ಎಂದೂ ಅವರು ಎಚ್ಚರಿಸಿದರು.

ಸಿಎನ್‌ಎನ್‌ಗೆ ನಿನ್ನೆ ರಾತ್ರಿ ಸಂದರ್ಶನ ನೀಡಿದ ಅವರು ಕೆಲವು ರಾಜಕೀಯ ಹೊಂದಾಣಿಕೆಯಿಂದಾಗಿ 1972ರಿಂದ ಶಾಂತ ಸ್ಥಿತಿ ನೆಲೆಸಿದೆ. ಅಣುಶಕ್ತಿಯ ಸಮಾನ ಶಕ್ತಿಯಿಂದಾಗಿ ಈ ಸ್ಥಿತಿ ಉಂಟಾಗಿದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ ಎಂದು ಅವರು ಹೇಳಿದರು.

50 ವರ್ಷಗಳ ಹಿಂದೆ — ಭಾನುವಾರ, 2-5-1971

● ಕೃತಕ ನೂಲಿನ ಗುಣ ಹತ್ತಿ ನೂಲಿಗೆ ತರಲು ತಂತ್ರಜ್ಞರಿಗೆ ರಾಷ್ಟ್ರಪತಿ ಕರೆ

ಬೆಂಗಳೂರು, ಮೇ. 1– ಕೃತಕ ನೂಲಿನ ಬಟ್ಟೆಗಳ ಪೈಪೋಟಿಯನ್ನು ಹತ್ತಿ ಬಟ್ಟೆ ಕೈಗಾರಿಕೆ ಎದುರಿಸಲು ಸಾಧ್ಯವಾಗುವಂತೆ ಕೃತಕ ನೂಲಿನ ಗುಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಹತ್ತಿನೂಲಿನಲ್ಲಿ ತರಲು ಶ್ರಮಿಸಬೇಕೆಂದು ರಾಷ್ಟ್ರಪತಿ ಶ್ರೀ ವಿ.ವಿ. ಗಿರಿ ಅವರು ಇಂದು ಇಲ್ಲಿ ಕರೆ ನೀಡಿದರು.

ಆಧುನಿಕ ತಂತ್ರವು ಕೃತಕನೂಲನ್ನು ಪ್ರಧಾನವಾಗುವಂತೆ ಮಾಡಿದ್ದು ಇಂದು ಮಿಶ್ರಣಗೊಂಡ ಬಟ್ಟೆಗೆ ಬೇಡಿಕೆ ಹೆಚ್ಚಿದೆಯೆಂದು ರಾಷ್ಟ್ರಪತಿ ಅವರು ಹೇಳಿ, 'ಆದರೆ ಪಾಲಿಯಸ್ಟರ್ ನೂಲಿಗೆ ತರಲು ರಾಸಾಯನಿಕ ಪ್ರಕ್ರಿಯೆಯಿಂದ ಸಾಧ್ಯವೆಂದು ಈಚಿನ ಪ್ರಯೋಗದಿಂದ ಕಂಡು ಬಂದಿರುವುದು ಸಮಾಧಾನಕರವಾದ ವಿಷಯವೆಂದು ತಿಳಿಸಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹425
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹427

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹185-355

ದ್ವಿತಳಿ (ಬಿ.ವಿ) ₹223-395

ಪ್ರಯಾಣಿಕ ವಾಹನ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯಿಂದಾಗಿ ಮಾರುತಿ, ಹುಂಡೈ ಮೋಟರ್, ಟಾಟಾ ಮೋಟರ್ಸ್ ಮತ್ತು ಕಿಯಾ ಕಂಪನಿಗಳ ಪ್ರಯಾಣಿಕ ವಾಹನಗಳ ಮಾರಾಟವು ಮಾರ್ಚ್‌ಗೆ ಹೋಲಿಸಿದರೆ ಏಪ್ರಿಲ್ ತಿಂಗಳಿನಲ್ಲಿ ಇಳಿಕೆಯಾಗಿದೆ.

ಆದರೆ, ಮಹೀಂದ್ರ ಆ್ಯಂಡ್ ಮಹೀಂದ್ರ ಮತ್ತು ಹೋಂಡಾ ಕಾರ್ಸ್ ಇಂಡಿಯಾ ಕಂಪನಿಗಳ ಪ್ರಯಾಣಿಕ ವಾಹನ ಮಾರಾಟದಲ್ಲಿ ಏರಿಕೆ ಕಂಡುಬಂದಿದೆ.

ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಒಟ್ಟಾರೆ ಮಾರಾಟವು ಶೇ 4ರಷ್ಟು ಇಳಿಕೆ ಆಗಿದೆ. ಹುಂಡೈ ಮೋಟರ್ ಇಂಡಿಯಾ ಕಂಪನಿಯ ಮಾರಾಟ ಶೇ 8ರಷ್ಟು ಕಡಿಮೆಯಾಗಿದೆ.

ಟಾಟಾ ಮೋಟರ್ಸ್ ಕಂಪನಿಯ ಪ್ರಯಾಣಿಕ ವಾಹನ ಮಾರಾಟದಲ್ಲಿ ಶೇ 15ರಷ್ಟು ಇಳಿಕೆ ಆಗಿದೆ. ಕಿಯಾ ಇಂಡಿಯಾದ ಮಾರಾಟವು ಶೇ 16ರಷ್ಟು ಇಳಿಕೆಯಾಗಿದೆ.

ಮಾರಾಟ ಹೆಚ್ಚಳ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಪ್ರಯಾಣಿಕ ವಾಹನ ಮಾರಾಟ ಶೇ 9ರಷ್ಟು ಏರಿಕೆ ಆಗಿದೆ. ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯ ದೇಶಿ ಮಾರಾಟ ಶೇ 28ರಷ್ಟು ಹೆಚ್ಚಾಗಿದೆ.

ಎಸ್‌ಬಿಐ ಗೃಹ ಸಾಲದ ಬಡ್ಡಿ ಶೇ 6.7ಕ್ಕೆ ಇಳಿಕೆ

ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಗೃಹ ಸಾಲದ ಬಡ್ಡಿದರವನ್ನು ಶೇ 6.70ಕ್ಕೆ ತಗ್ಗಿಸಿದೆ.

ಮಾರ್ಚ್ 31ರವರೆಗೂ ಶೇ 6.70ರ ಆರಂಭಿಕ ಬಡ್ಡಿದರ ನೀಡಿದ್ದ ಬ್ಯಾಂಕ್ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಗೃಹ ಸಾಲದ ಬಡ್ಡಿದರವನ್ನು ಶೇ 6.95ಕ್ಕೆ ನಿಗದಿಪಡಿಸಿತ್ತು. ಇದೀಗ ಮತ್ತೆ ಬಡ್ಡಿದರ ತಗ್ಗಿಸಿದೆ.

₹30 ಲಕ್ಷದವರೆಗಿನ ಗೃಹ ಸಾಲದ ಮೊತ್ತಕ್ಕೆ ಶೇ 6.70ರಷ್ಟು ಬಡ್ಡಿದರವು ಅನ್ವಯಿಸಲಿದೆ. ₹ 30 ಲಕ್ಷದಿಂದ ₹ 75 ಲಕ್ಷದವರೆಗಿನ ಮೊತ್ತಕ್ಕೆ ಶೇ 6.95ರಷ್ಟು ಬಡ್ಡಿದರ ಅನ್ವಯ ಆಗಲಿದೆ ಎಂದು ತಿಳಿಸಿದೆ.

ಮಹಿಳೆಯರಿಗೆ ಶೇ 0.05ರಷ್ಟು ವಿಶೇಷ ವಿನಾಯಿತಿ ಇದೆ. ಯುನೊ ಆ್ಯಪ್ ಮೂಲಕ ಸಾಲಕ್ಕೆ ಅರ್ಜಿ ಸಲ್ಲಿಸುವವರಿಗೆ ಹೆಚ್ಚುವರಿಯಾಗಿ ಶೇ 0.05ರಷ್ಟು ವಿನಾಯಿತಿ ಸಿಗಲಿದೆ ಎಂದೂ ಪ್ರಕಟಣೆಯಲ್ಲಿ ತಿಳಿಸಿದೆ. ಗೃಹ ಸಾಲ ಮಾರುಕಟ್ಟೆಯಲ್ಲಿ ಎಸ್‌ಬಿಐ ಶೇ 34ರಷ್ಟು ಪಾಲು ಹೊಂದಿದೆ.

ಲಾಕ್‌ಡೌನ್‌ನಿಂದ ಮಂದಗತಿಯ ಆರ್ಥಿಕ ಚಟುವಟಿಕೆ: ತಜ್ಞರ ಅಭಿಪ್ರಾಯ

ಜಿಎಸ್‌ಟಿ ಸಂಗ್ರಹ ಇಳಿಕೆ ಸಾಧ್ಯತೆ

ನವದೆಹಲಿ (ಪಿಟಿಐ): ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ಮತ್ತೆ ಹಲವು ರಾಜ್ಯಗಳಲ್ಲಿ ಲಾಕ್‌ಡೌನ್ ಜಾರಿಗೊಳಿಸಲಾಗುತ್ತಿದೆ. ಇದರಿಂದಾಗಿ ಜಿಎಸ್‌ಟಿ ಸಂಗ್ರಹವು ಮುಂಬರುವ ತಿಂಗಳುಗಳಲ್ಲಿ ಮತ್ತೆ ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಮಾರ್ಚ್‌ನಲ್ಲಿ ಆಗಿದ್ದ ಪೂರೈಕೆಗೆ ಸಂಬಂಧಿಸಿದಂತೆ ಏಪ್ರಿಲ್‌ನಲ್ಲಿ ಈ ಪ್ರಮಾಣದ ತೆರಿಗೆ ಸಂಗ್ರಹ ಆಗಿದೆ. ಏಪ್ರಿಲ್‌ನಲ್ಲಿ ಆರ್ಥಿಕ ಚಟುವಟಿಕೆಗಳು ಮಂದಗತಿಯಲ್ಲಿ ಇರುವುದರಿಂದ ಮುಂಬರುವ ತಿಂಗಳುಗಳಲ್ಲಿ ತೆರಿಗೆ ಸಂಗ್ರಹ ಇಳಿಮುಖ ಆಗಿರುವ ಸಾಧ್ಯತೆ ಇದೆ ಎಂದು ಡೆಲಾಯ್ಟ್ ಇಂಡಿಯಾದ ಹಿರಿಯ ನಿರ್ದೇಶಕ ಎಂ.ಎಸ್. ಮಣಿ ಹೇಳಿದ್ದಾರೆ.

ದೇಶದ ಹಲವು ಭಾಗಗಳು ಇದೀಗ ಮತ್ತೆ ಲಾಕ್‌ಡೌನ್ ಆಗಿವೆ. ಅಲ್ಲದೆ ಬಹುತೇಕ ಕಂಪನಿಗಳು ತಾತ್ಕಾಲಿಕವಾಗಿ ಬಾಗಿಲು ಮುಚ್ಚಿವೆ. ಹೀಗಾಗಿ ನಿಜವಾದ ಸವಾಲು ಮುಂದಿದೆ ಎಂದು ಶಾರ್ದೂಲ್ ಅಮರ್‌ಚಂದ್ ಮಂಗಲ್‌ದಾಸ್ ಆ್ಯಂಡ್ ಕೊ.ನ ಪಾಲುದಾರ ರಜತ್ ಬೋಸ್ ತಿಳಿಸಿದ್ದಾರೆ.

ಆರ್ಥಿಕತೆಯಲ್ಲಿ ನಿರಂತರ ಚೇತರಿಕೆ: ಜಿಎಸ್‌ಟಿ ವರಮಾನವು ಸತತ ಏಳು ತಿಂಗಳುಗಳಲ್ಲಿ ₹ 1 ಲಕ್ಷ ಕೋಟಿಯನ್ನು ದಾಟಿರುವುದಷ್ಟೇ ಅಲ್ಲದೆ ಏರುಮುಖವಾಗಿಯೂ ಇದೆ. ಈ ಅವಧಿಯಲ್ಲಿ ಆರ್ಥಿಕತೆಯು ನಿರಂತರವಾಗಿ ಚೇತರಿಕೆಯು ಕಾಣುತ್ತಿದೆ ಎನ್ನುವುದರ ಸ್ಪಷ್ಟ ಸೂಚನೆ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ತಿಳಿಸಿದೆ.

ನಕಲಿ ಬಿಲ್‌ಗಳ ನಿಯಂತ್ರಣ, ದತ್ತಾಂಶ ವಿಶ್ಲೇಷಣೆ, ತೆರಿಗೆ ಆಡಳಿತವನ್ನು ಪರಿಣಾಮಕಾರಿ ಆಗಿ ಜಾರಿಗೊಳಿಸಿರುವ ಕಾರಣಗಳಿಂದಾಗಿ ತೆರಿಗೆ ವರಮಾನದಲ್ಲಿ ನಿರಂತರವಾಗಿ ಏರಿಕೆ ಕಾಣುತ್ತಿದೆ.



ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎಸ್.ಎನ್. ಸಾವಿತ್ರಿ
ಎಸ್.ಎನ್.ಗೋಪಾಲರೆಡ್ಡಿರವರ ಧರ್ಮಪತ್ನಿ, ಸುದ್ದಗುಂಟೆಪಾಳ್ಯ, ಬೆಂಗಳೂರು.
ಜನನ: 13.03.1957 ನಿಧನ: 02.05.2020
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ, ನಿಮ್ಮ ಅಗಲಿಕೆಯಿಂದ ನಿಮ್ಮ ಪ್ರೀತಿವಾತ್ಸಲ್ಯ, ಆರೈಕೆಗಳು ನಮಗೆ ಇಂದು ನೆನಪು ಮಾತ್ರ. ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ ಪ್ರತಿನಿತ್ಯವೂ ನಿಮ್ಮನ್ನು ಹೆಮ್ಮೆಯಿಂದ ಸ್ಮರಿಸುವ,
ದುಃಖತಪ್ತರು: ಪತಿ, ಮಕ್ಕಳು, ಕುಟುಂಬದವರು ಹಾಗೂ ಬಂಧು–ಮಿತ್ರರು

ಪರಿಷ್ಕೃತ ಐ.ಟಿ. ರಿಟರ್ನ್ಸ್: ಗಡುವು 31ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): 2019–20ನೇ ಹಣಕಾಸು ವರ್ಷಕ್ಕೆ ವಿಳಂಬಿತ ಅಥವಾ ಪರಿಷ್ಕೃತ ಐಟಿಆರ್ ಸಲ್ಲಿಕೆಯೂ ಸೇರಿದಂತೆ ವಿವಿಧ ಆದಾಯ ತೆರಿಗೆ ವಿವರಗಳ ಸಲ್ಲಿಕೆಗೆ ನೀಡಿದ್ದ ಗಡುವನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕದಿಂದ ಎದುರಾಗಿರುವ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಹಾಗೂ ಹಲವು ತೆರಿಗೆದಾರು, ತೆರಿಗೆ ಸಲಹೆಗಾರರು ಸಲ್ಲಿಸಿರುವ ಮನವಿಗಳನ್ನು ಪರಿಗಣಿಸಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರದ ಅಧಿಕೃತ ಪ್ರಕಟಣೆ ತಿಳಿಸಿದೆ.

ವಿಳಂಬಿತ ಅಥವಾ ಪರಿಷ್ಕೃತ ರಿಟರ್ನ್ಸ್ ಅನ್ನು ಮಾರ್ಚ್ 31ರ ಒಳಗಾಗಿ ಸಲ್ಲಿಸಬೇಕಿತ್ತು. ಹೊಸ ಆದೇಶದಂತೆ ಮೇ 31ರ ಒಳಗಾಗಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 148ರ ಅಡಿಯಲ್ಲಿ ನೋಟಿಸ್‌ಗೆ ಪ್ರತಿಕ್ರಿಯೆಯಾಗಿ ಆದಾಯದ ರಿಟರ್ನ್ ಸಲ್ಲಿಸುವ ಕೊನೆಯ ದಿನಾಂಕ 2021 ಏಪ್ರಿಲ್ 1 ಆಗಿತ್ತು. ಅದನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ. ವ್ಯಾಜ್ಯ ಪರಿಹಾರ ಸಮಿತಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಹಾಗೂ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಲು ಮೇ 31ರವರೆಗೆ ಅವಕಾಶ ನೀಡಲಾಗಿದೆ.

ವಿಮಾನ ಇಂಧನ ದರ ಶೇ 6.7 ಏರಿಕೆ

ನವದೆಹಲಿ (ಪಿಟಿಐ): ವಿಮಾನ ಇಂಧನ (ಎಟಿಎಫ್) ದರವನ್ನು ಶನಿವಾರ ಶೇ 6.7ರಷ್ಟು ಹೆಚ್ಚಿಸಲಾಗಿದೆ.

ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳ ಬೆಲೆ ಅಧಿಸೂಚನೆಯ ಪ್ರಕಾರ, ದೆಹಲಿಯಲ್ಲಿ ಪ್ರತಿ ಕಿಲೋ ಲೀಟರಿಗೆ ₹ 3,885ರಷ್ಟು ಹೆಚ್ಚಾಗಿ ₹ 61,690.28ಕ್ಕೆ ತಲುಪಿದೆ.

ಇಂಧನ ದರ ಏರಿಕೆ?: ಸತತ 16ನೇ ದಿನವೂ ಪೆಟ್ರೋಲ್ ಡೀಸೆಲ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಆದರೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಏರಿಕೆ ಆಗುತ್ತಿರುವುದರಿಂದ ಪೆಟ್ರೋಲ್, ಡೀಸೆಲ್ ದರದಲ್ಲಿಯೂ ಏರಿಕೆ ಆಗಲಿದೆ ಎಂದು ತೈಲ ಕಂಪನಿಗಳ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಕೋವಿಡ್: ಮೃತರ ಸಂಖ್ಯೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಡುತ್ತಿರುವವರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಸೋಂಕಿತರ ಪೈಕಿ ಶನಿವಾರ ಒಟ್ಟು 271 ಮಂದಿ ಸತ್ತಿದ್ದಾರೆ. ದೃಢ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡಿರುವುದು ತುಸು ಸಮಾಧಾನ ತರಿಸಿದೆ. 24 ಗಂಟೆಗಳಲ್ಲಿ ಒಟ್ಟು 40,990 ಮಂದಿ ಸೋಂಕಿಗೊಳಗಾಗಿದ್ದಾರೆ.

ಶನಿವಾರ ಒಟ್ಟು 1.77 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಶುಕ್ರವಾರಕ್ಕೆ ಹೋಲಿಸಿದರೆ (1.89 ಲಕ್ಷ) ಇದು ಅಲ್ಪ ಕಡಿಮೆ. ಹೀಗಾಗಿ ಸೋಂಕು ದೃಢ ಪ್ರಮಾಣ ಶೇ 23.03ಕ್ಕೆ ತಗ್ಗಿದೆ. ಮರಣ ಪ್ರಮಾಣ ದರ ಶೇ 0.66ರಷ್ಟಿದೆ.

ರಾಜ್ಯದ 30 ಜಿಲ್ಲೆಗಳಲ್ಲೂ ಸೋಂಕಿತರ ಪ್ರಮಾಣ ಮೂರಂಕಿ ಮುಟ್ಟಿದೆ. ಬೆಂಗಳೂರು (19,353), ಮೈಸೂರು (2,529), ಮಂಡ್ಯ (1,235), ಬಳ್ಳಾರಿ (1,163) ಹಾಗೂ ದಕ್ಷಿಣ ಕನ್ನಡ (933) ಜಿಲ್ಲೆಗಳಲ್ಲಿ ಪ್ರಕರಣಗಳು ಇಳಿಮುಖವಾಗಿವೆ. ತುಮಕೂರು (2,308), ಕಲಬುರ್ಗಿ (1,407), ಕೊಪ್ಪಳ (1,019), ಬೆಂಗಳೂರು ಗ್ರಾಮಾಂತರ (940) ಮತ್ತು ಚಿಕ್ಕಬಳ್ಳಾಪುರದಲ್ಲಿ (820) ಮತ್ತಷ್ಟು ಹೊಸ ಪ್ರಕರಣಗಳು ವರದಿಯಾಗಿವೆ.

ಹಾಸನ (790), ರಾಯಚೂರು (601), ಶಿವಮೊಗ್ಗ (661), ಉಡುಪಿ (670) ಹಾಗೂ ಉತ್ತರ ಕನ್ನಡದಲ್ಲೂ (687) ಅಧಿಕ ಪ್ರಕರಣಗಳು ದಾಖಲಾಗಿವೆ. ಇದರೊಂದಿಗೆ ಕೋವಿಡ್ ಪೀಡಿತರ ಒಟ್ಟು ಸಂಖ್ಯೆ 15.66 ಲಕ್ಷಕ್ಕೆ ಹೆಚ್ಚಿದೆ.

ಬೆಂಗಳೂರಿನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ದುಪ್ಪಟ್ಟಾಗಿದೆ. ಶನಿವಾರ 162 ಮಂದಿ ಸಾವಿಗೀಡಾಗಿದ್ದಾರೆ. ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರಿನಲ್ಲಿ ತಲಾ 12, ಬಳ್ಳಾರಿ ಹಾಗೂ ಹಾಸನದಲ್ಲಿ ತಲಾ 8, ಮೈಸೂರಿನಲ್ಲಿ 7, ದಾವಣಗೆರೆ, ಕಲಬುರ್ಗಿ, ಶಿವಮೊಗ್ಗದಲ್ಲಿ ತಲಾ 6, ಉತ್ತರ ಕನ್ನಡ, ಯಾದಗಿರಿಯಲ್ಲಿ ತಲಾ 5, ಚಿಕ್ಕಮಗಳೂರು, ಧಾರವಾಡ, ರಾಮನಗರ ಹಾಗೂ ವಿಜಯಪುರದಲ್ಲಿ ತಲಾ ನಾಲ್ಕು ಮಂದಿ ಅಸುನೀಗಿದ್ದಾರೆ.

ಕೊರೊನಾ ಭಯ: ಮುನ್ನೆಚ್ಚರಿಕೆಯ ಖರೀದಿ ಧಾವಂತ!

ದೇಶದಾದ್ಯಂತ ಅಗತ್ಯ ಔಷಧದ ಅಭಾವ

● ಸಿದ್ದಯ್ಯ ಹಿರೇಮಠ

ನವದೆಹಲಿ: ದೇಶದಾದ್ಯಂತ ದಿನೇದಿನೇ ಕೊರೊನಾ ಪ್ರಕರಣಗಳು ಹೆಚ್ಚುತ್ತಿದ್ದಂತೆಯೇ ಆತಂಕಕ್ಕೆ ಒಳಗಾಗುತ್ತಿರುವ ಜನತೆ, ಮುನ್ನೆಚ್ಚರಿಕೆ ಕ್ರಮವಾಗಿ ಔಷಧ ಖರೀದಿಯಲ್ಲಿ ತೊಡಗಿದ್ದರಿಂದ ಕೊರೊನಾ ಲಕ್ಷಣಗಳಿರುವ ರೋಗಿಗಳಿಗೆ ಅಗತ್ಯವಿರುವ ಔಷಧದ ಕೊರತೆ ಎದುರಾಗಿದೆ.

ಕೊರೊನಾ ಪೀಡಿತರಿಗೆ ನೀಡಲಾಗುವ ರೆಮ್‌ಡಿಸಿವಿರ್ ಚುಚ್ಚುಮದ್ದಿನ ಅಭಾವ ಈಗಾಗಲೇ ತೀವ್ರಗೊಂಡಿದೆ. ಅದೇ ಮಾದರಿಯಲ್ಲಿ ಕರ್ನಾಟಕವೂ ಸೇರಿದಂತೆ ದೇಶದಾದ್ಯಂತ ಮಾರುಕಟ್ಟೆಯಲ್ಲಿ ಅಗತ್ಯ ಮಾತ್ರೆಗಳು ಮತ್ತು ಇತರ ಇಂಜಕ್ಷನ್‌ಗಳೂ ಲಭ್ಯವಾಗದ ಸ್ಥಿತಿ ನಿರ್ಮಾಣವಾಗಿದೆ.

ಹೆಚ್ಚಿನ ಪ್ರಮಾಣದ ಖರೀದಿಯಿಂದಾಗಿ ಈ ಔಷಧಗಳಿಗೆ ಬೇಡಿಕೆ ಹೆಚ್ಚಿದೆ. ಉತ್ಪಾದನೆಯ ಪ್ರಮಾಣ ಬೇಡಿಕೆಗೆ ಅನುಗುಣವಾಗಿಯೂ ಇಲ್ಲ. ಕೊರೊನಾ ಸೋಂಕಿತರಿಗೆ ವೈದ್ಯರು ಸೂಚಿಸುತ್ತಿರುವ ಪ್ಯಾರಾಸಿಟಮಾಲ್, ಐವರ್‌ಮೆಕ್ಟಿನ್, ಡಾಕ್ಸಿಸೈಕ್ಲಿನ್, ಅಜಿಥ್ರೊಮೈಸಿನ್, ವಿಟಮಿನ್–ಸಿ ಮಾತ್ರೆ ಹಾಗೂ ಮಾರೋಪೆನೆಮ್ ಮತ್ತು ಫ್ಯಾಬಿ ಫ್ಲೂ ಇಂಜಕ್ಷನ್‌ಗಳು ಕೊರತೆಯ ಪಟ್ಟಿಯಲ್ಲಿರುವ ಪ್ರಮುಖ ಔಷಧಗಳಾಗಿವೆ.

ವಿದೇಶಗಳಿಂದ ಆಮದಾಗುವ ಈ ಔಷಧಗಳ ಕಚ್ಚಾ ಸಾಮಗ್ರಿಯ ದರವೂ ಇತ್ತೀಚಿನ ದಿನಗಳಲ್ಲಿ ಮೂರು ಪಟ್ಟು ಹೆಚ್ಚಿದ್ದು, ಕೆಲವೇ ದಿನಗಳಲ್ಲಿ ಈ ಔಷಧಗಳ ದರದಲ್ಲೂ ಹೆಚ್ಚಳ ಆಗುವ ಸಾಧ್ಯತೆ ಇದೆ ಎಂದು ಔಷಧ ಮಾರುಕಟ್ಟೆ ವಿಶ್ಲೇಷಕರು ಅಂದಾಜಿಸಿದ್ದಾರೆ.

ಕೊರೊನಾದ ಅಲ್ಪಸ್ವಲ್ಪ ಲಕ್ಷಣಗಳಿಂದ ಬಳಲುತ್ತ, ಮನೆಗಳಲ್ಲೇ ಪ್ರತ್ಯೇಕ ವಾಸದಲ್ಲಿರುವವರಿಗೆ, ಸೋಂಕಿನ ಪ್ರಮಾಣ ಹೆಚ್ಚದಿರಲಿ ಎಂಬ ಕಾರಣ ಆರಂಭಿಕ ಹಂತದಲ್ಲಿ ವೈದ್ಯರು ಫ್ಯಾಬಿಫ್ಲೂ ಇಂಜೆಕ್ಷನ್ ಸೂಚಿಸುತ್ತಿದ್ದಾರೆ. ಹಾಗಾಗಿಯೇ, ಸೋಂಕು ನಿವಾರಕವಾದ ಈ ಔಷಧ ಅಂಗಡಿಗಳಿಂದ ಬೇಗನೆ ಖಾಲಿಯಾಗುತ್ತಿದೆ.

> **ಐವರ್‌ಮೆಕ್ಟಿನ್, ಡಾಕ್ಸಿಸೈಕ್ಲಿನ್, ವಿಟಮಿನ್–ಸಿ ಮತ್ತು ಅಜಿಥ್ರೊಮೈಸಿನ್ ಮಾತ್ರೆಗಳಿಗೆ ಸಾಕಷ್ಟು ಬೇಡಿಕೆ ಇದೆ. ಆದರೆ, ವಿತರಕರು ತಕ್ಷಣಕ್ಕೆ ಪೂರೈಸುತ್ತಿಲ್ಲ**
> **ಟಿ.ಎಚ್. ಅಳಗವಾಡಿ,** ಸಗಟು ಔಷಧ ವ್ಯಾಪಾರಿ

ಜ್ವರ, ಕೆಮ್ಮು, ನೆಗಡಿಯಿಂದಾಗಿ ಮನೆಗಳಲ್ಲೇ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೂ ಕೊರೊನಾ ಪೀಡಿತರಿಗೆ ನೀಡುವ ಔಷಧಿಗಳನ್ನೇ ಸೂಚಿಸಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಅಜಿಥ್ರೊಮೈಸಿನ್, ವಿಟಮಿನ್ ಡಿ–3 ಅಥವಾ ಐವರ್‌ಮೆಕ್ಟಿನ್ ಮಾತ್ರೆಗಳು ಈ ವರ್ಷ 10 ಪಟ್ಟು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಿವೆ. ಇಂಥ ಬೆಳವಣಿಗೆಯು ಬೇಡಿಕೆ ಮತ್ತು ಪೂರೈಕೆಗೆ ಸವಾಲಾಗಿದೆ ಎಂದು ಫಾರ್ಮಾ ಕಂಪನಿಯೊಂದರ ಮಾರಾಟ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಗಣೇಶ್ ಶೇಷಗಿರಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಭಾರತದಲ್ಲಿ ಔಷಧ ತಯಾರಿಸುವ ಕಂಪನಿಗಳು ಕೇವಲ ಮೂರರಿಂದ ಆರು ತಿಂಗಳಿಗೆ ಸಾಕಾಗುವಷ್ಟು ಕಚ್ಚಾ ಸಾಮಗ್ರಿ ಸಂಗ್ರಹಿಸುತ್ತವೆ. ಅನೇಕ ದೇಶಗಳು ಚೀನಾದಿಂದ ಅಗತ್ಯ ವಸ್ತುಗಳ ಆಮದನ್ನು ನಿಲ್ಲಿಸಿವೆ. ಕೊರೊನಾ ಭೀತಿ ಆರಂಭ ಆದಾಗಿನಿಂದ ಸ್ವಿಟ್ಜರ್ಲೆಂಡ್, ಅಮೆರಿಕ ಮತ್ತಿತರ ದೇಶಗಳಿಂದ ಔಷಧಗಳ ಕಚ್ಚಾ ಸಾಮಗ್ರಿಯ ಪೂರ್ಣಪ್ರಮಾಣದ ಆಮದು ಸ್ಥಗಿತಗೊಂಡಿದ್ದು, ಇಂಥ ಔಷಧಗಳ ಅಭಾವ ಹೆಚ್ಚಲಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಪುಣ್ಯಸ್ನಾನ

ಸಿಖ್ಖರ ಧರ್ಮಗುರು ತೇಜ್ ಬಹದ್ದೂರ್ ಅವರ 400ನೇ ಜನ್ಮ ವರ್ಷಾಚರಣೆಯ ಪ್ರಯುಕ್ತ ಅಮೃತಸರದ ಸ್ವರ್ಣ ಮಂದಿರದ ಪವಿತ್ರ ಸರೋವರದಲ್ಲಿ ಸಿಖ್ ಭಕ್ತರೊಬ್ಬರು ಶನಿವಾರ ಪುಣ್ಯ ಸ್ನಾನ ಮಾಡಿದರು

-ಎಎಫ್‌ಪಿ ಚಿತ್ರ

ದೇಶದ್ರೋಹ ಕಾನೂನು: ಕೇಂದ್ರದ ಪ್ರತಿಕ್ರಿಯೆ ಕೇಳಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ‘ದೇಶದ್ರೋಹ’ದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಬಗ್ಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ದೇಶದ್ರೋಹವನ್ನು ಅಪರಾಧ ಎಂದು ಪರಿಗಣಿಸುವ ಭಾರತೀಯ ದಂಡ ಸಂಹಿತೆಯ 124ಎ ವಿಧಿಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಇಂದಿರಾ ಬ್ಯಾನರ್ಜಿ ಮತ್ತು ಕೆ.ಎಂ. ಜೋಸೆಫ್ ಅವರ ಪೀಠವು ವಿಚಾರಣೆ ನಡೆಸಿತು.

ಪತ್ರಕರ್ತರಾದ ಮಣಿಪುರದ ಕಿಶೋರ್‌ಚಂದ್ರ ವಾಂಗ್‌ಖೇಮ್ಚಾ ಮತ್ತು ಛತ್ತೀಸಗಡದ ಕನ್ಹಯ್ಯ ಲಾಲ್ ಶುಕ್ಲಾ ಅವರು ಅರ್ಜಿ ಸಲ್ಲಿಸಿದ್ದರು. 1860ರ ಈ ಕಾಯ್ದೆಯನ್ನು ಅಸಾಂವಿಧಾನಿಕ ಎಂದು ಘೋಷಿಸುವಂತೆ ಕೋರ್ಟ್‌ಗೆ ಒತ್ತಾಯಿಸಿದ್ದರು.

ಅರ್ಜಿದಾರರು ತಮ್ಮ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ವಿರುದ್ಧ ಪ್ರಶ್ನೆ ಎತ್ತಿದ್ದಾರೆ. ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವ ಕಾಮೆಂಟ್‌ಗಳು ಮತ್ತು ವ್ಯಂಗ್ಯಚಿತ್ರಗಳಿಗಾಗಿ ತಮ್ಮ ಮೇಲೆ 124 ಎ ವಿಧಿ ಅಡಿಯಲ್ಲಿ ದೇಶದ್ರೋಹದ ಆರೋಪ ಹೊರಿಸಲಾಗಿದೆ ಎಂದು ತಿಳಿಸಿದ್ದಾರೆ.

1962ರಿಂದಲೂ ಈ ವಿಧಿಯನ್ನು ಸತತವಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಪ್ರಸ್ತುತ ಕಾನೂನಿನಲ್ಲಿರುವ ಅಸ್ಪಷ್ಟತೆಯ ಲಾಭ ಪಡೆಯಲಾಗುತ್ತಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಜಗತ್ತಿನಾದ್ಯಂತ ವಸಾಹತುಶಾಹಿ ನಂತರದ ಪ್ರಜಾಪ್ರಭುತ್ವವಾದಿ ದೇಶಗಳು, ದೇಶದ್ರೋಹದ ವಿಧಿಗಳನ್ನು ರದ್ದುಗೊಳಿಸಿವೆ. ಭಾರತವು ತನ್ನನ್ನು ‘ಪ್ರಜಾಪ್ರಭುತ್ವವಾದಿ’ ದೇಶ ಎಂದು ಕರೆದುಕೊಳ್ಳುತ್ತದೆ. ಆದರೆ ದೇಶದ್ರೋಹದ ಅಪರಾಧವನ್ನು ‘ಪ್ರಜಾಪ್ರಭುತ್ವ ವಿರೋಧಿ’, ಅನಪೇಕ್ಷಿತ ಮತ್ತು ಅನಗತ್ಯವೆಂದು ಪ್ರಪಂಚದಾದ್ಯಂತ ಖಂಡಿಸಲಾಗುತ್ತದೆ ಎಂದು ಅರ್ಜಿದಾರರು ಹೇಳಿದ್ದಾರೆ.

1962ರಲ್ಲಿ ಕೇದಾರನಾಥ್ ಸಿಂಗ್ ವರ್ಸಸ್ ಬಿಹಾರ ರಾಜ್ಯದ ಪ್ರಕರಣದಲ್ಲಿ ಕಾನೂನಿನ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದ್ದ ತೀರ್ಪನ್ನು ಅರ್ಜಿದಾರರು ಉಲ್ಲೇಖಿಸಿದ್ದಾರೆ. ಸುಮಾರು ಆರು ದಶಕಗಳ ಹಿಂದೆ ನ್ಯಾಯಾಲಯಕ್ಕೆ ಕಾನೂನು ಸರಿ ಕಂಡಿರಬಹುದು. ಆದರೆ ಆ ಕಾನೂನು ಇಂದು ಸಾಂವಿಧಾನಿಕ ಮೌಲ್ಯ ಹೊಂದಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಜಿಂದಾಲ್: ದಿನವೂ 1 ಸಾವಿರ ಟನ್ ಆಮ್ಲಜನಕ ಪೂರೈಕೆ

ಬಳ್ಳಾರಿ: ‘ಜೆಎಸ್‌ಡಬ್ಲ್ಯು ಸ್ಟೀಲ್ ಸಂಸ್ಥೆಯು ಪ್ರತಿ ದಿನ 1 ಸಾವಿರ ಟನ್ ವೈದ್ಯಕೀಯ ಆಮ್ಲಜನಕವನ್ನು ಉತ್ಪಾದಿಸುತ್ತಿದೆ’ ಎಂದು ಜೆಎಸ್‌ಡಬ್ಲ್ಯು ಸ್ಟೀಲ್ ವಿಜಯನಗರ ವರ್ಕ್ಸ್ ಅಧ್ಯಕ್ಷ ರಾಜಶೇಖರ ಪಟ್ಟಣಶೆಟ್ಟಿ ತಿಳಿಸಿದ್ದಾರೆ.

‘ಏಪ್ರಿಲ್ ಆರಂಭದಲ್ಲಿ ಪ್ರತಿದಿನ ಸರಾಸರಿ 200 ಟನ್ ಆಮ್ಲಜನಕವನ್ನು ಉತ್ಪಾದಿಸುತ್ತಿತ್ತು. ನಂತರ ಈ ಪ್ರಮಾಣ 680 ಟನ್‌ಗೆ ಏರಿತ್ತು. ಸಂಸ್ಥೆಯು ಈಗ ಪ್ರತಿದಿನ 1 ಸಾವಿರ ಟನ್ ಆಮ್ಲಜನಕವನ್ನು ಉತ್ಪಾದಿಸುತ್ತಿದ್ದು, ಏಪ್ರಿಲ್ ತಿಂಗಳಲ್ಲಿ ಸಂಸ್ಥೆಯು ಸುಮಾರು 20 ಸಾವಿರ ಟನ್‌ನಷ್ಟು ಆಮ್ಲಜನಕವನ್ನು ಪೂರೈಸಿದೆ’ ಎಂದು ತಿಳಿಸಿದ್ದಾರೆ.

‘ಸಂಸ್ಥೆಯು ಕರ್ನಾಟಕವಷ್ಟೇ ಅಲ್ಲದೆ ಮಹಾರಾಷ್ಟ್ರ ಮತ್ತು ತಮಿಳುನಾಡು ಘಟಕಗಳಿಂದಲೂ ಆಮ್ಲಜನಕವನ್ನು ಉತ್ಪಾದಿಸುತ್ತಿದೆ’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭಾರತದಿಂದ ಬರುವ ಆಸ್ಟ್ರೇಲಿಯನ್ನರಿಗೆ ನಿಷೇಧ

ಮೆಲ್ಬರ್ನ್ (ಪಿಟಿಐ): ಭಾರತದಲ್ಲಿರುವ ಆಸ್ಟ್ರೇಲಿಯಾದ ನಾಗರಿಕರು ಸೋಮವಾರದ ನಂತರ ಸ್ವದೇಶಕ್ಕೆ ಹಿಂತಿರುಗುವುದನ್ನು ಆಸ್ಟ್ರೇಲಿಯಾ ಸರ್ಕಾರ ನಿಷೇಧಿಸಿದ್ದು, ನಿಯಮ ಉಲ್ಲಂಘಿಸಿದವರಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ ಭಾರಿ ಮೊತ್ತದ ದಂಡ ವಿಧಿಸಲಾಗುವುದು ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ.

ಈ ತಾತ್ಕಾಲಿಕ ನಿಷೇಧವು ಸೋಮವಾರದಿಂದ ಆರಂಭವಾಗಲಿದೆ. ನಿಯಮ ಉಲ್ಲಂಘಿಸುವವರಿಗೆ 5 ವರ್ಷಗಳ ಜೈಲು ಶಿಕ್ಷೆ ಮತ್ತು ₹ 37 ಲಕ್ಷ ಮೊತ್ತದ ಭಾರಿ ದಂಡ ವಿಧಿಸಲು ಅಲ್ಲಿನ ಸರ್ಕಾರ ಮುಂದಾಗಿದೆ.

‘ಭಾರತದಲ್ಲಿ, ಆಸ್ಟ್ರೇಲಿಯಾದ ಸುಮಾರು 9 ಸಾವಿರ ನಾಗರಿಕರಿದ್ದು ಅದರಲ್ಲಿ 600ಕ್ಕೂ ಹೆಚ್ಚು ಮಂದಿ ಅಸುರಕ್ಷಿತ ಸ್ಥಿತಿಯಲ್ಲಿದ್ದಾರೆ’ ಎಂದು ‘ದಿ ಸಿಡ್ನಿ ಮಾರ್ನಿಂಗ್ ಹೆರಾಲ್ಡ್’ ಪತ್ರಿಕೆಯು ವರದಿ ಮಾಡಿದೆ.

ಭಾರತದಿಂದ ಪ್ರಯಾಣ ನಿರ್ಬಂಧಿಸಿದ ಅಮೆರಿಕ

ವಾಷಿಂಗ್ಟನ್ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ ಭಾರತದಿಂದ ಅಮೆರಿಕಕ್ಕೆ ಪ್ರಯಾಣ ಮಾಡುವುದನ್ನು ನಿರ್ಬಂಧಿಸಲಾಗಿದೆ ಎಂದು ಬೈಡನ್ ಸರ್ಕಾರ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ಕಾರಿ ರೋಗ ನಿಯಂತ್ರಣ ಸಂಸ್ಥೆಗಳ ಸಲಹೆಯ ಮೇರೆಗೆ ಈ ನಿರ್ಧಾರ ತೆಗೆದುಕೊಂಡಿದ್ದು, ಇದು ಬರುವ ಮಂಗಳವಾರದಿಂದ (ಮೇ 4) ಜಾರಿಯಾಗಲಿದೆ ಎಂದು ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಜೆನ್ ಸಾಕಿ ಹೇಳಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟಕ್ಕೆ ಬೆಂಬಲ

ಯುನಿಸೆಫ್‌ನಿಂದ 3,000 ಆಮ್ಲಜನಕ ಕಾನ್ಸನ್‌ಟ್ರೇಟರ್

ವಿಶ್ವಸಂಸ್ಥೆ (ಪಿಟಿಐ): ಕೋವಿಡ್–19 ಪಿಡುಗಿನ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ನೆರವಾಗುತ್ತಿರುವ ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಯುನಿಸೆಫ್, 3,000 ಆಮ್ಲಜನಕದ ಕಾನ್ಸನ್‌ಟ್ರೇಟರ್‌ಗಳು ಸೇರಿದಂತೆ ರೋಗ ಪತ್ತೆ ಉಪಕರಣಗಳು, ಜೀವರಕ್ಷಕ ಪರಿಕರಗಳನ್ನು ರವಾನಿಸಿದೆ.

ಇದೇ ವೇಳೆ ಕೋವಿಡ್ ವಿರುದ್ಧದ ಲಸಿಕೆ ಎಲ್ಲ ಸಮುದಾಯದ ಗುಂಪುಗಳಿಗೆ ಸಮಾನವಾಗಿ ತಲುಪಲು ಹಾಗೂ ರಾಷ್ಟ್ರೀಯ ಲಸಿಕಾ ಅಭಿಯಾನದ ವೇಗವನ್ನು ಹೆಚ್ಚಿಸುವುದಕ್ಕಾಗಿ ಭಾರತ ಸರ್ಕಾರಕ್ಕೆ ನೀಡುತ್ತಿರುವ ಬೆಂಬಲವನ್ನು ಮುಂದುವರಿಸುವುದಾಗಿಯೂ ಯುನಿಸೆಫ್ ತಿಳಿಸಿದೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರಸ್ ಅವರ ಟ್ವೀಟ್ ಉಲ್ಲೇಖಿಸಿದ ಪ್ರಧಾನ ಕಾರ್ಯದರ್ಶಿಯವರ ಉಪ ವಕ್ತಾರ ಫರ್ಹಾನ್ ಹಕ್, ‘ವಿಶ್ವಸಂಸ್ಥೆಯ ಎಲ್ಲ ವಿಭಾಗಗಳು ಕೋವಿಡ್ ವಿರುದ್ಧ ಹೋರಾಟ ನಡೆಸುತ್ತಿರುವ ಭಾರತದ ಬೆಂಬಲಕ್ಕೆ ನಿಲ್ಲುತ್ತವೆ. ಈಗಿರುವ ಬೆಂಬಲವನ್ನು ಹೆಚ್ಚಿಸಲು ಸಿದ್ಧವಾಗಿವೆ’ ಎಂದು ಹೇಳಿದ್ದಾರೆ.

ಭಾರತದ ಈಶಾನ್ಯ ರಾಜ್ಯಗಳು ಮತ್ತು ಮಹಾರಾಷ್ಟ್ರದಲ್ಲಿರುವ ಕೆಲವು ಆಸ್ಪತ್ರೆಗಳಲ್ಲಿ 25 ಆಮ್ಲಜನಕ ಉತ್ಪಾದಕ ಘಟಕಗಳನ್ನು ಸ್ಥಾಪಿಸಲು ಯುನಿಸೆಫ್ ನೆರವು ನೀಡುತ್ತಿದೆ. ಜೊತೆಗೆ ದೇಶದಾದ್ಯಂತ ಬಂದರುಗಳಲ್ಲಿ ಥರ್ಮಲ್ ಸ್ಕ್ಯಾನರ್‌ಗಳನ್ನು ಅಳವಡಿಸಲು ನೆರವಾಗಿದೆ.

ಮೂಡಿಗೆರೆ ಕಾಫಿ

(10 ಕೆಜಿಗೆ)

ಎಪಿ	₹10325
ಎಸಿ	₹4115
ಆರ್‌ಪಿ	₹5100
ಆರ್‌ಸಿ	₹3000

ಮುಂಬೈ ಧಾರಣೆ

ಶೇಂಗಾ

1-5-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9350-9400
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1580 (1575)
ಒಂದು ವಾರದ ಡೆಲಿವರಿ	1575 (1570)
ಸೋಯಾ ಕಚ್ಚಾ	1410 (1395)
ಪಾಮ್ ವಾರದ ಡೆಲಿವರಿ	1313 (1310)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 46,800 (46,800)

ಬೆಳ್ಳಿ ಕೆ.ಜಿ 68,150 (67,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಸೆಲ್ಲಿಂಗ್
Farm House/ Land/ Resorts
Nelamangala
FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

Sites
Hesaraghatta
CNR DEVELOPERS and Builders BMRDA Sites Available.Contact 9448119275 / 7829134000

ವೈವಾಹಿಕ
Grooms Wanted
Kannada
ವರ ಬೇಕಾಗಿದೆ

ಕುಮಾರಿ ಶಿಲ್ಪಾ. ಎಚ್.
ಈಕೆಗೆ 30 ವರ್ಷಗಳು ಆಗಿದ್ದು ಹುಟ್ಟಿನಿಂದ ಕಿವುಡಿ ಮತ್ತು ಮೂಗಿಯಾಗಿರುತ್ತಾರೆ. ಉಳಿದಂತೆ ಯಾವುದೇ ನ್ಯೂನ್ಯತೆಗಳು ಇರುವುದಿಲ್ಲ. ಇವರು ಬೆಂಗಳೂರಿನ ಹನುಮಂತನಗರದ ನಿವಾಸಿಯಾಗಿದ್ದು, ಪರಿಶಿಷ್ಟಜಾತಿಯ ಮಾದಿಗ ಸಮುದಾಯಕ್ಕೆ ಸೇರಿದವರಾಗಿದ್ದು ವರ ಯಾವ ಜಾತಿಯವರಾಗಿದ್ದರು ಪರವಾಗಿಲ್ಲ. ಹೆಚ್ಚಿನ ಮಾಹಿತಿಗೆ 8970994102 ನಂಬರ್‌ಗೆ ಕರೆಮಾಡಿ

ಉದ್ಯೋಗಾವಕಾಶ
General
ತೋಟದಲ್ಲಿ ಕೆಲಸಮಾಡಲು ಫ್ಯಾಮಿಲಿ ಬೇಕಾಗಿದ್ದಾರೆ, ಉಚಿತ ವಸತಿ ಸೌಲಭ್ಯವಿದೆ, ಸಂಬಳ: 8,000/ ದಿಂದ 10,000/. ಸ್ಥಳ:ಚಿಕ್ಕನಾಯಕನಹಳ್ಳಿ, ತುಮಕೂರು. ಸಂಪರ್ಕಿಸಿ: 9845137288, 9480137288.

Hospital & Medical Jobs
REQUIRED NURSES Urgently:Male and Female For COVID DUTY in Bangalore, Hyderabad, Pune and Mumbai, Salary:30,000 to 50,000, Experience:0 to10 years (Gap accepted) for more details: careers@majhealthcare.in, Contact: 9606221218, 9606347575, 6364557575, 7022399993

Multiple Vacancy
GRAMIN ROJGAR Kalyan Sansthan is recruiting for various posts. Applications are being invited for Karnataka. Visit www.grks.org for details

Part-Time Jobs
ಮನೆಯಿಂದಲೇ ಕಂಪ್ಯೂಟರ್ ಆಫ್ ಲೈನ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ವಾರಕ್ಕೆ 3000/- ವಯಸ್ಸಿನ ಮಿತಿಯಿಲ್ಲ 9902603707, 9686115054

ವ್ಯಾಪಾರ
Business to Business
Hotel & Restaurant
BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

ಶಿಕ್ಷಣ
Special Courses
IN SHIVAMOGGA, 2-year course for PUC, CET, JEE with proper guidance All those appearing for these exams, For admission, Contact Siddharth Anantram Bhat, MSc, IIT Roorkee. Cell: 9324336949.

ಭವಿಷ್ಯ
Astrology
ಸ್ತ್ರೀ ವಶೀ ಸ್ತ್ರೀ ವಶೀಕರಣ, ಪುರುಷ ವಶೀಕರಣ, ಮಾಟ ಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call 9880856233 ▪ 9886213331
Email: Santhoshkumar@deccanherald.co.in

REMEMBRANCE & OBITUARIES
If you wish to pay homage to your loved ones who have left for their heavenly abode or just want to express gratitude to your kith and kin, we would be honoured to guide you with all that is necessary to express your wishes in our esteemed newspapers,
DECCAN HERALD & PRAJAVANI
Please contact us at :
DH DECCAN HERALD ಪ್ರಜಾವಾಣಿ
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
E-mail: dhclassifieds@deccanherald.co.in

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 2 ಮೇ 2021

ಎಂ.ಎ. ಹೆಗಡೆ ನಿರ್ಗಮನ: ಬಡವಾದ ಬಡಗು 9

ಸಾವಿನ ಬಳ್ಳಿಯೋ? ಜೀವದ ಬಳ್ಳಿಯೋ? 10



ಕರ್ನಾಟಕದ ವಾಗ್ಗೇಯ ಪರಂಪರೆ 11

ಕಲೆ: ವಿಶ್ವನಾಥ ಎ.ಎಸ್.

ರಂಜಾನ್ ಕಾಲದ ಅಭ್ಯಾಗತರು

ಉದ್ದವಾದ ಬಣ್ಣ ಮಾಸಿದ ಜೋಳಿಗೆ, ಹಳೆಯ ಮರಕಟ್ಟಿನ ಚರ್ಮದ ಧಪ್ ಹಿಡಿದು ಬರುತ್ತಿದ್ದ ಸೂಫಿ, ಅತ್ತರು ಮಾರುವ ಹಾಜಿಕ್ಕ, ಹೊಸಬಟ್ಟೆ ಹೊತ್ತು ಹೊರೆವ್ಯಾಪಾರ ಮಾಡುತ್ತಿದ್ದ ಪೊನ್ನುಚಾಮಿ ಅಣ್ಣಾಚ್ಚಿ... ಅಬ್ಬಬ್ಬಾ! ರಂಜಾನ್ ಬಂತೆಂದರೆ ಮಲೆನಾಡಿನ ಈ ಹಳ್ಳಿಗಳಿಗೆ ಹಿಂದೆ ಎಷ್ಟೊಂದು ಅಭ್ಯಾಗತರು ಬರುತ್ತಿದ್ದರಲ್ಲ. ಈಗ ಅವರೆಲ್ಲ ಎಲ್ಲಿ ಕಾಣೆಯಾದರೋ?!

ಮುಸ್ತಾಫ ಕೆ.ಎಚ್.

ದಟ್ಟ ಮಲೆಕಾಡುಗಳ, ನದಿ ಗುಡ್ಡಗಳ ಅಂಚಿನಲ್ಲಿರುವ, ಕಾಫಿತೋಟಗಳಿಂದ ಆವೃತವಾದ ಸಣ್ಣ ಊರು ನನ್ನದು. ಅಲ್ಲೊಂದು ಮಸೀದಿ. ರಂಜಾನ್ ತಿಂಗಳ ಕೊನೆಯ ಹತ್ತು ದಿನಗಳ ರಾತ್ರಿಗಳಲ್ಲಿ ಆ ಮಸೀದಿಯು ಆರಾಧನೆಯ ತತ್ವಮಸಿಯನ್ನು ಪರವಶಗೊಳಿಸಲು ಸಜ್ಜಾಗುತ್ತಿತ್ತು. ಲೈಲತುಲ್ ಕದರಿನ ಫಲವನ್ನು ಬಯಸಿ ಆ ರಾತ್ರಿಗಳಲ್ಲಿ ಮಸೀದಿ ಜನರಿಂದ ತುಂಬಿರುತ್ತಿತ್ತು. ಎಂದೂ ಕಂಡರಿಯದ, ಕೇಳಿ ಮಾತ್ರ ಗೊತ್ತಿರುವ ದ್ವೀಪದಿಂದ ಪವಾಡಿಗ ದೀಬಿನ ಸೂಫಿಯೊಬ್ಬ ನಮ್ಮೂರಿಗೆ ಬರುತ್ತಿದ್ದ. ಕಡಲು ಕಾಲುವೆ, ರಸ್ತೆ, ರಹದಾರಿ, ನದಿ, ಬೆಟ್ಟ, ನಗರ, ಗ್ರಾಮಗಳ ದಾಟಿ ಮೊಯ್ಯದ್ದೀನ್ ಜುಮ್ಮಾ ಮಸೀದಿಗೆ ಒಂದು ವರ್ಷವೂ ತಪ್ಪಿಸದೆ ರಂಜಾನ್ ಕಾಲದಲ್ಲಿ ಆತ ಹಾಜರಾಗುತ್ತಿದ್ದ.

ವರ್ಷಪೂರ್ತಿ ಕಂಡಕಂಡ ಕಡೆಯಲ್ಲಿ ಠಿಕಾಣಿ ಹೂಡುವ ಆ ಸೂಫಿಯನ್ನು ಜನ ತಂಜಳ್ ಎಂದು ಗೌರವದಿಂದ ಕರೆಯುತ್ತಿದ್ದರು. ಆತನ ಹೆಸರು ಊರಿನಲ್ಲಿ ಯಾರಿಗೂ ಗೊತ್ತಿರಲಿಲ್ಲ. ತಂಜಳ್ ಎಂದಷ್ಟೇ ಪರಿಚಿತನಾದ ಆತನ ಪ್ರಯಾಣದ ಬಗ್ಗೆ ಮಕ್ಕಳ ಗುಂಪಿನಲ್ಲಿ ಚರ್ಚೆಗೆ ಬರವಿರಲಿಲ್ಲ. ಮುಸಲ್ಲಾದಲ್ಲಿ ಕುಳಿತರೆ ಸಾಕು, ತಂಜಳ್ ಹೇಳಿದ ಜಾಗಕ್ಕೆ ಗಾಳಿಯಲ್ಲಿ ವೇಗವಾಗಿ ಹಾರುತ್ತಲೇ ಮುಸಲ್ಲಾ ತಂಜಳರನ್ನು ತಂದು ಎಲ್ಲಿಗೆ ಬೇಕು ಅಲ್ಲಿಗೆ ಸೇರಿಸುತ್ತದೆ ಎಂದೂ; ಪ್ರವಾದಿ ನೂಹನಂತೆ ದೊಡ್ಡ ಹಡಗು ಕಟ್ಟಿ ದ್ವೀಪದಿಂದ ಇಲ್ಲಿಗೆ ಬರುತ್ತಾರೆ ಎಂದೂ; ತಂಜಳ್‌ಗೆ ಪವಾಡ ಮಾಡುವ ಶಕ್ತಿ ಇರೋದ್ರಿಂದ ಅವರು ಇಷ್ಟಪಟ್ಟ ಜಾಗಕ್ಕೆ ಹೋಗಿ ಬರಲು ಕರಾಮತ್ತಿನ ಶಕ್ತಿಯನ್ನು ಬಳಸುತ್ತಿದ್ದರು ಎಂದೂ ತರಹೇವಾರಿ ಚರ್ಚೆಗಳು ನಡೆಯುತ್ತಿದ್ದವು. ಅಷ್ಟರಮಟ್ಟಿಗೆ ತಂಜಳ್‌ಗೆ ಕರಾಮತ್ತು ಸಿದ್ಧಿಸಿತ್ತು ಎಂದು ಮಕ್ಕಳಾಗಿದ್ದ ನಾವು ಬಹುವಾಗಿ ನಂಬಿದ್ದೆವು.

ಆದರೆ ತಂಜಳ್ ಆ ಮಸೀದಿಗೆ ಬರುವಾಗ ಅವರ ಬಳಿ ಹಾರುವ ಮುಸಲ್ಲಾವಾಗಲಿ, ನೂಹನ ಹಡಗು ಹೋಗಲಿ ನಮ್ಮೂರಿನ ನದಿಯಲ್ಲಿ ತೇಲುವ ಹಾಯಿದೋಣಿಯೂ ಇರುತ್ತಿರಲಿಲ್ಲ. ಒಂದು ಉದ್ದವಾದ ಬಣ್ಣ ಮಾಸಿದ ಜೋಳಿಗೆ, ಅದರಲ್ಲೊಂದಿಷ್ಟು ಹಳೆಯ ಬಟ್ಟೆ, ಒಂದು ಹಳೆಯ ಮರಕಟ್ಟಿನ ಚರ್ಮದ ಧಪ್, ಒಂದಿಷ್ಟು ಸೊಪ್ಪು, ಬೇರು, ನಾರು, ಎಣ್ಣೆ, ಬಿಟ್ಟರೆ ಬೇರೇನೂ ಇರುತ್ತಿರಲಿಲ್ಲ. ಮದರಂಗಿ ಹಾಕಿ ಕೆಂಪಿಸಿದ ಉದ್ದವಾದ ಗಡ್ಡವನ್ನು ನೀವುತ್ತಾ; ತಲೆಗೆ ಬಿಗಿಯಾಗಿ ರುಮಾಲು ಕಟ್ಟಿ; ನೀಳವಾದ ಹಸಿರು ಜುಬ್ಬಾ, ಕಳ್ಳಿ ಪಂಚೆ ತೊಟ್ಟು; ಧುತ್ತನೆ ನಶೆ ಏರಿಸಿ, ಅತ್ತರನ್ನೂ ಪೂಸಿ; ಉರಿಯಂತಹ ಸುರ್ಮಾ ಹಚ್ಚಿದ ಕಣ್ಣುಗಳ ಜ್ವಲಿತ ರೂಪವನ್ನು ಪ್ರದರ್ಶಿಸುತ್ತಾ ಅರಬೀಮಿಶ್ರಿತ ಮಲಯಾಳಂನ ವಿಶಿಷ್ಟ ಭಾಷಾಶೈಲಿಯಲ್ಲಿ ಮಾತನಾಡುವಾಗ ಭಯಮಿಳಿತ ಕೌತುಕ ಎಲ್ಲರ ಕಣ್ಣುಗಳಲ್ಲೂ ಎದ್ದು ಕಾಣುತ್ತಿತ್ತು. ಅರೇಬಿಯಾದಿಂದ ಹಡಗಿನಲ್ಲಿ ಕೇರಳದ ಕಡಲತಡಿಗೆ ಇಸ್ಲಾಂ ಪ್ರಚಾರಕ್ಕೆ ಬಂದ ಸಂತರ ಕುಟುಂಬ ವರ್ಗಕ್ಕೆ ಸೇರಿದವರು ಈ ತಂಜಳ್ ಎಂದೂ ಅವರ ಕರಾಮತ್ತಿನ ಬಗೆಗಿನ ತೋಂಡಿಮಾತು ಊರಿನ ತುಂಬ ಕಥೆಯಾಗಿ ಜೀವ ಪಡೆದಿದ್ದವು. ಇನ್ನೂ ಕೆಲವರು ಬಾಗ್ದಾದಿನ ಸೂಫಿಸಂತನ ಪರಂಪರೆಗೆ ಸೇರಿದವರು ಈ ತಂಜಳ್, ಅದರಿಂದ ಅವರು ಸಹ 'ಶೇಖ್' ಎಂದು ಗತಕಾಲದ ಕುರುಹುಗಳಿಲ್ಲದ ಕಥೆಗೆ ಜೀವತುಂಬಿ ಜನ, ಮಕ್ಕಳಾದ ನಮಗೆ ಹೇಳುತ್ತಿದ್ದರು.

ತಂಜಳ್ ಊರಿನಲ್ಲಿ ಇದ್ದಷ್ಟು ದಿನವೂ ಇಸ್ಮ್ ಮಾಡಿ ಶಿರ್ಕ್ ಕಿತ್ತೆಸೆಯೂದು, ಜಿನ್‌ಗಳ ಜೊತೆಗೆ ಮಾತನಾಡಿ ಜನರ ಸಮಸ್ಯೆಗೆ ಪರಿಹಾರ ಕೊಡುವುದು, ಪಿಂಗಾಣಿಯ ಪಾತ್ರೆಗೆ ಬರಕತ್‌ಗಾಗಿ ಕಪ್ಪುಮಸಿಯಲ್ಲಿ ಅರಬಿಯಲ್ಲಿ ಸೂರತ್ ಬರೆದುಕೊಡುವುದು, ಕಾಡುಮೇಡು ಅಲೆದು ತಂದ ಬೇರನ್ನು ಕಾಯಿಸಿ ಕಷಾಯ ಮಾಡಿ ಕೊಡೋದನ್ನು ಮುಖ್ಯ ಕಾಯಕವನ್ನಾಗಿ ಮಾಡಿಕೊಂಡಿದ್ದರು. ಮಕ್ಕಳ ತಲೆಯ ಮೇಲೆ ಕೈ ಇಟ್ಟು ನೀವುತ್ತಲೇ 'ಅಲ್ಲಾವು ನಲ್ಲದೇ ಬರುತ್ತುಂ' (ದೇವರು ಒಳ್ಳೆದು ಮಾಡ್ತಾನೆ ನಿಮಗೆ) ಎಂದು ಹಾರೈಸುತ್ತಿದ್ದರು. ಈಗಲೂ ಅರ್ಥವಾಗದ ವಿಚಾರ ಎಂದರೆ ತಂಜಳ್ ಎಂದಿಗೂ ಯಾರಿಂದಲೂ ಹಣ ಬೇಡುತ್ತಿರಲಿಲ್ಲ. ಅವರ ಖರ್ಚು ಊರಿನವರು ನೀಡುವ ಅನ್ನ ಆಹಾರ ಮಾತ್ರವಾಗಿತ್ತು.

ರಂಜಾನ್‌ನ ಲೈಲತುಲ್ ಕದರಿನ ರಾತ್ರಿಗಳಲ್ಲಿ ನಮ್ಮೂರ ಹಳೆಯ ಹಂಚಿನ ಮಸೀದಿಯ ತುಂಬ ತರಾವಿ, ತಸ್ಬೀ, ತಹಜ್ಜುದ್ ನಮಾಜ್‌ಗಳ ಜೊತೆಗೆ ಸ್ವಲಾತ್, ದಿಕ್ರ್, ಕುರ್‌ಆನ್ ಪಾರಾಯಣ ಧಾರಾಳವಾಗಿ ನಡೆಯುತ್ತಿದ್ದವು. ಮೈಮರೆತ ಭಂಗಿಯಲ್ಲಿ ಎಲ್ಲವನ್ನೂ ಆ ರಾತ್ರಿ ನುಂಗಿ ಬೆಳಕಾಗುವ ಮೊದಲು ಅತ್ತಾಳ (ಸಹರಿ) ಉಣ್ಣುವ ಸಮಯದವರೆಗೂ ಆರಾಧನೆ ನಡೆಯುತ್ತಿತ್ತು. ಈ ಎಲ್ಲಾ ಇಬಾದತ್‌ನಲ್ಲೂ ದ್ವೀಪದ ತಂಜಳ್ ಸಂತನಂತೆ ಸವೆಯುತ್ತಾ ಸವೆಯುತ್ತಾ ಚರ್ಮದಿಂದ ಮಾಡಿದ ಧಪ್‌ನಲ್ಲಿ ದಾಯಿರದ ಶಬ್ದವನ್ನು ಮೊಳಗಿಸಿ ಹಾಡುತ್ತಾ ತನ್ಮಯನಾಗಿ ಏನೋ ಒಂದನ್ನು ಗಳಿಸಲು ತಡವರಿಸುತ್ತಲೇ ಇರುವುದು ನನ್ನ ಸ್ಮೃತಿಪಟಲದಲ್ಲಿ ಈ ಕ್ಷಣದವರೆಗೂ ಮಾಸದಂತೆ ಅಚ್ಚೊತ್ತಿದೆ.

ಊರಿನ ಕೆಲವರಿಗೆ ತಂಜಳರನ್ನು ಕಂಡರೆ ಅಷ್ಟಕ್ಕಷ್ಟೆ. 'ತಂಜಳ್ ನಾವಂದುಕೊಂಡಷ್ಟು ಸುಭಗನಲ್ಲ. ಆತನ ಜೋಳಿಗೆಯಲ್ಲಿ ಗಾಂಜಾದಂತಹ ಅಮಲು ಬರಿಸುವ ವಸ್ತು ಯಾವಾಗ್ಲೂ ಇರುತ್ತೆ. ಒಣಗಿದ ಗಾಂಜಾ ಸೊಪ್ಪನ್ನು ಬೀಡಿಯಂತೆ ಸುರುಟಿ ಎರಡು ಕೈಗಳಲ್ಲಿ ಬಲವಾಗಿ ಹಿಡಿದು ಆ ಚುಟ್ಟಾವನ್ನು ಪೂರ್ತಿಯಾಗಿ ಸೇದೋದನ್ನ ನಾವೇ ನೋಡಿದ್ದೇವೆ! ಆ ಚುಟ್ಟಾದ ಹೊಗೆಯ ಜೊತೆಗೆ ಬರೋ ಘಾಟು ಜನರನ್ನು ತಾಕಿದ್ರೆ ಸಾಕು ವಶೀಕರಣಕ್ಕೆ ಒಳಗಾಗುತ್ತಾರೆ. ನೀವು ಮಕ್ಕಳು, ಆತನ ಜೊತೆ ಜಾಸ್ತಿ ಸೇರಬೇಡಿ. ತೊಡೆಸಂದಿಗೆ ಕೈಹಾಕುವ ಮನುಷ್ಯ ಆತ! ಅದು ಇದು ಎಂದು ಕಥೆ ಹೇಳಿ ಮಕ್ಕಳಿಗೆ ಮಂಕುಬರಿಸಿ ಅವನ ಜೊತೆಯಲ್ಲಿ ಕರ್ಕೊಂಡ್ ಹೋಗ್ತಾನೆ ಆ ಮಾಯಾವಿ', ಎಂದು ಹೆದರಿಸುತ್ತಿದ್ದರು.

ಜೊತೆಗೆ ಘಾಟಿ ಮುದುಕ. ಸಂತನಂತೆ ವೇಷ ಹಾಕಿಕೊಂಡಿದ್ದಾನೆ. ಸುರ್ಮಾ ಹಾಕಿರುವ ಅವನ ಉರಿಯಂತಹ ಕಣ್ಣುಗಳನ್ನು ಬಲಕ್ಕೂ ಎಡಕ್ಕೂ ಆಡಿಸಿದ್ರೆ ಸಾಕು, ನಮಗೆ ನಮ್ಮ ಹೆಂಡತಿಯರು ಇರಲ್ಲ, ನಮ್ ಮಕ್ಕಳಿಗೆ ತಾಯಿನೂ ಇರಲ್ಲ. ಇಲ್ಲಿಂದ ಕಣ್‌ಕಟ್ಟು ಮಾಡಿ ಹೆಂಗಸರನ್ನು, ಮಕ್ಕಳನ್ನು ದ್ವೀಪಕ್ಕೆ ಹಾರಿಸಿಕೊಂಡು ಹೋಗುವ ಈ ತಂಜಳ್, ದ್ವೀಪದಲ್ಲಿ ಅವರನ್ನು ಆಳವಲ್ಲದ ಕಡಲಿನಲ್ಲಿ ಚಿಪ್ಪು ಹೆಕ್ಕುವ ಕೆಲಸಕ್ಕೆ ನಿಯೋಜಿಸುತ್ತಾನೆ. ಬೇಕಾದಾಗ ಬೇಕಾದ ಹಾಗೆ ಬಳಸುತ್ತಾನೆ. ಆದ್ದರಿಂದ ಈತ ಸಂತನಲ್ಲ. ಸಂತನ ವೇಷ ತೊಟ್ಟಿರುವ ಮಾಟಗಾರ ಫಕೀರ. ಆದಷ್ಟೂ ಆ ಮಾಟಗಾರ ಮುದುಕನಿಂದ ಮಕ್ಕಳು ಹೆಂಗಸರು ದೂರ ಇರಬೇಕು, ಎಂಬ ಕೆಲವರ ಗಾಳಿ ಮಾತುಗಳು ಆ ಕಾಲಕ್ಕೆ ನನ್ನ ಮನದಲ್ಲಿ ಸದಾ ಎಚ್ಚರಿಕೆಯ ಭಾವವನ್ನು ಉಂಟು ಮಾಡಿದ್ದಂತೂ ಸುಳ್ಳಲ್ಲ. ಆದರೆ ತಂಜಳ್ ಯಾರನ್ನೋ ಅಪಹರಿಸಿಕೊಂಡು ಹೋದ ಇಲ್ಲವೆ ಜನರು ಹೇಳುವಂತೆ ಆತ ಕೆಟ್ಟದಾಗಿ ನಡೆದುಕೊಂಡ ಘಟನೆಗಳು ಘಟಿಸಿದ್ದು ನನ್ನ ಅರಿವಿಗಂತೂ ಬಂದಿಲ್ಲ.

ಇನ್ನು ರಂಜಾನ್ ತಿಂಗಳ ಮುಂಜಾನೆಯ ಆಝಾನ್‌ಗೂ ಮೊದಲು ನನ್ನೂರಿನ ರಸ್ತೆಗಳಲ್ಲಿ ಧಪ್ ಎಂಬ ಚರ್ಮವಾದ್ಯವನ್ನು ಬಡಿಯುತ್ತಾ ಸುಶ್ರಾವ್ಯವಾಗಿ ಹಾಡುತ್ತಾ ನಿದ್ರೆಯಲ್ಲಿ ಮೈಮರೆತ ಉಪವಾಸಿಗರನ್ನು ಸಹರಿಯ (ಅತ್ತಾಳ) ಊಟಕ್ಕಾಗಿ ಎಬ್ಬಿಸುವ ಸಂಪ್ರದಾಯವನ್ನು ಕಾಣುವ ಅವಕಾಶವನ್ನು ಬಾಲ್ಯಕಾಲ ಕರುಣಿಸಿತ್ತು. ಮುರುಗಮಲ್ಲ, ಎರ್ವಾಡಿ, ಜಾವಗಲ್‌ನಂತಹ ದರ್ಗಾಗಳಿಂದ ರಂಜಾನ್ ಕಾಲಕ್ಕೆ ಬರುವ ಈ ಅತ್ತಾಳ ಕೊಟ್ಟಿಗಳು ಅಥವಾ ದಾಯಿರಾದವರು ಮಸೀದಿಯ ಪಕ್ಕದಲ್ಲೇ ತಮ್ಮ ಠಿಕಾಣಿಯನ್ನು ಹೂಡುತ್ತಿದ್ದರು. ವೇಷಭೂಷಣದಲ್ಲಿ ದ್ವೀಪದ ತಂಜಳ್‌ರನ್ನೇ ಹೋಲುತ್ತಿದ್ದರು. ತಂಜಳ್ ಮಲಯಾಳಂ ಮಾತನಾಡಿದರೆ ಈ ದಾಯಿರಾದವರು ತಮಿಳು, ಉರ್ದು ಮಾತನಾಡುತ್ತಿದ್ದರು. ಹಗಲು ಹೊತ್ತಿನಲ್ಲಿ ದಾಯಿರಾದವರು ಹಾಡುತ್ತಾ ಹಾಡುತ್ತಾ ಅಂಗಡಿ, ರಸ್ತೆ, ಮನೆಗಳಿಗೆ ತೆರಳಿ ಅಕ್ಕಿ, ತೆಂಗಿನಕಾಯಿ, ಹಣವನ್ನು ಜನರಿಂದ ಝಕಾತ್ ರೂಪದಲ್ಲಿ ಪಡೆಯುತ್ತಿದ್ದರು. ಉಪವಾಸ ವ್ರತವನ್ನು ಮುರಿಯುವ ಹೊತ್ತಿಗೆ ಮಸೀದಿಯ ಪ್ರಾಂಗಣದಲ್ಲಿ ಇಫ್ತಾರ್‌ನ ಆಯೋಜನೆಗಳು ಭರದಿಂದ ಸಾಗುತ್ತಿದ್ದವು. ಈಗ ಇರುವಂತೆ ಯಾವ ಐಷಾರಾಮಿ ತಿಂಡಿಗಳು ಇಫ್ತಾರ್‌ನಲ್ಲಿ ಇರುತ್ತಿರಲಿಲ್ಲ. ಅಬುಚ್ಚಾಕ ಮಾಡುವ ಜೀರಿಗೆ, ತೆಂಗಿನಕಾಯಿ, ಕೊತ್ತಂಬರಿ ಹಾಕಿ ಮಾಡಿದ ಗಂಜಿ ಕಾಲದ ಅತ್ಯಂತ ಸ್ವಾದಿಷ್ಟ ಭಕ್ಷ್ಯವಾಗಿ ನಮ್ಮ ಉಪವಾಸದ ಸಂಭ್ರಮವನ್ನು ಹೆಚ್ಚಿಸುತ್ತಿದ್ದವು. ತಂಜಳ್ ಮತ್ತು ದಾಯಿರಾದವರು ಮಕ್ಕಳಾದ ನಮ್ಮ ಜೊತೆಯಲ್ಲಿ ಕುಳಿತು ಉಪವಾಸ ವ್ರತ ಪೂರ್ಣಗೊಳಿಸುತ್ತಿದ್ದರು.

ಈ ಇಬ್ಬರು ಅತಿಥಿಗಳಂತೆ ನನ್ನೂರಿಗೆ ರಂಜಾನ್‌ನ ಕೊನೆಗೆ ಬರುವ ಅತಿಥಿಗಳೆಂದರೆ ಅತ್ತರು ಮಾರುವ ಹಾಜಿಕ್ಕ ಮತ್ತು ತಮಿಳುನಾಡಿನಿಂದ ಹೊಸಬಟ್ಟೆ ಹೊತ್ತು ಹೊರೆವ್ಯಾಪಾರ ಮಾಡುವ ಪೊನ್ನುಚಾಮಿ ಅಣ್ಣಾಚ್ಚಿ. ಹಾಜಿಕ್ಕಾನ ಅತ್ತರು ತುಂಬಿದ ಪೆಟ್ಟಿಗೆಯು ಮಸೀದಿಯ ಮುಂದಿರುವ ಗೂಡಂಗಡಿ ಪಕ್ಕದಲ್ಲಿ ವಿರಾಜಮಾನಗೊಳ್ಳುತ್ತಿತ್ತು. ಜನ್ನಾತುಲ್ ಫಿರ್ದೌಸ್‌ನಂತಹ ಸುಗಂಧಭರಿತ ಅತ್ತರಿನ ಜೊತೆಗೆ ಬಣ್ಣಬಣ್ಣದ ಕಸವಿನ ಟೊಪ್ಪಿಗಳು, ಬೆರಳಿಗೆ ತೊಡುವ ಹವಳದ ಕಲ್ಲಿನ ಉಂಗುರಗಳು, ತಸ್ಬಿಮಾಲೆಗಳು ಮಕ್ಕಳಾದ ನಮಗೆ ಮುಂಬರುವ ಈದ್‌ನ ಮೊಹಬ್ಬತ್ತನ್ನು ಪಸರಿಸುತ್ತಿದ್ದವು. ಬಾಪನಲ್ಲಿ ಕಾಡಿಬೇಡಿ ಸಣ್ಣಸೀಸೆಯ ಅತ್ತರನ್ನು ಖರೀದಿ ಮಾಡಿ ಈದ್‌ನ ಮುಂಜಾವಿಗಾಗಿ ಕಾಯುವ ಸ್ಥಿತಿ ನನ್ನದಾಗಿತ್ತು. ಇನ್ನೂ ಪೊನ್ನುಚಾಮಿ ಅಣ್ಣಾಚ್ಚಿ ಮನೆಮನೆಗೆ ತೆರಳಿ ರಂಜಾನಿನ ಕೊಡಿಬಟ್ಟೆಗಳ ವ್ಯಾಪಾರವನ್ನು ಭರದಿಂದ ಮಾಡುತ್ತಿದ್ದರು. ಕಂತು ವ್ಯಾಪಾರ, ಸಾಲದ ವ್ಯಾಪಾರಗಳನ್ನು ವರ್ಷದಿಂದ ವರ್ಷಕ್ಕೆ ಅಣ್ಣಾಚ್ಚಿ ಮತ್ತು ಊರಿನಮಂದಿ ಪ್ರಾಮಾಣಿಕವಾಗಿ ನಡೆಸಿಕೊಂಡು ಹೋಗುತ್ತಿದ್ದರು.

ಉಪವಾಸ ಕಾಲ ಮುಗಿದು ಈದ್ ಬಂದಿತೆಂದರೆ ಸಾಕು ಎಲ್ಲಾ ಅಭ್ಯಾಗತರು ನನ್ನೂರಿನಿಂದ ಕಣ್ಮರೆ ಆಗುತ್ತಿದ್ದರು. ಕಾಲ ಬದಲಾದಂತೆ ಊರು ಬದಲಾಗಿದೆ, ಮನಸ್ಸುಗಳು ಬದಲಾಗಿವೆ. ತಂಜಳ್, ದಾಯಿರಾದವರು, ಅತ್ತರು ಹಾಜಿಕ್ಕ, ಪೊನ್ನುಚಾಮಿ ಅಣ್ಣಾಚ್ಚಿ, ಅಬುಚ್ಚನ ಗಂಜಿ ಎಲ್ಲವೂ ಊರಿನಿಂದ ಮರೆಯಾಗಿದೆ. ಕೋವಿಡ್‌ನ ದುರಿತ ಸಂದರ್ಭದಲ್ಲಿ ಅವರ ನೆನಪುಗಳು ನನ್ನ ಈಗಿನ ರಂಜಾನನ್ನು ಹಾಗೇ ಜೀವಂತವಾಗಿಟ್ಟಿವೆ.

ಡೆನಿಮ್ ಡೇ...

ರೂಢಿಗತ ಮಿಥ್ಯೆಗಳನ್ನು ಜೀನ್ಸ್‌ಧಾರಿಗಳು ಮೆಟ್ಟಿ ನಿಂತ ದಿನ

ಡಿ. ಉಮಾಪತಿ

ಕಿರುತೆರೆ ತಾರೆಗಳಾದ ಭವ್ಯ ಹಾಗೂ ದಿವ್ಯ ಗೌಡ ಜೀನ್ಸ್ ದಿರಿಸಿನಲ್ಲಿ.... ಚಿತ್ರ: ರಂಜು ಪಿ.

ಏಪ್ರಿಲ್ ಮಾಸದ ಕಟ್ಟಕಡೆಯ ಬುಧವಾರವನ್ನು 'ಡೆನಿಮ್ ಡೇ' ಎಂದು ಆಚರಿಸುವುದುಂಟು. ಲೈಂಗಿಕ ಹಲ್ಲೆಯ ಕುರಿತು ಅರಿವು ಮೂಡಿಸುವ ಸದುದ್ದೇಶದ ಈ ದಿನ ಮೊನ್ನೆ ಮೊನ್ನೆ ಸದ್ದಿಲ್ಲದೆ ಸರಿದು ಹೋಯಿತು.

ಮಹಿಳೆಯ ಮೇಲೆ ನಡೆಯುವ ಲೈಂಗಿಕ ಹಲ್ಲೆಗಳ ಸುತ್ತ ನೆಲೆಸಿರುವ ರೂಢಿಗತ ಮಿಥ್ಯೆಗಳು ನೂರಾರು. ಅವುಗಳನ್ನು ಹುಟ್ಟಿಹಾಕಿ ರೂಢಿಯಲ್ಲಿ ಇರಿಸಿರುವುದು ಗಂಡಾಳಿಕೆಯೆಂಬ ಪಟ್ಟಭದ್ರ ಹಿತಾಸಕ್ತಿ. ಅತ್ಯಾಚಾರಿಯ ರಕ್ಷಣೆಗಿಳಿದು ಅತ್ಯಾಚಾರಕ್ಕೆ ಬಲಿಯಾಗುವ ಹೆಣ್ಣನ್ನೇ ದೂರುತ್ತ ಬಂದಿದೆ ಪುರುಷಪ್ರಧಾನ ವ್ಯವಸ್ಥೆ. ಮಾನವ ಇತಿಹಾಸ ಮಾತ್ರವೇ ಅಲ್ಲ, ಶಾಸ್ತ್ರ-ಪುರಾಣ-ಸಂಹಿತೆಗಳಲ್ಲೂ ತುಂಬಿ ಸಮಕಾಲೀನ ಸಮಾಜಕ್ಕೂ ತುಳುಕಿರುವ ಅನ್ಯಾಯವಿದು.

> ಮಹಿಳೆಯ ಮೇಲಿನ ಲೈಂಗಿಕ ಹಲ್ಲೆಗಳ ಸುತ್ತ ಹರಡಿರುವ ರೂಢಿಗತ ಮಿಥ್ಯೆಗಳು ನೂರಾರು. ಆ ಮಿಥ್ಯೆಗಳನ್ನು ಪುಡಿ ಮಾಡಲೆಂದೇ ಜೀನ್ಸ್ ಧರಿಸಿ ಪ್ರತಿಭಟನೆಗಿಳಿದರು ಈ ನಾರಿಯರು. ಇಷ್ಟಕ್ಕೂ ಡೆನಿಮ್ ಡೇ ರೂಪುತಾಳಿದ್ದು ಹೇಗೆ ಗೊತ್ತೆ?

ಅತ್ಯಾಚಾರಿಯೊಬ್ಬನಿಗೆ ಶಿಕ್ಷೆ ನೀಡಿದ್ದ ತೀರ್ಪೊಂದನ್ನು ರದ್ದುಗೊಳಿಸಿದ್ದಲ್ಲದೆ ಬಾಧಿತಳನ್ನೇ ದೂರಿದ ಇಟಲಿಯ ಸುಪ್ರೀಂ ಕೋರ್ಟಿನ ನಡೆ ಡೆನಿಮ್ ದಿನಾಚರಣೆಯ ಹಿಂದಿನ ಪ್ರಚೋದನೆ. ಸಂತ್ರಸ್ತೆಯು ಬಿಗಿಯಾದ ಜೀನ್ಸ್ ಪ್ಯಾಂಟ್ ತೊಟ್ಟಿದ್ದಳು. ಆಕೆಯ ಸಹಕಾರ ಇಲ್ಲದೆ ಅತ್ಯಾಚಾರಿ ಅದನ್ನು ಬಿಚ್ಚುವುದು ಅಸಾಧ್ಯ. ನೆರವಾಗಿದ್ದಾಳೆಂದರೆ ತಾನು ಒಪ್ಪಿಗೆ ನೀಡಿದಳೆಂದೇ ಅರ್ಥ ಎಂದು ಸುಪ್ರೀಂ ಕೋರ್ಟ್ ಸಾರಿತು. ತೀರ್ಪಿನ ವಿರುದ್ಧ ಪ್ರತಿಭಟನೆ ಸಿಡಿಯಿತು. ಮರುದಿನ, ಇಟಲಿಯ ಸಂಸತ್ತಿನಲ್ಲಿ ಕೆಲಸ ಮಾಡುವ ಮಹಿಳೆಯರು ಜೀನ್ಸ್ ಧರಿಸಿ ಕೆಲಸಕ್ಕೆ ಬಂದರು. ಸಂತ್ರಸ್ತೆಯ ಬೆಂಬಲಕ್ಕೆ ನಿಂತರು. ಈ ಪ್ರಕರಣ ಮತ್ತು ಇದರ ಸುತ್ತಮುತ್ತಲ ಆಂದೋಲನಕ್ಕೆ ಪ್ರತಿಸ್ಪಂದನವಾಗಿ ರೂಪು ತಳೆದು ರೂಢಿಗೆ ಬಂದದ್ದು 'ಡೆನಿಮ್ ಡೇ' ಎಂಬ ನಿರಂತರ ಪ್ರಚಾರಾಂದೋಲನ.

ಹೀಗೆ ಸಂತ್ರಸ್ತೆಯ ದೂಷಣೆ ಮತ್ತು ಲೈಂಗಿಕ ಹಿಂಸೆಯನ್ನು ಕವಿದು ಮುತ್ತಿದ ವಿಧ್ವಂಸಕ ಮಿಥ್ಯೆಗಳ ಕುರಿತ ಸ್ಥಳೀಯ ಪ್ರತಿರೋಧವೊಂದು ಚಳವಳಿಯೇ ಆಗಿ ಬೆಳೆಯಿತು. ಲೈಂಗಿಕ ಹಲ್ಲೆಗಳ ಸುತ್ತ ನೆಲೆಸಿರುವ ರೂಢಿಗತ ಮಿಥ್ಯೆಗಳ ವಿರುದ್ಧ ಜೀನ್ಸ್ ಧರಿಸಿ ಬಹಿರಂಗವಾಗಿ ಪ್ರತಿಭಟಿಸಬೇಕು ಎಂಬುದು 'ಡೆನಿಮ್ ಡೇ' ಹಿಂದಿನ ನಿವೇದನೆಯಾಯಿತು.

'ಡೆನಿಮ್ ಡೇ'ಗೆ ಬೀಜ ಬಿದ್ದದ್ದು ಇಟಲಿಯಲ್ಲಿ (1992). ಹದಿನೆಂಟು ವರ್ಷದ ಯುವತಿಯ ಮೇಲೆ 45 ವರ್ಷ ವಯಸ್ಸಿನ ಡ್ರೈವಿಂಗ್ ತರಬೇತಿದಾರನೊಬ್ಬ ಅತ್ಯಾಚಾರ ನಡೆಸಿದ್ದ. ನೇಪಲ್ಸ್ ನಗರದಿಂದ 60 ಮೈಲಿ ದೂರದ ಮ್ಯೂರೋ ಲುಕಾನೋ ಎಂಬ ಸಣ್ಣ ಟೌನಿನಲ್ಲಿ ನಡೆದ ಘಟನೆಯಿದು. ಚಾಲನಾ ತರಬೇತಿಯ ಮೊದಲ ದಿನ. ಆಕೆಯನ್ನು ನಿರ್ಜನ ರಸ್ತೆಯೊಂದಕ್ಕೆ ಕರೆದೊಯ್ದು, ಕಾರಿನಿಂದ ಹೊರಗೆಳೆದು, ಆಕೆ ಧರಿಸಿದ್ದ ಜೀನ್ಸ್ ಪ್ಯಾಂಟ್ ಕಿತ್ತೆಸೆದು ಹಲ್ಲೆ ನಡೆಸಿದ್ದ. ಆಕೆ ದೂರು ನೀಡಿದಳು. ಆದರೆ ಅತ್ಯಾಚಾರದ ಶಿಕ್ಷೆಗೆ ಬದಲಾಗಿ, ಬಹಿರಂಗ ಸ್ಥಳದಲ್ಲಿ ಅಸಭ್ಯ ಪ್ರದರ್ಶನ ಮಾಡಿದನೆಂದು ಸಣ್ಣಪುಟ್ಟ ಶಿಕ್ಷೆ ವಿಧಿಸಲಾಯಿತು. ಆಕೆ ಮೇಲ್ಮನವಿ ಸಲ್ಲಿಸಿದಳು. ಅತ್ಯಾಚಾರಕ್ಕೆ ಶಿಕ್ಷೆಯಾಗಿ ಅವನನ್ನು ಜೈಲಿಗೆ ತಳ್ಳಲಾಯಿತು. ಆಕೆಯೊಂದಿಗೆ ಕಾರಿನಲ್ಲಿ ತಾನು ಹೊಂದಿದ್ದು ಸಮ್ಮತಿಪೂರ್ವಕ ಸಂಭೋಗವೇ ವಿನಾ ಬಲಾತ್ಕಾರ ಅಲ್ಲ ಎಂದು ಅವನು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ.

10ನೇ ಪುಟಕ್ಕೆ...

ಹೀರೊ ಹೋರಿಗಳು ಮತ್ತು ಕನ್ಯಾಮಣಿಗಳ ಕಣ್ಮಣಿಗಳು

ಚಿತ್ರ-ಲೇಖನ: ಸತೀಶ ಬಡಿಗೇರ

ಹೋರಿ ಬೆದರಿಸುವ ಸ್ಪರ್ಧೆ ನಡೆಯಲಿದ್ದ ಹಾವೇರಿ ಜಿಲ್ಲೆಯ ಕಮಾಟಗೇರಿಯನ್ನು ನಾನು ತಲುಪಿದಾಗ ಇನ್ನೂ ಬೆಳಕು ಹರಿದಿರಲಿಲ್ಲ. ಬ್ಯಾಕ್‌ಪ್ಯಾಕ್‌ನಲ್ಲಿದ್ದ ಕ್ಯಾಮೆರಾಕ್ಕೋ ಬೇಗ ಹೊರಗೆ ಬರುವ ತವಕ. ರಾಜ್ಯದ ನಾನಾ ಭಾಗಗಳಿಂದ, ಅಷ್ಟೇ ಏಕೆ ಹೊರರಾಜ್ಯಗಳಿಂದಲೂ ಹೋರಿಗಳನ್ನು ಹೊತ್ತು ತಂದ ಮಿನಿ ಲಾರಿಗಳು ರಸ್ತೆಯುದ್ದಕ್ಕೂ ನಿಂತಿದ್ದವು. ಮುಂದೆ ನಿಂತ ಲಾರಿಗಳಿಂದ ಹೋರಿಗಳನ್ನು ಕೆಳಗಿಳಿಸುವ ಗಡಿಬಿಡಿ. ಹಾಗೆಯೇ ಹೆಸರು ಬರೆಯಿಸಿ, ಟೋಕನ್ ಪಡೆಯುವ ಧಾವಂತ.

ಸ್ಪರ್ಧೆ ನಡೆಯಲಿದ್ದ ಟ್ರ್ಯಾಕ್ ಹೇಗಿದೆ, ಎಲ್ಲಿಂದ ಆ್ಯಕ್ಷನ್ ಚಿತ್ರಗಳು ಸಿಗಲಿವೆ ಎಂದು ನೋಡಿಬರಲು ಸ್ಪರ್ಧಾ ಬಯಲಿನತ್ತ ಹೋದೆ. ಹೋರಿಯನ್ನು ಓಡಲು ಬಿಡುವ ಟ್ರ್ಯಾಕ್‌ನ ದ್ವಾರ ನೋಡಿಕೊಂಡು ಹಾಗೆಯೇ ಸುತ್ತಲೂ ಕಣ್ಣಾಡಿಸಿದೆ. ಓಟದ ಮಾರ್ಗದ ಉದ್ದಕ್ಕೂ ಕಟ್ಟಿಗೆ ಹಾಗೂ ಬಿದಿರುಗಳಿಂದ ತಡೆಗೋಡೆಯನ್ನು ನಿರ್ಮಿಸಲಾಗಿತ್ತು. ಆ ಮಾರ್ಗದ ಎರಡೂ ಬದಿಯಿದ್ದ ಇಳಿಜಾರು ದಿನ್ನೆಗಳು ನಿಸರ್ಗನಿರ್ಮಿತ ಪ್ರೇಕ್ಷಕರ ಗ್ಯಾಲರಿಗಳಾಗಿದ್ದವು. ಹೋರಿಯ ಓಟದ ವೇಗವನ್ನು ದಾಖಲಿಸುವ ತೀರ್ಪುಗಾರರಿಗೆ ಅಟ್ಟಣಿಗೆಯನ್ನೂ ನಿರ್ಮಾಣ ಮಾಡಲಾಗಿತ್ತು. ಸ್ಪರ್ಧೆಯ ಬಯಲಿನಲ್ಲಿ ಹೀಗೆ ಒಂದೆರಡು ಸುತ್ತು ಹಾಕಿ ಬರುವಷ್ಟರಲ್ಲಿ ದಿನ್ನೆಗಳ ನಡುವಿನ ಆ ಟ್ರ್ಯಾಕ್ ಮೇಲೆ ಹೊಂಬಣ್ಣದ ಹೊನಲೇ ಹರಿಯುತ್ತಿದೆಯೇನೋ ಎನ್ನುವಂತೆ ಎಳೆಬಿಸಿಲು ಬಿದ್ದಿತ್ತು. 'ಸ್ಪರ್ಧೆ ಇನ್ನೇನು ಶುರುವಾಗಲಿದೆ' ಎಂಬ ಘೋಷಣೆ ಧ್ವನಿವರ್ಧಕದಿಂದ ಹೊರಬೀಳುತ್ತಿದ್ದಂತೆ ಕೈಯಲ್ಲಿದ್ದ ಕ್ಯಾಮೆರಾಕ್ಕೆ ಭಾರೀ ಪುಳಕ.

ಮುಂದಿನ ಪುಟಕ್ಕೆ...

ಟ್ರ್ಯಾಕ್ ಮೇಲೆ ಹೋರಿಗಳು ದೂಳೆಬ್ಬಿಸುತ್ತಾ ಓಟಕ್ಕೆ ನಿಂತರೆ ಅದರ ವೈಭೋಗವೇ ಬೇರೆ

ಬಡವಾದ ಬಡಗು

ಇತ್ತೀಚೆಗಷ್ಟೆ ನಿಧನರಾದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದ ಎಂ.ಎ. ಹೆಗಡೆ ಅವರು ಬಹುಶ್ರುತ ವಿದ್ವಾಂಸರಾಗಿದ್ದರು. ಕೆರೆಮನೆ ಮೇಳದಲ್ಲಿ ಯಕ್ಷಗಾನದ ಪಟ್ಟುಗಳನ್ನು ಕಲಿತ ಅವರು, ಸಮರ್ಥ ಅರ್ಥಧಾರಿಯಾಗಿ ಗುರುತಿಸಿಕೊಂಡವರು. ಸಂಸ್ಕೃತ ಪ್ರಾಧ್ಯಾಪಕರಾಗಿಯೂ ಹೆಸರು ಮಾಡಿದವರು. ಅವರ ಅಗಲಿಕೆಯ ಈ ಸಂದರ್ಭದಲ್ಲಿ ಅವರ ಶಿಷ್ಯರೊಬ್ಬರು ಗುರುವಿನೊಂದಿಗೆ ನಡೆಸಿದ ಒಂದು ಆತ್ಮೀಯ ಅನುಸಂಧಾನ ಇಲ್ಲಿದೆ...

'ದಕ್ಷ'ನ ಪಾತ್ರದಲ್ಲಿ ಎಂ.ಎ.ಹೆಗಡೆ

ರವೀಂದ್ರ ಭಟ್ಟ

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಬಿದ್ರಕಾನಿನಲ್ಲಿ ವಿಶ್ವನಾಥ ಭಟ್ಟರ 'ಸದ್ಗತಿ' ಪುಸ್ತಕ ಬಿಡುಗಡೆ ಸಮಾರಂಭ. ಪ್ರೊ.ಎಂ.ಎ.ಹೆಗಡೆ ಅವರ ಅಧ್ಯಕ್ಷತೆ. ನಾನು ಒಬ್ಬ ಅತಿಥಿ. ನಾನು ಮಾತನಾಡುವಾಗ 'ಎಂ.ಎ.ಹೆಗಡೆ ಅವರು ನನಗೆ ಗುರುಗಳು. ಎರಡು ವರ್ಷ ಅವರು ನನಗೆ ಸಂಸ್ಕೃತ ಕಲಿಸಿದ್ದಾರೆ. ಆದರೆ ನನಗೆ ಸಂಸ್ಕೃತ ಬರಲೇ ಇಲ್ಲ' ಎಂದೆ. ತಕ್ಷಣವೇ ಎದ್ದು ನಿಂತ ಹೆಗಡೆ 'ಅದರಲ್ಲಿ ನನ್ನ ತಪ್ಪು ಏನೂ ಇಲ್ಲ' ಎಂದರು.

ಇನ್ನೊಮ್ಮೆ ಶಿರಸಿಯಲ್ಲಿ ಯಕ್ಷಗಾನ ಗಾನ ವೈಭವ ಕಾರ್ಯಕ್ರಮ. ಭಾಗವತರೊಬ್ಬರು ಲವಕುಶ ಕಾಳಗದ 'ಚೆಲುವರನು ನೋಡಿದರೆ' ಪದ್ಯವನ್ನು ತಮ್ಮದೇ ಶೈಲಿಯಲ್ಲಿ ಹಾಡಿದರು. ಅದು ಹೆಗಡೆ ಅವರಿಗೆ ಇಷ್ಟವಾಗಲಿಲ್ಲ. ಪ್ರೇಕ್ಷಕರ ಮಧ್ಯದಲ್ಲಿ ಕುಳಿತಿದ್ದ ಅವರು ಎದ್ದು ನಿಂತು 'ಈ ಪದ್ಯ ಹೀಗೆ ಹಾಡುವುದಲ್ಲ. ಶ್ರೀರಾಮ ಮಕ್ಕಳನ್ನು ನೋಡಿ ಖುಷಿಯಾಗಿ ಹಾಡುವ ಹಾಡು ಅದು. ಲವ ಕುಶರನ್ನು ನೋಡಿದರೆ ಯಾರಿಗಾದರೂ ಸಂತೋಷವಾಗುತ್ತದೆ. ನೀವು ಹೀಗೆ ವಿಷಾದದಿಂದ ಹಾಡು ಹೇಳಿದರೆ ಹೇಗೆ?' ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು.

ಪ್ರೊ.ಎಂ.ಎ.ಹೆಗಡೆ

ಇತ್ತೀಚೆಗೆ ನಮ್ಮನ್ನು ಅಗಲಿದ ವಿದ್ವಾಂಸ, ಚಿಂತಕ, ಯಕ್ಷಗಾನ ಕವಿ, ಅರ್ಥಧಾರಿ ಪ್ರೊ.ಎಂ.ಎ.ಹೆಗಡೆ ಇದ್ದಿದ್ದೇ ಹಾಗೆ. ತಮಗೆ ಸರಿ ಇಲ್ಲ ಎನ್ನಿಸಿದ್ದನ್ನು ಯಾವ ಮುಲಾಜೂ ಇಲ್ಲದೆ ಹೇಳುತ್ತಿದ್ದರು. ಹೊಸ ಹೊಸ ಚಿಂತನೆಗೆ ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಹೊಸಬರ ಸಮರ್ಥನೆಗೆ ತಾವು ಶ್ರಮವಹಿಸಿ ಅಧ್ಯಯನ ಮಾಡಿ ಬೆಂಬಲಿಸುತ್ತಿದ್ದರು. ಎಂ.ಎ.ಹೆಗಡೆ ಅವರಿಗಿಂತ ದೊಡ್ಡ ವಿದ್ವಾಂಸರು ಇರಬಹುದು. ಅವರಿಗಿಂತ ಅದ್ಭುತ ಅರ್ಥಧಾರಿಗಳೂ ಇರಬಹುದು. ಅತ್ಯುತ್ತಮ ಪ್ರಸಂಗ ಕರ್ತರೂ ಸಿಗಬಹುದು. ಆದರೆ 'ನಾನು ಇದ್ದೇನೆ. ನೀನು ಮುಂದುವರಿ' ಎಂದು ಪ್ರೋತ್ಸಾಹಿಸುವ ಮತ್ತೊಬ್ಬ ಯಕ್ಷಗಾನ ವಿದ್ವಾಂಸ ಸಿಗುವುದು ವರ್ತಮಾನದಲ್ಲಿ ಕಷ್ಟ. ಬಡಗುತಿಟ್ಟಿನ ಯಕ್ಷಗಾನ ಪ್ರೊ. ಎಂ.ಎ.ಹೆಗಡೆ ಅವರನ್ನು ಕಳೆದುಕೊಂಡು ಸದ್ಯಕ್ಕಂತೂ ಬಡವಾಗಿದೆ.

ಎಂ.ಎ.ಹೆಗಡೆ ನಿರ್ಗಮನ

ಯಕ್ಷಗಾನದ ಬಗ್ಗೆ ಅವರದ್ದು ಹೊಸ ದೃಷ್ಟಿಕೋನ. ಹೊಸ ಪ್ರಸಂಗಗಳು ಬಂದಿವೆ, ಸಂಪ್ರದಾಯ ಬದಲಾಗಿದೆ ಎಂದು ಹಲವರು ಕೊರಗುತ್ತಿರುವಾಗಲೇ ಎಂ.ಎ.ಹೆಗಡೆ ಹೊಸತನ ಬರಬೇಕು ಎಂದು ಗಟ್ಟಿ ಧ್ವನಿಯಲ್ಲಿ ಪ್ರತಿಪಾದಿಸುತ್ತಿದ್ದರು. ಸಂಪ್ರದಾಯ ಬದಲಾಗಬೇಕು. ಆದರೆ ಅದರಲ್ಲಿ ಔಚಿತ್ಯದ ಪ್ರಜ್ಞೆ ಇರಬೇಕು ಎಂದು ಅವರು ಬಯಸುತ್ತಿದ್ದರು. ಯಕ್ಷಗಾನ ಕುಣಿತದಲ್ಲಿ ಕಸರತ್ತು ಪ್ರದರ್ಶನಕ್ಕೆ ಅವರ ವಿರೋಧ ಇರಲಿಲ್ಲ. ಆದರೆ ಯಾವ ಪಾತ್ರಕ್ಕೆ ಕಸರತ್ತು ಬೇಕು, ಯಾವುದಕ್ಕೆ ಬೇಡ ಎನ್ನುವ ವಿವೇಚನೆ ಕಲಾವಿದನಿಗೆ ಇರಬೇಕು ಎನ್ನುವುದು ಅವರ ಸ್ಪಷ್ಟ ಅಭಿಮತವಾಗಿತ್ತು. ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರು ಹೊಸ ಹೊಸ ನೃತ್ಯಗಳನ್ನು ಪ್ರದರ್ಶಿಸಿದರು. ಜನರು ಅದನ್ನು ಮೆಚ್ಚಿದರು. ಅದೇ ರೀತಿ ಕಣ್ಣಿಮನೆ ಗಣಪತಿ ಕಿರೀಟವನ್ನು ನೆಲಕ್ಕೆ ಮುಟ್ಟಿಸಿ ಕುಣಿಯುತ್ತಿದ್ದರು. ಅಭಿಮನ್ಯು, ವೃಷಸೇನ ಮುಂತಾದ ಪಾತ್ರಗಳಿಗೆ ಇದು ಓಕೆ. ಅದೇ ಕರ್ಣ, ಅರ್ಜುನ ಮುಂತಾದ ಪಾತ್ರಗಳಿಗೆ ಸಲ್ಲ ಎನ್ನುತ್ತಿದ್ದರು ಅವರು.

ಕೆರೆಮನೆ ಶಿವರಾಮ ಹೆಗಡೆ ಪಾತ್ರವನ್ನು ನೋಡಿದವರು ಇವರಿಗಿಂತ ಮೂಡ್ಕಣಿ ನಾರಾಯಣ ಹೆಗಡೆ ಚೆನ್ನಾಗಿ ಮಾಡುತ್ತಿದ್ದರು ಎಂದು ಹೇಳುವುದು, ಕೆರೆಮನೆ ಶಂಭು ಹೆಗಡೆ ಪಾತ್ರವನ್ನು ನೋಡಿ ಶಿವರಾಮ ಹೆಗಡೆ ಚೆನ್ನಾಗಿ ಮಾಡುತ್ತಿದ್ದರು ಎಂದು ವಾದಿಸುವುದು, ಕೊಂಡದಕುಳಿ ರಾಮಚಂದ್ರ ಹೆಗಡೆ ಪಾತ್ರವನ್ನು ನೋಡಿ ಶಂಭು ಹೆಗಡೆಯೇ ಅತ್ಯುತ್ತಮ ಎಂದು ವಿಮರ್ಶೆ ಮಾಡುವುದನ್ನು ಅವರು ಒಪ್ಪುತ್ತಿರಲಿಲ್ಲ. ಯಾಕೆ ಹೀಗೆ ವಿಮರ್ಶೆ ಮಾಡುತ್ತಾರೆ ಎನ್ನುವುದಕ್ಕೂ ಅವರ ಬಳಿ ಉತ್ತರ ಇತ್ತು. 'ನಾವು ಚಿಕ್ಕವರಿದ್ದಾಗ ದೊಡ್ಡವರ ಪಾತ್ರವನ್ನು ನೋಡಿ ನಮ್ಮ ಮನದಲ್ಲಿ ಒಂದು ಆಕೃತಿಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ. ನಮಗೆ ಅದೇ ಯಾವಾಗಲೂ ಚಲೋ ಅನ್ನಿಸುತ್ತದೆ. ಅದಕ್ಕೆ ಅವರು ಚೆನ್ನಾಗಿ ಮಾಡುತ್ತಿದ್ದರು, ಈಗಿನವರು ಆ ಮಟ್ಟಕ್ಕೆ ಬೆಳೆದಿಲ್ಲ ಎಂದು ಹೇಳುತ್ತೇವೆಯೇ ವಿನಾ ಈಗಿನ ಕಲಾವಿದರು ಕಡಿಮೆ ಎಂದಲ್ಲ' ಎನ್ನುವುದು ಅವರ ಸಮಜಾಯಿಷಿ.

ಎಲ್ಲ ಕಲೆಗಳೂ ಶಾಸ್ತ್ರೀಯವೂ ಹೌದು, ಜಾನಪದವೂ ಹೌದು. ಕಲೆ ಬೆಳೆಯುವುದಕ್ಕೆ ಈ ಗುಣ ಅಗತ್ಯ. ಹಿಂದಿನದು ಚೆನ್ನಾಗಿದೆ, ಈಗಿನದು ಎಲ್ಲ ಹಾಳು ಎನ್ನುವುದು ತಪ್ಪು. ಕಾಲ ಕಾಲಕ್ಕೆ ಕಲೆ ಬದಲಾಗುತ್ತದೆ ಮತ್ತು ಹಾಗೆ ಬದಲಾಗುವುದರಿಂದಲೇ ಉಳಿಯುತ್ತದೆ ಎಂದು ಹೇಳುತ್ತಿದ್ದ ಅವರು 'ಪ್ರೇಕ್ಷಕರಿಗೆ ಏನು ಬೇಕು ಎಂದು ಕಲಾವಿದರೇ ಚಿಂತಿಸಬೇಕು. ಯಾವ ಪ್ರೇಕ್ಷಕನೂ ನನಗೆ ಇದು ಕೊಡಿ, ಅದು ಕೊಡಿ ಎಂದು ಕೇಳುವುದಿಲ್ಲ. ಪೌರಾಣಿಕ ಪ್ರಸಂಗಗಳಿಂದ ನಮಗೆ ಬೋರಾಗಿದೆ, ಸಾಮಾಜಿಕ ಕಥೆಗಳನ್ನು ಕೊಡಿ ಎಂದು ಯಾವ ಪ್ರೇಕ್ಷಕ ಕೇಳಿದ್ದ? ಕವಿಗಳು ಕಲಾವಿದರು ಸೇರಿ ಹೊಸ ಪ್ರಸಂಗ ಸಿದ್ಧಮಾಡಿ ಬಡಿಸಿದರು. ಜನ ಕೆಲವನ್ನು ಒಪ್ಪಿಕೊಂಡರು. ಕೆಲವನ್ನು ಬಿಟ್ಟರು. ಇಷ್ಟ ಎಂದು ದಿನಾಲೂ ಒಂದೇ ತರಹ ಅಡುಗೆ ಮಾಡಿದರೆ ಅದು ಹಳಸಿ ಹೋಗುತ್ತದೆ. ಹಳಸಿದ ಮೇಲೆ ಹೊಸತು ಬರುತ್ತದೆ. ಅದು ಪ್ರಕೃತಿ ನಿಯಮ ಎನ್ನುವುದು ಅವರ ನಂಬಿಕೆ.

ಕೆರೆಮನೆ ಶಿವರಾಮ ಹೆಗಡೆ, ಶಂಭು ಹೆಗಡೆ, ಶಿವಾನಂದ ಹೆಗಡೆ, ಶಿವಾನಂದ ಅವರ ಪುತ್ರ ಶ್ರೀಧರ ಜೊತೆಗೆ ಕೆಲಸ ಮಾಡಿದ ಎಂ.ಎ.ಹೆಗಡೆ ಕೆರೆಮನೆ ಮೇಳದಲ್ಲಿಯೇ ಯಕ್ಷಗಾನದ ಪಟ್ಟುಗಳನ್ನು ಕಲಿತವರು. ಅದಕ್ಕೆ ನಿಷ್ಠರಾಗಿದ್ದವರು. ಕಾಲೇಜು ಪ್ರಾಧ್ಯಾಪಕರಾಗಿದ್ದರೂ ಯಕ್ಷಗಾನ ಲೋಕದಲ್ಲಿ ಮಿಂಚಿದವರು. ತಾಳಮದ್ದಲೆಯಲ್ಲಿಯೂ ಸಮರ್ಥ ಅರ್ಥಧಾರಿ ಎಂದು ಗುರುತಿಸಿಕೊಂಡವರು. ವಾಸುದೇವ ಸಾಮಗರ ಸಂಯಮಂ ಕೂಟದಲ್ಲಿ ಸಂಚರಿಸಿದವರು. ತಾಳಮದ್ದಲೆ ಎನ್ನುವುದು ಭಾವನಾತ್ಮಕತೆ ಮತ್ತು ವೈಚಾರಿಕತೆಯ ಹದವಾದ ಸಮ್ಮಿಶ್ರಣದಿಂದ ಪಾಕವಾದಾಗ ಮಾತ್ರ ರುಚಿಸುತ್ತದೆ ಎಂದು ಅವರು ಹೇಳುತ್ತಿದ್ದರು. ತಾಳಮದ್ದಲೆಯಲ್ಲಿ ವಿದ್ವತ್ ಪ್ರದರ್ಶನ ತಪ್ಪಲ್ಲ. ಆದರೆ ಯಾವ ಪಾತ್ರಕ್ಕೆ ವಿದ್ವತ್ ಬೇಕು ಎನ್ನುವುದು ತಿಳಿದಿರಬೇಕು ಎನ್ನುವುದು ಅವರ ವಾದ. ಸಂಸ್ಕೃತ ಶ್ಲೋಕಗಳನ್ನು ಉದಾಹರಿಸುವ ಬಗ್ಗೆಯೂ ಅವರ ತಕರಾರು ಇರಲಿಲ್ಲ. ಆದರೆ ಸಂಸ್ಕೃತ ಶ್ಲೋಕ ಹೇಳಿದರೆ ಅದರ ಅರ್ಥವನ್ನೂ ಹೇಳಬೇಕು ಎಂದು ಅವರು ವಿನಂತಿಸುತ್ತಿದ್ದರು. ತಾಳಮದ್ದಲೆ ನಾದದ ಆವರಣದಲ್ಲೇ ಇರಬೇಕು. ದೀರ್ಘ ಮಾತಾಗಲೀ, ದೀರ್ಘ ಹಿಮ್ಮೇಳವಾಗಲೀ ಅಪೇಕ್ಷಣೀಯ ಅಲ್ಲ. ಪಾತ್ರೋಚಿತ ಭಾಷೆ ಬಳಸಿ ಪ್ರದರ್ಶನಕ್ಕೆ ನ್ಯಾಯ ಸಲ್ಲಿಸುವುದೇ ಮುಖ್ಯವಾಗಬೇಕು ಎಂದು ಅವರು ವಾದಿಸುತ್ತಿದ್ದರು.

ಪ್ರಾಂಶುಪಾಲರಾಗಿ ಯಶಸ್ವಿಯಾಗಿದ್ದ ಅವರು ಯಕ್ಷಗಾನ ಅಕಾಡೆಮಿಯಲ್ಲಿಯೂ ಯಶಸ್ಸಿನ ದಾರಿಯಲ್ಲಿಯೇ ಇದ್ದರು. ಸಮಗ್ರ ಯಕ್ಷಗಾನ ಸಾಹಿತ್ಯ ಚರಿತ್ರೆ, ಕಲಾವಿದರ ಮಾಹಿತಿ ಕೋಶ ಮುಂತಾದ ಯೋಜನೆಗಳನ್ನು ಸಿದ್ಧಪಡಿಸಿದ್ದರು. ಕೋವಿಡ್ ಕಾಲದಲ್ಲಿ ಅಂತರ್ಜಾಲದಲ್ಲಿ ಹೊಸ ಹೊಸ ಪ್ರಯೋಗ ಮಾಡಿದ್ದರು.

ವಿಮರ್ಶೆ ಸರಿ ಇಲ್ಲ ಎಂದು ಹೇಳುವವರಿಗೆ ಅವರು ಹೇಳುತ್ತಿದ್ದ ಮಾತು 'ವಿಮರ್ಶೆ ಬೇಡ ಎಂದರೆ ಚಪ್ಪಾಳೆಗೂ ಖುಷಿಯಾಗಬೇಡಿ' ಎಂದು. 'ಯಕ್ಷಗಾನ ಕ್ಷೇತ್ರಕ್ಕೆ ನಿಮ್ಮ ಕೊಡುಗೆ ಏನು?' ಎಂದು ಯಾರಾದರೂ ಕೇಳಿದರೆ ಥಟ್ಟನೆ ಅವರು 'ಯಕ್ಷಗಾನಕ್ಕೆ ಕೊಡುಗೆ ಕೊಡಲು ನಾನು ಯಾರು? ಕೊಡುಗೆ ಕೊಟ್ಟಿದ್ದೇನೆ ಎನ್ನುವುದು ಅಹಂಕಾರ. ಯಕ್ಷಗಾನವನ್ನು ನಾನು ಆಯ್ಕೆ ಮಾಡಿಕೊಂಡಿದ್ದೇನೆ. ಯಕ್ಷಗಾನ ನನಗೆ ಬೇಕಾದಷ್ಟು ಕೊಟ್ಟಿದೆ. ಯಕ್ಷಗಾನಕ್ಕೆ ಕೊಡುಗೆ ಕೊಡುತ್ತೇನೆ, ಅದನ್ನು ಉಳಿಸುತ್ತೇನೆ ಎನ್ನುವುದೆಲ್ಲಾ ಸುಳ್ಳು. ಯಕ್ಷಗಾನಕ್ಕೆ ತನ್ನನ್ನು ತಾನು ಉಳಿಸಿಕೊಳ್ಳುವ ಶಕ್ತಿ ಇದೆ. ಬಹಳ ಕಾಲದಿಂದ ಉಳಿದಿದೆ. ಮುಂದೆಯೂ ಉಳಿಯುತ್ತದೆ' ಎಂದು ಹೇಳುತ್ತಿದ್ದರು. ಹೀಗೆ ಅವರು ಇದ್ದಿದ್ದೇ ಹಾಗೆ. ಅನಿಸಿದ್ದನ್ನು ಹೇಳುತ್ತಾ ಬದುಕಿದರು.

ಅವರು ನಿಧನರಾಗುವುದಕ್ಕೆ ಒಂದು ಗಂಟೆ ಮೊದಲು ನನಗೆ ದೂರವಾಣಿ ಕರೆ ಮಾಡಿದ್ದರು. 'ನನಗೊಂದು ರೂಂ ಬೇಕು' ಎಂದರು. 'ನಿಮಗೆ ಎಂಥಾ ರೂಂ ಬೇಕು' ಎಂದು ಕೇಳಿದೆ. 'ನನಗೆ ಕೋವಿಡ್ ಆಗಿದೆ' ಎಂದರು. 'ತಕ್ಷಣವೇ ರೂಂ ವ್ಯವಸ್ಥೆ ಮಾಡುವೆ' ಎಂದೆ. ಅದರಂತೆ ಅವರು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಹೋಗುವುದಕ್ಕೆ ಮೊದಲೇ ಕೊನೆಯುಸಿರೆಳೆದರು. ಅದರಲ್ಲಿಯೂ ಒಂದು ಪಾಠ. 'ರೂಂ ಕೊಡಿಸುವ ಶಕ್ತಿ ನಿನಗೆ ಇಲ್ಲ. ಆ ಅಹಂಕಾರ ಬೇಡ. ಯಾರಿಗೆ ಯಾವ ರೂಂ ಕೊಡಿಸಬೇಕು ಎನ್ನುವುದನ್ನು ನಿರ್ಧರಿಸುವ ಶಕ್ತಿ ಬೇರೆಯೇ ಇದೆ' ಎಂಬ ಸಂದೇಶ ನನಗೆ ಕೊಟ್ಟಹಾಗೆ ಆಯ್ತು. ಅದಕ್ಕೆ ಅವರು ಗುರು. ನಾನು ಶಿಷ್ಯ.

ಹೀರೊ ಹೋರಿಗಳು...

ಓಡುವ ಹೋರಿಯನ್ನು ಹಿಡಿದು ನಿಲ್ಲಿಸಿದ ಸಾಹಸಿ

ನೀವು ಬೆದರಿಸಿದರೂ ನಾನು ಬಗ್ಗುವುದಿಲ್ಲ. ಗುರಿ ಮುಟ್ಟಲು ದಾರಿ ಹುಡುಕುವೆ... ಜನಸ್ತೋಮದ ನಡುವೆ ರೋಷಾವೇಶದ ಹೋರಿ

8ನೇ ಪುಟದಿಂದ...

ಪ್ರೇಕ್ಷಕರ ಗ್ಯಾಲರಿಗಳು ಇನ್ನೂ ಅಷ್ಟಾಗಿ ತುಂಬಿರಲಿಲ್ಲ. ಅಷ್ಟರಲ್ಲಿ 'ದೇವರ ಗೂಳಿ'ಯನ್ನು ಟ್ರ್ಯಾಕ್ ಮೇಲೆ ಓಡಲುಬಿಟ್ಟರು. 'ದೇವರ ಗೂಳಿ'ಯ ಹೆಜ್ಜೆ ಗುರುತುಗಳು ಮೂಡಿದ ಮೇಲೆಯೇ ಸ್ಪರ್ಧೆ ಆರಂಭಿಸಬೇಕು ಎನ್ನುವುದು ಇಲ್ಲಿನ ನಿಯಮ. ಆ ಗೂಳಿ ಸ್ಪರ್ಧೆಗೆ ಬಂದದ್ದಲ್ಲ ನೋಡಿ, ತುಸು ನಿಧಾನವಾಗಿಯೇ ಓಡಿತು. ಭಕ್ತಿಯಿಂದ ಕೈಮುಗಿದ ಜನಸ್ತೋಮ, ಮುಂದಿನ ರೋಚಕ ಕ್ಷಣಗಳಿಗೆ ಕಣ್ಣರಳಿಸಿ ಅಣಿಯಾಗಿ ನಿಂತಿತು. ಆಮೇಲೆ ಶುರುವಾಗಿದ್ದು ಮಾತ್ರ ಸೂರ್ಯಾಸ್ತದವರೆಗಿನ ಕೊನೆಯಿಲ್ಲದ ಓಟ.

ಕ್ರಮಸಂಖ್ಯೆಗೆ ಅನುಗುಣವಾಗಿ ಒಂದೊಂದು ಹೋರಿ ಓಡುತ್ತಾ ಬರುವಾಗಲೂ ಅದೆಂತಹ ರೋಮಾಂಚನ. ಹೊತ್ತು ಏರುತ್ತಿದ್ದಂತೆ ನೆತ್ತಿ ಸುಡುವ ಬಿಸಿಲು. ಅಷ್ಟರಲ್ಲಿ ಸ್ಪರ್ಧೆ ಇನ್ನೂ 'ಕಾವು' ಪಡೆದುಕೊಂಡಿತ್ತು. ಟ್ರ್ಯಾಕ್ ಸುತ್ತಲಿನ ಗ್ಯಾಲರಿಗಳು ಖಚಾಖಚ್ ಭರ್ತಿಯಾಗಿದ್ದವು. ಹತ್ತಿರದ ಮರಗಳನ್ನೂ ಜನ ಏರಿ ಕುಳಿತಿದ್ದರು. ರಿಬ್ಬನ್, ಬಲೂನ್, ಪ್ಲಾಸ್ಟಿಕ್ ಹೂವು, ಒಣಕೊಬ್ಬರಿ ಸರದಿಂದ ಮದುಮಗನಂತೆ ಸಿಂಗಾರಗೊಂಡ ಹೋರಿಗಳು ಓಟಕ್ಕೆ ನಿಂತಾಗ ಟ್ರ್ಯಾಕ್ ಸುತ್ತ ನೆರೆದ ಯುವಕರಲ್ಲಿ ವೀರರಸ ಉಕ್ಕಿ ಹರಿಯುತ್ತಿತ್ತು. ಹೋರಿಗಳ ಕಣ್ಣಿಗೆ ಕುಕ್ಕುವ ಆ ಪೌರುಷ, ಆ ನೆಗೆತ, ಆ ಮಿಂಚಿನ ಓಟ... ಆಹಾ, ಅದನ್ನು ನೋಡಿಯೇ ಅನುಭವಿಸಬೇಕು ಬಿಡಿ.

ಅಖಾಡಕ್ಕೆ ಕರೆತಂದು ನಿಲ್ಲಿಸಿ, ಅದರ ಮಾಲೀಕ ಮೂಗುದಾರದ ಹಗ್ಗವನ್ನು ಬಿಚ್ಚಿ ಬಿಡುವುದೇ ತಡ ಬಿಲ್ಲಿನಿಂದ ಚಿಮ್ಮಿದ ಬಾಣದಂತೆ ಹೋರಿ ಚೆಂಗನೆ ನೆಗೆಯುತ್ತಿತ್ತು. ಅದರ ನೆಗೆತದ ಆ ಕ್ಷಣದಲ್ಲಿ ಇಡೀ ದೇಹ ಗಾಳಿಯಲ್ಲಿ ತೇಲುತ್ತಿತ್ತು. ಆಗ ನೆರೆದವರ ಕೂಗಾಟ, ಚೀರಾಟ, ಸಿಳ್ಳೆ, ಕೇಕೆಗಳ ಅಬ್ಬರ. ರೋಷಗೊಂಡ ಹೋರಿ ಬಲು ರಭಸದಿಂದ ಜಿಗಿಯುತ್ತ, ನೆಗೆಯುತ್ತ, ನೆರೆದವರ ಮೇಲೆರಗುತ್ತ ಸಾಗುತ್ತಿತ್ತು. ಅಂತಹ ರೋಷಾವೇಶದ ಹೋರಿಯನ್ನು ತಡೆದು ನಿಲ್ಲಿಸಿದವರು ವಿಜೇತರಾಗಿ ಮೆರೆಯುತ್ತಿದ್ದರು. ಅದರಂತೆಯೇ ನೆರೆದವರ ಹಾಗೂ ನಿರ್ಣಾಯಕರ ಮನಮೆಚ್ಚಿದ ಹಾಗೂ ಯಾರ ಕೈಗಳಿಗೂ ಸಿಗದೇ ಗುರಿ ಮುಟ್ಟಿದ ಹೋರಿಗಳೂ ವಿಜೇತವಾಗಿ ಬಹುಮಾನವನ್ನು ಪಡೆಯುತ್ತಿದ್ದವು. ವಿಜೇತ ಹೋರಿಗಳ ಮಾಲೀಕರಿಗೆ ಚಿನ್ನ, ಬೆಳ್ಳಿ ಇನಾಮು ಸಿಕ್ಕರೆ, ಹೋರಿಯನ್ನು ತಡೆದ ಯುವಕರಿಗೆ ಬೈಕ್‌ಗಳ ಬಹುಮಾನ!

'ಈ ಹೋರಿಗಳಲ್ಲಿ ಇಷ್ಟೊಂದು ಸಾಮರ್ಥ್ಯ ಮೈದಳೆಯುವುದು ಹೇಗೆ' ಎಂಬ ಪ್ರಶ್ನೆ ಕಾಡುತ್ತಿತ್ತು. ಹೋರಿ ಕರೆತಂದಿದ್ದ ರೈತರೊಬ್ಬರನ್ನು ತಡೆದು ನಿಲ್ಲಿಸಿ, ಕೇಳಿಯೇಬಿಟ್ಟೆ. 'ಹಿಂಡಿ, ಹತ್ತಿಕಾಳು, ಹಸಿಹುಲ್ಲನ್ನು ಬರೋಬ್ಬರಿ ಮೇಯಿಸಿ ತಯಾರ್ ಮಾಡ್ತೀವ್ರಿ ಸಾಹೇಬ್ರ. ಅವುಗಳಿಗೆ ಈಜೂ ಹೊಡಿಸ್ತೀವಿ, ಮಸಾಜ್ ಬ್ಯಾರೆ ಮಾಡಿಸ್ತೀವಿ. ಓಟದ ತರಬೇತಿಯನ್ನೂ ಕೊಡಿಸ್ತೀವ್ರಿ ಮತ್ತ' ಎಂದು ಹೇಳಿದರು. ಅಬ್ಬಬ್ಬಾ! ಠಾಕುಠೀಕಿನಿಂದ ಬರುತ್ತಿದ್ದ ಆ ಹೋರಿಗಳ ಗತ್ತಿನ ವರ್ಣನೆ ಪದಗಳಿಗೆ ನಿಲುಕಲಾರದಂಥದ್ದು ಎಂದಷ್ಟೇ ಹೇಳಬಲ್ಲೆ.

ಬಾಹುಬಲಿ ಬಂದ ದಾರಿಬಿಡಿ...

ಸೆಲೆಬ್ರಿಟಿಗಳ ಸುತ್ತ ಅಭಿಮಾನಿಗಳು ನೆರೆಯುವಂತೆ ಒಂದೊಂದು ಹೋರಿಯ ಸುತ್ತಲೂ ನೂರಾರು ಜನ ಅಭಿಮಾನದಿಂದ ನೆರೆದಿದ್ದರು. ಅವುಗಳಿಗೆ ತರಹೇವಾರಿ ಹೆಸರುಗಳು ಬೇರೆ. ಹಾವೇರಿ ಡಾನ್ (ಈ ಹೋರಿ ತಮಿಳುನಾಡಿನಿಂದಲೂ ಪ್ರಶಸ್ತಿ ಬಾಚಿಕೊಂಡು ಬಂದಿದೆ), ಬಾಹುಬಲಿ, ಹೆಬ್ಬುಲಿ, ಬಸವಾ, ಶಿವಾ, ಬುಲೆಟ್, ಪೀಪಿ ಮೊದಲಾದ ಹೋರಿಗಳು ಅಲ್ಲಿ ಹವಾ ಎಬ್ಬಿಸಿದ್ದವು. ಅವುಗಳು ಓಡುವಾಗ ಕೆಂದೂಳು ಸಹ ಏಳುತ್ತಿತ್ತು ಎನ್ನಿ. ಹಾವೇರಿ ಡಾನ್ ಓಡುವಾಗ ನೆರೆದಿದ್ದ ಹತ್ತಾರು ಸಾವಿರ ಜನರಲ್ಲಿ ಅದೆಂತಹ ಸಂಭ್ರಮ ಅಂತೀರಿ. ಪೀಪಿ ಓಡುವಾಗ ಸಿಳ್ಳೆ ಸದ್ದೇಸದ್ದು. ಹೋರಿಯನ್ನು ಹಿಡಿಯುವ ಸಾಹಸದಲ್ಲಿ ಅನೇಕ ಅನಾಹುತಗಳೂ ಆಗುವುದುಂಟು. ಕೆಲವೊಮ್ಮೆ ಪ್ರಾಣಾಪಾಯವಾಗಿರುವ ಉದಾಹರಣೆಗಳು ಸಹ ಇವೆ. ಹೀಗಾಗಿ ಆಯೋಜಕರು ಮುಂಜಾಗ್ರತೆಯಾಗಿ ಜೀವ ವಿಮೆ ಮಾಡಿಸುವುದುಂಟು.

ಮುಗ್ಗರಿಸಿ ಬಿದ್ದರೂ ಏಳಬೇಕು, ಎದ್ದು ಮುನ್ನುಗ್ಗಬೇಕು

ಕರ್ನಾಟಕದ ಈ ಹೋರಿಹಬ್ಬ ನೆರೆಯ ರಾಜ್ಯ ತಮಿಳುನಾಡಿನಲ್ಲಿ ಜಲ್ಲಿಕಟ್ಟು ಎಂದೇ ಜನಪ್ರಿಯ. ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ ದೇವಗಿರಿ, ಅಕ್ಕಿಆಲೂರು, ಹಾನಗಲ್ ಭಾಗಗಳಲ್ಲಿ ನಡೆಯುವ ಹೋರಿಹಬ್ಬ ತುಂಬಾ ಪ್ರಸಿದ್ಧ. ಹಬ್ಬದ ಆ ವೈಭವವನ್ನು ಕಣ್ತುಂಬಿಕೊಳ್ಳಲು ಮತ್ತು ಅದರಲ್ಲಿ ಭಾಗವಹಿಸಲು ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಉತ್ಸಾಹಿ ಯುವಕರು, ರೈತರು ಬರುವುದು ರೂಢಿ. ಹತ್ತಾರು ಸಾವಿರ ಜನ ಕಿಕ್ಕಿರಿಯುವ ಈ ಹಬ್ಬದಲ್ಲಿ ಸಾರಾಯಿ–ಕಳ್ಳಿನ ಘಮಲು ಬೇರೆ. ಏಪ್ರಿಲ್ ಮಧ್ಯದವರೆಗೆ ಜೋರಾಗಿ ನಡೆದ ಹೋರಿಹಬ್ಬಗಳಿಗೆ ಈಗ ಕೊರೊನಾ ಮಂಕು.

ನೆರೆದಿರುವ ಸಾವಿರಾರು ಜನರ ಮಧ್ಯ ಬುಲೆಟ್ ವೇಗದಲ್ಲಿ ನುಗ್ಗುವ, ದಿಕ್ಕು ತೋಚದೆ, ಗಾಬರಿಯಿಂದ ನೆರೆದ ಪ್ರೇಕ್ಷಕರ ಮೇಲೆ ಅಡ್ಡಾದಿಡ್ಡಿಯಾಗಿ ಎಗರುವ ಹೋರಿಗಳ ಆರ್ಭಟ, ಅದನ್ನು ಹಿಡಿಯಲೆಂದು ಮುನ್ನುಗ್ಗುವ ಯುವಕರ ದೊಡ್ಡಾಟ – ಇವುಗಳ ನಡುವೆ ಕೂದಲೆಳೆಯ ಅಂತರದಲ್ಲಿ ಛಾಯಾಗ್ರಹಣ ಮಾಡುವುದು ಸವಾಲಿನ ಕೆಲಸ. ಸ್ವಲ್ಪ ಆಚೀಚೆಯಾದರೂ ಫ್ರೇಮ್‌ನಿಂದ 'ಆ್ಯಕ್ಷನ್' ಮಿಸ್ ಆಗಿಬಿಡುವ ಅಪಾಯ. ಪದೇ ಪದೇ ಲೆನ್ಸ್ ಬದಲಿಸಲು ಅವಕಾಶವಿಲ್ಲ. ಸೂಕ್ತ ಸ್ಥಳ ಸಿಗಲು ಸಹ ಅದೃಷ್ಟ ಬೇಕು. ಅರೆಕ್ಷಣದಲ್ಲಿ ನಡೆಯುವ ವಿದ್ಯಮಾನವನ್ನು ಕಣ್ಣು ಮಿಟುಕಿಸುವಷ್ಟರಲ್ಲಿ ಕ್ಲಿಕ್ಕಿಸಿ, ಸೆರೆ ಹಿಡಿಯಬೇಕು. ಕ್ರೀಡಾಕೂಟಗಳಲ್ಲಾದರೆ ಓಟಗಾರರು ಮೈಮೇಲೆ ನುಗ್ಗಿಬರುವ ಹೆದರಿಕೆ ಇಲ್ಲ. ಇಲ್ಲಿ ಹಾಗಲ್ಲ. ಯಾವಾಗ, ಯಾವ ಹೋರಿ ಎತ್ತ ನೆಗೆಯುವುದೋ ಬಲ್ಲವರಾರು?

ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಗೆದ್ದು ಬಂದ ಜಲ್ಲಿಕಟ್ಟು ಕ್ರೀಡೆಗೂ ನಾನು ಸಾಕ್ಷಿ ಆಗಿರುವೆ. ಅಲ್ಲಿನ ಹೋರಿಗಳಿಗೆ ಮೂಗುದಾರ ಇರುವುದಿಲ್ಲ. ಹಲವು ತಿಂಗಳ ಕಾಲ ಚೆನ್ನಾಗಿ ಮೇಯಿಸಿ, ಕೊಬ್ಬಿಸಿದ ಮಜಬೂತಾದ ಹೋರಿಗಳು ಅವು. ಗೆದ್ದು ಗುರಿಮುಟ್ಟುವ ಹೋರಿಗಳು ಹೀರೊಗಳಾದಂತೆಯೇ ಹೋರಿಗಳನ್ನು ಹಿಡಿದು ಕೇಕೆ ಹಾಕುವ ಯುವಕರೂ ಅಲ್ಲಿನವರ, ಅದರಲ್ಲೂ ಕನ್ಯಾಮಣಿಗಳ, ಅಚ್ಚುಮೆಚ್ಚಿನ ಹೀರೊಗಳು.

ಮುನ್ನೋಟ 02-05-2021 ರಿಂದ 08-05-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಕುಟುಂಬದಲ್ಲಿ ಇದ್ದ ಸಂಘರ್ಷಗಳನ್ನು ದೂರಮಾಡಿ ಉತ್ತಮ ಹೊಂದಾಣಿಕೆಯನ್ನು ಪಡೆಯುವಿರಿ. ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳನ್ನು ನಡೆಸುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇರುತ್ತದೆ. ಚಿನ್ನ, ಬೆಳ್ಳಿ ಗಟ್ಟಿಗಳನ್ನು ತಯಾರಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಭೂ ಸಂಬಂಧಿ ವ್ಯವಹಾರಗಳನ್ನು ಮಾಡುವ ಮಧ್ಯವರ್ತಿಗಳಿಗೆ ವ್ಯವಹಾರ ವೃದ್ಧಿಸಿ ಹೆಚ್ಚು ಕಮಿಷನ್ ದೊರೆಯುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿದೇಶಿ ವ್ಯವಹಾರ ಮಾಡುವವರಿಗೆ ವ್ಯವಹಾರ ವಿಸ್ತರಣೆಯಾಗುತ್ತದೆ. ಸ್ವಂತ ಪ್ರಯತ್ನದಿಂದ ಕಾರ್ಯಕ್ಷೇತ್ರಗಳಲ್ಲಿ ಉನ್ನತಿ ಪಡೆಯುವಿರಿ. ಬಿಚ್ಚು ಮನಸ್ಸಿನ ದಿಟ್ಟ ಹೇಳಿಕೆಗಳಿಂದ ಬಂಧುಗಳಲ್ಲಿ ನಿಷ್ಠೂರ ಬರಬಹುದು. ಸತ್ಯದರ್ಶನವಾದ ಮೇಲೆ ಎಲ್ಲರೂ ಸರಿ ಹೋಗುವರು. ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚಿನ ಗಮನಕೊಡಬೇಕು. ಹಲ್ಲು ನೋವು ನಿಮ್ಮನ್ನು ಬಾಧಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕೆಲಸಕಾರ್ಯಗಳಲ್ಲಿ ಉತ್ತಮ ಪ್ರಗತಿ ಇರುತ್ತದೆ. ನಿಕಟವರ್ತಿಗಳಿಂದ ಅನುಕೂಲಕರ ಸಹಾಯ ಒದಗಿಬರುವುದು. ಹೆಚ್ಚಿನ ಆತ್ಮಸ್ಥೈರ್ಯದಿಂದ ವ್ಯಾಪಾರ- ವ್ಯವಹಾರಗಳಲ್ಲಿ ತೊಡಗಿಕೊಂಡು ಹೆಚ್ಚಿನ ಲಾಭ ಗಳಿಸುವಿರಿ. ಸ್ವಯಂ ಉದ್ಯೋಗ ನಡೆಸುತ್ತಿರುವವರಿಗೆ ವ್ಯವಹಾರ ವಿಸ್ತರಣೆಯ ಯೋಗವಿದೆ. ಸಿದ್ಧಪಡಿಸಿದ ಆಹಾರಗಳನ್ನು ತಯಾರಿಸಿ ಮಾರುವವರಿಗೆ ಲಾಭ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸ್ನೇಹಿತರೊಡನೆ ಮುಕ್ತವಾಗಿ ಮಾತನಾಡುವುದರಿಂದ ಹಿಂದೆ ಇದ್ದ ತಪ್ಪು ಕಲ್ಪನೆಗಳು ದೂರವಾಗಿ ಸಂಬಂಧ ಮರುಸ್ಥಾಪನೆಯಾಗುತ್ತದೆ. ದೀರ್ಘ ಕಾಲದ ಕಾಯಿಲೆಯಿಂದ ಬಳಲುತ್ತಿರುವವರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ವಿದ್ಯಾರ್ಥಿಗಳಿಗೆ ಚಟುವಟಿಕೆಗಳಲ್ಲಿ ಕೊಂಚ ಹಿನ್ನಡೆಯಾಗಬಹುದು. ಉದ್ಯೋಗದಲ್ಲಿದ್ದ ಒತ್ತಡಗಳು ಕಡಿಮೆಯಾಗಿ ಮನಸ್ಸಿಗೆ ನಿರಾಳವೆನಿಸುವುದು.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಯಂತ್ರೋಪಕರಣಗಳನ್ನು ವಿದೇಶದಿಂದ ತರಿಸಿ ಮಾರುವವರಿಗೆ ವ್ಯವಹಾರ ವೃದ್ಧಿಸುತ್ತದೆ. ಆತ್ಮಪರಿಶೋಧನೆಯಿಂದ ಕುಟುಂಬದಲ್ಲಿ ಕಂಡು ಬರುವ ಕೆಲವು ಗೊಂದಲಗಳನ್ನು ನಿವಾರಿಸಿಕೊಳ್ಳಬಹುದು. ನಿಷ್ಕಲ್ಮಶ ಭಾವನೆಯಿಂದ ಎಲ್ಲರನ್ನೂ ನೋಡಿದಾಗ ಸಂತೋಷ ಮೂಡುವುದು. ಆದಾಯ ತರುವ ಹೊಸ ಕೃಷಿ ಯಂತ್ರವೊಂದನ್ನು ಖರೀದಿ ಮಾಡುವಿರಿ. ತರಕಾರಿ ಬೆಳೆಗಾರರಿಗೆ ಹೆಚ್ಚಿನ ಲಾಭ ದೊರೆಯುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕುಟುಂಬದಲ್ಲಿ ಪರಸ್ಪರ ಹೊಂದಾಣಿಕೆಯಿಂದ ಸಹಾಯ ದೊರೆಯಲಿದೆ. ಆರಂಭಿಸಿರುವ ಗೃಹ ಉದ್ಯಮದಲ್ಲಿ ಅಭಿವೃದ್ಧಿಯನ್ನು ಕಾಣುವಿರಿ. ರಾಜಕೀಯ ನೇತಾರರು ತಮ್ಮ ಎದುರಾಳಿಗಳನ್ನು ಸದ್ದಿಲ್ಲದೆ ಮಟ್ಟಹಾಕಲು ತಂತ್ರವನ್ನು ರೂಪಿಸುವರು. ಸ್ತ್ರೀಯರು ಪಾಲುದಾರರಾಗಿರುವ ವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯ, ನಿಮ್ಮ ಮೇಲೆ ಅನಗತ್ಯ ದೂರುಗಳು ಬರಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಮಹಿಳಾ ರಾಜಕಾರಣಿಗಳು ಮಾಡುವ ಕಿತಾಪತಿಗಳು ಹಿರಿಯರಿಗೆ ಮುಜುಗರ ತರಬಹುದು. ಸಂಸಾರದಲ್ಲಿ ಮನಬಿಚ್ಚಿ ಮಾತನಾಡುವುದರಿಂದ ಸಮಸ್ಯೆಗಳು ಕರಗುತ್ತವೆ. ಲೇವಾದೇವಿ ಮಾಡುವುದು ಅಷ್ಟು ಒಳಿತಲ್ಲ, ಇದರಿಂದ ಸಮಸ್ಯೆಗಳು ಹೆಚ್ಚಾಗಬಹುದು. ಸಮೂಹದಲ್ಲಿ ಮುಖಂಡರುಗಳು ಆಶ್ವಾಸನೆಯನ್ನು ಕೊಡುವಾಗ ಎಚ್ಚರವಿರಲಿ. ಸಂಗಾತಿಯ ಆದಾಯದಲ್ಲಿ ಏರಿಕೆಯಾಗುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಸರ್ಕಾರದಿಂದ ಆಗಬೇಕಾದ ಕೆಲಸಗಳು ಸ್ವಲ್ಪ ವಿಳಂಬವಾಗಬಹುದು. ಆದಾಯದಷ್ಟೇ ಖರ್ಚು ಇರುತ್ತದೆ. ದೂರ ಪ್ರಯಾಣದ ಸಾಧ್ಯತೆಗಳು ಕಂಡು ಬರುತ್ತಿವೆ. ಮನೆಯವರಿಗೆ ದೈನಂದಿನ ಕೆಲಸಗಳಿಗೆ ಸಾಕಷ್ಟು ಸಹಾಯ ಮಾಡುವಿರಿ. ಆಸ್ತಿಯ ವಿಚಾರದಲ್ಲಿ ಕಲಹ ಏಳುವ ಸಾಧ್ಯತೆಗಳು ಇವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಆರಂಭಗೊಂಡ ಕೆಲವು ಕೆಲಸಗಳು ಭಿನ್ನಾಭಿಪ್ರಾಯದಿಂದ ನಿಧಾನವಾಗಬಹುದು. ತಾಳ್ಮೆಯಿಂದ ಕುಳಿತು ಯೋಚಿಸಿದಲ್ಲಿ ನಿಮ್ಮ ಕೆಲವು ಸಮಸ್ಯೆಗಳಿಗೆ ಪರಿಹಾರ ಗೋಚರಿಸುತ್ತದೆ. ನಿಮ್ಮ ಬಹು ಕಾಲದ ಬಯಕೆಗಳಲ್ಲಿ ಒಂದೆರಡು ಈಡೇರುತ್ತವೆ. ಉದ್ದಿಮೆದಾರರು ಹೊಸ ಯಂತ್ರೋಪಕರಣಗಳನ್ನು ಕೊಳ್ಳುವ ಸಾಧ್ಯತೆ ಇದೆ. ದ್ವಿದಳ ಧಾನ್ಯಗಳ ಸಗಟು ವ್ಯಾಪಾರಿಗಳಿಗೆ ಬೇಡಿಕೆ ಹೆಚ್ಚಾಗಿ ಲಾಭವೂ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕ್ರೀಡಾಪಟುಗಳಿಗೆ ಸ್ವಲ್ಪ ಹಿನ್ನಡೆಯ ಸಾಧ್ಯತೆ ಇದೆ, ಆದ್ದರಿಂದ ಅವರು ತಮ್ಮ ಅಭ್ಯಾಸದಲ್ಲಿ ಎಚ್ಚರ ವಹಿಸಬೇಕು. ಬಾಹ್ಯಾಕಾಶ ವಿಜ್ಞಾನಿಗಳಿಗೆ ಅವರ ಸಂಶೋಧನೆಯಲ್ಲಿ ಪ್ರಗತಿ ಇರುತ್ತದೆ, ಸಂಶೋಧನೆಗೆ ಸಂಬಂಧಪಟ್ಟ ಲೇಖನಗಳನ್ನು ಪ್ರಕಟಿಸಬಹುದು. ಸಹೋದ್ಯೋಗಿಗಳ ನಡುವೆ ಎದ್ದಿದ್ದ ವಿವಾದ ಪರಿಹರಿಸಿ ಗೌರವಕ್ಕೆ ಪಾತ್ರರಾಗುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಯಂತ್ರೋಪಕರಣಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರದಲ್ಲಿ ಸ್ವಲ್ಪ ಹಿಂಜರಿತ ಆಗಬಹುದು. ಹಿರಿಯರ ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣಬಹುದು. ಔಷಧಿ ವ್ಯಾಪಾರ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಧನಾದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸಂತೃಪ್ತ ಸಾಂಸಾರಿಕ ಜೀವನ ನಿಮ್ಮದಾಗುವುದು. ಕುಟುಂಬ ಸದಸ್ಯರೊಡನೆ ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಕೊಡುವಿರಿ. ವೃತ್ತಿಯಲ್ಲಿ ಸಹೋದ್ಯೋಗಿಗಳಿಂದ ಸಹಾಯ ಪಡೆದು ಉತ್ತಮ ಕಾರ್ಯವನ್ನು ನಿರ್ವಹಿಸುವಿರಿ. ಹಿರಿಯ ಅಧಿಕಾರಿಗಳಿಂದ ಪ್ರಶಂಸೆಯ ಮಾತುಗಳು ನಿಮ್ಮ ತಂಡಕ್ಕೆ ದೊರೆಯುತ್ತವೆ. ಆದಾಯದಷ್ಟೇ ಖರ್ಚು ಸಹ ಇರುತ್ತದೆ, ಆದ್ದರಿಂದ ಖರ್ಚಿಗೆ ಕಡಿವಾಣ ಹಾಕುವುದು ಅಗತ್ಯ.

ಪದಬಂಧ 2685



ಮೇಲಿನಿಂದ ಕೆಳಕ್ಕೆ

1. ನಲಿದಾಡುವ ಆಂತರಂಗದ ಉದ್ಯಾನವನ 5
2. ಅಂಗ ಊನ 3
3. ರಾಮನ ಭಂಟ 3
4. ಮನುವಿನಿಂದ ಹುಟ್ಟಿದ ವಂಶ 5
5. ಕಾಮನಬಿಲ್ಲಿನ ಆಕೃತಿ 3
6. ಕೃಷ್ಣ ನಿರ್ಗಮಿಸಿದ ತನ್ನ ಸಾಕುತಂದೆಯ ಹಸುವಿನ ನಾಡು 5
7. ಕುಲ ವಿಹೀನೆಗೆ ಉತ್ತರ ಭಾರತದ ಪದ 3
8. ಮೊಸಳೆಯ ಲಾಂಛನ ಪಡೆದವ 5
9. ಈ ಬಂಗಾಳಿ ಪಟ್ಟಣ ಕತ್ತಲನಿಂದ ಕೂಡಿದೆಯೇ? 3
10. ಹಿಂದುಮುಂದಾದ ಹಾಡು 2
11. ಛಂದೋಬದ್ಧ ಮಹಾ ಮಂತ್ರ 3
12. ಪ್ರಕೃತಿಯ ಕೊಡುಗೆಯಾಗಿ ನೀಡಿದ್ದು 5
13. ಹಾಯಲು ಬರುವ ನೆರವು 3
14. ದತ್ತು ಸ್ವೀಕೃತ ಪುತ್ರ 3
15. ದುಃಖದಲ್ಲಿದ್ದಾಗ ಕಿತ್ತುಬರುವ ಜೀರ್ಣಾಂಗ 3
15. 'ಏ'ತ್ವ ಕಳೆದುಕೊಂಡ ಕಲೆ 2
16. ಕಾಲ ಪುರುಷ 2
17. ಸುರಿಯುವ ನಾಲ್ಕು ಚಕ್ರ ವಾಹನ 2
18. ಅತ್ಯಂತ ಶ್ರೇಷ್ಠ ಸೇವಕ 5
18. ಪತಿಯ ಮೊದಲಕ್ಷರ, ಪುತ್ರಿಯ ಕೊನೆಯಕ್ಷರ ಸೇರಿದ ಪತ್ರ ರೂಪ 2
19. ಹರಟೆಗೆ ಮೀಸಲಾದ ಮನೆಯಂಗಳದ ಬೆಂಚು 3
19. ಗೆಲುವು ಸಾಧಿಸಿ ಒಳ್ಳೆಯದನ್ನು ಮಾಡುವ ಶಿವ 5
20. ಸಿಹಿಯಾದದ್ದು, ಸುಂದರವಾದದ್ದು ಕೆಳಗಿನಿಂದ ಆರಂಭವಾಗಿದೆ 3
21. ಅಳುಕಿದಾಗ ಬರುವ ದುಃಖ ಹಿಂದುಮುಂದು 2
22. ಆಶುಭದ ಮುನ್ಸೂಚನೆ 5
23. ಇನ್ನೊಬ್ಬರ ಮನಸ್ಸನ್ನು ಸೆಳೆದು ನಿನ್ನ ಕಡೆ ಮಾಡಿಕೊ 5
24. ಕಿವಿಗೆ ಸೊಗಸಾಗಿ ಕೇಳಿಸುವಂತದ್ದು 3
25. ಸೂಕ್ಷ್ಮವಾಗಿ ಗೇಲಿಮಾಡುವ ಕಲೆ 3
25. ಶಾಶ್ವತವಾಗಿ ಉಳಿದಿರುವ ಪದ ಖಜಾನೆ 5
26. ಕಾಡಿಗೆ, ನಾಡಿಗೆ ಸಂಭ್ರಮದಿಂದ ಬರುವ ಮಳೆಗಾಲದ ತಿಂಗಳು 3
27. ಅಡಿಗರ ಸಂಪೂರ್ಣ ಸಾಹಿತ್ಯ ಸಾರ ಇದರಲ್ಲಿ ಅಡಗಿದೆ 5
28. ಹಣದೊಡೆಯನಿಗೆ ಸೇರಿದ ಐಶ್ವರ್ಯ 5

ಎಡದಿಂದ ಬಲಕ್ಕೆ

1. ಈತ ಅತಿ ಶ್ರೇಷ್ಟ ಬುದ್ಧಿಜೀವಿ 5
3. ಹಂಪಿಯ ಅಂಗಳದಲ್ಲಿ ದಶರಥಾತ್ಮಜ 5

ಪದಬಂಧ ಉತ್ತರ -2684

ಮೇಲಿಂದ ಕೆಳಕ್ಕೆ

1.ನಾಗರಿಕ 2.ಕರಿಬೇವು 3.ನವರಸ 4.ಗಣಿತವಿಜ್ಞಾನ 6.ಕರಡುಪ್ರತಿ 9.ಸುಗಮ 11.ಹರಾಮ 12.ರಾಜಸಂನ್ಯಾಸ 13.ನಯನಾಭಿರಾಮ 14.ಮಿಟುಕು 16.ರಮಿಸು 18.ಲಕ್ಷದ್ವೀಪ 19.ಮಗರಾಯ 20.ಕುರುವಂಶ

ಎಡದಿಂದ ಬಲಕ್ಕೆ

1.ನಾಯಕ 3.ನವ್ಯಯುಗ 5.ಣಿರಕ 7.ಬೇಟೆಗಾರ 8.ಕಸುವು 10.ಸಹಜೀವಿ 12.ರಾಮನವಮಿ 15.ಮದನರತಿ 17.ನಾರೀಕುಲ 19.ಮಸುಕು 21.ಕ್ಷಯರೋಗ 22.ಸಹಾರಾ 23.ಮನಸ್ತಾಪ 24.ಯತೀಶ

ಸಾವಿನ ಬಳ್ಳಿಯೋ? ಜೀವದ ಬಳ್ಳಿಯೋ?

ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು, ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಹಾದಿ ಬೀದಿಯಲ್ಲಿ ಅಂಗಲಾಚುವವರು, ಅಗಲಿದವರ ಅಂತ್ಯಸಂಸ್ಕಾರಕ್ಕೆ ಅನುಮತಿ ನೀಡುವಂತೆ ಅಧಿಕಾರಿಗಳ ಮುಂದೆ ದೈನೇಸಿಯಿಂದ ಬೇಡುವವರು... ಕೊರೊನಾ ಬಿಡಿಸಿದ ಚಿತ್ರಗಳು ಎಷ್ಟೊಂದು ಕಠೋರ. ಜೀವನದ ಸಂಧ್ಯಾಕಾಲದಲ್ಲಿದ್ದ ಹಿರಿಯ ಜೀವವೊಂದು ಯುವಕನಿಗೆ ಬೆಡ್ ಬಿಟ್ಟುಕೊಟ್ಟು ಪ್ರಾಣತ್ಯಾಗ ಮಾಡಿದ್ದು, ಚಿನ್ನಾಭರಣಗಳನ್ನು ಒತ್ತೆ ಇಟ್ಟ ದಂಪತಿ, ರೋಗಿಗಳಿಗೆ ನೂರಾರು ಫ್ಯಾನ್‌ಗಳನ್ನು ತಂದು ಕೊಟ್ಟದ್ದು ಅಳುವ ಕಡಲಿನಲ್ಲಿ ತೇಲಿಬಂದ ಮಾನವೀಯತೆಯ ಪುಟ್ಟ ಹಾಯಿದೋಣಿಗಳು. ಹೌದು, ಇಷ್ಟೊಂದು ಅಬ್ಬರಿಸಿ ಬೊಬ್ಬಿಡುತ್ತಿರುವ ಕೊರೊನಾ ಅಲೆ ನಮ್ಮನ್ನೆಲ್ಲ ಎಲ್ಲಿಗೆ ಹೋಗಿ ಮುಟ್ಟಿಸೀತು? ಮಾನವೀಯತೆಯ ತಂತು ಹೇಗೆ ಉಳಿದೀತು?

ಜ.ನಾ. ತೇಜಶ್ರೀ

'...Water, water, everywhere,
Nor any drop to drink'

ಸ್ಯಾಮುಯೆಲ್ ಟೇಲರ್ ಕೋಲ್‌ರಿಡ್ಜ್ ಕವಿಯ ಪ್ರಸಿದ್ಧ 'ದ ರೈಮ್ ಆಫ್ ದ ಏನ್‌ಶಿಯಂಟ್ ಮ್ಯಾರಿನರ್' ಕವಿತೆಯ ಈ ಸಾಲುಗಳು (ನೀರೇ ನೀರೇ ಎಲ್ಲೆಲ್ಲೂ/ ಕುಡಿಯಲು ಹನಿಯಿಲ್ಲ) ಮತ್ತೆ ಮತ್ತೆ ನೆನಪಾಗುತ್ತಿವೆ. ಕವಿತೆಯಲ್ಲಿ ಸಮುದ್ರದ ನಡುವಿನಲ್ಲಿ, ಹಡಗಿನ ಒಳಗಿನಲ್ಲಿ ಹಲವು ದಿನಗಳನ್ನು ಕಳೆಯಬೇಕಾದ ನಾವಿಕರಿದ್ದಾರೆ. ಬಾಯಾರಿಕೆ. ಸುತ್ತಲೂ ನೀರಿದೆ. ಆದರೆ ಅದನ್ನು ಕುಡಿಯುವಂತಿಲ್ಲ. ನಮ್ಮ ಸ್ಥಿತಿಯೂ ಹಾಗೆಯೇ ಆಗಿದೆ. ಸುತ್ತಮುತ್ತಲೂ ಗಾಳಿಯ ಹರಹು. ಆದರೆ ಅತ್ಯಗತ್ಯವಾದ ಪ್ರಾಣವಾಯುವಿನ ಕೊರತೆಯಿಂದ ಜನ ಸಾಯುತ್ತಿದ್ದಾರೆ.

ಆ ಕವಿತೆಯ ನಾವಿಕನ ಹೆಗಲ ಮೇಲೆ ಹಕ್ಕಿಯನ್ನು ಕೊಂದ ಪಾಪಪ್ರಜ್ಞೆಯು ಭಾರವಾಗಿ ಕುಳಿತು ಕಾಡುತ್ತದೆ. ಆದರೆ ನಮ್ಮನ್ನು ನಾವು ಮಾಡಿದ ಪಾಪವೂ ಕಾಡುತ್ತಿಲ್ಲ. ಬೇರೆಯವರು ಮಾಡಿದ ಪಾಪವೂ ಕಾಡುತ್ತಿಲ್ಲ. ಇದು ಕಮೂನ 'ದ ಪ್ಲೇಗ್' ಕಾದಂಬರಿಯ ಫಾದರ್ ಪನೆಲೊ ಹೇಳಿದ 'ದೇವರ, ಧರ್ಮದ ವಿರುದ್ಧ ಮಾಡಿದ ಪಾಪವಲ್ಲ', ಬದಲಾಗಿ, ಮುಂದಿನ ಪೀಳಿಗೆಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಎಲ್ಲವನ್ನೂ ನಾಶ ಮಾಡುತ್ತಿರುವ ನಮ್ಮೆಲ್ಲರ ಅಪರಾಧ. ಹಾಗೆಂದು ಕೊರೊನಾಕ್ಕೂ ಈ ತಪ್ಪಿಗೂ ನೇರ ಸಂಬಂಧವಿದೆಯೇ? ಅದು ಕೂಡ ನಿಜವಲ್ಲ. ಇಷ್ಟಕ್ಕೂ ಅಪರಾಧ ಯಾರದು, ಶಿಕ್ಷೆ ಯಾರಿಗೆ? 'ಅದಿಲ್ಲದರ ಅರ್ಥವೇನು?' ಎಂಬ ಉತ್ತರವಿಲ್ಲದ ಪ್ರಶ್ನೆ ಆಗೀಗ ಬಂದು ಸೋಂಕಿ ಹೋಗುತ್ತಿದೆ.

ಇದು ಗತಿಯಿಲ್ಲದವರ ಮಹಾಪಲಾಯನ ಕಾಲ. 'ಆಯ್ದೊಂದು ತಿಪ್ಪೋ ಕೋಳಿಗೆ ಕಾಲು ಮುರಿದರು' ಅಂತ ಗಾದೆ. ಅಂದರಂದಿನ ದುಡಿಮೆ ಅಂದಂದಿಗೆ ಎಂದು ಬದುಕುವವರ ಪಾಡಿಂತು ಇದು. ಮನೆಯಲ್ಲಿದ್ದರೆ ಹಸಿವಿನಿಂದ ಸಾಯಬೇಕು, ಹೊರಗೆ ಹೋದರೆ ಸೋಂಕು ಹತ್ತಿ ಸಾಯಬಹುದು. ಎರಡನೆಯದೇ ವಾಸಿ ಎನ್ನುವ ಹತಾಶ ಪರಿಸ್ಥಿತಿ ಹಲವರದ್ದು. ಸಾವಿನ ಭೀತಿ ದೊಡ್ಡದೋ, ಜೀವದ ಆಸೆ ಹಿರಿದೋ? ಹೇಗೆ ತಾನೇ ಹೇಳುವುದು?

ಮನೆಯೊಳಗೆ ಹಣ ಇಟ್ಟುಕೊಂಡು ಬಾಳು ನಡೆಸುತ್ತಿರುವ ಹಾಗಾಗಿ ಕಾಲದ ಸ್ಥಿತಿ. ಪ್ರತಿಕ್ಷಣ ಸಾವಿನ ತುತ್ತು ಉಣ್ಣುವ ಅನುಭವ. ಇದ್ದಕ್ಕಿದ್ದಂತೆ ನೂರಾರು ಜನ ನಮ್ಮ ಕಣ್ಣ ಮುಂದೆಯೇ ಕರಗಿ ಹೋದರು, ಹೋಗುತ್ತಿದ್ದಾರೆ. ಯಾರಿದ್ದಾರೆ, ಯಾರಿಲ್ಲ ಅನ್ನುವ ವ್ಯತ್ಯಾಸವೇ ಅಳಿಸಿ ಹೋಗುತ್ತಿರುವ ವಿಚಿತ್ರ ತಲ್ಲಣ. ಬೇರೆಯವರನ್ನು ಕೊಲ್ಲಲು ಸದಾ ಸಿದ್ಧನಿರುವ, ಅದಕ್ಕೆಂದೇ ಹಲವು ಶಸ್ತ್ರಗಳು, ಮಾರ್ಗಗಳನ್ನು ರೂಪಿಸಿದ ಮನುಷ್ಯನನ್ನು ತನ್ನನ್ನು ಕೊಲ್ಲುವ, ಆದರೆ ತಾನು ಸುಲಭವಾಗಿ ಮಣಿಸಲಾಗದ, ಕೊಲ್ಲಲಾಗದ ಈ ರೋಗ ಒಂದೆಡೆ ಕಾಡುತ್ತಿದೆ.

ಇನ್ನೊಂದೆಡೆ, ಕುಂಭಮೇಳ, ಚುನಾವಣಾ ಪ್ರಚಾರದಂತಹ ಹುಚ್ಚು ಸಂತೆಗಳಿಗೆ, ಸಾವಿರಾರು ಸಂಖ್ಯೆಯಲ್ಲಿ ಜನರನ್ನು ಸೇರಿಸಿ ಜೀವದ ಜೊತೆಗೆ ಆಟವಾಡುವ ರಾಜಕಾರಣದ ದುಷ್ಟತನ; 'ತಾಳಕ್ಕೆ ತಕ್ಕಂತೆ ಮೇಳ' ಅನ್ನುವ ಹಾಗೆ ಜನರ ವರ್ತನೆ; ಉರಿಯೋ ಮನೆಯಲ್ಲಿ ಗಳ ಹಿರಿದರು ಅನ್ನುವಂತೆ, ಇಂತಹ ಸ್ಥಿತಿಯಲ್ಲೂ ಆಂಬುಲೆನ್ಸ್, ಔಷಧಿ, ಆಸ್ಪತ್ರೆ ಹೆಸರಿನಲ್ಲಿ ಸುಲಿಗೆ ಮಾಡುವ ಕರಾಳ ದಂಧೆ; 'ಏ..ನಮಗೆಲ್ಲ ಕೊರೊನಾ ಬರೋದಿಲ್ಲ' ಅನ್ನುವ ಉಡಾಫೆಯಲ್ಲಿ ಮಾಸ್ಕ್, ದೈಹಿಕ ಅಂತರ ಮರೆತು ಅಡ್ಡಾದಿಡ್ಡಿ ಓಡಾಡುವ ಮಂದಿ; ಈ ಯಾವುದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳದೆ ಲಕ್ಷಾಂತರ ರೂಪಾಯಿ ವ್ಯಯಿಸಿ ನಡೆಯುತ್ತಲೇ ಇರುವ ರಿಯಾಲಿಟಿ ಶೋಗಳು; ಹೊರದೇಶದ ಮೋಜಿನ ಫೋಟೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ನಾಚಿಕೆಯಿಲ್ಲದೆ ಹಂಚಿಕೊಳ್ಳುವ ಸಿನಿಮಾ ಮಂದಿಯನ್ನು ನೋಡಿದರೆ ಉರಿವ ದೀಪಕ್ಕೆ ದೀಪದ ಹುಳುವು ತಾನೇ ಹೋಗಿ ಸುಟ್ಟುಕೊಂಡ ಹಾಗನ್ನಿಸುತ್ತದೆ.

ಸಂಕಟದ ಹೊತ್ತಿನಲ್ಲೇ ಮನುಷ್ಯನ ಕ್ರೌರ್ಯ ಕಡಿಮೆ ಆಗಬಹುದು/ಆಗಬೇಕು ಎನ್ನುವಂತಲ್ಲಿ ಅದು ದುಪ್ಪಟ್ಟು ಬೆಳೆದು ನಿಂತಿದೆ ಅಂದರೆ ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಏನೆಂದು, ಯಾರಿಗೆ ಮೊರೆಯಿಡುವುದು ಈ ಸಂದಿಗ್ಧ ಸ್ಥಿತಿಯಲ್ಲಿ? ಸತ್ವಪರೀಕ್ಷೆಯ ಅಗ್ನಿ ಎಲ್ಲವನ್ನೂ ಸುಟ್ಟು ಪುಟವಿಕ್ಕಲೆಂದೇ? ಎಲ್ಲರ ಸಂಕಟ ತಪ್ಪಲೆಂದೇ? ಹಾ! ಹೀಗಾದದ್ದೇ ಒಳ್ಳೆಯದು, ಜನರಿಗೆ ಬುದ್ಧಿ ಬರಲೆಂದೇ? ಅಥವಾ... ಮನುಷ್ಯ ಮನುಷ್ಯನಾಗಲೆಂದೇ?

ಪು.ತಿ.ನ. ಅವರ 'ಒಂದಿರುಳು' ಕವಿತೆಯಲ್ಲಿ, 'ಪಡುಬಡಗಲ ಮೂಲೆಯಲ್ಲಿ/ಕಾಳಿಯಿರುವ ತಾಣದಲ್ಲಿ/ ಕಿಚ್ಚು ಇರುಳ ನೊಣೆಯುತಿತ್ತು,/ಭಯವು ಮೂಡಿ ಮಸಗುತಿತ್ತು,/ಜೀವ ಹೌಹಾರುತಿತ್ತು,/ಡುಮ್ಮಿ ಡುಕಿಟಿ ನಾನ ತತ್ತು/ಎನುತ ತಮಟೆ ದುಡಿಯುತಿತ್ತು/ತನುವೊಳಾದ ಬೇನೆಗಾಗಿ/ವಿಶ್ವಜೀವ ಮೂಕವಾಗಿ/ವಿಣ್ಣ ವಿಣ್ಣ ದುಡಿವ ತೆರದಿ,/ಗಾಯಗೊಂಡ ತಾಣದಿ' ಎಂಬ ಸಾಲುಗಳಿವೆ.

ಕವಿತೆಯಲ್ಲಿ, ವಿಶ್ವದ ಯಾವುದೋ ಒಂದು ಮೂಲೆಯಲ್ಲಿ ಚೆನ್ನನೆಂಬ ಅಸ್ಪೃಶ್ಯನು ತಮಟೆಯ ನುಡಿಸುತ್ತಿದ್ದಾನೆ. ಆ ಸದ್ದಿಗೆ ವಿಶ್ವದ ಜೀವ ಮೂಕವಾಗಿ 'ವಿಣ್ಣ ವಿಣ್ಣ' ಎಂದು ತುಡಿಯುತ್ತಿದೆ. ಚೆನ್ನನೊಳಗಿನ 'ಮುಟ್ಟಿಸಿಕೊಳ್ಳಲಾಗದ' ನೋವು ಮತ್ತು ಅದನ್ನು ಧ್ವನಿಸುವ ತಮಟೆಯ ಕಂಪನವು ಇಡೀ ವಿಶ್ವಜೀವಕ್ಕೆ ಆಗುತ್ತಿರುವ ನೋವು. ವಿಶ್ವದ ಯಾವುದೋ ಮೂಲೆಯಲ್ಲಿ ಅಥವಾ ಊರಿನಾಚೆಯ ಹೊರಗೇರಿಯಲ್ಲಾದದ್ದು ಎಂದು ಇದನ್ನು ನಾವು ಸುಲಭಕ್ಕೆ ಬಿಡಲಾಗುವುದಿಲ್ಲ. ಅಸ್ಪೃಶ್ಯತೆಯೆಂಬುದು ಇಡೀ ಸಮಾಜಕ್ಕೆ ಅಂಟಿಕೊಂಡ ಗಾಯ. ಅದು ವಾಸಿಯಾಗುವ ತನಕ ಸಮಾಜ ಆರೋಗ್ಯವಂತವಾಗಲಾರದು. ತಮಟೆಯ ತುಡಿತವು 'ಸಮಾಜ' ಅನ್ನುವ ಶರೀರದ ತುಡಿತ ಎನ್ನುವುದು ಕವಿತೆಯ ಧ್ವನಿ. ದೇಹದ ಯಾವುದೋ ಒಂದು ಜಾಗಕ್ಕೆ ಆದ ನೋವು ಇಡೀ ಶರೀರಕ್ಕೇ ಆದ ನೋವು ತಾನೇ?

...ಎಲ್ಲರ ನೋವು ನನ್ನ ನೋವೇ ಎಂದು ಮಿಡಿಯದ ಜೀವಗಳ ಸಂಖ್ಯೆಯು ಇಂದು ಹೆಚ್ಚುತ್ತಿದೆ, ಕೊರೊನಾ ಸೋಂಕು ಮನುಷ್ಯನ ದೇಹಕ್ಕೆ ಮಾತ್ರವಲ್ಲ, ಆತ್ಮಸಾಕ್ಷಿಗೂ ತಟ್ಟಿ ಅದನ್ನು ಕೊಲ್ಲುತ್ತಿದೆ ಅನ್ನಿಸಿ ಭಯ ಕಾಡತೊಡಗಿ... ಜೀವವು ಕವಿತೆಯನ್ನು ಆತುಕೊಂಡಾಗ...

ಗೆಲ್ಲುಗೆಲ್ಲಿಗೂ ಕುಡಿಯೊಡೆದು
ಕಣ್ಣ ಹೋಲುವ ಎಲೆ ಎಲೆಯ
ಮೆದು ದಂಟಿನ ಹಂಬು

ಹಬ್ಬುತ್ತಲೇ ಹೋಗುತ್ತಿದೆ
ಕಿರುಕೊಂಬೆಗಳ ಕೈಚಾಚಿ,
ಎತ್ತೆತ್ತಲೋ ಒಂದೊಂದು ಹೂವಿನ
ಫಲವತ್ತನೂರುತ್ತ ಏರುತ್ತ.

ನಡುನಡುವೆ ಹಣ್ಣು ಎಲೆಗಳಲ್ಲಲ್ಲಿ,
ಆಗೊಮ್ಮೆ ಈಗೊಮ್ಮೆ ನಿನ್ನಂತೆ ನಾನೂ ಅನ್ನಿಸುವ ನಿನ್ನ
ಏನೆಂದು ಕರೆಯಲಿ ಸಖಿ?
ಸಾವಿನ ಬಳ್ಳಿಯೆಂದೋ? ಜೀವದ ಬಳ್ಳಿಯೆಂದೋ?

ನಿನ್ನ ತೆಕ್ಕೆಗಳುದ್ದಕ್ಕೂ ಮೂಡುವ ಚಿಗುರಿಗೆ ಜೀವ
ಸಾವಿನ ಬಳ್ಳಿಯೆಂದರೆ,
ಅವೇ ಚಿಗುರು ಸಾವಾಗಿ ಕಾಣುವ ವಿಸ್ಮಯ
ಜೀವದ ಬಳ್ಳಿಯೆಂದರೆ.

ಬದುಕಿನುದ್ದಕ್ಕೂ ಒಂದಿಲ್ಲೊಂದು ಕಾರಣಕ್ಕೆ ಉದ್ದನೆಯ ಸರದಿಯಲ್ಲಿ ಕಾಯಬೇಕಾದ ಮನುಷ್ಯ ತೀರಿಹೋದ ಮೇಲೂ ಆತನ ಮೃತದೇಹ ಅಂತ್ಯಕ್ರಿಯೆಗಾಗಿ ಉದ್ದನೆಯ ಸರದಿಯಲ್ಲೇ ಕಾಯುವಂತಹ ಸಂದರ್ಭವನ್ನು ಕೋವಿಡ್‌ನ ಈ ಅಲೆ ಸೃಷ್ಟಿಸಿದೆ ಚಿತ್ರ: ಲಬನಿ ಜಾಂಗಿ ಕೃಪೆ: ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯಾ

ಸೋಲಿಗರ ಸಹಜಯಾನದ ಚಿತ್ರಣ

ಒಳನೋಟ

ಎಸ್.ನಟರಾಜ ಬೂದಾಳು

ಸುಮಾರು ನಲವತ್ತು ವರ್ಷಗಳಿಂದ ಬಿಳಿಗಿರಿರಂಗನ ಬೆಟ್ಟದ ಸೋಲಿಗರಿಗಾಗಿ ತಮ್ಮ ಬದುಕನ್ನು ಮೀಸಲಿಟ್ಟು ಬದುಕಿದ ಜಿ.ಎಸ್. ಜಯದೇವ ಅವರ ದೀರ್ಘಕಾಲೀನ ಅನುಭವಗಳ ದಾಖಲೆ ಈ ಪುಸ್ತಕ. ಇದು ಬರೀ ಪುಸ್ತಕವಲ್ಲ; ತನ್ನನ್ನೇ ಎದುರಿನಲ್ಲಿ ಕರಗಿಸಿಕೊಂಡು ಅವರೊಡನೆ ನಡೆಸಿದ ಮಹಾಯಾನ. ಇದೊಂದು ರಸಯಾತ್ರೆ. ಸೋಲಿಗರ ರಂಗೇಗೌಡ ಮೈಸೂರು ಮಹಾರಾಜರಿಗೆ ಬಡಿಸಿದ ತಿಳಿಸಾರಿನಿಂದ ಆರಂಭವಾಗುವ ಈ ಯಾನ ತುದಿ ಮೊದಲಿಲ್ಲದ್ದು. ಇಲ್ಲಿ ಯಾವುದೂ ಮುಖ್ಯವೂ ಅಲ್ಲ; ಅಮುಖ್ಯವೂ ಅಲ್ಲ. ಇಲ್ಲಿನ ಒಬ್ಬೊಬ್ಬರ ಆಸೆ ಆಶೋತ್ತರಗಳೂ ಮತ್ತೊಬ್ಬರ ಅನುಕರಣೆ ಅಲ್ಲ. ಇಲ್ಲಿಯ ಮಸಣಮ್ಮ, ಭೂಲೋಕಶೆಟ್ಟಿ, ಅಚ್ಚುಗೇಗೌಡ, ಕುನ್ನೇಗೌಡ, ಮಂಜಿಗುಂಡಿ ಕೇತಮ್ಮ, ಕೇತೇಗೌಡ, ಡಾ.ಮಾದೇಗೌಡ, ಪುಸುಬ – ಡಾ.ರತ್ನಮ್ಮ, ಡಾ.ಜಡೇಗೌಡ – ಇವರೆಲ್ಲ ಹಲವು ಮಕ್ಕಳ ತಾಯಿಯ ಬೇರುಗಳ ಗುಚ್ಛದಂತೆ ಕಾಣಿಸುತ್ತಾರೆ. ಎಲ್ಲವೂ ಎಲ್ಲರದ್ದು ಎಂದುಕೊಂಡೇ ಸಾವಿರಾರು ವರ್ಷಗಳಿಂದ ಬಾಳಿದ ಇವರನ್ನು ಈಗ ಈ ಕಾಡು ನಿನ್ನದೆನ್ನುವುದಕ್ಕೆ ನಿನ್ನ ಹತ್ತಿರ ಏನು ದಾಖಲೆಯಿದೆ ಎಂದು ಕೇಳಿದರೆ ಏನು ಹೇಳಿಯಾರು?

ಬಿಳಿಗಿರಿರಂಗನ ಕಾವ್ಯದ ಒಂದು ಸಾಲು ಗಂಗಾಧರೇಶ್ವರನನ್ನು ಒಕ್ಕಲೆಬ್ಬಿಸಿದ್ದನ್ನು ಹಾಡುತ್ತದೆ. ದಾಸಯ್ಯನಾಗಿ ಒಳಬಂದ ಬಿಳಿಗಿರಿ ರಂಗ ಇಲ್ಲಿನ ಗಂಗಾಧರನನ್ನು ಒಕ್ಕಲೆಬ್ಬಿಸಿ ಬಾಳೆಪೋಡಿಗೆ ಕಳಿಸಿದ್ದು ಒಂದು ಕತೆ ಅಷ್ಟೇ ಅಲ್ಲ. ಅದು ಈ ಹೊತ್ತಿಗೂ ನಡೆಯುತ್ತಲೇ ಇರುವ ಒತ್ತುವರಿ. ಕುವೆಂಪು ಕೂಡ ತಮ್ಮ 'ರಾಮಾಯಣ ದರ್ಶನಂ'ನಲ್ಲಿ ಕಾಡು ಮತ್ತು ನಾಡಿನ ಈ ಸಂಘರ್ಷವನ್ನು ಬೇರೆ ಆಯಾಮದಲ್ಲಿ ಚಿತ್ರಿಸಿದ್ದಾರೆ. ಇದು ಸಂಸ್ಕೃತಿ, ನಾಗರಿಕತೆ, ರಾಷ್ಟ್ರೀಯತೆಯ ಪರಿಕಲ್ಪನೆಗಳಡಿಯಲ್ಲಿ ನಡೆಯುತ್ತಿರುವ ವಂಚನೆ.

ಆದಿವಾಸಿ ಬುಡಕಟ್ಟು ಜನರನ್ನು 'ನಿಮ್ಮ ಊರ್‍ಯಾವುದು' ಎಂದು ಕೇಳಿದರೆ ತಡಬಡಾಯಿಸುತ್ತಾರೆ. ತಮ್ಮ ಕಾಡಿನ ಹೆಸರನ್ನೋ ತಾವು ಓಡಾಡುವ ಪ್ರಾಂತ್ಯದ ಹೆಸರನ್ನೋ ಹೇಳುತ್ತಾರೆ. ಬುಡಕಟ್ಟು ಜನರಿಗೆ ಕಾಡು ನದಿ ಬೆಟ್ಟಗುಡ್ಡಗಳಿರುವಾಗ ಬೇರೆ ಊರಿನ ಅಗತ್ಯವೇನು ಎನ್ನಿಸುತ್ತದೆ. ಸಾವಿರಾರು ವರ್ಷಗಳಿಂದ ಕಾಡಿನೊಳಗೆ ಬಾಳುತ್ತಿರುವ ಸಮೂಹಗಳಿಗೆ 'ತಮ್ಮನಾಳ್ವರುಂ ಒಳರೆ?' ಎಂಬ ಕಲ್ಪನೆ ಇಲ್ಲ. ನಿಮ್ಮನ್ನು ಆಳುತ್ತೇವೆ ಎಂದು ಕಾಡಿನೊಳಗೆ ಹೋದ ಅಧಿಕಾರಶಾಹಿ ಅವರು ಬದುಕುತ್ತಿರುವ ನೆಲದ ಹಕ್ಕುಪತ್ರ ಕೇಳುವುದು ದೊಡ್ಡ ವ್ಯಂಗ್ಯವೇ ಹೌದು. ಹಾಗಾಗಿ ಸೋಲಿಗರು, ಇರುಳಿಗರು, ಸಿದ್ಧಿಗಳು, ಕಾಡುಕುರುಬರು ಮುಂತಾದ ಬುಡಕಟ್ಟು ಜನರು ವಾಸಿಸುವ ಕಾಡಿನ ಆವಾಸ ಸ್ಥಾನಗಳನ್ನು ಅದು ಯಾವ ರಾಜ್ಯವೇ ಆಗಿರಲಿ, ಯಾವ ದೇಶವೇ ಆಗಿರಲಿ ಉಳಿದ ಸಾಮಾನ್ಯ ನೆಲದಂತೆ ಭಾವಿಸಲಾಗದು.

ನಮ್ಮ ಪಾಲಿಗೆ ಮನೆಯೆಂದರೆ ಮಹಡಿಮನೆ, ಮಹಾಮನೆ, ಅರಮನೆ, ಗುರುಮನೆ, ವಿಧಾನಸೌಧ ಇನ್ನೂ ಏನೇನೋ. ಆದರೆ ಸೋಲಿಗರ ಪಾಲಿಗೆ ಅವರದ್ದು ಖಾಲಿ ಗುಡಿಸಲು. ಅವರಿಗೆ ಗೊತ್ತಿದೆ. ಅಂತಿಮವಾಗಿ ಎಲ್ಲರೂ ವಾಸಿಸುವುದು ನಡುವಿನ ಖಾಲಿ ಜಾಗದಲ್ಲಿ. ಖಾಲಿಯೆಂಬುದು ಮಾತ್ರ ಸತ್ಯ. ಅದನ್ನು ಸುಮ್ಮನೆ ಬದುಕುವವರು ಆದಿವಾಸಿಗಳು. ಅದನ್ನು ತೋರಬೇಕು ಎನ್ನುವುದೂ ಇಲ್ಲ. ತೋರಲು ಇರುವುದಾದರೂ ಏನು? ಜಯದೇವ ಕೂಡ ತನ್ನದೆನ್ನುವುದನ್ನು ತ್ಯಜಿಸಿಯೇ ಬದುಕಿದವರು. ಅನಾಥರು, ಪರಿತ್ಯಕ್ತರು, ನನಗಿನ್ನು ಯಾರೂ ಇಲ್ಲವೆಂದುಕೊಂಡ ದೀನರಿಗೆ ಮನೆಯಾದವರು. ಅದು ಒಂದು ಆವರಣವಾದರೆ ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಸಂಕಟಗಳಿಗೆ ದನಿಯಾಗಿರುವುದು ಮತ್ತೊಂದು.

ಸೋಲಿಗರ ಅತಿ ಮುಖ್ಯ ಆರಾಧ್ಯದೈವ ಒಂದು ದೊಡ್ಡ ಸಂಪಿಗೆ ಮರ! ಈ ಮರ ಒಂದು ಮಾತನಾಡುವ ದೈವ. ಕಾಡನ್ನೇ ದೈವವನ್ನಾಗಿಸಿಕೊಂಡ ಇವರ ದೈವ ಸಾಂಕೇತಿಕ ಸ್ವರೂಪದ್ದಲ್ಲ. ಅವರು ನಮ್ಮಂತೆ ಸಂದೇಹವನ್ನು ಪೂಜಿಸುವುದಿಲ್ಲ. ಅಲ್ಲಿನ ಪೂಜಾರಿಗಳಾಗಲೀ ತಮ್ಮಡಿಗಳಾಗಲೀ ನುಡಿವ ಮಾತು ದೈವದ ಮಾತೇ. ಸ್ವಾರ್ಥವಿಲ್ಲದ ದೈವಸಮಾನವಾದ ಜೀವಿಗಳು ಅವರು. ಅವರ ಬದುಕಿನ ಮೊದಲ ಲಕ್ಷಣವೆಂದರೆ ಅಸಂಗ್ರಹ. ಬೆಳೆದ ಬೆಳೆಯಲ್ಲಿ ಕಾಡುಪ್ರಾಣಿಗಳು ತಿಂದುಳಿದ ಅಲ್ಪಸ್ವಲ್ಪ ಕಾಳುಕಡ್ಡಿಗಳನ್ನೂ ಎಲ್ಲರಿಗೆ ಹಂಚಿಕೊಟ್ಟು, ಮುಂದಿನ ದಿನದಿಂದ ಗೆಣಸು ಅಗೆಯಲು ಹೊರಡುವವರು! ಹಾಗಾಗಿ ಅಲ್ಲಿ ಅಧಿಕಾರ ಕೇಂದ್ರಗಳು ಸೃಷ್ಟಿಯಾಗುವುದಿಲ್ಲ. ಅಲ್ಲಿ ಯಜಮಾನರೂ ಇಲ್ಲ, ಆಳುಗಳೂ ಇಲ್ಲ. ಇನ್ನು ಅವರಿಗೆ ಅಸ್ಮಿತೆಯ ಹಂಗಿಲ್ಲ. ಹಿಂದಿನಿಂದ ಏನನ್ನೂ ತರದ ಮುಂದಕ್ಕೆ ಏನನ್ನೂ ಉಳಿಸಿಹೋಗದ ಪ್ರಯಾಣ. ಹಾಗಾಗಿ ಅಲ್ಲಿ ಮನೆ, ಮನಸ್ಸಿಗೆ ಬೀಗ ಹಾಕುವುದಿಲ್ಲ.

ಗೋರುಕ ಎಂದು ತಮ್ಮನ್ನು ಸೋಲಿಗರು ಗುರುತಿಸಿಕೊಳ್ಳುತ್ತಾರೆ. ಗೋರುಕ ಎಂದರೆ ಜೇಡರ ಬಲೆ. ಅದೊಂದು ಸಂಬಂಧಾತ್ಮಕವಾದ ಜಗತ್ತು. ಇದನ್ನೇ ಬುದ್ಧಗುರು ಪ್ರತೀತ್ಯ ಸಮುತ್ಪಾದ ಎಂದು ಗುರುತಿಸಿದ್ದು. ಬೌದ್ಧ ತಾತ್ವಿಕತೆಯನ್ನು ಬುದ್ಧನ ಹಂಗಿಲ್ಲದೆ ಸೋಲಿಗರು ಬಾಳುತ್ತಿದ್ದಾರೆ. ಲೇಖಕರನ್ನು ಕಾಡುವ ಮತ್ತು ನಮ್ಮನ್ನೂ ಕಾಡುವ ದೊಡ್ಡಪ್ರಶ್ನೆ ಇದು: ಅವರನ್ನು ಅವರಿರುವಂತೆ ಬಿಡುವುದೇ ಅಥವಾ ನಮ್ಮಂತಾಗಿಸುವುದೇ? ಉತ್ತರ ಅಷ್ಟು ಸರಳವಲ್ಲ. ಕಾಡನ್ನು ಬದುಕುತ್ತಿರುವವರಿಗೆ ನಾಡನ್ನು ಕೊಡುವ ನಮ್ಮ ಪ್ರಯತ್ನವೇ ಪ್ರಶ್ನಾರ್ಹವಾದುದು.

ಈ ಹೊತ್ತಿನ ಅವರ ಸ್ಥಿತಿಯನ್ನು ಡಾ.ರತ್ನಮ್ಮನವರ ಈ ಮಾತು ಬಿಂಬಿಸುತ್ತಿದೆ: 'ಸರ್ಕಾರ ನಮಗೆ ಶಿಕ್ಷಣ ಕೊಟ್ಟಿದೆ; ಅಕ್ಕಿ, ಗೋಧಿ, ಎಣ್ಣೆ, ತುಪ್ಪ ಎಲ್ಲಾನೂ ಕೊಡ್ತಾ ಇದೆ ನಿಜ. ಆದರೆ, ಏನ್ ಪ್ರಯೋಜನ ಸಾರ್? ನಗರಕ್ಕೆ ಬಂದ್ರೆ ನೌಕರಿ ಇಲ್ಲ, ಕಾಡ್‌ಗೋದ್ರೆ ಒಂದಿಷ್ಟಗಲ ಭೂಮಿ ಇಲ್ಲ. ನಮಗೆ ಶಿಕ್ಷಣ ಬೇಕೇ ಬೇಕು ಅಂತ ಏನಿಲ್ಲ. ನಮ್ಮ ಭೂಮಿ ನಮಗೆ ವಾಪಸ್ ಕೊಟ್ರೆ ಸಾಕು. ಎಲ್ಲೆಲ್ಲಿಂದ್ಲೊ ಬಂದ ಟಿಬೇಟನ್ನರಿಗೆ ಕಾಡು ಕಡ್ದು ಭೂಮಿ ಕೊಡ್ತಾರೆ. ಸಾವಿರಾರು ವರ್ಷದಿಂದ ಇಲ್ಲೇ ಇರೋ ನಮಗೆ ನಮ್ ಭೂಮಿ ಬಿಡಲ್ಲ ಅಂತಾರೆ. ಈ ಕಡೆ ಕಾಡೂ ಇಲ್ಲ, ಆ ಕಡೆ ನಾಡೂ ಇಲ್ಲ. ಕಾಡ್ನಲ್ಲಿ ನಮಗಿಷ್ಟ ಬಂದಂಗೆ ನಾವಿರ್ತಿದ್ವಿ. ನಮ್ಮನ್ನ ಎಳಕಂಡ್ ಬಂದು ಶಿಕ್ಷಣ ಕೊಟ್ಟು ಕಾಡು-ನಾಡು ಎರಡೂ ಇಲ್ದಂಗ್ ಮಾಡ್ಬಿಟ್ರು'.

ಆದಿವಾಸಿಗಳ ಈ ಅತಂತ್ರ ಸ್ಥಿತಿಗೆ ಯಾರನ್ನು ಹೊಣೆ ಮಾಡಬೇಕು? ಇದು ನಮ್ಮೆಲ್ಲರ ಮುಂದಿರುವ ಪ್ರಶ್ನೆ. ಎದುರಿಗಿರುವ ಈ ಪುಸ್ತಕದ ಜೊತೆಗೇ ಸಾವಿರಾರು ಸೋಲಿಗ ಆದಿವಾಸಿಗಳು ಉತ್ತರಕ್ಕೆ ಕಾಯುತ್ತಿದ್ದಾರೆ.



ಪು: 298
₹320

ಸೋಲಿಗ ಚಿತ್ರಗಳು
(ಆದಿವಾಸಿಗಳ ಬದುಕಿನೊಂದಿಗಿನ ಸ್ಮೃತಿಚಿತ್ರಗಳು)
ಲೇ: ಜಿ.ಎಸ್. ಜಯದೇವ
ಪ್ರ: ಪರಸ್ಪರ ಪ್ರಕಾಶನ
ಮೊ: 8884151513

ಕಥೆ

ಎಂ. ವಿ. ಶಶಿಭೂಷಣ ರಾಜು
ಅವರು ಬರೆದ ಕಥೆ
ಪ್ರೀತಿ, ಶೀಲ, ರೋಗ...ಬಾಳು

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಬಿ.ಆರ್.ಲಕ್ಷ್ಮಣರಾವ್
ಅವರು ಬರೆದ ಕವಿತೆ
ಒಂದು ಅಳುವಿನ ಕತೆ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಎದೆಮುಚ್ಚಲು ಬಿಡದಿದ್ದ ಸ್ತನತೆರಿಗೆ

ಜಾತಿ ವ್ಯವಸ್ಥೆಯ ದುಷ್ಟ ಏಣಿಶ್ರೇಣಿಯ ಇದೇ ಸಾಮಾಜಿಕ ವ್ಯವಸ್ಥೆ ತಳವರ್ಗಗಳ ಜನರು ಮೈಮುಚ್ಚುವಷ್ಟು ಬಟ್ಟೆ ತೊಡುವುದನ್ನೂ, ಹೊಸಬಟ್ಟೆ ಧರಿಸುವುದನ್ನೂ ನಿಷೇಧಿಸಿದ್ದ ಕಾಲವೊಂದಿತ್ತು. ಕೇರಳದಲ್ಲಿ ಕೆಳಜಾತಿಗಳ ಹೆಣ್ಣುಮಕ್ಕಳು ಎದೆ ಮುಚ್ಚಿಕೊಳ್ಳುವುದನ್ನು ನಿಷೇಧಿಸಿದ್ದ ವಸ್ತ್ರಸಂಹಿತೆ ನೂರಾರು ವರ್ಷ ಜಾರಿಯಲ್ಲಿತ್ತು. ಕೆಲ ಪ್ರದೇಶಗಳಲ್ಲಿ ಎದೆ ಮುಚ್ಚಬಹುದಿತ್ತು. ಆದರೆ ಹಾಗೆ ಮಾಡಿದರೆ ದುಬಾರಿ ದರದ 'ಸ್ತನತೆರಿಗೆ'ಯನ್ನು ತೆರಬೇಕಿದ್ದ ವಿಡಂಬನೆಯಿತ್ತು.

ಒಮ್ಮೆ ನಂಗೇಲಿ ಎಂಬ ಕೆಳಜಾತಿಯ ಹೆಣ್ಣುಮಗಳು ಎದೆಮುಚ್ಚಿಕೊಂಡೇ ಹೊರಬಿದ್ದು ಹಿಂತಿರುಗಿದ್ದು ತೆರಿಗೆ ಅಧಿಕಾರಿಗಳಿಗೆ ತಿಳಿಯಿತು. ವಸೂಲಿಗೆ ಮನೆಯ ಮುಂದೆ ನಿಂತರು. ತುಸು ಹೊತ್ತಿನ ನಂತರ ಬಾಳೆ ಎಲೆಯ ಮೇಲೆ ತನ್ನ ಸ್ತನಗಳನ್ನೇ ಕೊಯ್ದಿರಿಸಿ ತೆರಿಗೆಯಾಗಿ ತಂದು ಇರಿಸಿದಳು ನಂಗೇಲಿ. ರಕ್ತಸ್ರಾವದಿಂದ ಪ್ರಾಣಬಿಟ್ಟಳು. ಪತ್ನಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ಪತಿ ಆಕೆಯೊಂದಿಗೇ ಚಿತೆಯೇರಿ ಸುಟ್ಟುಹೋದ. ಬಂಡಾಯಕ್ಕೆ ಹೆದರಿದ ರಾಜ ಆ ಭಾಗದಲ್ಲಿ ಸ್ತನತೆರಿಗೆ ರದ್ದು ಮಾಡಿದ.

ಅಂದಿನ ಜಾತಿಪದ್ಧತಿಯ ನಿಯಮಗಳ ಪ್ರಕಾರ ಕೆಳಜಾತಿಯವರು ಸೊಂಟದ ಮೇಲೆ ವಸ್ತ್ರ ಧರಿಸುವುದು ನಿಷಿದ್ಧವಾಗಿತ್ತು. ಹೆಣ್ಣುಮಕ್ಕಳೂ ಈ ಮಾತಿಗೆ ಹೊರತಾಗಿರಲಿಲ್ಲ. ಅಂದಿನ ದಿನಮಾನದಲ್ಲಿ ಕ್ರೈಸ್ತಧರ್ಮಕ್ಕೆ ಮತಾಂತರ ಹೊಂದಿದ್ದ ಕೇರಳಿಗರ ಪೈಕಿ ಕೆಳಜಾತಿಯ ಚಾನಾರುಗಳೇ ಬಹುಸಂಖ್ಯಾತರು. ಐರೋಪ್ಯ ಮಿಷನರಿಗಳ ಸಂಪರ್ಕದಿಂದ ಬದಲಾದ ಬದುಕು ಇವರಲ್ಲಿ ಹೊಸ ಆಶೋತ್ತರಗಳನ್ನು ತುಂಬಿತ್ತು. ಚಾನಾರ್ ಹೆಣ್ಣುಮಕ್ಕಳು ಮೇಲ್ಜಾತಿಗಳ ಮಹಿಳೆಯರಂತೆ ರವಿಕೆ ಧರಿಸಲು ಮುಂದಾದರು. ಜಾತಿಶ್ರೇಣಿಯಲ್ಲಿ ನಾಲ್ಕನೆಯ ಮೆಟ್ಟಿಲಾಗಿದ್ದ ನಾಯರುಗಳ ಹೆಣ್ಣುಮಕ್ಕಳು ಉಡುಗೆಯನ್ನು ಅನುಕರಿಸಿದ್ದರು. ಸಾಂಪ್ರದಾಯಿಕ ಮತ್ತು ಸಾಮಾಜಿಕ ಮೇಲುಕೀಳಿನ ವ್ಯವಸ್ಥೆಯ ಬೆಂಗಾವಲಿಗೆ ನಿಂತ ಸಮರಯೋಧರು ತಾವೆಂದು ನಂಬಿದ್ದ ನಾಯರುಗಳು ಚಾನಾರುಗಳ ವಿರುದ್ಧ ಕತ್ತಿ ಹಿರಿದು ನಿಂತರು. ಎರಡೂ ಜಾತಿಗಳ ನಡುವೆ 1822, 1828 ಹಾಗೂ 1858-59ರಲ್ಲಿ ದೊಡ್ಡ ಘರ್ಷಣೆಗಳೇ ಜರುಗಿದವು.

1822ರಲ್ಲಿ ಎದೆಮುಚ್ಚಿ ವಸ್ತ್ರ ಧರಿಸಿದ ಕ್ರೈಸ್ತ ಚಾನಾರು ಮಹಿಳೆಯರನ್ನು ಮಾರುಕಟ್ಟೆ ಮತ್ತಿತರೆ ಸಾರ್ವಜನಿಕ ಸ್ಥಳಗಳಲ್ಲಿ ಅಣಕಿಸಿ ಅವಮಾನಿಸಿದುದಲ್ಲದೆ ಅವರು ಧರಿಸಿದ ರವಿಕೆಗಳನ್ನು ಹರಿದು ಹಾಕಿದರು ಮೇಲ್ಜಾತಿಗಳ ಮಂದಿ. ಪದ್ಮನಾಭಪುರಂ ನ್ಯಾಯಾಲಯಕ್ಕೆ ದೂರುಗಳು ಸಂದವು. ನ್ಯಾಯಾಲಯ ನಾಯರುಗಳ ಪರ ನಿಂತಿತು. ಚಾನಾರು ಕ್ರೈಸ್ತರು ಸೇಂದಿ ಇಳಿಸುವ ಬಾಡಿಗೆ ಸಂದಾಯ ಮಾಡಿಲ್ಲವೆಂದೂ, ಅವರ ಮಹಿಳೆಯರು ಎದೆಮುಚ್ಚುವ ವಸ್ತ್ರ ಧರಿಸುತ್ತಿದ್ದಾರೆಂಬ ಪ್ರತಿದೂರುಗಳೂ ಸಂದವು. ದಂಡ ವಿಧಿಸುವ ತೀರ್ಮಾನ ಮತ್ತೆ ನ್ಯಾಯಾಲಯದ ಮೆಟ್ಟಿಲು ಏರಿತು. ಚಾನಾರು ಮತ್ತು ಇತರೆ ಜಾತಿಗಳಿಂದ ಕ್ರೈಸ್ತ ಮತ ಸೇರಿದ ಹೆಣ್ಣುಮಕ್ಕಳು ಇಗರ್ಜಿಗೆ ಹೋಗುವಾಗ ಎದೆಮುಚ್ಚಿಕೊಳ್ಳುವ ಘನತೆಯ ಅವಕಾಶ ನೀಡಬೇಕೆಂಬ ವಾದವನ್ನು ಆಲಿಸಿದ ನ್ಯಾಯಾಲಯ ದಂಡಶುಲ್ಕದಿಂದ ವಿನಾಯಿತಿ ನೀಡಿತು.

ಈ ಹೋರಾಟದ ಎರಡನೆಯ ಹಂತದ ಕಿಡಿ ಹಾರಿದ್ದು 1828ರ ದಿನಗಳಲ್ಲಿ. ಹಿಂದೂ ಚಾನಾರು ಮತ್ತು ಇತರೆ ಕೆಳಜಾತಿಗಳ ಹೆಣ್ಣುಮಕ್ಕಳು ಕ್ರೈಸ್ತ ಚಾನಾರು ಹೆಣ್ಣುಮಕ್ಕಳಂತೆ ರವಿಕೆ ತೊಡಲು ಆರಂಭಿಸಿದಾಗ. ಇಂತಹ ಹೆಣ್ಣುಮಕ್ಕಳನ್ನು ಸಿಕ್ಕ ಸಿಕ್ಕಲ್ಲಿ ಹಿಡಿದು ಬಡಿದ ನಾಯರುಗಳು ಜಾಕೆಟ್ಟುಗಳನ್ನು ಹರಿದು ಹಾಕಿದರು. ಶಾಲೆಗಳು, ಇಗರ್ಜಿಗಳು, ಪುಸ್ತಕಗಳಿಗೆ ಬೆಂಕಿ ಬಿತ್ತು. ದೊಂಬಿ ಹಲ್ಲೆ ಅತ್ಯಾಚಾರಗಳು ಎಗ್ಗಿಲ್ಲದೆ ಹಬ್ಬಿದ್ದವು. ಚಾನಾರುಗಳು ಮತ್ತು ಕೆಳಜಾತಿಗಳ ಹೆಣ್ಣುಮಕ್ಕಳು ಸೊಂಟದ ಮೇಲ್ಭಾಗವನ್ನು ಮುಚ್ಚಿಕೊಳ್ಳುವುದು ನಿಷಿದ್ಧ ಎಂಬುದಾಗಿ ದಕ್ಷಿಣ ತಿರುವಾಂಕೂರು ಸಂಸ್ಥಾನ ರಾಜಾಜ್ಞೆ ಹೊರಡಿಸಿತ್ತು.

ಬಂಡಾಯದ ಮೂರನೆಯ ಹಂತ ಸಿಡಿದದ್ದು 1858-59ರಲ್ಲಿ. ಎದೆ ಮುಚ್ಚಿಕೊಳ್ಳುವ ಘನತೆಯನ್ನು ಈ ಸಲ ಬೇಡಿದ್ದವರು ನಾಡಾರು ಜಾತಿಯ ಹೆಣ್ಣುಮಕ್ಕಳು. ನಾಯರುಗಳು ಮತ್ತು ನಾಡಾರುಗಳ ನಡುವಣ ಕದನ ತಾರಕಕ್ಕೆ ಏರಿತು. ಚಾನಾರು ಹೆಣ್ಣುಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಎದೆವಸ್ತ್ರ ಧರಿಸಿ ಹೊರಬೀಳಲಾರಂಭಿಸಿದ್ದರು. ದಾಳಿ ನಡೆಸಿದ ನಾಯರುಗಳ ಮೇಲೆ ಚಾನಾರುಗಳು ಮತ್ತು ನಾಡಾರುಗಳು ತಿರುಗಿಬಿದ್ದರು. ಕ್ರೈಸ್ತ ಮಿಷನರಿಗಳು ಚಾನಾರುಗಳ ಬೆಂಬಲಕ್ಕೆ ನಿಂತವು. ಎದೆಮುಚ್ಚುವ ಅವರ ಹಕ್ಕನ್ನು ಸಮರ್ಥಿಸಿದವು ಕೂಡ. ಕೆಳಜಾತಿಗಳ ಮೇಲಣ ತರಹೇವಾರಿ ದೌರ್ಜನ್ಯಗಳು ತಿಂಗಳುಗಟ್ಟಲೆ ಬಿಡುವಿರದೆ ಮುಂದುವರೆದವು. ದಿವಾನರಿಗೆ ದೂರು ನೀಡಲು ಮುಂದಾದ ಹಿಂದೂ ನಾಡಾರರ ಮೇಲೆ ದಿವಾನರ ಕಣ್ಣ ಮುಂದೆಯೇ ಸರ್ಕಾರಿ ಸಿಬ್ಬಂದಿ ಹಲ್ಲೆ ನಡೆಸಿತು. ಕ್ರೈಸ್ತ ನಾಡಾರುಗಳ ಪರವಾಗಿ ಮಿಷನರಿಗಳು ಮಹಾರಾಜರಿಗೆ ದೂರು ಸಲ್ಲಿಸಿದ್ದೂ, ಮಹಾರಾಜರು ಮೌನ ಧರಿಸಿದ್ದೂ 1859ರ ಫೆಬ್ರುವರಿಯಲ್ಲಿ ಅಂದಿನ The Madras Times ಪತ್ರಿಕೆಯಲ್ಲಿ ವರದಿ ಆಯಿತು. ಮದ್ರಾಸಿನ ಗೌರ್ನರ್ ಮಾಡಿಸಿದ ವಿಚಾರಣೆಯ ಪ್ರಕಾರ ಹಲವು ಕೊಲೆಗಳೂ ಸೇರಿದಂತೆ ಹಲವಾರು ಕೇಸುಗಳಲ್ಲಿ ನ್ಯಾಯ ನೀಡಿಕೆ ಆಗಿಲ್ಲವೆಂಬ ಅಂಶ ಹೊರಬಿತ್ತು.

ಕಲೆ: ರೂಪಶ್ರೀ ಕಲ್ಲಿಗನೂರ್

ಡೆನಿಮ್ ಡೇ...

...8ನೇ ಪುಟದಿಂದ

ಇಟಲಿಯ ಸುಪ್ರೀಂ ಕೋರ್ಟ್ ಶಿಕ್ಷೆಯನ್ನು ರದ್ದು ಮಾಡಿದ್ದರಿಂದ ಅವನು ಬಿಡುಗಡೆಯಾದ.

ಸಂತ್ರಸ್ತೆಯು ಅತಿ ಬಿಗಿಯಾದ ಜೀನ್ಸ್ ಪ್ಯಾಂಟ್ ಧರಿಸಿದ್ದು, ಆಕೆಯ ನೆರವಿಲ್ಲದೆ ಅವನು ಅದನ್ನು ಕಳಚಲಾರ. ಕಳಚಲು ಆಕೆ ನೆರವು ನೀಡಿರಲೇಬೇಕು. ನೆರವಾದಳೆಂದರೆ ಲೈಂಗಿಕಕ್ರಿಯೆಗೆ ಸಮ್ಮತಿ ನೀಡಿದಳೆಂದೇ ಅರ್ಥ. ಹೀಗಾಗಿ ಅದು ಸಮ್ಮತಿಪೂರ್ವಕ ಲೈಂಗಿಕ ಕ್ರಿಯೆಯೇ ವಿನಾ ಅತ್ಯಾಚಾರ ಅಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿತ್ತು. ಅತಿ ಬಿಗಿ ಜೀನ್ಸ್ ಪ್ಯಾಂಟನ್ನು ಅತ್ಯಾಚಾರಿಯು ಕಳಚುವುದು ಅಷ್ಟು ಸುಲಭವಲ್ಲ. ಇನ್ನು ಸಂತ್ರಸ್ತೆಯೊಬ್ಬಳು ಲೈಂಗಿಕ ಹಲ್ಲೆಕೋರನ ವಿರುದ್ಧ ತನ್ನೆಲ್ಲ ಬಲವನ್ನು ಬಳಸಿ ಸೆಣಸುತ್ತಿದ್ದಾಗಲಂತೂ ಕಳಚುವುದು ಅಸಾಧ್ಯವೇ ಸರಿ ಎಂದು ತೀರ್ಪಿನಲ್ಲಿ ಪ್ರತಿಪಾದಿಸಲಾಗಿತ್ತು. ಮಹಿಳೆಯೊಬ್ಬಳು ಬಿಗಿ ಜೀನ್ಸ್ ಧರಿಸಿದ್ದರೆ ಆಕೆಯ ಮೇಲೆ ಅತ್ಯಾಚಾರ ನಡೆಯುವುದು ಅಸಾಧ್ಯ ಎಂಬ ಅರ್ಥಕ್ಕೆ ಈ ತೀರ್ಪು ದಾರಿ ಮಾಡಿತು.

ಇಟಲಿ ದೇಶದ ಉದ್ದಗಲಕ್ಕೆ 'ಜೀನ್ಸ್ ನೆಪ' ಅಥವಾ 'ಜೀನ್ಸ್ ಸಮರ್ಥನೆ' ಎಂದು ಈ ತೀರ್ಪು ಜನಜನಿತವಾಯಿತು. ತೀರ್ಪಿನಿಂದ ಕುದಿದು ಹೋದ ಇಟಲಿಯ ಸಂಸತ್ತಿನ ಮಹಿಳೆಯರು ಸುಪ್ರೀಂ ಕೋರ್ಟಿನ ಸೋಪಾನಗಳ ಮೇಲೆ ಜೀನ್ಸ್ ಧರಿಸುವ ಪ್ರತಿಭಟನೆ ಹೂಡಿದರು. ಕ್ರೋಧದ ಈ ಪ್ರತಿಕ್ರಿಯೆ ದೇಶವಿದೇಶಗಳ ಸಮೂಹ ಮಾಧ್ಯಮಗಳ ಗಮನ ಸೆಳೆಯಿತು. ಅಮೆರಿಕೆಯ ಕ್ಯಾಲಿಫೋರ್ನಿಯಾದ ಸೆನೆಟ್ ಮತ್ತು ವಿಧಾನಸಭೆ ಕಟ್ಟಡದ ಮೆಟ್ಟಿಲುಗಳ ಮೇಲೆಯೂ ಜೀನ್ಸ್‌ಧಾರಿ ಪ್ರತಿಭಟನೆ ಜರುಗಿತು.

ಈ ವಿವಾದಾತ್ಮಕ ತೀರ್ಪು ಮತ್ತು ಅದಕ್ಕೆ ವ್ಯಕ್ತವಾದ ಆಸ್ಫೋಟಕ ಪ್ರತಿಕ್ರಿಯೆಯು ಅತ್ಯಾಚಾರದ ಕುರಿತು ಹೊಸ ಚರ್ಚೆಯನ್ನು ಹುಟ್ಟುಹಾಕಿತು. ಲೈಂಗಿಕ ಹಲ್ಲೆಯನ್ನು ನ್ಯಾಯಾಧೀಶರು ನೋಡುವ ಬಗೆಯ ಕುರಿತು ವ್ಯಗ್ರ ಸ್ವರೂಪದ ಚರ್ಚೆಗೆ ಕಾರಣವಾಯಿತು. ಇಟಲಿಯ ಸುದ್ದಿಪತ್ರಿಕೆಗಳು, ಟೆಲಿವಿಷನ್ ಮತ್ತು ರೇಡಿಯೊದಲ್ಲಿ ವ್ಯಾಪಕ ಸಂವಾದ ಜರುಗಿತು.

ಒಂದು ಕಾಲಕ್ಕೆ ಇಟಲಿಯ ಸರ್ವಾಧಿಕಾರಿಯಾಗಿದ್ದವನು ಬೆನಿಟಿನೊ ಮುಸೋಲಿನಿ. ಆತನ ಮೊಮ್ಮಗಳು ಮತ್ತು ಸಂಸದೆಯೂ ಆಗಿದ್ದ ಅಲೆಸ್ಸಾಂದ್ರ ಮುಸೋಲಿನಿ ಇತರೆ ಸಂಸದೆಯರ ಜೊತೆಗೂಡಿ ಜೀನ್ಸ್ ಧರಿಸಿ ಸಂಸತ್ ಭವನದ ಹೊರಗೆ ಪ್ರತಿಭಟನಾ ಪ್ರದರ್ಶನ ನಡೆಸಿದಳು. ರೋಮ್ ಮತ್ತು ನೇಪಲ್ಸ್ ನಗರಗಳ ಅಂಗಡಿಗಳು 'ರೇಪ್-ನಿರೋಧಕ ಜೀನ್ಸ್'ಗಳನ್ನು ಪ್ರೇಮಿಗಳ ದಿನಾಚರಣೆಯ ಉಡುಗೊರೆಗಳೆಂದು ಕೀಟಲೆ ಮಾಡಿ ಮಾರತೊಡಗಿದವು. ಅತ್ಯಾಚಾರಕ್ಕೆ ಶಿಕ್ಷೆ ವಿಧಿಸುವ ಹೊಸ ಕಾಯ್ದೆಯನ್ನೇ 1996ರಲ್ಲಿ ರೂಪಿಸಲಾಯಿತು. ಅಲೆಸ್ಸಾಂದ್ರ ಮುಸೋಲಿನಿ ಈ ಕ್ರಿಯೆಯ ಮುಂಚೂಣಿಯಲ್ಲಿದ್ದಳು.

ಅತ್ಯಾಚಾರಿಯನ್ನು ಖುಲಾಸೆ ಮಾಡಿದ ಸುಪ್ರೀಂ ಕೋರ್ಟಿನ ತೀರ್ಪು ಆಘಾತಕಾರಿ ಪ್ರತಿಗಾಮಿ ಮನಃಸ್ಥಿತಿಯದು. ಅತ್ಯಾಚಾರದ ಮನಃಶಾಸ್ತ್ರದ ಸಂವೇದನೆಯೇ ನ್ಯಾಯಮೂರ್ತಿಗಳಿಗೆ ಇಲ್ಲ, ಸಂತ್ರಸ್ತರ ಮನಃಸ್ಥಿತಿ ಅಥವಾ ನಿಜ ಬದುಕಿನ ವಾಸ್ತವಗಳ ಕುರಿತು ತಿಳಿವಳಿಕೆಯೂ ಅವರಿಗಿಲ್ಲ ಎಂದು ಅಲೆಸ್ಸಾಂದ್ರ ಮುಸೋಲಿನಿ ಸಿಡಿದಿದ್ದಳು. ಇಟಲಿಯ ರಾಜಕೀಯ ಪಕ್ಷಗಳು, ಅಂಕಣಕಾರರು ಹಾಗೂ ಟೆಲಿವಿಷನ್ ವಿಶ್ಲೇಷಕರು ಆಕೆಯ ಆಕ್ರೋಶಕ್ಕೆ ದನಿಗೂಡಿಸಿದ್ದರು.

ಆಕೆಯ ತಾತನ ಆಡಳಿತದ 1930ರ ದಶಕದ ಕಾಯ್ದೆಯೇ ಅಲ್ಲಿಯ ತನಕ ಜಾರಿಯಲ್ಲಿತ್ತು. ಅತ್ಯಾಚಾರವನ್ನು ಸಂತ್ರಸ್ತೆಯ ಕುಟುಂಬದ ವಿರುದ್ಧ ಎಸಗುವ 'ಮರ್ಯಾದಾ ಪಾತಕ' (Crime of honor) ಎಂದು ಪರಿಗಣಿಸಿದ್ದ ಪ್ರತಿಗಾಮೀ ಕಾಯ್ದೆ ಅದು. ಪ್ರತಿವಾದಿಯು ಸಂತ್ರಸ್ತೆಯನ್ನು ಲಗ್ನವಾಗಲು ಒಪ್ಪಿ ಶಿಕ್ಷೆಯಿಂದ ಪಾರಾಗಲು ಅವಕಾಶ ಇದ್ದ ಕಾಯ್ದೆ. ಇಲ್ಲವಾದರೆ ಸಂತ್ರಸ್ತೆ ಅದಾಗಲೇ ಹಲವಾರು ಲೈಂಗಿಕ ಅನುಭವಗಳನ್ನು ಹೊಂದಿದ್ದಳೆಂದು ರುಜುವಾತು ಮಾಡಿದರೂ ಪ್ರತಿವಾದಿಯು ಶಿಕ್ಷೆಯಿಂದ ಬಚಾವಾಗಬಹುದಿದ್ದ ಕಾಯ್ದೆ.

ಐವರು ಸದಸ್ಯರ ನ್ಯಾಯಪೀಠದ ಪರವಾಗಿ ಈ ತೀರ್ಪು ಬರೆದಿದ್ದವರು ನ್ಯಾಯಮೂರ್ತಿ ಆಲ್ಡೊ ರಿಸ್ಸೊ. ನ್ಯಾಯಾಲಯದ ಇರಾದೆಯನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆ ಎಂದರು. ಕೋಪಾವಿಷ್ಟರಾದ ಅವರು, 'ಜೀನ್ಸ್ ಧರಿಸಿದ ಮಹಿಳೆಯ ಮೇಲೆ ಅತ್ಯಾಚಾರ ಎಸಗುವುದು ಸಾಧ್ಯವಿಲ್ಲ ಎನ್ನುವುದು ನೀಚತನ, ಮುಠ್ಠಾಳತನವಷ್ಟೇ ಅಲ್ಲ ಅಪಹಾಸ್ಯದ ಮಾತು' ಎಂದರು.

'ನಮ್ಮ ತೀರ್ಪಿನ ಅರ್ಥ ಅದಾಗಿರಲಿಲ್ಲ. ಶಿಕ್ಷೆಯನ್ನು ಎತ್ತಿ ಹಿಡಿಯುವಂತಹ ಸಾಕ್ಷ್ಯಾಧಾರವನ್ನು ಮೇಲ್ಮನವಿ ನ್ಯಾಯಾಲಯವು ಒದಗಿಸಿಲ್ಲ ಎಂದಷ್ಟೇ ನಾವು ಹೇಳಿದೆವು. ಹೊಂದಿಕೆಯೇ ಆಗದ ಅಸಮಂಜಸ ಹೇಳಿಕೆಗಳಿದ್ದವು. ಅವುಗಳನ್ನು ನಾವು ಎತ್ತಿ ತೋರಿದೆವು. ಅತ್ಯಾಚಾರ ನಡೆದ ದಿನದ ಅಪರಾಹ್ನ ಚಾಲನಾ ತರಬೇತಿ ಶಾಲೆಯಲ್ಲಿ ಪಾಠದ ತರಗತಿ ನಡೆದಿತ್ತು. ಈ ತರಗತಿಗೆ ಸಂತ್ರಸ್ತೆ ಬಂದಿದ್ದಳು ಎಂಬುದು ಇಂತಹ ಅಸಮಂಜಸ ಹೇಳಿಕೆಗಳಲ್ಲೊಂದು' ಎಂದು ನ್ಯಾಯಮೂರ್ತಿಗಳು ಹೇಳಿದ್ದರು. ಅತ್ಯಾಚಾರ ಜರುಗಿದ್ದರೆ ಆ ಆಘಾತದಿಂದ ಆಕೆ ಮನೆಯಲ್ಲಿರುತ್ತಿದ್ದಳೇ ವಿನಾ ತರಗತಿಗೆ ಬರುತ್ತಿರಲಿಲ್ಲ ಎಂಬುದು ಅವರ ತರ್ಕವಾಗಿತ್ತು.

ಯುವತಿಯೊಬ್ಬಳು ತನ್ನ ಎಲ್ಲ ಕಸುವನ್ನು ಒಟ್ಟುಗೂಡಿಸಿಕೊಂಡು ಅತ್ಯಾಚಾರಿಯನ್ನು ವಿರೋಧಿಸುತ್ತಾಳೆ. ನಿಷ್ಕ್ರಿಯಳಾಗಿ ಅತ್ಯಾಚಾರಕ್ಕೆ ತನ್ನನ್ನು ಒಪ್ಪಿಸಿಕೊಳ್ಳುವುದಿಲ್ಲ ಎಂದೂ ತೀರ್ಪಿನಲ್ಲಿ ಹೇಳಲಾಗಿತ್ತು. ಸುಪ್ರೀಂ ಕೋರ್ಟಿನ ಈ ವಿತಂಡವಾದ ಇಟಲಿಯ ನಾಗರಿಕರನ್ನು ಕೆರಳಿಸಿತ್ತು. ಅಂದಿನ ಸುಪ್ರೀಂ ಕೋರ್ಟಿನ 410 ನ್ಯಾಯಮೂರ್ತಿಗಳ ಪೈಕಿ ಹತ್ತು ಮಂದಿ ಮಹಿಳಾ ನ್ಯಾಯಮೂರ್ತಿಗಳಿದ್ದರು. ಅವರ ಪೈಕಿ ಒಬ್ಬರು ಸಿಮೋನೆಟಾ ಸೊಜಿಯು. 'ಕಾಯ್ದೆ ಕಾನೂನುಗಳು ಪುರುಷರ ಕೈವಶದಲ್ಲಿ ಹೆಪ್ಪುಗಟ್ಟಿ ಹೋಗಿವೆ. ಅವರಲ್ಲಿ ಬಹುತೇಕರ ಆಲೋಚನೆ ಸಾರಾಸಗಟಾಗಿ ವಾಸ್ತವಕ್ಕೆ ದೂರವಾಗಿರುತ್ತದೆ' ಎಂದಿದ್ದರು ಆಕೆ.

ಪ್ರಪಂಚದ ಪ್ರಖ್ಯಾತ ಜೀನ್ಸ್ ಬ್ರ್ಯಾಂಡ್ ಕಂಪನಿಗಳು ಮಾರಾಟ ಮಾಡುವ ಜೀನ್ಸ್ ಉಡುಪುಗಳು ಭಾರತ, ಬಾಂಗ್ಲಾದೇಶ, ಶ್ರೀಲಂಕಾ ಸೇರಿದಂತೆ ಹತ್ತಾರು ಅಭಿವೃದ್ಧಿಶೀಲ ದೇಶಗಳ ಸಿದ್ಧಉಡುಪು ಕಾರ್ಖಾನೆಗಳಲ್ಲಿ ತಯಾರಾಗುತ್ತವೆ. ಈ ಫ್ಯಾಕ್ಟರಿಗಳ ಕೆಲಸಗಾರರು ಬಹುತೇಕ ಮಹಿಳೆಯರು. ಇವರ ಮೇಲಿನ ಲೈಂಗಿಕ ಶೋಷಣೆಗೆ ಎಣೆಯಿಲ್ಲ. ಪ್ರತಿಭಟಿಸುವವರು ಉದ್ಯೋಗದಿಂದ ಕೈತೊಳೆದುಕೊಳ್ಳುವುದು ಕಾಯಂ.

ಜೀನ್ಸ್ ತೊಡುಗೆ ತಯಾರಾದದ್ದು ಶ್ರಮಜೀವಿಗಳ ಬಿಡುಬೀಸು ಬಳಕೆಗೆಂದು. ಮೊದಲ ಜೀನ್ಸ್ ಷರಾಯಿ ತಯಾರಾದದ್ದು 1873ರಲ್ಲಿ. ಬಲು ಒರಟು ಬಟ್ಟೆಯಿಂದ ಹೊಲಿದ ಜೀನ್ಸ್ ಷರಾಯಿ ಹರಿಯದಂತೆ ತಾಮ್ರದ ತಿರುಪು ಮೊಳೆಗಳನ್ನು ಹೊಡೆಯಲಾಗಿತ್ತು. ಆರ್ಥಿಕ ಏಣಿಶ್ರೇಣಿಯ ತಳಭಾಗದ ಸಾಧಾರಣ ಶ್ರಮಜೀವಿಗಳು ಈ ಉಡುಗೆಯನ್ನು ತೊಡುತ್ತಿದ್ದರು. ಕಾಲಕ್ರಮೇಣ ಈ ಉಡುಗೆ ಡಾಂಭಿಕ ಸಮಾಜದ ವಿರುದ್ಧ ಬಂಡಾಯ ಪ್ರತಿರೋಧಗಳ ಪ್ರತೀಕವೆನಿಸಿತು. ಜಾಗತಿಕ ಪ್ರತಿಭಟನಾ ಸಂಸ್ಕೃತಿಯ ಭಾಗವಾಯಿತು. ವರ್ಣಭೇದ ನೀತಿ, ನಾಗರಿಕ ಹಕ್ಕುಗಳು ಮತ್ತು ಮಹಿಳಾ ವಿಮೋಚನಾ ಆಂದೋಲನಗಳು ಈ ಉಡುಗೆಯನ್ನು ಅಪ್ಪಿಕೊಂಡಿದ್ದವು. ಕೆಡವಲಾದ ಐತಿಹಾಸಿಕ ಬರ್ಲಿನ್ ಗೋಡೆಯ ಮೇಲೆ ಕುಳಿತಿದ್ದ ನೂರಾರು ಯುವಜನರು ಧರಿಸಿದ್ದ ಜೀನ್ಸ್ ಉಡುಗೆ ಎದ್ದು ಕಂಡಿತ್ತು.

ನಮ್ಮ ಸಮಾಜದ ಸಂಪ್ರದಾಯವಾದಿಗಳೂ ಜೀನ್ಸ್ ವಿರುದ್ಧ ಕತ್ತಿ ಹಿರಿಯುತ್ತಲೇ ಬಂದಿದ್ದಾರೆ. ಹೆಣ್ಣಿನ ಉಣಿಸು ತಿನಿಸು, ಮಾತುಕತೆ, ಉಡುಗೆ ತೊಡುಗೆ, ಆಚಾರ ವ್ಯವಹಾರ ಎಲ್ಲದರ ಮೇಲೂ ಅವರದು ಉಡದ ಹಿಡಿತ. ಚೌಮೀನ್ (ದಪ್ಪ ಶಾವಿಗೆಯಿಂದ ಮಾಡಿದ ಖಾರದ ಚೀನೀ ಖಾದ್ಯ) ತಿನ್ನುವುದು, ಮೊಬೈಲ್ ಫೋನ್ ಬಳಸುವುದು ಹಾಗೂ ಜೀನ್ಸ್ ತೊಡುವುದು ಹೆಣ್ಣುಮಕ್ಕಳನ್ನು ದಾರಿ ತಪ್ಪಿಸುತ್ತವೆ ಎಂದು ಉತ್ತರ ಭಾರತದ ನೂರಾರು ಹಳ್ಳಿಗಳ ಖಾಪ್ ಪಂಚಾಯಿತಿಗಳು ಹೇರಿರುವ ವಿಧಿ ನಿಷೇಧಗಳು ಇಂದಿಗೂ ಜಾರಿಯಲ್ಲಿವೆ. ಜೀನ್ಸ್ ತೊಟ್ಟ ಹೆಣ್ಣುಮಗಳು ಗಂಡಿನ ಅಂಕೆಗೆ ಸಿಗಲಾರಳು ಎಂಬ ಗಂಡಾಳಿಕೆಯ ಭಯವೇ ಈ ವಿಧಿ ನಿಷೇಧಗಳ ಮೂಲ.

ಪುರಂದರದಾಸರು

ತ್ಯಾಗರಾಜರು

ಕರ್ನಾಟಕದ ವಾಗ್ಗೇಯ ಪರಂಪರೆ

ವಾಗ್ಗೇಯಕಾರ ವೆಂಕಟನಾರಾಯಣ ಉಡುಪ ಕಲೆ: ಗುರು ನಾವಳ್ಳಿ

ತಮಿಳುನಾಡಿನ ಹಲವು ವಾಗ್ಗೇಯಕಾರರು ನಮಗೆ ಗೊತ್ತು. ಆದರೆ, ಅದೇ ತಲೆಮಾರಿನ ನಮ್ಮ ನಾಡಿನ ಎಷ್ಟೋ ವಾಗ್ಗೇಯಕಾರರ ಹೆಸರೂ ಗೊತ್ತಿಲ್ಲ. ಅವರ ರಚನೆಗಳ ಪರಿಚಯವೂ ಇಲ್ಲ. ಯಾಕೆ ಹೀಗೆ ಎಂಬ ಪ್ರಶ್ನೆ ಈ ಗಾಯಕರನ್ನು ಕಾಡಿದಾಗ ಉತ್ತರವಾಗಿ ಆರಂಭವಾಗಿದ್ದೇ ಕರ್ನಾಟ ವಾಗ್ಗೇಯ ಮಂಜರಿ


ಕನಕದಾಸರು

ಮೈಸೂರು ಅರಮನೆಯಲ್ಲಿ ನಡೆಯುತ್ತಿದ್ದ ಸಂಗೀತ ಕಛೇರಿಯ ಅಪರೂಪದ ನೋಟ

ಶ್ರೀರಾಮ್ ಶಾಸ್ತ್ರಿ

ಕರ್ನಾಟಕ ಸಂಗೀತ ಪ್ರಕಾರವು ಭಾರತೀಯ ಸಂಗೀತ ಎಂಬ ಪ್ರಾಚೀನ ಪರಂಪರೆಯಿಂದ ಬೇರ್ಪಡೆಯಾಗಿ ಸ್ವತಂತ್ರ ರೂಪ ಪಡೆದುಕೊಂಡು ಪ್ರಸಿದ್ಧಿಗೆ ಬಂದದ್ದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಪರ್ಷಿಯನ್ ಹಾಗೂ ಮೊಘಲರ ಆಕ್ರಮಣದ ನಂತರ ಅವರ ಸಂಗೀತದ ಪ್ರಭಾವ ಹೆಚ್ಚಾಗಿ ಉತ್ತರಾದಿ ಅಥವಾ ಹಿಂದೂಸ್ಥಾನಿ ಸಂಗೀತ ಪ್ರಕಾರವಾಗಿ ಹೇಗೆ ಬೆಳೆಯಿತೋ, ಅಂತೆಯೇ ದಕ್ಷಿಣದಲ್ಲಿ ಆ ಅಖಂಡ ಭಾರತೀಯ ಸಂಗೀತವು ಕರ್ನಾಟಕ ಸಂಗೀತವಾಗಿ ಪುರಂದರದಾಸರ ಕಾಲದಿಂದ ಈಚೆಗೆ ಒಂದು ಸ್ವರೂಪ ಪಡೆದುಕೊಂಡಿರಬೇಕು. ಶಾಸ್ತ್ರಗ್ರಂಥಗಳಲ್ಲಿ ಬಹಳ ಹಿಂದಿನಿಂದಲೂ 'ಕರ್ನಾಟಕ ಸಂಗೀತ' ಎಂಬ ಪದಬಳಕೆಯಿದ್ದರೂ ಅದು ಅಭ್ಯಾಸ-ರೂಢಿಕ್ರಮದಲ್ಲಿ ಉಪಯೋಗಕ್ಕೆ ಪ್ರಾಯಶಃ ಈ ಸಮಯದಲ್ಲಿಯೇ ಬಂದಿರಬೇಕು.

ಆಗ ಈ ಸಂಗೀತವನ್ನು ಬೆಳೆಸಿದವರಲ್ಲಿ ಪ್ರಮುಖರಾದ ಪುರಂದರದಾಸರು 'ಕರ್ನಾಟಕ ಸಂಗೀತ ಪಿತಾಮಹ' ಎಂದೇ ಹೆಸರಾದರು. ಅವರು ಲಕ್ಷಾಂತರ ರಚನೆಗಳನ್ನು ಮಾಡಿದ್ದರೆಂದೂ, ನಮ್ಮ ಸಂಗೀತದ ಕಲಿಕಾ ಪಾಠ, ಸೂಳಾದಿ ಸಪ್ತ ತಾಳಗಳ ಬಳಕೆಯ ರಚನೆಗಳನ್ನು ಮಾಡಿದ್ದರೆಂದೂ ತಿಳಿದಿದೆ. ಅವರ ವಾಗ್ಗೇಯತ್ವದಲ್ಲಿ ಮೂಡಿದ ನಾಲ್ಕುಮುಕ್ಕಾಲು ಲಕ್ಷ ರಚನೆಗಳಲ್ಲಿ ಕೇವಲ ಏಳುನೂರು ರಚನೆಗಳಷ್ಟು ಮಾತ್ರ ದೊರಕಿವೆ. ಮಿಕ್ಕವು ಕಾಲಕ್ರಮೇಣ ನಾಶವಾಗಿವೆ.

ಈ ಪ್ರಕಾರದಲ್ಲಿ ಇಂದಿಗೂ ಬಳಕೆಯಲ್ಲಿರುವ ಅಣ್ಣಮಾಚಾರ್ಯರ ರಚನೆಗಳು, ನಾರಾಯಣ ತೀರ್ಥರ ತರಂಗಗಳು, ಭದ್ರಾಚಲ ರಾಮದಾಸರ ಹಾಡುಗಳು, ದಾಸಪರಂಪರೆಯಲ್ಲಿ ಕನಕದಾಸರಾದಿಯಾಗಿ ಎಷ್ಟೋ ರಚನೆಗಳು ಕೇವಲ ಕರ್ಣಪರಂಪರೆಯಲ್ಲಿಯೇ ಇದ್ದು, ಇಂತಹ ಇನ್ನೂ ಎಷ್ಟೋ ರಚನೆಗಳು ಲಭ್ಯವಿಲ್ಲದಾಗಿವೆ. ಆಗಿನ ರಾಜಾಶ್ರಯಗಳಲ್ಲಿದ್ದ ಸಂಗೀತಗಾರರ, ಬೇರೆ ಬೇರೆ ವಾಗ್ಗೇಯಕಾರರಲ್ಲಿ ಮೂಡಿರುವ ಕೃತಿಗಳೂ ಅಷ್ಟೇ. ವಿಪರ್ಯಾಸವೆಂದರೆ ಇಂತಹ ಕೃತಿಗಳನ್ನು ಇಂದಿನಂತೆ ಬರೆದು ಸಂರಕ್ಷಿಸಿಲ್ಲ. ಇದು ದೂಷಣೆಯಲ್ಲ, ಆಗತಾನೇ ಟಿಸಿಲೊಡೆದು ಮೂಡುತ್ತಿದ್ದ ಪ್ರಕಾರದ ಮಜಲುಗಳು ಜನಕ್ಕೆ ತಲುಪಲೇ ಒಂದೆರಡು ತಲೆಮಾರುಗಳು ಹಿಡಿದಿರಬಹುದು. ಸುಮಾರು 18ನೆಯ ಶತಮಾನದ ಹೊತ್ತಿಗೆ ಕೃತಿಗಳನ್ನು ಬರೆದಿಡುವ ಸಂಪ್ರದಾಯ ಹುಟ್ಟಿದ್ದು ಎನ್ನಬಹುದು.

ವಾಗ್ಗೇಯ ರಚನೆಗಳನ್ನು ಬರೆದಿಡುವ ಅಭ್ಯಾಸವು ಕರ್ನಾಟಕ ಸಂಗೀತ ಪರಂಪರೆ ಹೆಮ್ಮರವಾಗಿ ಬೆಳೆಯಲು ಅನುವು ಮಾಡಿಕೊಟ್ಟಿತು. ಲಕ್ಷ್ಯ-ಲಕ್ಷಣಗಳು, ಶಾಸ್ತ್ರಗ್ರಂಥಗಳನ್ನಾಧರಿಸಿ, ಆ ಅಂಶಗಳನ್ನೆಲ್ಲಾ ಒಳಗೊಂಡಂತೆ ಮಾಡಿದ ರಚನೆಗಳು ಜನಕ್ಕೆ ಹಾಡಲು ಆಸರೆಯಾದರೆ, ಅವುಗಳಲ್ಲಿ ಅಡಗಿದ್ದ ರಾಗಭಾವ ಹಾಗೂ ಶಾಸ್ತ್ರಾಧಾರಿತ ವಿಷಯಗಳು ಸಂಗೀತಶಾಸ್ತ್ರ ಜ್ಞಾನದ ಹಾಗೂ ಮನೋಧರ್ಮ ಸಂಗೀತದ ಬೆಳವಣಿಗೆಗೆ ಪುಷ್ಟಿ ನೀಡಿದವು. ಹಾಗಾಗಿ ಕಲ್ಪಿತ ಸಂಗೀತವು ಕಲ್ಪನಾಸಂಗೀತ ಚೆನ್ನಾಗಿ ಬೆಳೆಯಲು ಸಹಕಾರಿಯಾಗಿದ್ದರಲ್ಲಿ ಅನುಮಾನವಿಲ್ಲ. ಸಂಗೀತ ವಿದ್ಯಾರ್ಥಿಯ ಸ್ಪಷ್ಟ ಗಮನಕ್ಕೆ ಬಾರದಿದ್ದರೂ ಶಾಸ್ತ್ರ ಹಾಗೂ ಪ್ರಯೋಗ ಎರಡರ ಜ್ಞಾನವೂ ಅರಿವಿಗೆ ಬರುವಂತಹ, ಜೊತೆಗೆ ದೇವತಾಸ್ತುತಿಯೂ ಆಗುವಂತಹ ರಚನೆಗಳೇ ಈ ಕರ್ನಾಟಕ ಸಂಗೀತ ಪ್ರಕಾರದಲ್ಲಿ ಹೆಚ್ಚಾಗಿ ಕಾಣುವುದು. ಪುರಂದರದಾಸರು, ಕನಕದಾಸರು ಇವರೇ ಮೊದಲಾಗಿ ಮಾಡಿರುವ ರಚನೆಗಳಲ್ಲಿ ಸಾಹಿತ್ಯವು ದೇವತಾಸ್ತುತಿಯಷ್ಟೇ ಆಗಿರದೆ ಅವುಗಳಲ್ಲಿ ಸಮಾಜ ಸುಧಾರಣೆ, ಕ್ಷೇತ್ರದರ್ಶನ, ನೀತಿಪಾಠ, ಪುರಾಣಕಥನ, ಹೀಗೆ ಹತ್ತು ಹಲವಾರು ವಿಷಯಗಳ ಸುತ್ತ ಇರುವುದನ್ನು ಕಾಣುತ್ತೇವೆ. ವಾಗ್ಗೇಯತ್ವವು ವಾಕ್ (ಸಾಹಿತ್ಯ) ಮತ್ತು ಗೇಯ (ಸಂಗೀತ) ಎಂಬ ಎರಡು ಬೃಹತ್ ವಿಷಯಗಳ ಸಮ್ಮಿಲನದ ಅಸಾಮಾನ್ಯ ಕಲೆ. ಹಾಗಾಗಿ ವಾಗ್ಗೇಯಕಾರರುಗಳಿಗೆ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ವಿಶೇಷ, ಪೂಜ್ಯ ಸ್ಥಾನಮಾನ.

ಹದಿನೈದು ಹದಿನಾರನೆಯ ಶತಮಾನದ ವಾಗ್ಗೇಯ ರಚನೆಗಳಲ್ಲಿ ಎಷ್ಟೋ ರಚನೆಗಳು ಕೈತಪ್ಪಿ ಹೋಗಿವೆ. ಅದಕ್ಕೂ ಹಿಂದಿನವು ಕೇವಲ ಶಾಸ್ತ್ರ ಅಥವಾ ಪದ್ಯರೂಪದಲ್ಲಿವೆ. ಲಭ್ಯವಿರುವಷ್ಟು ರಚನೆಗಳಲ್ಲಿ ವಾಕ್ ಮತ್ತು ಗೇಯಗಳಲ್ಲಿ ವಾಕ್ ಭಾಗವು ರಚನೆಕಾರರದ್ದೇ ಆಗಿದ್ದರೂ ಗೇಯ ಭಾಗವು ಆ ವಾಗ್ಗೇಯಕಾರರದ್ದು ಹೌದೇ ಅಲ್ಲವೇ ಎಂಬ ಸಂಶಯವಿದೆ. ಸಂಪ್ರದಾಯದಲ್ಲಿ ಬಂದ ಹತ್ತು ಹಲವು ಹಾಡುಗಳಲ್ಲಿ ರಚನೆಕಾರ ಗೇಯವಿದ್ದಿರಬಹುದು. ಆದರೆ, ಹೌದು ಎಂದು ಸ್ಥಾಪಿಸುವ ಯಾವ ಆಧಾರಗಳೂ ಇಲ್ಲ. ಹಾಗಾಗಿ ಇಂದು ದಾಸರ ರಚನೆಗಳಿಗೆ, ಅಣ್ಣಮಾಚಾರ್ಯರ ರಚನೆಗಳಿಗೆಲ್ಲ ಯಾರು ಬೇಕಾದರೂ ರಾಗ ಸಂಯೋಜನೆಗಳನ್ನು ಮಾಡಿ ಹಾಡುವ ರೂಢಿಯಿದೆ. ಅಂದರೆ ಗೇಯತ್ವ ಅಧಿಕಾರ ಗಾಯಕನ ಕೈಯಲ್ಲಿದೆ. ಸಾಂಪ್ರದಾಯಿಕ ಗೇಯಗಳನ್ನು ಕೇಳಿದಾಗಲೂ ನಮಗೆ ಆ ಕಾಲದ ಸಂಗೀತದ ಬಗ್ಗೆ ಒಂದು ಸ್ಥೂಲ ಚಿತ್ರಣ ಸಿಗಬಹುದಷ್ಟೇ ವಿನಾ ಅದರ ಸಂಪೂರ್ಣ ಚಿತ್ರಣ ತಿಳಿಯುವುದಿಲ್ಲ.

ಸೂಳಾದಿಗಳನ್ನು ಗಮನಿಸಿದಾಗ ತಾಳದ ಅಥವಾ ಲಯಜ್ಞಾನದ ಬಿಗಿಸಾಧನೆ ಇದ್ದಿರಬಹುದು ಎಂದು ಅರಿಯಬಹುದು. ಆದರೆ ಸೂಳಾದಿಗಳು ಸಂಗೀತದಲ್ಲಿ ಹೆಚ್ಚಾಗಿ ಪ್ರಯೋಗದಲ್ಲಿಲ್ಲ; ಭಜನ ಸಂಪ್ರದಾಯದಲ್ಲಿ ಸಂಗೀತಕ್ಕೆ ಮಹತ್ವ ಇಲ್ಲದ ರೀತಿ ಪ್ರಯೋಗದಲ್ಲಿವೆ, ಇಲ್ಲವಾದರೆ ಪ್ರಾತ್ಯಕ್ಷಿಕೆಗಳಲ್ಲಿವೆ ಅಷ್ಟೇ.

ಇನ್ನೂ ಪೂರ್ವದಲ್ಲಿ ಹಾಡುತ್ತಿದ್ದ ಜಯದೇವನ ಗೀತಗೋವಿಂದದಂತಹ ಕಾವ್ಯಗಳಲ್ಲಿ ಸಹ ಸಂಗೀತ ಇತ್ತೇ ಇಲ್ಲವೇ ಎಂಬುದು ತಿಳಿಯದ ಸಮಾಚಾರ. ಕ್ಷೇತ್ರಜ್ಞರ ಪದಗಳಲ್ಲಿ ಸಂಗೀತವು ರಚನೆಕಾರರದ್ದೇ ಎಂಬ ಅಭಿಪ್ರಾಯವಿದೆ. ಹಾಗಿದ್ದ ಪಕ್ಷದಲ್ಲಿ ಇದು ನಮಗೆ ದೊರೆತಿರುವ ಅತ್ಯಂತ ಹಳೆಯ ವಾಗ್ಗೇಯ ರಚನೆ ಎನ್ನಬಹುದು.

ಮುಂದೆ, ಹದಿನೆಂಟನೆಯ ಶತಮಾನದಷ್ಟರ ಹೊತ್ತಿಗೆ ವಿಶೇಷವಾಗಿ ಬೆಳೆದ ಈ ವಾಗ್ಗೇಯ ಪರಂಪರೆ ಮರಾಠರ ಆಳ್ವಿಕೆಯಲ್ಲಿ ಒಂದು ನವೋದಯ ಪರ್ವ ಕಂಡಿತು. ಆ ಸಮಯದಲ್ಲಿ ವಾಗ್ಗೇಯ ತ್ರಿಮೂರ್ತಿಗಳಾದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಾಶಾಸ್ತ್ರಿಗಳ ರಚನೆಗಳು ಅತಿ ಹೆಚ್ಚು ಪ್ರಭಾವ ಬೀರಿ, ಈ ಪರ್ವಕ್ಕೆ ನಾಂದಿಯಾದವು. ಇಂದಿನ ಕರ್ನಾಟಕ ಸಂಗೀತ ಪ್ರಕಾರದ ಸ್ವರೂಪ ಬರುವಲ್ಲಿ ಇವುಗಳು ಬಹುಮುಖ್ಯ ಪಾತ್ರ ಹೊಂದಿವೆ. ಅದೇ ಸಮಯದಲ್ಲಿ ಕೇರಳದಲ್ಲಿ ಕೂಡಾ ತಿರುವಾಂಕೂರು ಸಂಸ್ಥಾನದ ಸ್ವಾತಿ ತಿರುನಾಳರ, ತಮಿಳುನಾಡಿನಲ್ಲೂ ಹಲವಾರು ವಾಗ್ಗೇಯಕಾರರ, ಆಂಧ್ರದಲ್ಲೂ ಹಲವರ ರಚನೆಗಳು ದೊರೆತಿವೆ. ಸ್ಥೂಲವಾಗಿ ದಕ್ಷಿಣಭಾರತದ ಹಲವಾರು ಭಾಗಗಳಲ್ಲಿ ದೊರೆತಿವೆ ಎನ್ನಬಹುದು. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಈ ಪ್ರಕಾರವನ್ನು ದಕ್ಷಿಣಾದಿ ಸಂಗೀತ ಎನ್ನುವ ರೂಢಿಯೂ ಇದೆ. ಇವುಗಳ ಸಂಗೀತಭಾಗವೂ ಹೆಚ್ಚಿನಂಶ ವಾಗ್ಗೇಯಕಾರರದ್ದೇ ಆಗಿದೆ. ಇವುಗಳಲ್ಲಿ ಹಲವು ಹೆಸರುವಾಸಿಯಾಗಿವೆ, ಹಲವು ಆಗಿಲ್ಲ. ಆದರೆ ಈ ಕಾಲದ ನಂತರ ಬಹುಪಾಲು ವಾಗ್ಗೇಯಕಾರರು ರಚನೆಗಳನ್ನು ಲಿಖಿತ ರೂಪದಲ್ಲೋ ಮುದ್ರಿಸಿಯೋ ಉಳಿಸಿ ಮುಂದಿನ ಪೀಳಿಗೆಗಳಿಗೆ ತಲುಪಿಸಿದ್ದಾರೆ.


ವೀಣೆ ಶೇಷಣ್ಣ

ಹಾಗೆ ಬಂದ ಈ ಪರಂಪರೆಯಲ್ಲಿ ಮುಂದುವರೆದು ಅನೇಕರು ರಚನೆಗಳನ್ನು ಮಾಡಲು ಉಪಕ್ರಮಿಸಿ ಇಂದು ಬಹಳಷ್ಟು ಜನ ರಚನೆಕಾರರು ಇದ್ದಾರೆ. ಅಂಥವರ ರಚನೆಗಳು ಅತ್ಯಂತ ಸುಂದರವಾಗಿಯೂ ಪರಂಪರಾನುಗತವಾದ ಶಾಸ್ತ್ರಬದ್ಧತೆಯುಳ್ಳವಾಗಿಯೂ ಇರುವುದನ್ನು ಕಾಣುತ್ತೇವೆ.

ಈ ಪರಂಪರೆಯು ರೂಪುಗೊಂಡದ್ದು ವಿಜಯನಗರದಲ್ಲಿ ಎಂಬ ಅಭಿಪ್ರಾಯವಿದ್ದರೂ, ಅದಕ್ಕೆ ಪೋಷಣೆ ಸಿಕ್ಕಿ ಹೆಮ್ಮರವಾಗಿದ್ದು ಕಾವೇರಿ ತೀರದ ಭಾಗಗಳಾದ ಕರ್ನಾಟಕ-ತಮಿಳುನಾಡಿನಲ್ಲಿ. ಅದರಲ್ಲೂ ತಮಿಳುನಾಡಿನಲ್ಲಿ ಸಂಗೀತ ತ್ರಿಮೂರ್ತಿಗಳ ಶಿಷ್ಯಪರಂಪರೆಗಳು ಆ ವೈಭವವನ್ನು ಇಂದಿಗೂ ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುತ್ತಿರುವುದು ವಿದಿತ. ಹಾಗಾಗಿ ಅವರ ಶಿಷ್ಯಪರಂಪರೆಗಳಲ್ಲಿ ಮೂಡಿಬಂದ ವಾಗ್ಗೇಯ ರಚನೆಗಳೂ ಪ್ರಸಿದ್ಧಿಗೆ ಬಂದಿವೆ. ಆದರೆ ಕರ್ನಾಟಕ-ತೆಲುಗು ಪ್ರಾಂತ್ಯಗಳು ಹಾಗೂ ಕೇರಳದಲ್ಲಿ ಮುಂದುವರೆದ ಈ ವಾಗ್ಗೇಯ ವೈಭವವು ತಮಿಳುನಾಡಿನವಷ್ಟು ಪ್ರಸಿದ್ಧಿಗೆ ಬರಲಾಗಿಲ್ಲ. ಪ್ರಾಯಶಃ ತಮಿಳುನಾಡಿನ ಸಂಗೀತಗಾರರು ಆ ಕಾಲದಲ್ಲಿ ಆಯಾ ಗುರುಪರಂಪರೆಗಳ ವಾಗ್ಗೇಯಕಾರರ ರಚನೆಗಳನ್ನು ಎಲ್ಲೆಡೆ ಹಾಡಿ ಪ್ರಸಿದ್ಧಿಗೆ ಯಶಸ್ವಿಯಾಗಿ ತಂದು, ಮಿಕ್ಕ ಸಂಗೀತಗಾರರನ್ನೂ ಪ್ರಭಾವಿತರನ್ನಾಗಿ ಮಾಡಿರುವುದು ಇದಕ್ಕೆ ಕಾರಣವಿದ್ದರೂ ಇರಬಹುದು.

ಬೇರೆ ಪ್ರಾಂತ್ಯಗಳಲ್ಲಿದ್ದ ವಾಗ್ಗೇಯಕಾರರ ಎಷ್ಟೋ ಅಪೂರ್ವ ಕೃತಿಗಳು ಪ್ರಸಿದ್ಧಿಗೆ ಬಾರದೆ ನೇಪಥ್ಯಕ್ಕೆ ಸರಿಯುತ್ತಿವೆ. ಕರ್ನಾಟಕದ ಹಲವಾರು ವಾಗ್ಗೇಯಕಾರರ ರಚನೆಗಳು ಸಂಪೂರ್ಣ ವಾಗ್ಗೇಯ ಶಾಸ್ತ್ರಬದ್ಧವಾಗಿಯೂ ಸುಂದರವಾಗಿಯೂ ಇದ್ದರೂ ಹಾಡದಂತಹ ಪರಿಸ್ಥಿತಿಯನ್ನು ನಮಗೆ ನಾವೇ ತಂದುಕೊಂಡುಬಿಟ್ಟಿದ್ದೇವೆ. ಇದನ್ನು ನಾವು ಜನಪ್ರಿಯ ಮಾಡುವ ಗೋಜಿಗೆ ಹೋಗದೆ ಈಗಾಗಲೇ ಜನಪ್ರಿಯವಾದವುಗಳನ್ನೇ ಹಾಡುತ್ತಿದ್ದೇವೆ. ನಮ್ಮ ಎಷ್ಟೋ ವಾಗ್ಗೇಯಕಾರರ ಹೆಸರೂ ತಿಳಿಯದಂತಹ ಪರಿಸ್ಥಿತಿಗೆ ಬಂದುಬಿಟ್ಟಿರುವುದು ವಿಷಾದನೀಯ. ಅದೇ ತಲೆಮಾರಿನ ತಮಿಳುನಾಡಿನ ವಾಗ್ಗೇಯಕಾರರು ಗೊತ್ತು, ನಮ್ಮವರದ್ದು ಇಲ್ಲ.

ಈ ಸಮಯದಲ್ಲಿ ಇಂತಹ ವಾಗ್ಗೇಯ ರಚನೆಗಳನ್ನು ಹೆಕ್ಕಿ ತೆಗೆದು, ಅವುಗಳನ್ನು ನಮ್ಮ ಸಂಗೀತಗಾರರ ಮೂಲಕ ಪ್ರಚಾರಕ್ಕೆ ತರಬೇಕಾಗಿರುವುದು ಆದ್ಯ ಕರ್ತವ್ಯ. ನಾವೇ ಇದನ್ನು ಮಾಡದಿದ್ದಲ್ಲಿ ಇನ್ಯಾರೂ ಇದನ್ನು ಮಾಡದೆ ಕಡೆಗೆ ಮತ್ತೆ ನಾವು ಹದಿನಾರನೇ ಶತಮಾನದಂತೆ ರಚನೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ದಿಕ್ಕಿನಲ್ಲಿ ಬೆಂಗಳೂರಿನ ಬಸವೇಶ್ವರನಗರದಲ್ಲಿರುವ ಸಂಗೀತ ಸಂಸ್ಥೆ ನಿಮಿತ್ತ, 'ಕರ್ಣಾಟ ವಾಗ್ಗೇಯ ಮಂಜರಿ' ಎಂಬ ವಿಶೇಷ ಆನ್ಲೈನ್ ಸರಣಿ ಪ್ರಾರಂಭಿಸಿದೆ. ಈ ಸರಣಿಯನ್ನು ನಾನೇ ನಿರ್ದೇಶಿಸುತ್ತಿದ್ದು, ಮೊದಲ ಕಂತನ್ನು ವೆಂಕಟನಾರಾಯಣ ಉಡುಪ ಶಾಸ್ತ್ರಿಗಳು ಎಂಬ ವಾಗ್ಗೇಯಕಾರರ ರಚನೆಗಳನ್ನು ಆಧರಿಸಿ ಮಾಡಲಾಗಿದೆ. ಕಲಾಂಬಿಕಾ ಸಹೋದರಿಯರೆಂದು ಪ್ರಸಿದ್ಧರಾಗಿರುವ ವಿದುಷಿಯರಾದ ಅಂಬಿಕಾದತ್ ಹಾಗೂ ಕಲಾಧರಿ ಭವಾನಿಯವರು ಉಡುಪರ ಶಿಷ್ಯಪರಂಪರೆಯಲ್ಲಿದ್ದು, ವಾಗ್ಗೇಯಕಾರರ ನೇರ ಶಿಷ್ಯ, ಹಿರಿಯ ಸಂಗೀತಗಾರ ಡಾ.ಸಿ.ಎ. ಗುರುದತ್ ಅವರ ಮಾರ್ಗದರ್ಶನದಲ್ಲಿ ಅನೇಕ ಕೃತಿಗಳನ್ನು ಸಿದ್ಧಪಡಿಸಿದ್ದಾರೆ. ನಮ್ಮ ರಾಜ್ಯದ, ಅನೇಕ ಮುಂಚೂಣಿಯಲ್ಲಿರುವ ಸಂಗೀತಗಾರರು ಇದರಲ್ಲಿ ಭಾಗವಹಿಸಿದ್ದಾರೆ. ವಾರಕ್ಕೊಂದು ಸಂಚಿಕೆಯಂತೆ ಮೂಡುತ್ತಿರುವ ಈ ಸರಣಿ ವೀಕ್ಷಿಸಲು ಯೂಟ್ಯೂಬ್‌ನಲ್ಲಿ ನೋಡಿ:
Nimitta Bengaluru- https://bit.ly/3iljJqC
ಅಥವಾ *shorturl.at/owzQ4.*

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಮಜ ಮಜ ಮಜಕೂರದ ಏಪ್ರಿಲ್ 25ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಗಳಲ್ಲಿ ಸರಸ...

ನಮ್ಮ ಕನ್ನಡ ಭಾಷೆ ಎಷ್ಟೊಂದು ಸೂಕ್ಷ್ಮ ಮತ್ತು ಸ್ವಾರಸ್ಯಕರವಾಗಿದೆ ಎಂಬುದಕ್ಕೆ ಈ ಶಬ್ದಗಳೇ ಸಾಕ್ಷಿ

1. ಬಾಸುಮತಿ ಅಕ್ಕಿತರೋಣ | ಬಾ ಸುಮತಿ ಅಕ್ಕಿ ತರೋಣ
2. ಚಿನ್ನದ ಸರ ನೋಡೋಣ ಬಾ | ಚಿನ್ನ ದಸರ ನೋಡೋಣ ಬಾ
3. ಹೊಲಸುವಾಸನೆಯಿಂದ | ಹೊಲ ಸುವಾಸನೆಯಿಂದ
4. ರಾಜನಮನ | ರಾಜನ ಮನ
5. ಭೀಮನು ಶಾಲೆಗೆ ಬರುತ್ತಾನೆ | ಭೀಮನು ಶಾಲೆ ಗೆಬರುತ್ತಾನೆ
6. ಬೀದಿಗಿಳಿ | ಬೀದಿ ಗಿಳಿ
7. ಗಡಿಬಿಡಿ | ಗಡಿ ಬಿಡಿ
8. ಆಗ್ರಹ | ಆ ಗ್ರಹ
9. ಹಸಿರಾಗಿ | ಹಸಿ ರಾಗಿ
10. ಆಗಮನ | ಆಗ ಮನ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸಂಖ್ಯೆಗಳನ್ನು ಇಂಗ್ಲಿಷ್‌ನ ಅಕ್ಷರಗಳಲ್ಲಿ ಬರೆದಾಗ...

1. 29– TWENTY NINE - ಇಲ್ಲಿ ಬರಹದ ಗೆರೆಗಳನ್ನು ಎಣಿಸಿದರೆ ಅವೂ 29 ಗೆರೆಗಳೇ ಇವೆ
2. TWO HUNDRED AND SIX - ಇಲ್ಲಿ ಇಂಗ್ಲಿಷಿನ A, E, I, O, U ಐದೂ ಸ್ವರಗಳು ಇವೆ
3. ONE, TWO, THREE, FOUR... ಹೀಗೆ ಸಂಖ್ಯೆಗಳನ್ನು ನೂರರವರೆಗೆ ಬರೆದರೂ ಅವುಗಳಲ್ಲಿ A, B, C ಅಕ್ಷರಗಳು ಇಲ್ಲವೇ ಇಲ್ಲ
4. ONE, TWO, THREE, FOUR, FIVE... ಹೀಗೆ ಬರೆಯುತ್ತಾ ಹೋದರೆ ಪ್ರತಿ ಸಂಖ್ಯೆಯಲ್ಲೂ ಹಿಂದಿನ ಸಂಖ್ಯೆಯ ಅಕ್ಷರಗಳು ಬಂದೇ ಇವೆ (ಉದಾ: ONE, TWO ಇಲ್ಲಿ 'O' ಬಂದಿದೆ.)

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಅರ್ಧಂಬರ್ಧ ಪದಕ್ಕೆ ಬಲಭಾಗದಲ್ಲಿರುವ ಇನ್ನೊಂದು ಅಕ್ಷರ ಸೇರಿಸಿದರೆ ನಾಲ್ಕು ಅಕ್ಷರದ ಇನ್ನೊಂದು ಪದವಾಗುವುದು.

1.	ಸಂ–ಧಾನ	A.	ಬ್ಬ
2.	ಜ-ಪಾನ	B.	ಬ
3.	ಕಾ- ಡಿಗೆ	C.	ಕ
4.	ಸು-ತ್ತಿಗೆ	D.	ದ
5.	ಸ-ವತಿ	E.	ಗ
6.	ಕ-ಟಕ	F.	ಡಾ
7.	ಆ-ಳಿಕೆ	G.	ಪ್ರ
8.	ಬೆ-ರಿಕೆ	H.	ಡಿ
9.	ಸ-ರಸ	I.	ಮ
10.	ಹ-ರಣ	J.	ನ್ಗಾ
11.	ಕ-ಳಿಸು	K.	ತ್ಯ
12.	ಬ-ವಣೆ	L.	ರ
13.	ಹ-ರಡು	M.	ನ್ನಿ
14.	ಉ-ಳಿಕೆ	N.	ವಿ
15.	ಸಂ-ದಾಯ	O.	ಪ್ಪ
16.	ಸ-ಲಿಕೆ	P.	ಲ್ಲ
17.	ಸ-ಹಿತ	Q.	ಳೆ
18.	ಚ-ವಳಿ	R.	ಳು
19.	ಹೊ-ಗಳು	S.	ನ್ನೆ
20.	ನೀ-ಡಿಕೆ	T.	ಲ



ಡಣ್ಣ ಚಿಕ್ಕು ಕೇಳ್ರಪ್ಪ ಕಥೆಯ

ಮೀನುಗಾರ ಮತ್ತು ರಾಕ್ಷಸ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಮೀನುಗಾರನೊಬ್ಬ ಎಂದಿನಂತೆ ಒಂದುದಿನ ಸಮುದ್ರಕ್ಕೆ ಇಳಿದು, ಮೀನು ಹಿಡಿಯಲು ದೊಡ್ಡದಾದ ಬಲೆಯೊಂದನ್ನು ಬೀಸಿದ. ದೋಣಿ ತುಂಬಾ ಮೀನುಗಳನ್ನು ಹಿಡಿದುಕೊಂಡು ಹೋಗಲು ಉದ್ದೇಶಿಸಿದ್ದ

ಬಲೆಯಲ್ಲಿ ತುಂಬಾ ಭಾರವಾದ ವಸ್ತು ಸಿಕ್ಕಿಕೊಂಡ ಅನುಭವವಾಯಿತು. ದೊಡ್ಡ ಮೀನೇ ಇರಬಹುದು ಎಂದು ಮೀನುಗಾರ ಹಿರಿಹಿರಿ ಹಿಗ್ಗಿದ. ಬಲೆಯನ್ನು ಬಲವಾಗಿ ಎಳೆಯುತ್ತಾ ಮೇಲೆತ್ತಿದ


ಬಲೆಯನ್ನು ನೀರಿನಿಂದ ಮೇಲೆ ತೆಗೆದು ನೋಡಿದಾಗ ಅದರಲ್ಲೊಂದು ಬಿಂದಿಗೆ ಇರುವುದು ಕಾಣಿಸಿತು. ಬಿಂದಿಗೆ ಇಷ್ಟೊಂದು ಭಾರ ಇರಬೇಕಾದರೆ ಅದರಲ್ಲಿ ನಿಧಿ ಇರಬೇಕು ಎಂದು ಆತ ಖುಷಿಪಟ್ಟ


ಸಮುದ್ರದ ದಡಕ್ಕೆ ಬಂದ ಆತನಿಗೆ, ಬಿಂದಿಗೆಯನ್ನು ಬೇಗ ತೆಗೆದು ನೋಡುವ ತವಕ. ದಡ ಸೇರಿದವನೇ ಅದನ್ನು ತೆಗೆದು ನೋಡಿದ. ಒಳಗಿನಿಂದ ಸುಯ್ ಎಂದು ಸದ್ದಾಗಿ ಗಾಳಿ ಹೊರಬರಲು ಆರಂಭಿಸಿತು


ನೋಡನೋಡುತ್ತಿದ್ದಂತೆಯೇ ದೈತ್ಯ ರಾಕ್ಷಸನೊಬ್ಬ ರೂಪುತಾಳಿ ಮೀನುಗಾರನ ಮುಂದೆ ನಿಂತನು. ತುಂಬಾ ದಿನಗಳಿಂದ ಹಸಿವಿನಿಂದ ಬಳಲುತ್ತಾ ಆ ಬಿಂದಿಗೆಯಲ್ಲಿದ್ದೆ, ಈಗ ನಿನ್ನನ್ನು ತಿನ್ನುವೆ ಎಂದಿತು

ಇಷ್ಟು ದೊಡ್ಡ ದೇಹ, ಇಷ್ಟು ಚಿಕ್ಕ ಬಿಂದಿಗೆಯಲ್ಲಿ ಹೇಗಿತ್ತು ತೋರಿಸು ಎಂದು ಮೀನುಗಾರ ಉಪಾಯದಿಂದ ಹೇಳಿದ. ದಡ್ಡ ರಾಕ್ಷಸ ಹೋಗಿ ಬಿಂದಿಗೆ ಸೇರುತ್ತಿದ್ದಂತೆ ಅದನ್ನು ಬಂದ್ ಮಾಡಿ ಸಮುದ್ರಕ್ಕೆ ಎಸೆದುಬಿಟ್ಟ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಕ್ರಾ ಪ ತಿ ಕ್ತಿ ಮಿ
ಹು ಕ ಡಿ ಚು ತಿ

◯	೦	◯	ಸಾಲು
◯	೦	◯	ಹೊಳಪು
◯	೦	◯	ಭಕ್ತಿ ಕಾಣಿಕೆಯ ಡಬ್ಬಿ
◯	೦	◯	ಓರ್ವ ಪ್ರಾಚೀನ ಕವಯಿತ್ರಿ
◯	೦	◯	ಬದಲಾವಣೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ
1. ಇಂಡಿ 2. ಥಂಡಿ 3. ತುಂಬ 4. ರಂಪ 5. ತಂಗು

ಶಬ್ದಗಳಲ್ಲಿ ಸರಸ
ನರ: ನರಿ, ನಾರಿ, ನೀರು, ನೂರು, ನೆರೆ, ನೊರೆ, ನೇರ, ನಾರು, ನೀರೆ, ನುರಿ
ಕಡ: ಕಡಿ, ಕಾಡು, ಕಿಡಿ, ಕೀಡೆ, ಕೂಡು, ಕೇಡು, ಕೊಡು, ಕೊಡ, ಕೋಡು, ಕಡೆ

ಟ್ವೆಂಟಿ- 20
1-G, 2-E, 3- C, 4-D, 5-B, 6-H, 7-F, 8-A, 9-J, 10-I, 11-N, 12-T, 13-M, 14-K, 15-L, 16-P, 17-S, 18-O, 19-Q, 20-R

ಗಣಿತದಲ್ಲಿ ಗರ್ದಿಗಮ್ಮತ್ತು
1. 9ರಿಂದ 16ರವರೆಗೆ ಕೂಡಿಸಿದರೂ 100 ಆಗುವುದು
2. 18ರಿಂದ 22ರವರೆಗೆ ಕೂಡಿಸಿದರೂ 100 ಆಗುವುದು
3. ಬೆಸಸಂಖ್ಯೆ: 1ರಿಂದ 19ರವರೆಗೆ ಕೂಡಿಸಿದರೂ 100 ಆಗುವುದು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಕವನಾ ಡಿ.ಪಿ. ದಾವಣಗೆರೆ

ಅಖಿಲ್ ಮುದಗಲ್, ಯಾದಗಿರಿ

ಸುನಿತಾ ಅಣ್ಣಿಗೇರಿ, ಧಾರವಾಡ

ರಾಯುಡು, ಅಲಿ, ಡುಪ್ಲೆಸಿ ಅರ್ಧಶತಕ ವ್ಯರ್ಥ: ಚೆನ್ನೈ ಗೆಲುವಿನ ಓಟಕ್ಕೆ ತಡೆ; ಮುಂಬೈಗೆ ಜಯ

‘ರನ್ ಹೊಳೆ’ ಹರಿಸಿದ ಕೀರನ್

ನವದೆಹಲಿ (ಪಿಟಿಐ) : ಮೂವತ್ತನಾಲ್ಕು ಎಸೆತಗಳಲ್ಲಿ 87 ರನ್ ಸೂರೆ ಮಾಡಿದ ಕೀರನ್ ಪೊಲಾರ್ಡ್ ಅಬ್ಬರದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಗೆಲುವಿನ ಕನಸು ಕೊಚ್ಚಿಹೋಯಿತು.

ಶನಿವಾರ ರಾತ್ರಿ ನಡೆದ ಐಪಿಎಲ್ ಪಂದ್ಯದ ಕೊನೆಯ ಎಸೆತದಲ್ಲಿ ಹೊರಹೊಮ್ಮಿದ ಫಲಿತಾಂಶದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ 4 ವಿಕೆಟ್‌ಗಳ ರೋಚಕ ಜಯ ಸಾಧಿಸಿತು. ಅದಕ್ಕೆ ಕಾರಣವಾಗಿದ್ದು ವೆಸ್ಟ್ ಇಂಡೀಸ್ ದೈತ್ಯ ಬ್ಯಾಟ್ಸ್‌ಮನ್ ಪೊಲಾರ್ಡ್.

ಮೋಯಿನ್ ಅಲಿ, ಫಫ್ ಡುಪ್ಲೆಸಿ ಮತ್ತು ಅಂಬಟಿ ರಾಯುಡು ಅವರ ಅಬ್ಬರದ ಅರ್ಧಶತಕಗಳ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 218 ರನ್‌ಗಳ ಬೃಹತ್ ಮೊತ್ತ ಗಳಿಸಿತ್ತು. ಮುಂಬೈ ತಂಡವು ಆರು ವಿಕೆಟ್ ಕಳೆದುಕೊಂಡು 219 ರನ್ ಗಳಿಸಿತು. ಅದಕ್ಕೆ ಕಾರಣವಾಗಿದ್ದು ಪೊಲಾರ್ಡ್ ಅವರ ಎಂಟು ಸಿಕ್ಸರ್ ಮತ್ತು ಆರು ಬೌಂಡರಿಗಳು!

ಮುಂಬೈ ತಂಡವು 9.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 81 ರನ್ ಗಳಿಸಿದ್ದ ಸಂದರ್ಭದಲ್ಲಿ ಕ್ರೀಸ್‌ಗೆ ಬಂದ ಪೊಲಾರ್ಡ್ ಚೆನ್ನೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು.

ಪೊಲಾರ್ಡ್ ಆಟ ರಂಗೇರಿದಂತೆ ಚೆನ್ನೈ ತಂಡದಲ್ಲಿ ಒತ್ತಡ ಹೆಚ್ಚುತ್ತ ಸಾಗಿತು. ಪೊಲಾರ್ಡ್ ಮತ್ತು ಕೃಣಾಲ್ ಪಾಂಡ್ಯ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 89 ರನ್ ಸೇರಿಸಿದರು. ಪೊಲಾರ್ಡ್ ಹೊಡೆತಗಳಿಗೆ ಸ್ಪಿನ್ನರ್ ರವೀಂದ್ರ ಜಡೇಜ, ವೇಗಿ ಲುಂಗಿ ಗಿಡಿ, ಶಾರ್ದೂಲ್ ಠಾಕೂರ್ ದುಬಾರಿ ಯಾದರು. ಲೈನ್ ಮತ್ತು ಲೆಂಗ್ತ್ ಸಿಗದೆ ಪರದಾಡಿದರು. ಯಾವುದೇ ಲೈನ್‌ನಲ್ಲಿ ಎಸೆತ ಬಿದ್ದರೂ ಪೊಲಾರ್ಡ್ ಸಿಕ್ಸರ್ ಅಥವಾ ಬೌಂಡರಿಗೆ ಅಟ್ಟುತ್ತಿದ್ದರು.

ಕೀರನ್ ಪೊಲಾರ್ಡ್ ಬ್ಯಾಟಿಂಗ್ ಶೈಲಿ– ಪಿಟಿಐ ಚಿತ್ರ

ಕೇವಲ 17 ಎಸೆತಗಳಲ್ಲಿ ಅರ್ಧಶತಕ ಬಾರಿಸಿದರು.

ಆದರೆ ಎಡಗೈ ಮಧ್ಯಮವೇಗಿ ಸ್ಯಾಮ್ ಕರನ್ 17ನೇ ಓವರ್‌ನಲ್ಲಿ ಕೃಣಾಲ್ ವಿಕೆಟ್ ಗಳಿಸಿ, ಜೊತೆಯಾಟವನ್ನು ಮುರಿದರು. ಇದೇ ಓವರ್‌ನ ಐದನೇ ಎಸೆತದಲ್ಲಿ ಫೀಲ್ಡರ್ ಫಫ್ ಡುಪ್ಲೆಸಿಯು ಪೊಲಾರ್ಡ್ ಕ್ಯಾಚ್ ಕೈಚೆಲ್ಲಿದ್ದು ದುಬಾರಿಯಾಯಿತು.

ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ ಎರಡು ಸಿಕ್ಸರ್ ಹೊಡೆದರು. 19ನೇ ಓವರ್‌ನಲ್ಲಿ ಹಾರ್ದಿಕ್ ಮತ್ತು ಜೇಮ್ಸ್ ನಿಶಾಮ್ ವಿಕೆಟ್‌ಗಳನ್ನು ಗಳಿಸಿದ ಸ್ಯಾಮ್ ಚೆನ್ನೈ ಬಳಗದಲ್ಲಿ ಗೆಲುವಿನ ಆಸೆ ಚಿಗುರಿಸುವ ಪ್ರಯತ್ನ ಮಾಡಿದರು. ಆದರೆ ಕೊನೆಯ ಓವರ್‌ನಲ್ಲಿ ಅಗತ್ಯವಿದ್ದ 16 ರನ್‌ಗಳನ್ನು ಪೊಲಾರ್ಡ್ ಹೊಡೆಯುವುದನ್ನು ತಡೆಯಲು ಲುಂಗಿ ಗಿಡಿಗೆ ಸಾಧ್ಯವಾಗಲಿಲ್ಲ. ಈ ಓವರ್‌ನಲ್ಲಿ ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದ ಪೊಲಾರ್ಡ್, ಕೊನೆಯ ಎಸೆತದಲ್ಲಿ 2 ರನ್ ಗಳಿಸಿ ಜಯದ ಕಾಣಿಕೆ ಕೊಟ್ಟರು.

ಚೆನ್ನೈ ತಂಡವು ದೊಡ್ಡ ಮೊತ್ತ ಗಳಿಸಲು ಕಾರಣವಾಗಿದ್ದ ಅಂಬಟಿ ರಾಯುಡು ಅವರ ಬ್ಯಾಟಿಂಗ್‌ಗಿಂತಲೂ ಪೊಲಾರ್ಡ್ ಆಟವು ಜೋರಾಗಿತ್ತು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 218 (20 ಓವರ್‌ಗಳಲ್ಲಿ)

ಋತುರಾಜ್ ಸಿ ಹಾರ್ದಿಕ್ ಬಿ ಬೌಲ್ಟ್ 4 (4ಎ; 4x1), ಡುಪ್ಲೆಸಿ ಸಿ ಬೂಮ್ರಾ ಬಿ ಪೊಲಾರ್ಡ್ 50 (28 ಎ; 4x2, 6x4), ಮೋಯಿನ್ ಅಲಿ ಸಿ ಡಿಕಾಕ್ ಬಿ ಬೂಮ್ರಾ 58 (36 ಎ; 4x5, 6x5), ಸುರೇಶ್ ರೈನಾ ಸಿ ಕೃಣಾಲ್ ಬಿ ಪೊಲಾರ್ಡ್ 2 (4 ಎ), ರಾಯುಡು ಔಟಾಗದೆ 72 (27 ಎ; 4x4, 6x7), ಜಡೇಜ ಔಟಾಗದೆ 22 (22 ಎ; 4x2))

ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 7) 10

ವಿಕೆಟ್ ಪತನ: 1-4 (ಋತುರಾಜ್ ಗಾಯಕವಾಡ್, 0.4), 2-112 (ಮೋಯಿನ್ ಅಲಿ, 10.5), 3-116 (ಫಫ್ ಡು ಪ್ಲೆಸಿ, 11.5), 4-116 (ಸುರೇಶ್ ರೈನಾ, 11.6)

ಬೌಲಿಂಗ್: ಟ್ರೆಂಟ್ ಬೌಲ್ಟ್ 4-0-42-1, ಧವಳ್ ಕುಲಕರ್ಣಿ 4-0-48-0, ಜಸ್‌ಪ್ರೀತ್ ಬೂಮ್ರಾ 4-0-56-1, ರಾಹುಲ್ ಚಾಹರ್ 4-0-32-0, ಜೇಮ್ಸ್ ನೀಶಮ್ 2-0-26-0, ಕೀರನ್ ಪೊಲಾರ್ಡ್ 2-0-12-2

ಮುಂಬೈ ಇಂಡಿಯನ್ಸ್ 6ಕ್ಕೆ 219 (20 ಓವರ್‌ಗಳಲ್ಲಿ)

ಕ್ವಿಂಟನ್ ಸಿ ಮತ್ತು ಬಿ ಅಲಿ 38 (28 ಎ; 4x4, 6x1), ರೋಹಿತ್ ಸಿ ಗಾಯಕವಾಡ್ ಬಿ ಠಾಕೂರ್ 35 (24 ಎ; 4x4, 6x1), ಸೂರ್ಯಕುಮಾರ್ ಸಿ ಧೋನಿ ಬಿ ಜಡೇಜ 3 (3 ಎ), ಕೃಣಾಲ್ ಎಲ್‌ಬಿಡಬ್ಲ್ಯು ಬಿ ಕರನ್ 32 (23 ಎ, 4x2, 6x2), ಕೀರನ್ ಔಟಾಗದೆ 87 (34 ಎ; 4x6, 6x8), ಹಾರ್ದಿಕ್ ಸಿ ಡುಪ್ಲೆಸಿ ಬಿ ಕರನ್ 16 (7 ಎ, 6x2), ನೀಶಮ್ ಸಿ ಠಾಕೂರ್ ಬಿ ಕರನ್ 0 (1 ಎ), ಧವಳ್ ಕುಲಕರ್ಣಿ ಔಟಾಗದೆ 0 (0 ಎ)

ಇತರೆ (ವೈಡ್ 8) 8

ವಿಕೆಟ್ ಪತನ: 1-71 (ರೋಹಿತ್ ಶರ್ಮಾ, 7.4), 2-77 (ಸೂರ್ಯಕುಮಾರ್ ಯಾದವ್, 8.4), 3-81 (ಕ್ವಿಂಟನ್ ಡಿಕಾಕ್, 9.4), 4-170 (ಕೃಣಾಲ್ ಪಾಂಡ್ಯ, 16.3), 5-202 (ಹಾರ್ದಿಕ್ ಪಾಂಡ್ಯ, 18.4), 6-203 (ಜೇಮ್ಸ್ ನೀಶಮ್, 18.6)

ಬೌಲಿಂಗ್: ದೀಪಕ್ ಚಾಹರ್ 4-0-37-0, ಸ್ಯಾಮ್ ಕರನ್ 4-0-34-3, ಲುಂಗಿ ಗಿಡಿ 4-0-62-0, ಶಾರ್ದೂಲ್ ಠಾಕೂರ್ 4-0-56-1, ರವೀಂದ್ರ ಜಡೇಜ 3-0-29-1, ಮೋಯಿನ್ ಅಲಿ 1-0-1-1

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 4 ವಿಕೆಟ್‌ಗಳ ಜಯ

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಕೆ.ಎಲ್.ರಾಹುಲ್	ಪಂಜಾಬ್	331
ಫಫ್ ಡುಪ್ಲೆಸಿ	ಚೆನ್ನೈ	320
ಶಿಖರ್ ಧವನ್	ಡೆಲ್ಲಿ	311

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	17
ಆವೇಶ್ ಖಾನ್	ಡೆಲ್ಲಿ	13
ರಾಹುಲ್ ಚಾಹರ್	ಮುಂಬೈ	11

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	7	5	2	-	-	10
ಡೆಲ್ಲಿ ಕ್ಯಾಪಿಟಲ್ಸ್	7	5	2	-	-	10
ಬೆಂಗಳೂರು	7	5	2	-	-	10
ಮುಂಬೈ ಇಂಡಿಯನ್ಸ್	7	4	3	-	-	8
ಪಂಜಾಬ್	7	3	4	-	-	6
ಕೋಲ್ಕತ್ತ	7	2	5	-	-	4
ರಾಜಸ್ಥಾನ	6	2	4	-	-	4
ಹೈದರಾಬಾದ್	6	1	5	-	-	2

* ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಮತ್ತೊಂದು ಜಯಕ್ಕೆ ರಾಹುಲ್ ಕಾತರ

ಅಹಮದಾಬಾದ್ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರಿನ ಭರ್ಜರಿ ಜಯದಿಂದ ಪುಟಿದೆದ್ದಿರುವ ಕೆ.ಎಲ್. ರಾಹುಲ್ ಮತ್ತೊಂದು ಜಯದ ಮೇಲೆ ಕಣ್ಣಿಟ್ಟಿದ್ದಾರೆ.

ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಬಲಿಷ್ಠ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ರಾಹುಲ್ ಬಳಗವು ಎದುರಿಸಲಿದೆ. ರಿಷಭ್ ಪಂತ್ ಬಳಗವು 10 ಅಂಕಗಳನ್ನು ಗಳಿಸಿದ್ದು ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ತಂಡದ ಪೃಥ್ವಿ ಶಾ, ಶಿಖರ್ ಧವನ್, ರಿಷಭ್, ಶಿಮ್ರೊನ್ ಹೆಟ್ಮೆಯರ್ ಅಮೋಘ ಲಯದಲ್ಲಿದ್ದಾರೆ. ಅನುಭವಿ ಇಶಾಂತ್ ಶರ್ಮಾ, ಕಗಿಸೊ ರಬಾಡ, ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಆವೇಶ್ ಖಾನ್ ಅವರಿಂದಾಗಿ ಬೌಲಿಂಗ್ ವಿಭಾಗವೂ ಬಲಿಷ್ಠವಾಗಿದೆ.

ಪಂಜಾಬ್ ತಂಡದಲ್ಲಿ ನಾಯಕ ರಾಹುಲ್ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಕ್ರಿಸ್ ಗೇಲ್ ಕೂಡ ತಮ್ಮ ಆಟ ಆಡುತ್ತಿದ್ದಾರೆ. ಆದರೆ ನಿಕೊಲಸ್ ಪೂರನ್ ಫಾರ್ಮ್‌ನಲ್ಲಿ ಇಲ್ಲದಿರುವುದು ದೊಡ್ಡ ಕೊರತೆ. ಮಯಂಕ್ ಅಗರವಾಲ್ ಕೂಡ ಗಾಯಗೊಂಡಿರುವುದರಿಂದ ಪ್ರಭಸಿಮ್ರನ್ ಸಿಂಗ್ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಲು ಮತ್ತೊಂದು ಅವಕಾಶ ಗಿಟ್ಟಿಸಬಹುದು. ಬೌಲಿಂಗ್‌ನಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ ಮತ್ತು ಹರ್‌ಪ್ರೀತ್ ಬ್ರಾರ್ ಆರ್‌ಸಿಬಿ ಎದುರಿನ ಪಂದ್ಯದಲ್ಲಿ ಯಶಸ್ವಿಯಾಗಿದ್ದರು. ಅದರಿಂದಾಗಿ ರಾಹುಲ್ ಆತ್ಮವಿಶ್ವಾಸ ಇಮ್ಮಡಿಸಿದೆ.

ಪಂಜಾಬ್ ಈಗಾಗಲೇ ಏಳು ಪಂದ್ಯಗಳನ್ನು ಆಡಿದ್ದು ಮೂರರಲ್ಲಿ ಗೆದ್ದು ನಾಲ್ಕರಲ್ಲಿ ಸೋತಿದೆ. ಪ್ಲೇ ಆಫ್ ಹಾದಿ ಸುಗಮವಾಗಬೇಕಾದರೆ ಇನ್ನುಳಿದ ಪಂದ್ಯಗಳಲ್ಲಿ ಹೆಚ್ಚು ಜಯ ಗಳಿಸುವುದು ಸುರಕ್ಷಿತ. ಮೊದಲ ಸುತ್ತಿನಲ್ಲಿ ರಾಹುಲ್ ಬಳಗವು ಡೆಲ್ಲಿ ಎದುರು ಸೋತಿತ್ತು. ಇದೀಗ ಮುಯ್ಯಿ ತೀರಿಸಿಕೊಳ್ಳುವ ಅವಕಾಶ ತಂಡಕ್ಕಿದೆ.

ಕೆ.ಎಲ್ ರಾಹುಲ್



ಆರಂಭ: ರಾತ್ರಿ 7.30
ಸ್ಥಳ: ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಂಡ್ಯ ಸಹೋದರರಿಂದ ನೆರವು

ನವದೆಹಲಿ (ಪಿಟಿಐ): ಕೋವಿಡ್–19 ವಿರುದ್ಧದ ಹೋರಾಟಕ್ಕೆ ಸಹೋದರ ಕೃಣಾಲ್ ಸೇರಿದಂತೆ ನಮ್ಮ ಇಡೀ ಕುಟುಂಬ 200 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ದೇಣಿಗೆ ನೀಡುವುದಾಗಿ ಭಾರತ ಕ್ರಿಕೆಟ್ ತಂಡದ ಆಟಗಾರ ಹಾರ್ದಿಕ್ ಪಾಂಡ್ಯ ಹೇಳಿದ್ದಾರೆ.

ಐಪಿಎಲ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ಪರ ಆಡುತ್ತಿರುವ ಪಾಂಡ್ಯ, ಶನಿವಾರ ಚೆನ್ನೈ ವಿರುದ್ಧದ ಪಂದ್ಯಕ್ಕೂ ಮೊದಲು ಈ ವಿಷಯ ತಿಳಿಸಿದರು.

ಹಾರ್ದಿಕ್ ಪಾಂಡ್ಯ

‘ಕೋವಿಡ್ ವಿರುದ್ಧದ ಹೋರಾಟದಲ್ಲಿ ಪಾಲ್ಗೊಂಡಿರುವ ಎಲ್ಲ ವೈದ್ಯಕೀಯ ಸಿಬ್ಬಂದಿ, ಮುಂಚೂಣಿ ಕಾರ್ಯಕರ್ತರಿಗೆ ಕೃತಜ್ಞತೆಗಳು. ಕೃಣಾಲ್, ನಾನು, ನನ್ನ ತಾಯಿ ಹಾಗೂ ನಮ್ಮ ಇಡೀ ಕುಟುಂಬ ನೆರವು ನೀಡಲು ನಿರ್ಧರಿಸಿದ್ದು, ಭಾರತದ ಗ್ರಾಮೀಣ ಪ್രದೇಶದ ಜನರಿಗೆ ಅನುಕೂಲವಾಗಲು 200 ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ನೀಡಲಿದ್ದೇವೆ’ ಎಂದು ಪಾಂಡ್ಯ ನುಡಿದರು.

ಜಿಮ್ನಾಸ್ಟ್ ಪ್ರಣತಿಗೆ ಒಲಿಂಪಿಕ್ಸ್ ಟಿಕೆಟ್



ನವದೆಹಲಿ (ಪಿಟಿಐ): ಭಾರತದ ಜಿಮ್ನಾಸ್ಟ್ ಪ್ರಣತಿ ನಾಯಕ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅರ್ಹತೆ ಗಳಿಸಿದ್ದಾರೆ.

ಪಶ್ಚಿಮ ಬಂಗಾಳದ ಪ್ರಣತಿ 2019ರ ಏಷ್ಯನ್ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು. ಈಗ ಏಷ್ಯಾದ ಕೋಟಾದಡಿ ಆಯ್ಕೆಯಾಗಿದ್ದಾರೆ. 26 ವರ್ಷದ ಈ ಜಿಮ್ನಾಸ್ಟ್ ಏಷ್ಯಾದಿಂದ ಶ್ರೀಲಂಕಾದ ಎಲ್ವಿಟಿಯಾ ಬಡಾಲ್ಗೆ ನಂತರ ಕಾಯ್ದಿರಿಸಿದ ಕ್ರೀಡಾಪಟುವಿನ ಪಟ್ಟಿಯಲ್ಲಿದ್ದರು. ಚೀನಾದಲ್ಲಿ ಮೇ 29ರಿಂದ ನಡೆಯಬೇಕಾಗಿದ್ದ ಏಷ್ಯನ್ ಚಾಂಪಿಯನ್‌ಷಿಪ್ ರದ್ದಾದ ಕಾರಣ ನೇರ ಅರ್ಹತೆ ಗಿಟ್ಟಿಸಿಕೊಂಡಿದ್ದಾರೆ.

‘ಕೋವಿಡ್‌ನಿಂದಾಗಿ ಎಲ್ಲ ಸ್ಪರ್ಧೆಗಳು ರದ್ದುಗೊಂಡಾಗ ಒಲಿಂಪಿಕ್ಸ್ ಆಸೆಯನ್ನು ಕೈಬಿಟ್ಟಿದ್ದೆ. ಈಗ ಕನಸು ನನಸಾಗಿದೆ, ಖುಷಿಯಾಗಿದೆ. ಏಷ್ಯಾ ಅಥವಾ ವಿಶ್ವ ಫೆಡರೇಷನ್‌ನಿಂದ ಅಧಿಕೃತ ಮಾಹಿತಿಗಾಗಿ ಕಾಯುತ್ತಿದ್ದೇನೆ’ ಎಂದು ಪ್ರಣತಿ ಹೇಳಿದ್ದಾರೆ.

ಸೋಲಿನ ಸುಳಿಯಿಂದ ಮೇಲೇಳುವ ಬಯಕೆ

ರಾಜಸ್ಥಾನ್ ರಾಯಲ್ಸ್ ತಂಡಕ್ಕೆ ಸನ್‌ರೈಸರ್ಸ್ ಹೈದರಾಬಾದ್ ಸವಾಲು

ನವದೆಹಲಿ (ಪಿಟಿಐ): ಸೋಲಿನ ಮೇಲೆ ಸೋಲು ಕಂಡು ಪಾಯಿಂಟ್ ಪಟ್ಟಿಯ ಕೊನೆಯ ಎರಡು ಸ್ಥಾನಗಳನ್ನು ಹಂಚಿಕೊಂಡಿರುವ ರಾಜಸ್ಥಾನ್ ರಾಯಲ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ಮುಖಾಮುಖಿಯಾಗಲಿವೆ.

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಧ್ಯಾಹ್ನ ನಡೆಯಲಿರುವ ಹಣಾಹಣಿ ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಅವರಿಗೆ ಸತ್ವಪರೀಕ್ಷೆಯಾಗಲಿದೆ. ಡೇವಿಡ್ ವಾರ್ನರ್ ಬದಲಿಗೆ ನಾಯಕತ್ವ ವಹಿಸಿಕೊಂಡಿರುವ ಅವರ ಮೇಲೆ ತಂಡವನ್ನು ಜಯದ ಹಾದಿಯಲ್ಲಿ ಮುನ್ನಡೆಸುವ ಜವಾಬ್ದಾರಿ ಇದೆ.

ಸ್ಥಿರ ಪ್ರದರ್ಶನ ನೀಡಲು ಸಾಧ್ಯವಾಗದ ರಾಜಸ್ಥಾನ್ ಕೂಡ ಗೆಲುವೊಂದನ್ನೇ ಗುರಿಯಾಗಿರಿಸಿಕೊಂಡು ಕಣಕ್ಕೆ ಇಳಿಯಲಿದೆ. ವಿಲಿಯಮ್ಸನ್ ತಂತ್ರಗಳಿಗೆ ಪ್ರತಿತಂತ್ರಗಳನ್ನು ಹೆಣೆದು ತಂಡಕ್ಕೆ ಜಯ ತಂದುಕೊಡಬೇಕಾಗಿರುವ ಒತ್ತಡ ಸಂಜು ಸ್ಯಾಮ್ಸನ್ ಮೇಲೆಯೂ ಇದೆ. ಎರಡನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆದ್ದಿದ್ದ ರಾಯಲ್ಸ್ ನಂತರ ಐದನೇ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಜಯ ಗಳಿಸಿತ್ತು. ಹಿಂದಿನ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್‌ಗೆ ಮಣಿದಿತ್ತು.

ಮುಂಬೈ ಇಂಡಿಯನ್ಸ್ ಎದುರಿನ ಪಂದ್ಯದಲ್ಲಿ ಅಗ್ರ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ಪರಾಕ್ರಮದಿಂದಾಗಿ ತಂಡ 4 ವಿಕೆಟ್‌ಗಳಿಗೆ 171 ರನ್ ಕಲೆ ಹಾಕುವಲ್ಲಿ ಸಮರ್ಥವಾಗಿತ್ತು. ಆದರೆ ಬೌಲಿಂಗ್ ವಿಭಾಗ ನೀರಸ ಪ್ರದರ್ಶನ ನೀಡಿತ್ತು. ಹೀಗಾಗಿ ಎದುರಾಳಿಗಳು ಒಂಬತ್ತು ಎಸೆತ ಉಳಿದಿರುವಾಗಲೇ ಏಳು ವಿಕೆಟ್‌ಗಳಿಂದ ಗೆಲುವು ಸಾಧಿಸಿದ್ದರು.

ತಂಡದ ಬ್ಯಾಟಿಂಗ್ ವಿಭಾಗ ಪೂರ್ಣವಾಗಿ ನಾಯಕ ಸಂಜು ಸ್ಯಾಮ್ಸನ್ ಅವರನ್ನು ಅವಲಂಬಿಸಿದೆ. ಆದರೆ ಮೊದಲ ಪಂದ್ಯದಲ್ಲಿ 119 ರನ್ ಗಳಿಸಿದ್ದು ಬಿಟ್ಟರೆ ಉಳಿದ ಪಂದ್ಯಗಳಲ್ಲಿ ಸಂಜು ಕೂಡ ಹೆಚ್ಚು ಮಿಂಚಲಿಲ್ಲ. ಶತಕದ ನಂತರ ಅವರ ಗರಿಷ್ಠ ಮೊತ್ತ 42.

ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳು ರನ್ ಗಳಿಸಲು ಪರದಾಡುತ್ತಿದ್ದಾರೆ. ಡೇವಿಡ್ ಮಿಲ್ಲರ್ ಒಂದು ಅರ್ಧಶತಕ ಮಾತ್ರ ಗಳಿಸಿದ್ದು ರಿಯಾನ್ ಪರಾಗ್ ಅವರ ಇಲ್ಲಿವರೆಗಿನ ಗರಿಷ್ಠ ಮೊತ್ತ 25 ರನ್. ಬೌಲಿಂಗ್ ವಿಭಾಗದಲ್ಲಿ ‘ದುಬಾರಿ ಆಟಗಾರ’ ಕ್ರಿಸ್ ಮೊರಿಸ್ ಉತ್ತಮ ಸಾಧನೆ ಮಾಡಿದ್ದಾರೆ. ಆರು ಪಂದ್ಯಗಳಲ್ಲಿ ಅವರು 11 ವಿಕೆಟ್ ಗಳಿಸಿದ್ದಾರೆ. ಆದರೆ ಉಳಿದವರಿಂದ ಸಮರ್ಪಕ ಸಹಕಾರ ಸಿಗುತ್ತಿಲ್ಲ.

ಬ್ಯಾಟಿಂಗ್ ವಿಭಾಗದ ಮೇಲೆ ಕಣ್ಣು: ಡೆಲ್ಲಿ ಎದುರು ಸೂಪರ್ ಓವರ್‌ನಲ್ಲಿ ಅನುಭವಿಸಿದ ಸೋಲು ಸೇರಿದಂತೆ ಹಿಂದಿನ ಎರಡು ಪಂದ್ಯಗಳಲ್ಲಿ ಸೋಲು ಕಂಡಿರುವ ಸನ್‌ರೈಸರ್ಸ್ ಜಯದ ನಿರೀಕ್ಷೆಯೊಂದಿಗೆ ಕಣಕ್ಕೆ ಇಳಿಯಲಿದೆ. ಜಾನಿ ಬೆಸ್ಟೊ, ಮನೀಷ್ ಪಾಂಡೆ, ಕೇನ್ ವಿಲಿಯಮ್ಸನ್ ಮುಂತಾದವರನ್ನು ಒಳಗೊಂಡಿರುವ ಬ್ಯಾಟಿಂಗ್ ವಿಭಾಗದ ಮೇಲೆ ತಂಡ ಭರವಸೆ ಇರಿಸಿಕೊಂಡಿದೆ. ಆದರೆ ಉಳಿದವರಿಂದ ಸೂಕ್ತ ಸಾಮರ್ಥ್ಯ ಹೊರಹೊಮ್ಮುತ್ತಿಲ್ಲ. ಬೌಲಿಂಗ್ ವಿಭಾಗಕ್ಕೆ ಸ್ಪಿನ್ನರ್ ರಶೀದ್ ಖಾನ್ ಬಲ ತುಂಬಿದ್ದಾರೆ.

ಕೇನ್ ವಿಲಿಯಮ್ಸನ್ –ಪಿಟಿಐ ಚಿತ್ರ



ಆರಂಭ: ಸಂಜೆ 3.30 ಸ್ಥಳ: ದೆಹಲಿ
ನೇರ ಪ್ರಸಾರ
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಕೇನ್‌ಗೆ ನಾಯಕತ್ವ

ನವದೆಹಲಿ (ಪಿಟಿಐ): ಸತತ ಸೋಲಿನಿಂದ ಕಂಗೆಟ್ಟಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡ ನಾಯಕತ್ವದಿಂದ ಡೇವಿಡ್ ವಾರ್ನರ್ ಅವರನ್ನು ವಜಾ ಮಾಡಿದ್ದು ಕೇನ್ ವಿಲಿಯಮ್ಸನ್ ಅವರಿಗೆ ಜವಾಬ್ದಾರಿ ವಹಿಸಿದೆ. ಐಪಿಎಲ್ ಟೂರ್ನಿಯ ಉಳಿದಿರುವ ಪಂದ್ಯಗಳಲ್ಲಿ ತಂಡವನ್ನು ವಿಲಿಯಮ್ಸನ್ ಮುನ್ನಡೆಸುವರು.

ಸಂಕ್ಷಿಪ್ತ ಸುದ್ದಿ

ಚೆಸ್: ಉಚಿತ ಆನ್‌ಲೈನ್ ತರಬೇತಿ 5ರಿಂದ

ಬೆಂಗಳೂರು: ಶಿವಮೊಗ್ಗದ ಯಾದವ ಸ್ಕೂಲ್ ಆಫ್ ಚೆಸ್ ಸಂಸ್ಥೆ ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತವಾಗಿ ಆನ್‌ಲೈನ್ ಚೆಸ್ ತರಬೇತಿ ಏರ್ಪಡಿಸಲಿದೆ. ಜೂಮ್ ಆ್ಯಪ್ ಮೂಲಕ ನಡೆಯುವ ತರಬೇತಿ ಮೇ ಐದರಂದು ಆರಂಭಗೊಳ್ಳಲಿದ್ದು ಒಂಬತ್ತರ ವರೆಗೆ ಇರುತ್ತದೆ.

ರಾಜ್ಯದ ಯಾವುದೇ ಭಾಗದ ಮಕ್ಕಳು ಪಾಲ್ಗೊಳ್ಳಬಹುದಾಗಿದೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಪ್ರತಿದಿನ ಬೆಳಿಗ್ಗೆ 10.30ರಿಂದ 11.30ರ ವರೆಗೆ ತರಗತಿಗಳು ನಡೆಯಲಿವೆ.

ಚೆಸ್ ಬಗ್ಗೆ ಪ್ರಾಥಮಿಕ ಜ್ಞಾನವಿರುವ 30 ಮಕ್ಕಳಿಗೆ ಮಾತ್ರ ಅವಕಾಶವಿದೆ. ಮಾಹಿತಿ ಮತ್ತು ನೋಂದಣಿಗೆ ಪ್ರಾಣೇಶ ಯಾದವ್ (9242401702 ಅಥವಾ 8618108601) ಅವರನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ಫುಟ್‌ಬಾಲ್ ಆಟಗಾರ ರಾಮಕೃಷ್ಣ ನಿಧನ

ಬೆಂಗಳೂರು: ರಾಜ್ಯ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಇ.ರಾಮಕೃಷ್ಣ (91) ನಗರದ ಗವಿಪುರಂನಲ್ಲಿರುವ ನಿವಾಸದಲ್ಲಿ ಶನಿವಾರ ನಿಧನರಾದರು.



ಇ.ರಾಮಕೃಷ್ಣ

ಸೀನಿಯರ್ ರಾಮಿ ಎಂದೇ ಹೆಸರಾಗಿದ್ದ ಅವರು ಹಿಂದಿನ ಮೈಸೂರು ರಾಜ್ಯ ತಂಡ, ಬ್ಲೂಸ್ ಕ್ಲಬ್ ಮತ್ತು ಐಟಿಐ ಎಫ್‌ಸಿ ಪರ ಆಡಿದ್ದಾರೆ. 1952ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದ್ದ ಅವರು 1953ರಿಂದ 1956ರ ವರೆಗೆ ಕೋಲ್ಕತ್ತ, ಚೆನ್ನೈ, ಕೇರಳದ ಎರ್ನಾಕುಳಂ ಮತ್ತು ತಿರುವನಂತಪುರಂನಲ್ಲಿ ನಡೆದಿದ್ದ ಟೂರ್ನಿಗಳಲ್ಲಿ ರಾಜ್ಯ ತಂಡದಲ್ಲಿ ಆಡಿದ್ದರು. 1956ರಲ್ಲಿ ಬೆಂಗಳೂರಿನಲ್ಲಿ ರಷ್ಯಾ ಎದುರಿನ ಹಣಾಹಣಿಯಲ್ಲಿ ಭಾರತದ ಪರ ಆಡಿದ್ದರು

ಶ್ರೀಲಂಕಾಗೆ ಮುನ್ನಡೆ

ಪಲ್ಲೆಕೆಲೆ (ಎಎಫ್‌ಪಿ): ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಎಡಗೈ ಸ್ಪಿನ್ನರ್ ಪ್ರವೀಣ್ ಜಯವಿಕ್ರಮ (92ಕ್ಕೆ 6) ಅವರ ನೆರವಿನಿಂದ ಶ್ರೀಲಂಕಾ ಮುನ್ನಡೆ ಸಾಧಿಸಿತು. ಎರಡನೇ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ಮೊದಲ ಇನಿಂಗ್ಸ್‌ನಲ್ಲಿ 251ಕ್ಕೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಪಂದ್ಯದ ಮೂರನೇ ದಿನವಾದ ಶನಿವಾರ ಶ್ರೀಲಂಕಾ 2ನೇ ಇನಿಂಗ್ಸ್‌ನಲ್ಲಿ 2 ವಿಕೆಟ್ ನಷ್ಟಕ್ಕೆ 17 ರನ್ ಗಳಿಸಿತ್ತು. ಆತಿಥೇಯ ತಂಡ ಒಟ್ಟು 259 ರನ್‌ಗಳ ಮುನ್ನಡೆ ಗಳಿಸಿತ್ತು.

ಫುಟ್‌ಬಾಲ್ ಆಟಗಾರ ಸುಕುಮಾರನ್ ನಿಧನ

ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸುಕುಮಾರನ್ (56) ಶನಿವಾರ ನಿಧನರಾದರು.

ಗೋಲ್‌ಕೀಪರ್ ಆಗಿದ್ದ ಅವರು, 1985 ಹಾಗೂ 1986ರಲ್ಲಿ ಬಿ.ಸಿ. ರಾಯ್ ಟ್ರೋಫಿ ಟೂರ್ನಿಯಲ್ಲಿ ರಾಜ್ಯ ತಂಡದ ಪರ ಕಣಕ್ಕಿಳಿದಿದ್ದರು.